ಸಂಪುಟ ೩
ಸಂಚಿಕೆ ೧

ಕರ್ನಾಟಕ ಭಾರತಿ

ರಾಜ್ಯೋದಯ ಸಂಚಿಕೆ
೧೯೭೦

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

‘ಕರ್ನಾಟಕ ಭಾರತಿ’ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, ಸಂಪಾದಕರು ‘ಕರ್ನಾಟಕ ಭಾರತಿ’, ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ ಡಾಯರೆಕ್ಟರ್, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ　೨. ರಾಜ್ಯೋದಯ ಸಂಚಿಕೆ

೩. ಸಂಕ್ರಮಣ ಸಂಚಿಕೆ　೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ: ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿಸಂಚಿಕೆಯ ಬೆಲೆ: ರೂ. ೨-೫೦ (ಅಂಚೆವೆಚ್ಚ ಪ್ರತ್ಯೇಕ)

ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೩ ಸಂಚಿಕೆ : ೨

ರಾಜ್ಯೋದಯ ಸಂಚಿಕೆ

ಕ್ರಿ.ಶ. ೧೯೭೦ ಶಾ.ಶ. ೧೮೯೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೩, ಸಂಚಿಕೆ : ೨
ನವೆಂಬರ್ ೧೯೭೦

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪೀಕರ್ ರೋಡ್, ಹುಬ್ಬಳ್ಳಿ – ೨೦



ಕರ್ನಾಟಕ ವಿಶ್ವವಿದ್ಯಾಲಯ
ಆಡಳಿತ ಸೌಧ

ಪರಿವಿಡಿ

ನೀಲಾಂಬೆಯ ನಿಲವು

ನೀಲದಂಬರದಲ್ಲಿ ತೀವಿ ನಿಂದಿಹ ನೆನಹು
ನೀಲಾಂಬಿಕೆ
ಭಕ್ತಿಭಾಗ್ಯೋತ್ತಮನ ಜೀವನದ ಕೆನೆಪಡೆದ
ನಯನಂಬಿಕೆ

ಸುಪ್ರಸನ್ನತೆಯೆ ಪ್ರಭೆಯಾಗಿ ಸುಳಿಯಿತ್ತೊ ಎನೆ
ದಾರಿ ದಿಟಕೆ
ನಭದ ನೈರ್ಮಲ್ಯದಿಂದಿಳಿದು ಬಂದಳು ತಾಯಿ
ಕಲ್ಯಾಣಕೆ

ಚಿತ್ತವದು ಧ್ಯಾನಮಯ ಬದುಕು ಆತಿಥ್ಯಮಯ
ಜೀವನಕಲೆ
ಅನುಭಾವ ಮಂಟಪದ ಸ್ಫೂರ್ತಿಮಹಮನೆ ಮೂರ್ತಿ
ಬನದು ಕಳೆ!

ಸಂಗದೀಪ್ತನ ಚಿತ್ತರಂಗದಲಿ ರಂಗವಲಿ
ಇಟ್ಟ ವನಿತೆ
ಘನದೊಡನೆ ಮನದ ಅನುಸಂಧಾನ ಸಾಧಿಸಿದ
ಪುಣ್ಯಚರಿತೆ

ಪ್ರಣವನಾದದಿ ನಾದ ಸಮಯೋಗದಲಿ ಯೋಗ
ಶ್ರೀಮಂತಿಕೆ
ನೀಲದಂಬರದಲಿ ನಿರಾಳವಾಗಿಹ ನಿಲವು
ನೀಲಾಂಬಿಕೆ

ಶರಣಸಂಸ್ಕೃತಿಯ ಸೌಶೀಲ್ಯವನು ಕಿರಣಿಸಿದ
ಮಣಿದೀಪಿಕೆ
ಅಪ್ರತಿಮ ಪತಿಯ ಅನುಭಾವದನುನಯವಿಡಿದ
ಗುಣರೂಪಿಕೆ

ಬಯಲಿಂಗೆ ಭಾವದ ಬಣ್ಣ ಬರೆದಾಂತರ್ಯ-
ಜ್ಯೋತಿಯಂತೆ
ಬಸವಚಿತ್ತದ ಬಾನ್ಗೆ ಬಣ್ಣವೆರೆದಳು ನೀಲ
ಭಾವಭರಿತೆ

ಸತ್ಯಕಾಯಕವ ಸದ್ದಿಲ್ಲದೆಯೆ ಗೈದ ಫಲ
ಬರಲು ಉಡಿಗೆ
ನೀಲದಲಿ ನೆನಹೆಂಬ ನಕ್ಷತ್ರ ಅರಳಿಹವು
ತಾಯ ಮುಡಿಗೆ

ಅಂಬರದಿ ಹೊಳೆವೊಂದು ಬಿಂಬ ಮೂಡಿದೆ ಅವಳೆ
ನೀಲಾಂಬಿಕೆ
ಕಲ್ಪಾಂತರಸ್ಥಾಯಿಯಾಗಿ ನಿಂದಿಹವದೋ
ನಯನಂಬಿಕೆ

ನಿರ್ಭಾವದಲಿ ಭಾವ ನಿಶ್ಯಬ್ದದಲಿ ಶಬ್ದ
ಪ್ರಾತ್ಯಕ್ಷಿಕೆ
ಅಲ್ಲಿ ಇಲ್ಲಿಯ ಎಲ್ಲೆ ಮೀರಿ ನಿರ್ವಯಲ ಬೆಳ-
ಗಿದ ತಾರಕೆ

★ ಡಿ. ಎಸ್. ಕರ್ಕಿ

ಸಗರ ಹಾಗೂ ಭಗೀರಥ

(ವೈದಿಕ ಹಾಗೂ ಜೈನಪುರಾಣಗಳ ಹಿನ್ನೆಲೆಯಲ್ಲಿ)

ಭಾರತದ ಧಾರ್ಮಿಕ ಪರಂಪರೆಯಲ್ಲಿ ವೈದಿಕ ಹಾಗೂ ಆಗಮಿಕ ಎಂಬೆರಡು ಪರಂಪರೆಗಳು ಸರಿದೊರೆಯಾಗಿ ಬಹು ಪ್ರಾಚೀನ ಕಾಲದಿಂದಲೇ ನಡೆದುಬಂದುದು ಗೊತ್ತಾಗುತ್ತದೆ. ಆಗಮಿಕ ಅಥವಾ ಅವೈದಿಕ ಧರ್ಮ ಪರಂಪರೆಯಲ್ಲಿ ನಡೆದು ಬಂದ ಧರ್ಮಗಳಲ್ಲಿ ಜೈನಧರ್ಮವೂ ಒಂದಾಗಿದೆ. ಈ ಧರ್ಮಕ್ಕೆ "ಮಹಾಪುರಾಣ" ಎಂಬ ಪುರಾಣಗ್ರಂಥವಿದ್ದರೆ, ವೈದಿಕಧರ್ಮ ದಲ್ಲಿ ಹದಿನೆಂಟು ಪುರಾಣಗಳು ಪ್ರಚಾರದಲ್ಲಿವೆ. ಜೈನಧರ್ಮದ ಹಿನ್ನೆಲೆಯಲ್ಲಿ ಆಗಿಹೋದ ತೀರ್ಥಂಕರರು, ಚಕ್ರವರ್ತಿಗಳು, ಬಲದೇವರು, ವಾಸುದೇವರು, ಪ್ರತಿವಾಸುದೇವರು, ಕಾಮದೇವರು ಮೊದಲಾದವರ ವಿಷಯವನ್ನೊಳ ಗೊಂಡ ಈ ಮಹಾಪುರಾಣದಲ್ಲಿ ಬರುವ ಕಥೆ, ವ್ಯಕ್ತಿ, ಘಟನೆ ಮುಂತಾದವು ಗಳನ್ನು ನೋಡಿದರೆ, ವೈದಿಕ ಪುರಾಣಗಳಲ್ಲಿಯ ಕಥೆ, ವ್ಯಕ್ತಿ, ಘಟನೆ ಗಳೇ ಕಣ್ಣೆದುರು ಬಂದು ನಿಲ್ಲುತ್ತವೆ. ರಾಮಾಯಣ, ಮಹಾಭಾರತದ ಕಥೆ ವ್ಯಕ್ತಿಗಳ ಮಾತನ್ನಂತೂ ಹೇಳಲೇ ಬೇಕಿಲ್ಲ. ಇದರಂತೆ ಭರತ, ಜಮದಗ್ನಿ, ರೇಣುಕೆ, ಸಹಸ್ರಬಾಹು, ಪರಶುರಾಮ, ಸಗರ, ಭಗೀರಥ, ಮಧುಕೈಟಭ, ಹಿರಣ್ಯ, ನಿಕುಂಭ, ಬಲೀಂದ್ರ ಮೊದಲಾಗಿ ಬರುವ ವ್ಯಕ್ತಿಗಳ ಕಥೆ ಎರಡೂ ಕಡೆಗೆ ದೊರೆಯುತ್ತದೆ. ಹಾಗಾದರೆ ಇವುಗಳಲ್ಲಿ ಯಾವುದು ಮೊದಲು ? ಯಾವುದು ಯಾವುದಕ್ಕೆ ಋಣಿ ? ಈ ಪ್ರಶ್ನೆಗಳಿಗೆ ಉತ್ತರಿಸುವುದು ಕಠಿಣವೇ ಸರಿ. ಆದರೂ ವೈದಿಕ ರೀತಿಯಲ್ಲಿ ನಿರೂಪಿತವಾಗಿರುವ ಅಮಾನುಷ, ಅದ್ಭುತ ರೀತಿಗಳನ್ನು ಹಾಗೂ ಜೈನಪುರಾಣಗಳಲ್ಲಿರುವ ಸ್ವಾಭಾವಿಕತೆ, ಮಾನ-ವೀಯತೆ ಹಾಗೂ ತರ್ಕಬದ್ಧವಾದ ರೀತಿಗಳನ್ನು ನೋಡಿ, ಮಾನವನು ಬೆಳೆದು ಬಂದ ವಿಕಾಸದ ಹಿನ್ನೆಲೆಯಲ್ಲಿ, ವೈದಿಕ ರೀತಿ ಆರಂಭದ ಹಂತವೆಂದೂ ಜೈನ ರೀತಿ ನಂತರದ ಹಂತವೆಂದೂ ಹೇಳುವವರುಂಟು. ಇದನ್ನೊಪ್ಪದವರು ಈ ಎರಡು ಪರಂಪರೆಗಳಿಗೆ ಆಕರವು ಒಂದೇ ಆಗಿರಬಹುದೆಂದೂ ಹೇಳುತ್ತಾರೆ. ಈ ವಾದವು ಇಲ್ಲಿ ಅಪ್ರಸ್ತುತ. ಭಾರತದಲ್ಲಿಯೇ ಹುಟ್ಟಿ, ಬೆಳೆದು, ನೆಲಸಿ ನಿಂತ ವೈದಿಕ ಹಾಗೂ ಜೈನ ಎರಡೂ ಪರಂಪರೆಗಳ ಪುರಾಣಗಳಲ್ಲಿ, ಮೇಲೆಹೇಳಿದಂತೆ, ಅವೇ ವ್ಯಕ್ತಿಗಳು, ಅವರವರ ಸಂಪ್ರದಾಯದ ಚೌಕಟ್ಟಿನಲ್ಲಿ ಮೂಡಿನಿಂತಿರು ವದು ನಿಜ. ಈ ಹಿನ್ನೆಲೆಯಲ್ಲಿ ಈಗ ಸಗರ, ಭಗೀರಥರ ಪರಿಚಯವನ್ನು ಮಾಡಿ

ಕೊಳ್ಳಬಹುದು. ಮೊದಲು ವೈದಿಕ ಹಿನ್ನೆಲೆಯಲ್ಲಿ ಇವರಿಬ್ಬರ ಕಥೆಯನ್ನು ಸ್ವಲ್ಪದರಲ್ಲಿ ತಿಳಿದುಕೊಳ್ಳುವಾ.

"ಭಗೀರಥ ಪ್ರಯತ್ನ" ಎಂಬ ನುಡಿ ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಭಾರತದಾದ್ಯಂತ ಪ್ರಚಾರದಲ್ಲಿದೆ. ಅಗಾಧವಾದ, ಅಸಾಧ್ಯವಾದ, ಅಸಾಮಾನ್ಯ ವಾದ ಪ್ರಯತ್ನವೊಂದನ್ನು ಮಾಡಿ, ಆ ಪ್ರಯತ್ನದೊಂದಿಗೆ, ಈ ಭೂಮಿ ಯನ್ನು ಪುನೀತ ಮಾಡಿ, ತನ್ನ ಜನ್ಮವನ್ನು ಸಾರ್ಥಕ ಮಾಡಿಕೊಂಡವನು— ಭಗೀರಥ. ವೈದಿಕ ಪರಂಪರೆಯಲ್ಲಿ ಬಂದ ಭಗೀರಥನ ಕಥೆ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತೇ ಇದೆ. ಇಕ್ಷ್ವಾಕು ವಂಶದಲ್ಲಿ ಹುಟ್ಟಿದ ದಿಲೀಪನೆಂಬ ಅರಸನ ಮಗನು—ಭಗೀರಥ. ಇದೇ ವಂಶದಲ್ಲಿ ಹುಟ್ಟಿದ "ಬಾಹುಕಿ" ಎಂಬವ ನಿಗೆ 'ಸಗರ'ನೆಂಬ ಮಗನಿದ್ದನು. ಸಗರನು ತನ್ನ ತಾಯಿಯ ಹೊಟ್ಟೆಯಲ್ಲಿ ಇದ್ದಾಗ ಅವಳಿಗೆ ವಿಷ ಕೊಡಲಾಗಿತ್ತು. ಆ ವಿಷಸಹಿತವಾಗಿ ೬೪ ವರ್ಷದ ನಂತರ ಹುಟ್ಟಿದ ಕೂಸಿಗೆ ಸ + ಗರ = ಸಗರನೆಂದು ಹೆಸರಿಟ್ಟರು. ಸಗರನಿಗೆ ಇಬ್ಬರು ಹೆಂಡಂದಿರು. ಒಬ್ಬಳಿಂದ 'ಅಸಮಂಜಸ'ನೆಂಬ ಒಬ್ಬನೇ ಮಗನು ಹುಟ್ಟಿದನು. ಇನ್ನೊಬ್ಬಳಿಂದ ೬೦,೦೦೦ ಜನ ಮಕ್ಕಳು ಹುಟ್ಟಿದರು. ಅಸಮಂಜಸ ನಿಗೆ "ಅಂಶುಮಂತ"ನೆಂಬ ಮಗನಿದ್ದನು. ಈ ಅಂಶುಮಂತನ ಮಗನೇ ದಿಲೀಪನು ಅರ್ಥಾತ್ ಭಗೀರಥನ ತಂದೆ. ಸಗರನು 'ಅಶ್ವಮೇಧ-ಯಾಗ' ಮಾಡಿದಾಗ ಆ ಯಾಗದ ಕುದುರೆಯನ್ನು ಇಂದ್ರನು ಪಾತಾಳಕ್ಕೆ ಒಯ್ದು, ಅಲ್ಲಿ ತಪಸ್ಸುಮಾಡುತ್ತಿದ್ದ 'ಕಪಿಲ' ಮುನಿಯ ಹತ್ತಿರ ಬಚ್ಚಿಟ್ಟು ಹೋದನು. ತಂದೆಯ ಆಜ್ಞೆಯಂತೆ ಅಶ್ವಮೇಧದ ಕುದುರೆಯನ್ನು ಹುಡುಕಲು ಹೊರಟ ೬೦,೦೦೦ ಜನ ಮಕ್ಕಳು ಭೂಲೋಕದಲ್ಲಿ ಕುದುರೆಯನ್ನು ಕಾಣದೆ, ಭೂಮಿ ಯನ್ನು ಅಗೆದು ಪಾತಾಳಕ್ಕೇ ಹೋದರು. ಅಲ್ಲಿ ಕಪಿಲ ಮುನಿಯ ಹತ್ತಿರ ಇದ್ದ ಕುದುರೆಯನ್ನು ಕಂಡು, ಆತನೇ ತಮ್ಮ ಕುದುರೆಯನ್ನು ಕದ್ದವನೆಂದು ಭ್ರಮಿಸಿ, ಅವನನ್ನು ಶಿಕ್ಷಿಸಲು ಪ್ರಯತ್ನಿಸಿದರು. ಆಗ ಸಿಟ್ಟಿಗೆದ್ದ ಕಪಿಲ ಮುನಿಯು ತನ್ನ ಕೋಪದೃಷ್ಟಿಯಿಂದ ಅವರನ್ನು ನೋಡಿದನು. ಆಗ ಆ ೬೦,೦೦೦ ಜನ ಮಕ್ಕಳು ಸುಟ್ಟು ಬೂದಿಯಾಗಿ ಬಿದ್ದರು. ಹೀಗೆ ದುರ್ಮರಣ ಕ್ಕೀಡಾಗಿ, ಪಾತಾಳದಲ್ಲಿ ಬಿದ್ದ ತನ್ನ ಮುತ್ತಜ್ಜಂದಿರಾದ ಆ ೬೦,೦೦೦ ಜನರಿಗೆ ಸದ್ಗತಿಯನ್ನು ಒದಗಿಸಲು, ಪವಿತ್ರಳಾದ ಆಕಾಶಗಂಗೆಯನ್ನು ಕುರಿತು ಭಗೀರಥನು ತಪಸ್ಸುಮಾಡಿದನು. ಭಗೀರಥನ ತಪಸ್ಸಿಗೆ ಮೆಚ್ಚಿ ಗಂಗೆಯು ಭೂಮಿಗೆ ಅವತರಿಸಲು ಒಪ್ಪಿದಳಾದರೂ ಆಕೆಯ ಧುಮುಕುವಿಕೆಯಿಂದ ಭೂಮಿ ತತ್ತರಿಸಿಹೋಗಬಹುದಾಗಿತ್ತಾದ್ದರಿಂದ. ಅವಳನ್ನು ಇಳಿಸಿಕೊಳ್ಳಲು ಪರಶಿವನನ್ನು ಕುರಿತು ತಪಸ್ಸುಮಾಡಿ, ಆತನನ್ನು ಮೆಚ್ಚಿಸಿ, ಆವನ ಜಡೆಯಲ್ಲಿ ಆಕಾಶಗಂಗೆಯನ್ನು ಇಳಿಸಿ, ಅಲ್ಲಿಂದ ಭೂಮಿಗೆ ಇಳಿಸಿಕೊಂಡು, ಹಾಗೆಯೇ

ಪಾತಾಳಕ್ಕೆ ಕೊಂಡುಹೋಗಿ, ಆ ೬೦,೦೦೦ ಜನರ ಬೂದಿಯ ಮೇಲೆ ಗಂಗೆಯು ಹರಿಯುವಂತೆ ಮಾಡಿ, ಅವರಿಗೆ ಸದ್ಗತಿ ಸಿಕ್ಕುವಂತೆ ಮಾಡಿದ ಶ್ರೇಯಸ್ಸು ಭಗೀರಥನದಾಗಿದೆ. ಮೊದಲು ಆಕಾಶಗಂಗೆಯನ್ನು, ಅನಂತರ ಪರಶಿವನನ್ನು ಕುರಿತು ದೀರ್ಘಕಾಲ ತಪಸ್ಸು ಮಾಡಿ, ಕೊನೆಗೆ ಪವಿತ್ರಳಾದ ಗಂಗೆಯನ್ನು ಭೂಮಿಗೆ ತಂದ ಪ್ರಯತ್ನ ಸಣ್ಣದೇನಲ್ಲ. ಅದಕ್ಕಾಗಿ "ಭಗೀರಥಪ್ರಯತ್ನ" ಎಂಬ ನಾಣ್ನುಡಿಯೇ ಪ್ರಚಾರದಲ್ಲಿ ಬಂದಿತು. ಅದರಂತೆ ಭಗೀರಥನಿಂದ ಭೂಮಿಗೆ ಬಂದವಳೆಂದು ಗಂಗಾನದಿಗೆ "ಭಾಗೀರಥಿ" ಎಂಬ ಹೆಸರೂ ರೂಢಿಯಲ್ಲಿ ಬಂದಿತು. ಇಂದಿಗೂ ಅದು ರೂಢಿಯಲ್ಲಿದೆ.

ಸಗರ ಹಾಗೂ ಭಗೀರಥರ ಕಥೆ ವೈದಿಕ ಸಂಪ್ರದಾಯದ ಭಾಗವತ, ವಿಷ್ಣುಪುರಾಣ ಮೊದಲಾದ ಪುರಾಣಗಳಲ್ಲಿ ಬಂದಿದೆಯಲ್ಲದೆ ಮಹಾಭಾರತ, ರಾಮಾಯಣಗಳಲ್ಲಿಯೂ ಉದ್ಧೃತವಾಗಿದೆ

ಈಗ ಜೈನಪರಂಪರೆಯಲ್ಲಿ ಮೂಡಿಬಂದ ಸಗರ ಹಾಗೂ ಭಗೀರಥರ ಪರಿಚಯವನ್ನು ಮಾಡಿಕೊಳ್ಳಬಹುದು.

ಜೈನರ ೬೩ ಜನ ಶಲಾಕಾಪುರುಷರ ಕಥೆಯನ್ನು ಬಹು ಪ್ರಾಚೀನ ಕಾಲದಿಂದಲೇ ಜೈನಾಚಾರ್ಯರು ಬರೆಯುತ್ತಬಂದಿದ್ದಾರೆಂದು ಜೈನಪರಂಪರೆ ಹೇಳುತ್ತದೆ. ಆದರೆ ಈಗ ಉಪಲಬ್ಧವಿದ್ದ ಗ್ರಂಥಗಳಲ್ಲಿ ಎಲ್ಲಕ್ಕೂ ಪ್ರಾಚೀನ ಗ್ರಂಥವೆಂದರೆ ಕ್ರಿ.ಶ. ೯ನೆಯ ಶತಮಾನದಲ್ಲಿ ರಾಷ್ಟ್ರಕೂಟರ ದೊರೆ ಅಮೋಘವರ್ಷ ನೃಪತುಂಗನಿಗೆ ಗುರುಗಳಾಗಿದ್ದ ಜಿನಸೇನಾಚಾರ್ಯರು ಹಾಗೂ ಇವರ ಶಿಷ್ಯರಾದ ಗುಣಭದ್ರಾಚಾರ್ಯರ 'ಮಹಾಪುರಾಣ', ೬೩ ಜನ ಶಲಾಕಾಪುರುಷರ ಚರಿತ್ರೆಗಳನ್ನು ಬರೆಯಲು ಕನ್ನಡ ಕವಿಗಳಿಗೆ ಈ 'ಮಹಾಪುರಾಣ'ವೇ ಆಧಾರವೆಂಬುದು ನೆನಪಿಡಬೇಕಾದ ಅಂಶವಾಗಿದೆ. ವಸ್ತುವನ್ನು ಮಹಾಪುರಾಣದಿಂದಲೇ ಎತ್ತಿಕೊಂಡಿದ್ದರೂ ಅದರ ವಿನ್ಯಾಸದಲ್ಲಿ ತಮ್ಮ ಪ್ರತಿಭೆ, ಪಾಂಡಿತ್ಯಗಳನ್ನು ತೋರಿಸದೆ ಬಿಟ್ಟಿಲ್ಲ—ಕನ್ನಡ ಕವಿಗಳು. ಪ್ರಸ್ತುತ ಸಗರ ಹಾಗೂ ಭಗೀರಥರ ವಿಷಯವನ್ನು ಕವಿಚಕ್ರವರ್ತಿ ರನ್ನನ ಗ್ರಂಥದಿಂದ ಎತ್ತಿಕೊಂಡು ನಿರೂಪಿಸಲು ಪ್ರಯತ್ನಿಸಲಾಗಿದೆ. ಕ್ರಿ.ಶ. ೧೦ನೆಯ ಶತಮಾನದ ಕೊನೆಯಲ್ಲಿ ಬಾಳಿದ ಬಹು ಸತ್ವಯುತ ಕವಿಯಾಗಿದ್ದಾನೆ—ರನ್ನ, ಜೈನನಾದ ಈ ಕವಿಯು 'ಅಜಿತನಾಥಪುರಾಣ' ಹಾಗೂ 'ಗದಾಯುದ್ಧ' (ಸಾಹಸಭೀಮವಿಜಯ) ಎಂಬ ಎರಡು ಉತ್ತಮ ಗ್ರಂಥಗಳನ್ನು ಬರೆದಿದ್ದಾನೆ.

೬೩ ಶಲಾಕಾಪುರುಷರಲ್ಲಿ ೧೨ ಜನ ಚಕ್ರವರ್ತಿಗಳಿದ್ದಾರೆ. ಮೊದಲನೆಯ ತೀರ್ಥಂಕರನಾದ ಋಷಭ ಅಥವಾ ಆದಿದೇವನ ಮಗ ಭರತನೇ ಮೊದಲನೆಯ ಚಕ್ರವರ್ತಿ; ಎರಡನೆಯ ಚಕ್ರವರ್ತಿಯೇ ಸಗರ. ಈ ಎರಡನೆಯ ಚಕ್ರವರ್ತಿ, ಎರಡನೆಯ ತೀರ್ಥಂಕರನಾದ ಅಜಿತನಾಥನ ಸಮಕಾಲೀನನಲ್ಲ.

ಅಜಿತನಾಥ ತೀರ್ಥಂಕರನು ನಿರ್ವಾಣಹೊಂದಿದ ಎಷ್ಟೋ ಕಾಲದ ಮೇಲೆ ಅಜಿತನಾಥನ ವಂಶದಲ್ಲಿ ಅಯೋಧ್ಯೆಯಲ್ಲಿ ಹುಟ್ಟಿ, ಎರಡನೆಯ ಚಕ್ರವರ್ತಿಯಾಗಿ ಮೋಕ್ಷಕ್ಕೆ ಹೋದ ಮಹಾ + ಆತ್ಮ = ಸಗರ! ಈ ಸಂಬಂಧದ ಹಿನ್ನೆಲೆಯಲ್ಲಿ, ಎರಡನೆಯ ಚಕ್ರವರ್ತಿಯ ಕಥೆ ಎರಡನೆಯ ತೀರ್ಥಂಕರನ ಚರಿತ್ರೆಯಲ್ಲಿ ಅಡಕವಾಗಿ ನಿರೂಪಿತವಾಗಿದೆ. ಈ ಸಗರನ ಮಗನಾಗಿದ್ದಾನೆ ಭಗೀರಥ. ಜೈನಪರಂಪರೆಯಲ್ಲಿ ಕವಿ ರನ್ನನ ಅಜಿತನಾಥಪುರಾಣದಲ್ಲಿ ಬರುವ ಆ ಮಹಾತ್ಮರಿಬ್ಬರ ಚರಿತ್ರೆ ಕೆಳಗೆ ನಿರೂಪಿಸಿದೆಂತಿದೆ.

ಜಂಬೂದ್ವೀಪದ, ಪೂರ್ವ ವಿದೇಹದ, ಸೀತಾ ನದಿಯ ತೆಂಕಣ ತಡಿಯ ವತ್ಸಕಾವತೀ ವಿಷಯದ ಪೃಥ್ವೀ ನಗರವನ್ನು 'ಜಯಸೇನ'ನೆಂಬ ಅರಸನು ಆಳುತ್ತಿದ್ದನು. ಇವನಿಗೆ ವಿಜಯಸೇನೆ ಎಂಬ ಹೆಂಡತಿ, ರತಿಷೇಣ, ಧೃತಿಷೇಣ ಎಂಬ ಇಬ್ಬರು ಮಕ್ಕಳಿದ್ದರು. ಇವರಲ್ಲಿ ರತಿಷೇಣನು ಕಾಲವಶನಾದನು. ಮಗನ ಸಾವಿಗಾಗಿ ಜಯಸೇನ ಬಹಳೀ ದುಃಖಪಟ್ಟನು. ಆಗ 'ಮಹಾರುತ' ನೆಂಬ ಅರಸನ ಭಾವಮೈದುನ ಜಯಸೇನನಿಗೆ ಬುದ್ಧಿ ಹೇಳಿ, ಸಂಸಾರದ ಅಸಾರತೆಯನ್ನು ತಿಳಿಸಿ, ಧರ್ಮವನ್ನು ಆಶ್ರಯಿಸಿ ಆತ್ಮೋದ್ಧಾರ ಮಾಡಿಕೊಳ್ಳಲು ಹೇಳಿದನು. ಅದರಿಂದ ನಿರ್ವೇಗ ಹೊಂದಿದ ಜಯಸೇನನು ಮಹಾರುತನೊಂದಿಗೆ ದೀಕ್ಷೆವಹಿಸಿದನು. ಕಠಿಣ ತಪವನ್ನಾಚರಿಸಿ, ಸನ್ಯಸನದಿಂದ ಮರಣ ಹೊಂದಿದ ಜಯಸೇನನು ಆರಣಕಲ್ಪದಲ್ಲಿ 'ಮಹಾಬಲ'ನೆಂಬ ದೇವನಾಗಿ ಹುಟ್ಟಿದನು; ಮಹಾರುತನು ಅದೇ ಕಲ್ಪದಲ್ಲಿ 'ಮಣಿಕೇತು'ವೆಂಬ ದೇವನಾಗಿ ಹುಟ್ಟಿದನು. ಸ್ವರ್ಗಸುಖವನ್ನನುಭವಿಸುತ್ತಿದ್ದ ಅವರಿಬ್ಬರೂ ಒಮ್ಮೆ "ನಮ್ಮಿಬ್ಬರಲ್ಲಿ ಯಾರೇ ಮನುಷ್ಯಲೋಕಕ್ಕೆ ಹೋದರೆ, ದೇವಲೋಕದಲ್ಲಿ ಇದ್ದವನು ಹೋಗಿ, ಮನುಷ್ಯಲೋಕದಲ್ಲಿದ್ದವನನ್ನು ಬೋಧಿಸಿ ಸಂಸಾರವಿಮುಖನನ್ನಾಗಿ ಮಾಡಿ, ದೀಕ್ಷೆವಹಿಸುವಂತೆ ಮಾಡಬೇಕು" ಎಂದು ಸಂಕೇತವನ್ನು ಮಾಡಿಕೊಂಡರು. ಕಾಲ ಉರುಳಿತು. ಮಹಾಬಲನ ದೇವಲೋಕದಲ್ಲಿಯ ಆಯುಷ್ಯ ತೀರಿತು. ಆಗ ದೇವನಾಗಿದ್ದ ಅವನು—ಜಂಬೂದ್ವೀಪದ, ಭರತಕ್ಷೇತ್ರದ, ಕೌಶಲ ದೇಶದ ಅಯೋಧ್ಯಾಪುರವನ್ನು ಆಳುತ್ತಿದ್ದ ಇಕ್ಷ್ವಾಕುವಂಶದ "ಸಮುದ್ರ ವಿಜಯ" ಮಹಾರಾಜನಿಗೆ ಹಾಗೂ ಆತನ ರಾಣಿ "ಸುವೇಲಾದೇವಿ"ಗೆ 'ಸಗರ' ನೆಂಬ ಮಗನಾಗಿ ಹುಟ್ಟಿದನು. ಸಗರನು ಬಾಲ್ಯಕಾಲವನ್ನು ಮುಗಿಸಿ, ಯೌವನದಲ್ಲಿ ಕಾಲಿಟ್ಟು ಮಹಾಮಂಡಲೇಶ್ವರನಾಗಿ ಕೆಲಕಾಲ ರಾಜ್ಯವಾಳುತ್ತಿರಲು, ಆತನ ಆಯುಧಾಗಾರದಲ್ಲಿ 'ಚಕ್ರರತ್ನ'ವು ಹುಟ್ಟಿತು. ಚಕ್ರರತ್ನದ ಸಹಾಯದಿಂದ ಷಟ್ಖಂಡಗಳನ್ನು ಗೆದ್ದು ಸಗರ ಚಕ್ರವರ್ತಿಯಾಗಿ ರಾಜ್ಯವಾಳಲಾರಂಭಿಸಿದನು. ಎಲ್ಲ ತರಹದ ಸೌಖ್ಯಗಳನ್ನು ಅನುಭವಿಸುತ್ತಿದ್ದ ಸಗರನಿಗೆ ೯೬,೦೦೦ ಹೆಂಡತಿಯರಿದ್ದರು. ೬೦,೦೦೦ ಮಕ್ಕಳಾದರು. ಮಕ್ಕಳ ಮೇಲೆ ಮಮತೆ ಅತಿ

ಯಾಗಿತ್ತು ಸಗರನಿಗೆ! ಈ ೬೦,೦೦೦ ಮಕ್ಕಳಲ್ಲಿ ಭಗೀರಥನೂ ಒಬ್ಬನು. (ಭಗೀರಥನು ಒಳ್ಳೇ ಶೂರನಾಗಿದ್ದನೆಂದು ವರ್ಣನೆ ಬರುತ್ತದೆ. ವೈದಿಕ ಕಥೆಯಲ್ಲಿ ಸಗರನು ಭಗೀರಥನ ಮುತ್ತಜ್ಜನ ತಂದೆಯಾಗಿದ್ದನು. ಅಶ್ವಮೇಧ ಯಾಗವಮಾಡಿದ ಪುಣ್ಯವಂತ ಚಕ್ರವರ್ತಿಯಾಗಿದ್ದನೆಂಬುದನ್ನು ಇಲ್ಲಿ ನೆನೆದುಕೊಳ್ಳಬಹುದು) ಒಂದು ದಿನ ಸಗರನು ಒಬ್ಬ ಕೇವಲಜ್ಞಾನಿಗಳಾದ ಯೋಗಿಗಳ ದರ್ಶನಕ್ಕೆ ಹೋದನು. ಅಲ್ಲಿಗೆ ಆರಣಕಲ್ಪದಿಂದ 'ಮಣಿಕೇತು' ದೇವನೂ ಬಂದಿದ್ದನು. ಅವನು " ಮಹಾಬಲಿದೇವನು ಈಗ ಎಲ್ಲಿ ಹುಟ್ಟಿದ್ದಾನೆ ?" ಎಂದು ಕೇವಲಜ್ಞಾನಿಗಳನ್ನು ಕೇಳಿದನು ಅದಕ್ಕೆ ಅವರು, " ಈ ಸಗರನೇ ಮಹಾಬಲದೇವನು " ಎಂದು ಹೇಳಿದರು. ಆಗ ಮಣಿಕೇತುವು ತನ್ನ ಗುರುತನ್ನು ಹೇಳಿಕೊಂಡು ಧರ್ಮವನ್ನು ಆಶ್ರಯಿಸೆಂದು ಸಗರನಿಗೆ ಹೇಳಿದನು. ಆದರೆ ರಾಜ್ಯ ಹಾಗೂ ಸುತರ ಮೋಹದಲ್ಲಿ ಮುಳುಗಿದ ಸಗರನಿಗೆ ಸಂಸಾರ ತ್ಯಜಿಸುವುದು ಸಾಧ್ಯವಾಗಲಿಲ್ಲ. (ತದ್ಭವ ಮೋಕ್ಷಗಾಮಿಯಾದ ಸಗರ ಚಕ್ರವರ್ತಿಗೆ ಈ ರೀತಿ ಮೋಹ ಆವರಿಸಿತ್ತೆಂದಮೇಲೆ, ಮಿಥ್ಯಾವಾದಿಯಾದ ಸಾಮಾನ್ಯ ಸಂಸಾರಿಜೀವಿಯ ಪಾಡೇನು? ಮೋಹನೀಯ ಕರ್ಮದ ಹಿಡಿತ ಆತ್ಮದ ಮೇಲೆ ಎಷ್ಟು ಬಲವತ್ತರವಾಗಿರುತ್ತದೆಂಬುದನ್ನು ಇಲ್ಲಿ ತಿಳಿಯಬಹುದಾಗಿದೆ.) ಮತ್ತೊಮ್ಮೆ ಮಣಿಕೇತುವು, ಚಾರಣಮುನಿಗಳ ವೇಷದಲ್ಲಿ ಬಂದು, ಜಿನಾಲಯಕ್ಕೆ ಬಂದ ಸಗರನಿಗೆ ಭೆಟ್ಟಿಕೊಟ್ಟನು. ಅಲ್ಲಿ ಆತನು ತನ್ನ ದಿವ್ಯಸ್ವರೂಪವನ್ನು ತೋರಿಸಿ, ತಾವಿಬ್ಬರೂ ಕೈಕೊಂಡ ಸಂಕಲ್ಪವನ್ನು ನೆನಪಿಗೆ ತಂದನು. ಆದರೂ ಏನೂ ಪ್ರಯೋಜನವಾಗಲಿಲ್ಲ. ಆಗ ಮಣಿಕೇತುವು ಸಗರನಿಗೆ ವೈರಾಗ್ಯ ಬರಲು ಉಪಾಯವನ್ನು ಚಿಂತಿಸಿದನು. " ಈತನು ಜಯಸೇನ ರಾಜನಾದ ಜನ್ಮದಲ್ಲಿ ಇವನಿಗೆ ಮಗನ ಸಾವೇ ನಿರ್ವೇಗಕ್ಕೆ ಕಾರಣವಾಗಿತ್ತು. ಈಗಲಾದರೂ ಅದೇ ಉಪಾಯದಿಂದ ಇವನನ್ನು ವೈರಾಗ್ಯದ ದಾರಿಗೆ ತರಬೇಕೆಂದು ಆ ಮಣಿಕೇತು ಚಿತ್ತಪಂಕಜದೊಳ್ ಒಂದು ಉಪಾಯಮಕರಂದಮಂ ಇಟ್ಟೊಸೆದಿರ್ದನಿರ್ಪಿನಂ."

ಅನೇಕ ಸಂವತ್ಸರಗಳು ಉರುಳಿದವು. ಒಂದು ದಿನ ಸಗರನ ೬೦,೦೦೦ ಜನ ಮಕ್ಕಳು " ಬೇಡಿಂಗೆ ಪೋಗಿಮೆನೆ ", ಆ ಮಕ್ಕಳು ಸಗರನಿಗೆ " ನಮಗೆ ಏನಾದರೂ ಕೆಲಸ ಹೇಳು " ಎಂದರು ಅದಕ್ಕೆ ಸಗರನು " ನೀವೆಲ್ಲರೂ ನನ್ನ ಸಂಗಡ ಸಾಮ್ರಾಜ್ಯಸುಖವನ್ನು ಅನುಭವಿಸುತ್ತ ಇರಬೇಕು. ಇದೇ ಕೆಲಸ " ಎಂದನು. ಅದಕ್ಕೆ ಮಕ್ಕಳು ಒಪ್ಪಲಿಲ್ಲ. ಯಾವ ಕೆಲಸಕ್ಕೂ ಬಾರದೆ ವ್ಯರ್ಥವಾಗಿಹೋಗುತ್ತಿರುವ ತಮ್ಮ ಜೀವದಿಂದೇನು ಪ್ರಯೋಜನ? ಎಂದು ವಾದಿಸಿದರು. ಆಗ ಸಗರನು, " ಕೈಲಾಸಪರ್ವತದೊಳ್ ಪ್ರಥಮ ತೀರ್ಥೇಶ್ವರನ ತನೂಭವಂ ಪ್ರಥಮ ಚಕ್ರೇಶ್ವರಂ ಭರತರಾಜಂ ಅನೇಕ ರತ್ನಮಯ ಪ್ರತಿಮೆ

ಗಳಂ ಮಾಡಿಸಿದುದಕ್ಕೆ ನಿಮ್ಮ ಬಲ್ಲಿಂದದೆ ಭೂಮಿಗೋಚರರ್ಗಗೋಚರಮಪ್ಪಂತು ಕಾಪಂ ಮಾಳ್ಪುದೆನೆ" ಆ ಮಕ್ಕಳು "ಮಹಾಪ್ರಸಾದ"ವೆಂದು ಕೈಲಾಸಗಿರಿಗೆ ಹೋಗಿ ಕಾರ್ಯನಿರತರಾದರು. ಸಗರನ ಮಕ್ಕಳೆಲ್ಲರನ್ನೂ ಒಂದೇ ಕಡೆಗೆ ಕಂಡ ಮಣಿಕೇತುದೇವನು ಸಗರನಿಗೆ ಬುದ್ಧಿ ಬರುವಂತೆ ಮಾಡಲು ಇದೇ ಸಮಯ ಎಂದು ಚಿಂತಿಸಿ "ವಿಷದೃಷ್ಟಿ ವಿಷೋರಗಸ್ವರೂಪದಿಂ ಸಗರನ ಅಱವತ್ತು ಸಾಸಿರ್ವರ್ ಮಕ್ಕಳುಮನೊಡನೆ ಕೃತಕದಿಂ ಭಸ್ಮಾವಲೇಪನಮಾಗಿ ಮಾಡಿ, ಭಗೀರಥನೊರ್ವನುಮಂ ವಾರ್ತಾನಿವೇದನಾರ್ಥಂ" ಉಳಿಸಿದನು. ಭಗೀರಥ ಒಬ್ಬನನ್ನುಳಿದು ಉಳಿದವರನ್ನು ಭಸ್ಮಮಾಡಿದ ಮಣಿಕೇತುವು, ಕೂಡಲೇ ಬ್ರಾಹ್ಮಣನ ವೇಷವನ್ನು ತಳೆದು ಸಗರನ ಅರಮನೆಗೆ ಬಂದು ಅರಮನೆ ಎದುರು ನಿಂತು, "ಇದ್ದ ನನ್ನ ಒಬ್ಬನೇ ಮಗನನ್ನು ಕ್ರೂರನಾದ ಯಮನು ಕೊಂಡೊಯ್ದನು. ಸಕಲ ಭೂಮಂಡಲವನ್ನೇ ರಕ್ಷಿಸುವ ಸಗರಭೂಪಾಲನೇ, ಬೇಗನೇ ಬಂದು ನನ್ನ ಮಗನನ್ನು ತಂದುಕೊಡು. ಇಲ್ಲವಾದರೆ ಇಲ್ಲಿಯೇ ನನ್ನ ಅಸುವನ್ನು ನೀಗುತ್ತೇನೆ", ಎಂದು ಆರ್ತನಾದದಿಂದ ಕೂಗಿದನು. "ಇನ್ನೆವರಮೆನ್ನ ರಾಜ್ಯದೊಳೆಲ್ಲಿಯುಂ ಮಱೆದಪ್ಪೊಡಂ ಕೇಳ್ದಱಿಯೆನಿಂದಶ್ರುತಪೂರ್ವಮಪ್ಪ ಕರುಣಾಕ್ರಂದಮಂ ಕೇಳ್ದೆನೆಂದು ವಿಸ್ಮಯಂಬಟ್ಟು" ಆಸ್ಥಾನದಲ್ಲಿ ಕುಳಿತ ಸಗರನು ಬ್ರಾಹ್ಮಣನನ್ನು ಕರೆಯಿಸಿಕೊಂಡು, ವಿಷಯವೇನೆಂದು ಕೇಳಿದನು. ಆಗ ಆ ಮಾಯದ ಬ್ರಾಹ್ಮಣನು, "ಅನೇಕ ದೇವತೆಗಳಿಗೆ ಹರಕೆ ಹೊತ್ತು ಒಬ್ಬನೇ ಮಗನನ್ನು ಪಡೆದಿದ್ದೆನು. ಅಷ್ಟೇ ಅಲ್ಲ, "ಪಡೆದು ವಿವಾಹೋತ್ಸವಮಂ। ತಡೆಯದೆ ಮಾಳ್ಪಲ್ಲಿ ಬಂದು ಜವನೆಂಬ ಸಿಡಿಲ್॥ ಸಿಡಿಲ್ದೆಱಗಿದೊಡಾನುಂ ನಿ। ನ್ನಡಿಗೆಱಗಿದೆನೆನ್ನ ಮಗನನೀಯಲೆವೇಳ್ಕುಂ" ಎಂದು ಹೇಳಿ, "ಶರಣಾಗಾ ದ್ವಿಜನೆನ್ನಂ। ಕರುಣಿಸು ನೀನೆನ್ನ ಮಗನನಂತಕಪುರದಿಂ॥ ತರವೇಳ್ಪುದೆನಗೆ ಮರಣಂ। ಶರಣಂ ಮೇಣಿನಿತೆ ನಿನ್ನ ಚರಣಂ ಶರಣಂ॥" ಎನ್ನುತ್ತ "ಬಡವನಾದ ನನ್ನನ್ನು ಕಾಪಾಡಿರಿ" ಎಂದು ಅಳಲಾರಂಭಿಸಿದನು. "ಸತ್ತವರನ್ನು ಎತ್ತುವುದು ಎತ್ತಣ ಮಾತು? ಅಘಟಿತವಾದುದು. ತನಗೆ ಎರಗದವರನ್ನೂ ಸಹ ಎರಗಿಸಿ ಷಟ್ಖಂಡ ಮಂಡಳಾಧಿಪನಾದ ತನ್ನ ಕೀರ್ತಿ ಈಡೇರಿಸಲು ಬಾರದಂತಹ ಈ ಬಡಬ್ರಾಹ್ಮಣನ ಕೋರಿಕೆಯಿಂದ ಮಸಳಿಸುವಂತಾಯಿತೇ" ಎಂದು ನೊಂದುಕೊಂಡು ಚಿಂತಿಸುತ್ತಿರುವ ಸಗರನ ಮನಸ್ಸಿನ ಆಂದೋಲನವನ್ನು ತಿಳಿದು, ಚತುರನಾದ ಬುದ್ಧಿಸಾಗರನೆಂಬ ಪುರೋಹಿತನು ಆ ಬ್ರಾಹ್ಮಣನಿಗೆ "ತಮ್ಮೊಳೊರ್ವರಪ್ಪೊಡಂ। ಸತ್ತಱಿಯದರ ಮನೆಯ ಪುಲ್ಲಂ ಕಿರ್ಚುಮಂ" ತೆಗೆದುಕೊಂಡು ಬಂದರೆ, "ನಿನ್ನ ಮಗನನ್ನು ಬದುಕಿಸಿ ಕೊಡಲಾಗುವು"ದೆಂದು ಹೇಳಿದನು. ಹಾಗೆಯೇ ಆಗಲೆಂದು ನಟನೆಗಾಗಿ ಸ್ವಲ್ಪ ಸಮಯ ಹೋದ ಬ್ರಾಹ್ಮಣನು ಪುನಃ ಬಂದು, "ಎಲ್ಲಿಯೂ ಸಿಕ್ಕಲಿಲ್ಲ"ವೆಂದು ಹೇಳಿದನು. ಆಗ ಆ ಬ್ರಾಹ್ಮಣನಿಗೆ

"ಹುಟ್ಟಿದವರು ಸಾಯಲೇಬೇಕು. ಜವನ ಬಾಯಿಂದ ಬದುಕಿ ಉಳಿಯುವವರು ಯಾರು? ಬಡವರು, ಬಲ್ಲಿದರು, ಹೆಂಗಸರು, ಗಂಡಸರು, ಚಿಕ್ಕಮಕ್ಕಳು, ಮುದುಕರು, ತಪಸ್ವಿಗಳು, ನೀಚರು—ಮೊದಲಾಗಿ ಎಲ್ಲರನ್ನೂ ತಿಕ್ಕಿ ಮುಕ್ಕಿ ಬಿಡುತ್ತಾನೆ—ಯಮ! ನಿಷ್ಕರುಣಿಯಾದ ಆತನು ಕೊಂಡುಹೋದಮೇಲೆ, ದುಃಖಿಸುವುದಕ್ಕಿಂತ ಧೈರ್ಯದಿಂದ ಇರಬೇಕು" ಎಂದು ಅನೇಕ ತರಹದಿಂದ ಸಂಸಾರದ ಅಸಾರತೆಯನ್ನು ಸಾರಿ, ಸದ್ಧರ್ಮವನ್ನು ಆಶ್ರಯಿಸಬೇಕೆಂದು ಹೇಳಿ ಆ ಬ್ರಾಹ್ಮಣನನ್ನು ಸಮಾಧಾನಮಾಡಲು ಪ್ರಯತ್ನಿಸಿದನು—ಸಗರ ಚಕ್ರವರ್ತಿ! ಆಗ ಆ ಕಪಟ ಬ್ರಾಹ್ಮಣವೇಷಧಾರಿ ಮಣಿಕೇತು ದೇವನು "ಈ ನಿನ್ನ ಪೇಳ್ದ ಧರ್ಮಮಿ| ದೇನೆನಗೆಯೊ ನಿನಗುಮುಂಟೋ||" ಎಂದು ಕೇಳಿದನು. ಆದಕ್ಕೆ ಸಗರನು, "ನನಗೂ ಉಂಟು" ಎಂದು ಹೇಳುತ್ತಿರುವಂತೆಯೇ ಮಣಿ-ಕೇತುದೇವನು "ನಿನ್ನ ಜಿವತ್ತು ಸಾಸಿರ್ವರ್ ಮಕ್ಕಳ್ ಇಂದು ದೃಷ್ಟಿವಿಷಮ ವಿಷಧರನಿಂ ಭಸ್ಮಾವಶೇಷರಾದರ್" ಎಂದನು. ಅದನ್ನು ಗಂಭೀರವಾಗಿ ತೆಗೆದುಕೊಳ್ಳದೆ ಸಗರನು "ಸಂಸಾರಿ ಜೀವಿಗಳೆಂದು ಪುಟ್ಟಿದರಂದೆ ಸತ್ತರ್ ಇದೇಂ ಚೋದ್ಯಂ?" ಎಂದು "ಧರ್ಮಕಥಾಕಥನದೊಳಿರ್ದಂ." ಅಷ್ಟರಲ್ಲಿ ಕಣ್ಣೀರನ್ನು ಸುರಿಸುತ್ತ, ಬಹುದುಃಖತಪ್ತನಾಗಿ "ಭಗ್ನಮನೋರಥನುಮಾಗಿ ಭಗೀರಥಂ ಬಂದು ತಂದೆಯ ಮುಂದೆ ಮೆಯ್ಯನೀಡಾಡಿ" ತನ್ನ ಸಹೋದರರೆಲ್ಲರೂ ಮಡಿದ ಸುದ್ದಿಯನ್ನು ಹೇಳಿದನು. ಆಗ ನಗುತ್ತಿದ್ದ ಆ ಸಭೆ, ಅರಮನೆ, ಅಂತಃಪುರ ಎಲ್ಲೆಡೆಗೂ ದುಃಖಸಾಗರ ಆವರಿಸಿತು; ಎಲ್ಲೆಡೆಗೂ ಹಾಹಾಕ್ರಂದನ ತುಂಬಿಕೊಂಡಿತು. "ನಮ್ಮ ಮಕ್ಕಳನ್ನು ತಂದುಕೊಡು. ಅವರನ್ನು ಯಮನು ಕೊಂಡು ಒಯ್ಯುವಾಗ ನಿನ್ನ ಚಕ್ರರತ್ನ ಎಲ್ಲಿತ್ತು? ಅವರನ್ನು ತರದಿದ್ದಲ್ಲಿ ನಾವೂ ಸಾಯುತ್ತೇವೆ" ಎಂದು ಹಣೆ, ಎದೆ ಜಜ್ಜಿಕೊಂಡು ತಾಯಂದಿರು ಪ್ರಲಾಪಿಸುತ್ತಿದ್ದರೆ, ಗಂಡಂದಿರ ಸಾವಿನಿಂದಾಗಿ ಸತಿಹೋಗಲು ಸೊಸೆಯರು ಸನ್ನದ್ಧರಾಗುತ್ತಿದ್ದರು. ಗೋಳಾಡುತ್ತಿದ್ದ ಅಂತಃಪುರದ ಆ ಹೆಣ್ಣುಮಕ್ಕಳ ಸಂಗಡ ಪರಿಜನ, ಪುರಜನ ಎಲ್ಲರೂ ಸೇರಿ ದುಃಖಿಸುತ್ತಿದ್ದರು. ಓಲಗದಲ್ಲಿದ್ದ ಮಂಡಳಿಕ ಅರಸರನ್ನೊಳಗೊಂಡು ಸಕಲ ಪ್ರಜೆಗಳೂ ಶೋಕಸಾಗರದಲ್ಲಿ ಮುಳುಗಿದ್ದರು. ಆದರೇನು? ಒಬ್ಬ ತಾಯಿ ಅಳುತ್ತಿದ್ದರೆ ಅವಳು ತನ್ನ ಒಬ್ಬ ಅಥವಾ ಇಬ್ಬರು ಮಕ್ಕಳ ಸಲುವಾಗಿ ಅಳುತ್ತಿರಬಹುದು. ಅದರಂತೆ ಒಬ್ಬ ಹೆಂಡತಿ ತನ್ನೊಬ್ಬ ಗಂಡನಿಗಾಗಿ ಅಳುತ್ತಿರಬಹುದು. ಆದರೆ ೬೦,೦೦೦ ಮಕ್ಕಳಿಗೂ ತಂದೆ ಸಗರನೊಬ್ಬನೇ ಅಲ್ಲವೇ? ಭಗೀರಥನೊಬ್ಬನನ್ನು ಬಿಟ್ಟು ಉಳಿದೆಲ್ಲರನ್ನೂ ಕಳೆದುಕೊಂಡ ಆ ತಂದೆಗೆ ಎಷ್ಟು ದುಃಖ ಆಗಿರಬೇಡ? ಹೇಳತೀರದಷ್ಟು ದುಃಖವಾಗಿದ್ದರೂ ಅದನ್ನು ಸಹಿಸಿ ನಿಂತಿದ್ದಾನೆ—ಸಗರ! ಕವಿ ಹೇಳುತ್ತಾನೆ—"ಅನಿತೊಂದು ಶೋಕವೇಗಂ| ತನಗಾಗೆಯುಮಚಲಿತ ಸ್ವರೂಪ

ದಿನಿರ್ದಂ|| ಕನಕನಗಂಬೊಲ್ ಸಗರನ| ಮನಮಂ ಸಾಗರದ ಗುಣ್ಪನಱಿವರು ಮೊಳರೆ||" ಮತ್ತು "ಅನಿಲಾಹತಿಯಿಂ ಚಳಿಯಿಕು| ಮನೋಕಹಾನೀಕ ಮದ್ರಿ ಚಳಿಯಿಕುಮೆ ಪೃಥ|| ಗ್ಜನದಂತುದಾತ್ತಚಿತ್ತಂ| ಜನಪತಿ ಧೈರ್ಯಾಂಬುರಾಶಿ ಚಳಯಿಸಿದಪನೆ?||"

ತನಗಾದ ಅಪಾರ ಶೋಕವೆಂಬ ಬೆಂಕಿಯ ತಾಪವನ್ನು ಹತ್ತಿಕ್ಕಿ ಹಿಡಿದ ಸಗರಚಕ್ರವರ್ತಿಯ ಆತ್ಮಶಕ್ತಿ ನಿಜವಾಗಿಯೂ ಕಲ್ಪನಾತೀತವಾಗಿದೆ; ಊಹಾತೀತವಾಗಿದೆ. ಕತ್ತಲೆ ತನ್ನ ಪ್ರಭಾವವನ್ನು ತಾರೆಗಳ ಮೇಲೆ ತೋರಬಹುದು; ಆದರೆ ಸೂರ್ಯನ ಮೇಲೆ ತೋರಲು ಸಾಧ್ಯವೇ? ಅದರಂತೆ ಸೂರ್ಯನಂತೆ ಪ್ರಭಾವಶಾಲಿಯಾದ ಸಗರನನ್ನು ಶೋಕವೆಂಬ ತಮವು ಆವರಿಸದೆ ಹೋಯಿತು. ಜ್ಞಾನಿಯಾದ ಅವನು ಅಜ್ಞಾನಿಗಳಂತೆ ಅಳುತ್ತ ಕೂಡಲಿಲ್ಲ. ಸಂಸಾರದ ವಿವೇಚನೆ ಮಾಡುತ್ತ, ಸಂಸಾರದ ಅಸಾರತೆಯನ್ನು ಅಳೆಯುತ್ತ, ಧೈರ್ಯಾವಲಂಬಿಯಾಗಿ ಕುಳಿತು, "ಸತ್ತ ಮಕ್ಕಳನ್ನು ಪುನಃ ಬೇಡುತ್ತಿರುವ ಈ ಸ್ತ್ರೀಯರು ಆ ಬಡಬ್ರಾಹ್ಮಣನಂತೆ ಮರುಳರೇ ಅಲ್ಲವೇ? ಸತ್ತವರನ್ನು ಎತ್ತುವವರಾರು" ಎಂದು ಗೋಳಿಡುತ್ತಿದ್ದ ಅವರ ಬಗೆಗೆ ಅನುಕಂಪ ಮೂಡಿ ದುಃಖಿಸುವ ಅವರ "ದೀನಾನನಂಗಳಂ ನೋಡಲಾಱದೆ" ಸ್ಥಿರವಾಗಿ ಕುಳಿತನು. ಅಂತಹ ಗಂಭೀರ ಪರಿಸ್ಥಿತಿಯಲ್ಲಿಯೂ ಸ್ಥಿತಪ್ರಜ್ಞನಂತೆ ಕುಳಿತ ಸಗರನ ಅಂತಸ್ಸತ್ವವನ್ನು ಅಳೆಯಲು ಸಾಧ್ಯವೇ? ಅದನ್ನು ಸಾಮಾನ್ಯರಂತೂ ತಿಳಿಯಲು ಸಾಧ್ಯವೇ ಇಲ್ಲ. ಕಾರಣ "ಪರಿಜನಮುಂ ಪುರಜನಮುಂ| ನೆರೆದನಿಬರ್ತಮ್ಮೊಳ್ ಅರಸನೇಂ ಕಲ್ಲೆರ್ದೆಯೋ|| ಮರವಾನಿಸನೋ ಕಲ್ಲುಂ| ಮರನಿರ್ಪಂತಿರ್ದನಿಂತು ನಿಷ್ಕರುಣನೊ ಪೇೞ್||" ಎಂದು ತಪ್ಪು ಕಲ್ಪನೆ ಮಾಡಿಕೊಂಡರು. ಸಾಮಾನ್ಯ ಜನರಲ್ಲಿ ಉಂಟಾದ ತಪ್ಪುಗ್ರಹಿಕೆಯನ್ನು ಗಮನಿಸಿದ ಪುರೋಹಿತನು ಸಗರಚಕ್ರವರ್ತಿಯ ತಲೆಯ ಮೇಲೆ ಸಾಸಿವೆ ಕಾಳುಗಳನ್ನು ಹಾಕಿದನು. ಕೂಡಲೆ ಅವು ಅರಳುಗಳಾಗಿ ಛಟ್ ಛಟ್ ಎಂದು ದಿಕ್ಕುದಿಕ್ಕಿಗೆ ಹಾರಿದವು. ಅದನ್ನು ಕಂಡು ಬೆರಗಾದ ಜನರಿಗೆ ಪುರೋಹಿತನು,— "ಓರೊರ್ವರ್ಗೋರ್ವರೊರ್ವರ್ ಮಕ್ಕಳ ದುಃಖಮ್, ಅಂತು ಅರಸಂಗಱುವತ್ತು ಸಾಸಿರ ಮಕ್ಕಳ ದುಃಖಮ್ ಸಾಮಾನ್ಯಮಕ್ಕುಮೆ? ಮಹಾಸತ್ವನುಂ ಧೈರ್ಯಾಂಬುರಾಸಿಯುಮಪ್ಪುದಱಿಂ ಅಸಹ್ಯಮಪ್ಪ ದುಃಖೋದ್ರೇಕಮಂ ಸೈರಿಸಿರ್ದನೆಂದು ಸಕಲ ಜನಕ್ಕೆಲ್ಲಂ" ಪ್ರಕಟ ಮಾಡಿದನು. ಆಗ ಸಗರನು ಯಾರ ಸಂಗಡಲೂ ಏನೂ ಮಾತನಾಡದೆ "ಮೌನಂ ಸರ್ವಾರ್ಥಸಾಧನಂ" ಎಂದು ವಿಚಾರಿಸಿ, ತನ್ನ ರಾಜ್ಯವನ್ನು ತನ್ನ ಮಗ ಭಗೀರಥನಿಗೆ ಕೊಟ್ಟು, ತಪೋರಾಜ್ಯಕ್ಕೆ ಹೊರಟು ಹೋದನು.

ತದ್ಭವಮೋಕ್ಷಗಾಮಿಯಾದ ಆತ್ಮನೂ ಕೂಡ ಸಂಸಾರದಲ್ಲಿ ಬದ್ಧನಾಗಿ ಇರುವ ಶಕ್ಯತೆಯನ್ನು ತೋರಿಸುವದರ ಜೊತೆಗೆ ಆ ಆತ್ಮಕ್ಕೆ ಹಿಂದಿನ ಭವ-ಗಳಲ್ಲಿ ಅಂಟಿಕೊಂಡ ಮನೋದೌರ್ಬಲ್ಯವೂ ಮುಂದುವರೆದುಕೊಂಡು ಬರುತ್ತದೆಂಬುದನ್ನು ಸಗರ ಚಕ್ರವರ್ತಿಯ ಪಾತ್ರದಲ್ಲಿ ಚನ್ನಾಗಿ ತೋರಿಸಲಾಗಿದೆ. ಆತನಿಗೆ ಹಿಂದಣ ಜನ್ಮದಲ್ಲಿ ಮಕ್ಕಳ ಬಗೆಗೆ ಇದ್ದ ದೌರ್ಬಲ್ಯವು ಮುಂದುವರಿದಿದೆ. ಆದರೆ ಆ ಮೋಹಕ್ಕೆ ಚ್ಯುತಿ ಬಂದಾಗ ವಿವೇಕವು ಕೂಡಲೆ ಜಾಗ್ರತವಾಗುತ್ತದೆ. ಆತ್ಮಸತ್ವವು ಬಹಳ ದೊಡ್ಡದಿದ್ದುದರಿಂದ ಅಸಹನೀಯವಾದುದನ್ನೂ ಸಹಿಸಿಕೊಂಡು ತತ್‌ಕ್ಷಣವೇ ರಾಜ್ಯತ್ಯಾಗ ಮಾಡುವುದು ಸಾಧ್ಯವಾಗುತ್ತದೆ. ಮಹಾನ್ ಆತ್ಮನಿಗೆ ಅಂಟಿಕೊಂಡ ಆ ಅಲ್ಪದೌರ್ಬಲ್ಯವೆನ್ನುವ ಪರದೆ ಕಳಚಿ ಬಿದ್ದೊಡನೆಯೇ ಆ ಆತ್ಮ ಪರಮಾತ್ಮನಾಗಲು ಬಹಳ ಸಮಯ ಹಿಡಿಯುವದಿಲ್ಲ. ತಪಸ್ಸಿಗೆ ಹೋದ ಸಗರನು ಕಠಿಣ ತಪಸ್ಸನ್ನಾಚರಿಸಿದನು. ಇತ್ತ ಆ ಮಣಿಕೇತುದೇವನು ಭಸ್ಮರಾದಂತೆ ಬಿದ್ದ ಅರಸುಕುಮಾರರನ್ನೆಲ್ಲ ಜಾಗ್ರತ ಮಾಡಿದನು. ತಮ್ಮ ತಂದೆ ತಮ್ಮ ಮೇಲಿನ ಮಮತೆಯಿಂದ ದೀಕ್ಷೆ ವಹಿಸಿದ್ದನ್ನು ಕೇಳಿ ಅವರೂ ದೀಕ್ಷೆವಹಿಸಿ ಮುನಿಗಳಾದರು ಉಗ್ರತಪವನ್ನು ಕೈಕೊಂಡರು.

ಪಟ್ಟಕ್ಕೆ ಕುಳಿತ ಭಗೀರಥನು ಧರ್ಮವನ್ನು ತಿಳಿದುಕೊಂಡು, ಅನೇಕ ವ್ರತಗಳನ್ನು ಪಾಲಿಸುತ್ತ, ಜಿನಪೂಜಾದಿಗಳನ್ನು ನೆರವೇರಿಸುತ್ತ ಒಳ್ಳೆ ರೀತಿಯಿಂದ ರಾಜ್ಯವಾಳಿದನು ಹೀಗಿರಲು ಒಂದು ದಿವಸ ತನ್ನ ತಂದೆ ಹಾಗೂ ಸಹೋದರರು ಸಮ್ಮೇದಗಿರಿಯಲ್ಲಿ ಉಗ್ರತಪಸ್ಸನ್ನು ಮಾಡಿ ಕರ್ಮನಿರ್ಜರೆಯಾಗಲು, ಪರಮಗತಿಯನ್ನು ಹೊಂದಿದರು ಎಂಬ ವಾರ್ತೆಯನ್ನು ಕೇಳಿದ ಭಗಿರಥನು ನಿರ್ವೇಗಪರನಾಗಿ ತನ್ನ ಮಗನಿಗೆ ರಾಜ್ಯವನ್ನು ಕೊಟ್ಟು, ಕೈಲಾಸ ಪರ್ವತಕ್ಕೆ ಬಂದು ಶಿವಗುಪ್ತರೆಂಬ ಮುನಿಗಳ ಸನ್ನಿಧಿಯಲ್ಲಿ ದೀಕ್ಷೆವಹಿಸಿ ತಪಸ್ಸನ್ನಾಚರಿಸಲಾರಂಭಿಸಿದನು. ಹೀಗೆ ಹಲವು ಕಾಲ ಉಗ್ರತಪವನ್ನಾಚರಿಸಿದ ಭಗೀರಥನಿಗೆ 'ಕೇವಲಜ್ಞಾನ'ವು ಪ್ರಾಪ್ತವಾಯಿತು. ಗಂಗಾತೀರದಲ್ಲಿ ಕೇವಲ-ಜ್ಞಾನ ಪಡೆದ ಈ ಯತಿಯನ್ನು "ಚತುರ್ವಿಧ ದೇವನಿಕಾಯಂ" ಬಂದು "ಸುಧಾಪಿಂಡ ಪಾಂಡುರಮಪ್ಪ ದುಗ್ಧಾಬ್ಧಿ ಜಲದಿಂ" ಪಾದಾಭಿಷೇಕವನ್ನು ಮಾಡಿದರು. ಭಗೀರಥನ ಪಾದಾಭಿಷೇಕ ಮಾಡಿದ ಆ "ದುಗ್ಧಾಬ್ಧಿ ಜಲ" ಗಂಗಾ ನದಿಯ ನೀರಿನಲ್ಲಿ ಹೋಗಿ ಕೂಡಿತು. "ತದಮಲಜಲಪ್ರವಾಹಸಂಗದಿಂ ಗಂಗಾ ಜಲಂ ಜಗನ್ಮಂಗಳಮಾದುದು. ಅಂದಿಂದಿತ್ತ ಗಂಗೆಯುಂ ಭಗೀರಥಂ ತಂದ ನೆಂಬ ಲೋಕಪ್ರಸಿದ್ಧಿಯಾಗೆ ಭಾಗೀರಥೀಯೆಂದು ಕೊಂಡಾಡಿದರು." ಕೇವಲ-ಜ್ಞಾನ ಪಡೆದ ಭಗೀರಥಮುನಿಯು ಕೆಲವು ಕಾಲದ ನಂತರ ಮೋಕ್ಷಕ್ಕೆ ಹೋದನು.

ವೈದಿಕಪರಂಪರೆಯ ಕಥೆಯನ್ನು ಮೇಲೆ ವಿವರಿಸಿದ್ದರಿಂದ, ತುಲನಾತ್ಮಕ ವಿವರಣೆ ಇಲ್ಲಿ ಅನಗತ್ಯ. ಭಗೀರಥ, ಭಾಗೀರಥಿ, ಗಂಗಾನದಿ ಪವಿತ್ರವೆಂಬ ಕಲ್ಪನೆ—ಎಲ್ಲವೂ ಜೈನಪರಂಪರೆಯಲ್ಲಿ ಹೇಗೆ ಮೂಡಿಬಂದಿವೆಯೆಂಬುದನ್ನು ಗಮನಿಸಬೇಕು. ಗಂಗಾನದಿಯನ್ನು ಆಕಾಶದಿಂದ ಇಳಿಸಿದರೆಂಬ ಮಾತು ನಂಬಲರ್ಹವಲ್ಲ. ಕಾರಣ ಅದನ್ನು ಜೈನರು ಬಿಟ್ಟೇ ಬಿಟ್ಟರು. ನದಿ, ಕ್ಷೇತ್ರ, ಮರ ಮುಂತಾದವುಗಳನ್ನು ಪವಿತ್ರವೆಂದು ಭಾವಿಸಿ, ಪೂಜೆ ಸಲ್ಲಿಸುವದನ್ನು ಜೈನ-ತತ್ತ್ವ ಅಲ್ಲಗಳೆಯುತ್ತದೆ. ಆದರೂ ಭಗೀರಥ ತಂದ ನದಿ ಪವಿತ್ರ ಎಂಬ ಭಾವನೆ ಸರ್ವತ್ರ ಹರಡಿ, ಜಾತಿಮತಗಳನ್ನು ಲೆಕ್ಕಿಸದೆ, ಸಾಮಾನ್ಯ ಜನರೆಲ್ಲರೂ ಅದನ್ನು ನಂಬುತ್ತ ಬಂದಿದ್ದರಿಂದ, ತಮ್ಮ ಮತಾನುಯಾಯಿಗಳ ಸಮಾಧಾನಕ್ಕಾಗಿ ಭಗೀರಥ ಮುನಿಯ ಪಾದೋದಕದ ಹಿನ್ನೆಲೆಯಲ್ಲಿ ಜೈನಧರ್ಮದ ಪರಂಪರೆಯಲ್ಲಿ, ಅದನ್ನು ಅಳವಡಿಸಿಕೊಂಡ ಪ್ರಯತ್ನವಿಲ್ಲಿದೆ ಎನ್ನಬಹುದು, ಇದು ಜೈನರೀತಿ!

ವೈದಿಕ ಹಾಗೂ ಜೈನ ಪರಂಪರೆಗಳಲ್ಲಿ ಮೂಡಿಬಂದ ಸಗರ-ಭಗೀರಥರ ಕಲ್ಪನೆ ಮಾಡಿಕೊಂಡಮೇಲೆ, ಇವರ ಬಗೆಗೇ ಕಾಲಕಾಲಕ್ಕೆ ಬದಲಾದ ದೃಷ್ಟಿಗಳು ಎರಡೂ ಪರಂಪರೆಗಳಲ್ಲಿ ಹೇಗೆ ಮೂಡಿವೆಯೆಂಬುದನ್ನಷ್ಟು ಗಮನಿಸಬಹುದು.

ಸಗರನ ತಾಯಿ ಯಾದವಿ ಸಹಗಮನ ಮಾಡುವಾಗ ಭಾರ್ಗವ ಮುನಿ ಆಕೆಯನ್ನು ತಡೆದು "ತಾಯೀ, ಸಹಗಮನ ಮಾಡಬೇಡ. ನಿನ್ನ ಉದರದಲ್ಲಿ ಅಖಿಲ ಭೂಮಂಡಲಪತಿಯೂ, ಪರಾಕ್ರಮಶಾಲಿಯಾದವನು ಹುಟ್ಟಿ, ಶತ್ರು-ಶೇಷವಂ ನಿಗ್ರಹಿಸಿ, ಚಕ್ರವರ್ತಿಯಾಗಿ ಅನೇಕ ಕ್ರತುಗಳಂ ಮಾಡತಕ್ಕವನಿದ್ದಾನೆ" ಎಂದು ಹೇಳುತ್ತಾನೆ. (ವಿಷ್ಣುಪುರಾಣ ಅ. ೪). ಅದರಂತೆ ಸಗರನ ಮಕ್ಕಳ ಬಗೆಗೂ ವಿಷ್ಣುಪುರಾಣದಲ್ಲಿ ಉಲ್ಲೇಖವುಂಟು. ಸಗರನಿಗೆ ಇಬ್ಬರು ಹೆಂಡಂದಿರು. ಕೇಸಿನಿ ಎಂಬವಳು ಅಸಮಂಜಸನೆಂಬ ಒಬ್ಬನೇ ಮಗನನ್ನು ಹಡೆದಳು. ಸುಮತಿ ಎಂಬವಳು ೬೦,೦೦೦ ಮಕ್ಕಳನ್ನು ಹಡೆದಳು. ಅಸಮಂಸನಿಗೆ ಅಂಶುಮಂತನೆಂಬ ಮಗನಾದನು. ಅಸಮಂಜಸನು ಬಾಲ್ಯಾವಸ್ಥೆಯಲ್ಲಿ (ದುಶ್ಚರಿತ್ರನಾದುದರಿಂದ) ರಾಜ್ಯದಿಂದ ಹೊರಗೆ ಹಾಕಲ್ಪಟ್ಟನು. ಉಳಿದ ೬೦,೦೦೦ ಮಕ್ಕಳೂ ಅಸಮಂಜಸನ ಕೃತ್ಯವನ್ನೇ ಅನುಸರಿಸಿದರು. ಅವರ ಉಪಟಳದಿಂದ ಜಗತ್ತು ಬೇಸತ್ತಿತ್ತು. ಆಗ ಭಗವಂತನ ಅವತಾರವೇ ಆದ ಕಪಿಲ ಮುನಿಯು ಅವರನ್ನು ಶಿಕ್ಷಿಸುವ ಭಾರ ಹೊತ್ತು, ಸಗರನ ಯಜ್ಞದ ಕುದುರೆ ತರಲು, ಅವರು ಪಾತಾಳಕ್ಕೆ ಬಂದಾಗ ಅವರನ್ನು ತನ್ನ ಉಗ್ರದೃಷ್ಟಿಯಿಂದ ಸುಟ್ಟುಬಿಟ್ಟನು. ಇದೇ ಮಾತನ್ನು ಭಾಗವತ ಪುರಾಣವೂ ಹೇಳುತ್ತದೆ. ಆದರೂ ಅಲ್ಲಿ ಸ್ವಲ್ಪ ಮಾರ್ಪಾಟು ಕಂಡುಬರುತ್ತದೆ. ಅಸಮಂಜಸನು

ಹಿಂದಿನ ಜನ್ಮದಲ್ಲಿ ಯೋಗಿಯಾಗಿದ್ದವನು ಸಂಗದೋಷದಿಂದ ಈಗ ಅಸಮಂಜಸನಾಗಿ ಹುಟ್ಟಿದನು. ಅವನಿಗೆ ಜನ್ಮಾಂತರದ ಸ್ಮೃತಿಯುಂಟಾಗಿ ಸಂಗದೋಷದಿಂದ ಮುಕ್ತನಾಗಲು ಅಸಮಂಜಸನು ದುಶ್ಚರಿತ್ರನಂತೆ ವರ್ತಿಸಿದನಂತೆ! ಅದರಂತೆ ಕಪಿಲ ಮುನಿಯು ಕ್ರೋಧಕಟಾಕ್ಷದಿಂದ ಸಗರನ ೬೦,೦೦೦ ಮಕ್ಕಳು ಸತ್ತರೆಂಬುದು ಸುಳ್ಳಂತೆ! ಏಕೆಂದರೆ ಭಗವಂತನ ಅವತಾರವಾದ ಕಪಿಲನಿಗೆ ಸಿಟ್ಟು ಬರುವುದೆಂದರೇನು? ಭಗವಂತನಲ್ಲಿ ತಮೋಗುಣವು ಇರಲು ಸಾಧ್ಯವೇ ಇಲ್ಲ. ಕರುಣಾಮೂರ್ತಿಯಾದ ದೇವನು ಅನುಕಂಪ ತೋರದೆ ಕಠೋರವಾಗಿ ವರ್ತಿಸುವುದೆಂದರೇನು? ಮೊದಲಾಗಿ ಹೇಳಿ, ಕಪಿಲಮುನಿಯು ಕ್ರೋಧ-ಕಟಾಕ್ಷದಿಂದ ಸಗರನ ಮಕ್ಕಳು ಸಾಯಲಿಲ್ಲವೆಂದು ಹೇಳಲು ಪ್ರಯತ್ನಿಸಲಾಗಿದೆ. ಇದು ಮಾನವನ ಬುದ್ಧಿ ವಿಕಾರದ ಪ್ರತ್ಯಕ್ಷ ನಿದರ್ಶನವೆನ್ನಬಹುದಲ್ಲವೇ?

ಅದು ಏನೇ ಇದ್ದರೂ ಸಗರನ ಪುತ್ರರು ಪಾತಾಳಕ್ಕೆ ಹೋಗಿ ಕುದುರೆಯನ್ನು ಹುಡುಕಿದರು ಅರ್ಥಾತ್ ಯಾವುದೋ ಒಂದು ಅಸಾಮಾನ್ಯ ಕಾರ್ಯವನ್ನು ಮಾಡಿದರು ಎಂಬುದನ್ನು ಓದುವಾಗ ಸಗರಪುತ್ರರ ಮಹಾಸತ್ವದ ಅರಿವಾಗದಿರದು. ಅದರಂತೆ ಅನೇಕ ಯಜ್ಞಗಳನ್ನು ಮಾಡಿ ಚಕ್ರವರ್ತಿಯಾಗಿ ಬಾಳಿಹೋದ ಪುಣ್ಯವಂತ—ಸಗರ! ಭಗೀರಥನಂತೂ ಆರಂಭದಲ್ಲಿ ಹೇಳಿದಂತೆ, ಭಾರತದಲ್ಲಿ ತನ್ನ ಹೆಸರನ್ನು ಅಜರಾಮರವಾಗಿ ಉಳಿಸಿ ಹೋದ ಮಹಾತ್ಮ! ಇಂತಹ ಮಹಾನ್ ಆತ್ಮರುಗಳ ಕಥೆ ಎಲ್ಲರಿಗೂ ಹಿತಕಾರಿ. ಇಂತಹ ಕಥೆ ವೈದಿಕ ಹಿನ್ನೆಲೆಯಲ್ಲಿ ಹೀಗೆ ಮೂಡಿಬಂದಿದ್ದರೆ ಯಜ್ಞಗಳನ್ನು ಅಲ್ಲಗಳೆದ ಜೈನ ಹಿನ್ನೆಲೆಯಲ್ಲಿ ಇನ್ನೊಂದು ರೀತಿಯಿಂದ ಮೇಲೆ ಹೇಳಿದಂತೆ ನಿರೂಪಿತವಾಗಿದೆ. ಆದರೂ ಕವಿ ರನ್ನನ ಕಾಲಕ್ಕೆ ಬಂದಾಗ ಜೈನದೃಷ್ಟಿಯಲ್ಲಿಯೂ ಸಹ ಮಾರ್ಪಾಡಾದುದು ಕಂಡುಬರುತ್ತದೆ. ಸಗರನ ೬೦,೦೦೦ ಮಕ್ಕಳು ಕಪಿಲಮುನಿಯ ಉಗ್ರದೃಷ್ಟಿ ಅಥವಾ ವಿಷದೃಷ್ಟಿಗೆ ತುತ್ತಾದರೆಂಬ ಮಾತನ್ನು, ಅದರಂತೆ ಜೈನಪುರಾಣದಲ್ಲಿ ಮಣಿಕೇತುದೇವನ ವಿಷೋರಗದ ವಿಷಜ್ವಾಲೆಗೆ ತುತ್ತಾದರೆಂಬಂತೆ ವರ್ಣಿತವಾದ ವಿಷಯವನ್ನು ಕಾಲಕ್ರಮದಲ್ಲಿ ಜನರು ಅಕ್ಷರಶಃ ಅರ್ಥ ಮಾಡುತ್ತ ಬಂದು, ಅಂತಹ ಪುಣ್ಯವಂತರಿಗೆ ಇಂತಹ ದುರ್ಮರಣ ಬಂದಿರಲು ಸಾಧ್ಯವೇ? ಒಂದು ವೇಳೆ ಅವರು ಹಾಗೆ ದುರ್ಮರಣಕ್ಕೆ ಈಡಾಗಿದ್ದರೆ ಅವರೆಂತು ಪುಣ್ಯಾತ್ಮರು? ಎಂದು ಮೊದಲಾಗಿ ಪ್ರಶ್ನೆಮಾಡುತ್ತ ಬಂದರೇನೋ? ಈ ಮಹಾತ್ಮರಿಗೆ ಅಂಟಿಕೊಂಡುಬಂದ ದುರ್ಮರಣದ ಈ ಅಂಶವನ್ನೇ ತೆಗೆದುಹಾಕಲು ಪ್ರಯತ್ನಗಳು ನಡೆದಿರಬೇಕೆನ್ನಿಸುತ್ತದೆ. ಈ ಹಿನ್ನೆಲೆಯಲ್ಲಿ ಕವಿ ರನ್ನನು ಬರೆದ ಕೆಳಗಿನ ಮಾತುಗಳು ಲಕ್ಷಿಸುವಂತಹವಿವೆ—" ಕತೆಯೊಳ್ ಗಜ಼ಿಯುದೆ ವಿಪರೀ। ತತೆಯಿಂದಂ ಪೇೞ್ದ ಕೃತಿಗಳಿರ್ಕೆ ಪುರಾಣ॥ ಸ್ಥಿತಿಯೊಳ್ ಕವಿರತ್ನನಿನ। ನ್ವಿತಮಾದುದು ಸಗರಚಕ್ರವರ್ತಿಯ ಚರಿತಂ॥" ಮತ್ತು " ಸಗರ

ಸುತರೆಲ್ಲರುಂ ನೋ । ಕ್ಷಗಾಮಿಗಳ್ ಚರಮದೇಹಧಾರಿಗಳಂತಾ ॥ ಬಗೆ
ಗೆಟ್ಟು ಅನಂದಿರಂ ಪ । ನ್ನಗರಾಜಂ ಕೊಂದನೆಂಬುದು ಅಪಸಿದ್ಧಾಂತಂ ॥''

ಗುಣಭದ್ರಾಚಾರ್ಯರ ಉತ್ತರಪುರಾಣದಲ್ಲಿ ಈ ವಿಷಯವಿಲ್ಲೆಂಬುದನ್ನು ಗಮನಿಸಿದಾಗ, ಕವಿ ರನ್ನನ ಈ ಪದ್ಯಗಳು ಮೇಲಿನ ಊಹೆಯನ್ನು ಎತ್ತಿಹಿಡಿಯುತ್ತವೆಂಬುದು ಸ್ಪಷ್ಟವಿದೆಯಲ್ಲವೇ ?

ಮಾನವನ ಬುದ್ಧಿ ವಿಕಾಸದೊಂದಿಗೆ ಆತನ ದೃಷ್ಟಿಕೋನ ಬದಲಾಗುತ್ತದೆ. ಅದರಂತೆ ಆತನು ತರ್ಕಬದ್ಧವಾಗಿಯೂ ವಿಚಾರಿಸಲು ಬಯಸುತ್ತಾನೆ. ಹೀಗಾಗಿ, ಕಾಲಕಾಲಕ್ಕೆ ಹಿಂದಿನ ಪುರಾಣಗಳಲ್ಲಿ ಬದಲಾವಣೆಗಳು ಕಾಣಿಸಿಕೊಂಡಿದ್ದರೆ, ಕಾಣಿಸಿಕೊಳ್ಳುತ್ತಿದ್ದರೆ, ಅದಕ್ಕೆ ಆಶ್ಚರ್ಯಪಡಬೇಕಿಲ್ಲ. ಇದರರ್ಥ ಒಳ್ಳೇ ಉದ್ದೇಶದಿಂದ ನಿರ್ಮಾಣಗೊಂಡ ಪುರಾಣಗಳನ್ನು ಅಲ್ಲಗಳೆಯಲೂ ಬೇಕಿಲ್ಲ. ಏಕೆಂದರೆ, ಭಾರತೀಯರಿಗೆ ಧರ್ಮ ಒಂದು ಚೇತೋಹಾರಿ ವಸ್ತು, ಆತ್ಮರುಗಳನ್ನು ಎತ್ತಿಹಿಡಿದು ಅವುಗಳನ್ನು ಭವಬಂಧನದಿಂದ ಮುಕ್ತರನ್ನಾಗಿ ಮಾಡುವುದೇ ಅದರ ಗುಣ-ಗುರಿ. ಈ ಉದ್ದೇಶವನ್ನು ಅಗ್ರವಾಗಿಟ್ಟುಕೊಂಡು ಮೂಡಿಬಂದ ಗ್ರಂಥಗಳು— ನಮ್ಮ ಪುರಾಣಗಳು. ಈ ಪುರಾಣಗಳಲ್ಲಿ ಮೂಡಿಬಂದ ಮಹಾತ್ಮರನ್ನು ತಮ್ಮ ದೃಷ್ಟಿ, ಕಾಲ, ಮತ, ಸಂಸ್ಕಾರಗಳ ಹಿನ್ನೆಲೆಯಲ್ಲಿ ಚಿತ್ರಿಸಿರಬಹುದು–ನಮ್ಮ ಕವಿಗಳು. ಆದರೂ ಅಲ್ಲಿ ಮೂಡಿರುವ ಧರ್ಮ ಹಾಗೂ ಮಹಾತ್ಮರು ಎಲ್ಲರಿಗೂ ಯಾವ ಕಾಲಕ್ಕೂ ಗ್ರಾಹ್ಯರೇ ಸರಿ. ಅಂತಹರ ಪುಣ್ಯಚರಿತ್ರೆಗಳನ್ನು ಒದಗಿಸಿದವರೆಲ್ಲರೂ ಪ್ರಾತಃಸ್ಮರಣೀಯರು. ಅಂತಹರ ಕಾವ್ಯಗಳನ್ನು ಓದಿ ಆತ್ಮೋದ್ಧಾರ ಮಾಡಿಕೊಳ್ಳುವಲ್ಲಿಯೇ ವ್ಯಕ್ತಿಯ ಉನ್ನತಿಯಿದೆಯೆಂದು ಹೇಳಬಹುದು.

★ ಬಿ. ಎಸ್. ಕುಲಕರ್ಣಿ

'ಶುಕಸಪ್ತತಿ'ಯ ಕವಿ-ಕಾವ್ಯ ಪರಿಚಯ

ಡಾ. ಸರ್ಜಾ ಚಂದ್ರಶೇಖರಯ್ಯನವರು 'ಕರ್ನಾಟಕ ಭಾರತಿ'ಯಲ್ಲಿ (೨–೧ರಲ್ಲಿ), ಪ್ರಕಟವಾದ ನನ್ನ ಬರೆಹದ ಬಗೆಗೆ — ಒಂದು ಪುಟದ ವಿವರಣೆ ಬರೆದಿದ್ದಾರೆ. ಆ ನನ್ನ ಲೇಖದಲ್ಲಿಯ ಮಾತುಗಳಿವು :

"ಈ ಕವಿ ಈ ಪದ್ಯದಲ್ಲಿ ಹಾಗೂ ಈ ಮೊದಲೊಮ್ಮೆ "ಕೊಡಗಿಯ ಶಂಕರನಾರಾಯಣ" ದೇವರನ್ನೂ, ಮೂಕಾಂಬಿಕೆಯನ್ನೂ ಸ್ತುತಿಸಿದುದರಿಂದ, ಈತನು ದ.ಕ. ಜಿಲ್ಲೆಯ ಕುಂದಾಪುರ ತಾಲೂಕಿನ ಆ ಭಾಗದವನೆಂದು ತಿಳಿಯುತ್ತದೆ (ಈ ಬಗೆಗೆ ವಿಸ್ತಾರವಾದ ವಿಚಾರ ಇತ್ತೀಚೆಗೆ ಪ್ರಕಟವಾದ ನನ್ನ 'ಸಾಹಿತ್ಯ ಹಾಗೂ ಸಂಶೋಧನೆ'ಯೆಂಬ ಸಂಕಲನ ಗ್ರಂಥದಲ್ಲಿ ನೋಡಬಹುದು)". ಶ್ರೀ ಚಂದ್ರಶೇಖರಯ್ಯನವರು ಈ ಒಂದು ಚಿಕ್ಕ ಬರೆಹ ಕಂಡುದಲ್ಲದೆ, ಈ ಬಗೆಗೆ ವಿಸ್ತಾರ ವಿಚಾರ ಬರೆದ ನನ್ನ ಸಂಕಲನಗ್ರಂಥದ ಲೇಖವನ್ನು ಕಂಡಿಲ್ಲವೆಂದು ಇದರಿಂದ ಖಚಿತವದೆ. ಪ್ರಕೃತ ಆ ಬಗ್ಗೆ ಆ ನನ್ನ ಸಂಕಲನದ ಒಂದೆರಡು ವಿಚಾರವಿಲ್ಲಿ ಬರೆಯಬೇಕಾಗಿದೆ ಹಾಗೂ ಈ ತರದ ಚಿಕ್ಕ ಪರಿಚಯದಿಂದಾದರೂ ಈ ಕವಿಯ ಕೃತಿಯ ವಿಚಾರಗಳನ್ನು ವಾಚಕರಿಗೆ ಒದಲು ಅನುಗೊಳಿಸುವಂತೆ ಪ್ರೇರಕರಾದ ಶ್ರೀ ಚಂದ್ರಶೇಖರಯ್ಯನವರಿಗೆ ಕೃತಜ್ಞತೆಗಳನ್ನು ಸೂಚಿಸಬೇಕು. ಆ ಬಗ್ಗೆ ಅವರ ಬರೆಹದಲ್ಲಿ ಕೇವಲ ಸೂಚಿಸಲಾದ ಒಂದೆರಡು ಬಗೆಗಳಿಗೆ ಜಿಜ್ಞಾಸುವಾಗಿ ತುಸ ಬರೆಯಲಿದ್ದೇನೆ.

(೧) "ಕವಿಯ ವಿಚಾರ ಹೀಗೆ ತಿಳಿಯಬಹುದು : ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಮತ್ತು ಮಲೆನಾಡಿನ ಭಾಗವನ್ನು ಆಳಿದ ಕೆಳದಿಯ ರಾಜವಂಶದ ಗನೆಯ ಬಸವರಾಜನ ಮಂತ್ರಿ 'ಶರಜಾ ನಾಗ'ನು ಇದನ್ನು ಬರೆದನು. ಈ ರಾಜನು ಇಸ್ವಿ ೧೬೯೭-೧೭೧೪ರಲ್ಲಿ ಇದ್ದವನು. ಈ ಕವಿಯು ಇಮ್ಮಡಿಯಾಗಿ ಶಂಕರನಾರಾಯಣದೇವರನ್ನೂ, ಒಮ್ಮೆ ಕೊಲ್ಲೂರದೇವಿಯನ್ನೂ ನೆನೆದುದರಿಂದ, ಇವನ 'ಹುಟ್ಟೂರು ಶಂಕರನಾರಾಯಣ ಅಥವಾ ತತ್ಸಮೀಪದ ಮಲೆನಾಡಾಗಿರಬೇಕು. ಈ ಕವಿ ಶೈವನಾಗಿರಬಹುದು" (ಸಾಹಿತ್ಯ ಹಾಗೂ ಸಂಶೋಧನೆ, ಪುಟ ೨೪).

ಈ ಶುಕಸಪ್ತತಿಯ ಹೆಸರು ಮಾತ್ರ ಕನ್ನಡ ಕವಿಚರಿತೆಯಲ್ಲಿ (೩–೨೯೭, ೨೯೯) ಹೇಳಿದೆ. ಆ ಪರಿಚಯದಲ್ಲಿ ಕವಿಯ ಹೆಸರು, ಆಶ್ರಿತರಾಜನ ಹೆಸರು ಕಾಲಾದಿಗಳು ಹೇಳಿಲ್ಲ. (ಮೈಸೂರು ವಿಶ್ವವಿದ್ಯಾನಿಲಯದಿಂದ ಇತ್ತೀಚೆಗೆ ನನ್ನ

ಹಸ್ತಪ್ರತಿಯ ಸರಿ-ತಪ್ಪು ನೋಡಲು ಕಾಗದಪ್ರತಿಯೊಂದನ್ನು ಕಳುಹಿದ್ದರು; ಇದನ್ನು ತರಿಸಲು ನನಗೆ ಅನುಗೊಳಿಸಿದವರು ಇಲ್ಲಿಯ ಗೋವಿಂದದಾಸ ಕಾಲೇಜಿನ ಪ್ರಿನ್ಸಿಪಾಲ್ ಡಾ. ಪಿ. ನಾರಾಯಣರಾಯರು.) ಆದರಲ್ಲಿ ಕವಿಪರಿಚಯಾತ್ಮಕವಾದ ನನ್ನ ಬರೆಹದಲ್ಲಿ ಮೊದಲಿಗೆ ಬರೆದ "ಧರಣಿಗುತ್ತಮನಾಗಿ ರಾಜಿಪ ದೊರೆ ಕೆಳದಿ ಬಸವಕ್ಷಿತೀಶನ ಚರಣಕಮಲದ ಭೃಂಗ ಶರಜಾನಾಗಮಂತ್ರೀಶ ವಿರಚಿಸಿದನೀ ಪುಣ್ಯಕತೆಯನು" ಪದ್ಯವಿಲ್ಲ! ಸಂಪ್ರತಿಕಾರನ ಕೈತಪ್ಪಿನಿಂದ ಹೀಗಾಗಿರಬೇಕು, ಹಾಗಾಗಿ ಕನ್ನಡಕವಿಚರಿತೆಯಲ್ಲಿ ಈ ಕೃತಿಯು ಹೆಸರಿದ್ದರೂ, ಕವಿ ಹಾಗೂ ಆಶ್ರಿತರಾಜನ ನಾಮಧೇಯಕಾಲಾದಿಗಳು ಹೇಳಿಲ್ಲ. ಈ ವಿಷಯಾಂಶವನ್ನು ಶ್ರೀ ಚಂದ್ರಶೇಖರಯ್ಯನವರೂ ವಾಚಕರೂ ಗಮನಿಸಬೇಕು.

ಮಂಗಳೂರಿನ ಹಸ್ತಪ್ರತಿ (ತಾಳೆಗರಿ) ನನಗೆ ದೊರೆತಾಗ, ಆದಕ್ಕೆ ನೆರವಾಗಲು ಬೇರೆಡೆಯಿಂದ ತರಿಸಿದ ಹಸ್ತಪ್ರತಿಗಳಲ್ಲಿ ಈ ಮೇಲಿನ ಪದ್ಯವಿದೆ. ಅಷ್ಟುಮಾತ್ರವಲ್ಲ, ಈ ಕೃತಿಯ ಹಸ್ತಪ್ರತಿಗಳನ್ನು ಬರೆದವರು ಕುಂದಾಪುರದ ಬಳಿಯವರೆಂದೂ ತಿಳಿಯುತ್ತದೆ : (೧) ಸಾಗರದ ಶ್ರೀ ಕೆ. ವಿ. ಸುಬ್ಬಣ್ಣನವರ ಮೂಲಕ ದೊರೆತ ಪ್ರತಿಯಲ್ಲಿ **'ಕೊಲ್ಲೂರ ಮೂಕಾಂಬಿಕೆ'**ಗೆ ವಂದನೆಯು ಬರೆದಿದೆ. (೨) ಬೆಂಗಳೂರ ಸರ್ಕಾರಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ ಸಾ. ಶಿ. ಮರುಳಯ್ಯನವರ ಮೂಲಕ ಒದಗಿದ ಪ್ರತಿಯಲ್ಲಿ **'ಆನೆಗುಡ್ಡೆ ವಿನಾಯಕದೇವ'**ರನ್ನು ಹೆಸರಿಸಿದೆ. ಅಂದರೆ, ಇದರ ತಾಳೆಗರಿಯ ಪ್ರತಿಗಳು ಹೆಚ್ಚಾಗಿ ಕುಂದಾಪುರ ತಾಲೂಕಿನ ಸುಪ್ರಸಿದ್ಧ ದೇವರ ಭಕ್ತರಿಂದ ಬರೆಯಲಾಗಿವೆ. ಆದುದರಿಂದ, ಈ ಕವಿಯ ಮೂಲಪುರುಷ ಹಾಗೂ ಕುಟುಂಬದವರು ಬೇರೆಡೆಯವರಾದರೂ, ಬೇರೆಡೆಯಲ್ಲಿ ನಿವಾಸಿಗಳಾದರೂ, ಈ ಕವಿಯ ಈ ಕೃತಿ ಹೆಚ್ಚಾಗಿ ದ.ಕ. ಜಿಲ್ಲೆಯಲ್ಲಿ ದೊರಕಿದೆಯೆನ್ನಲು ಸಂದೇಹವಿಲ್ಲ.

ಕೆಳದಿರಾಜರು ಮಲೆನಾಡಿನ ದೊರೆಗಳಾಗಿದ್ದರು. ಆ ಮಲೆನಾಡಿನಲ್ಲಿ ಶಿವಮೊಗ್ಗ ಹಾಗೂ ದ.ಕ. ಜಿಲ್ಲೆಯ ಉತ್ತರಭಾಗ ಕೂಡಿತ್ತೆಂಬುದು ಚಾರಿತ್ರಿಕ ಪ್ರಸಿದ್ಧವಿದೆ. "ಕೆಳದಿನೃಪವಿಜಯ"ದಲ್ಲಿ ಹಾಗೂ ಇತರ ಶಿಲಾಶಾಸನಗಳಲ್ಲಿ ಈ ವಿಚಾರ ಸುವೇದ್ಯವಿದೆ (ಶ್ರೀ ನೆಲಮಂಗಲ ಲಕ್ಷ್ಮೀನಾರಾಯಣರಾಯರು "ವಿಜಯನಗರದ ಷಟ್ ಶತಮಾನೋತ್ಸವ"ದ ಆಂಗ್ಲ ಲೇಖನ ಸಂಕಲನದಲ್ಲಿ ಈ ಬಗ್ಗೆ ಪ್ರತ್ಯೇಕ ಬರೆದಿದ್ದಾರೆ). ಹಾಗಾಗಿ, "ಶರಜಾನಾಗಮಂತ್ರೀಶನು" ತನ್ನ ಪೂರ್ವಿಕರ ಹಾಗೂ ಉತ್ತರಾಧಿಕಾರಿಗಳ ನಿವಾಸದಲ್ಲಿರಲೇಬೇಕೆಂದಿಲ್ಲ. "ಶಂಕರನಾರಾಯಣ" ಹಾಗೂ "ಕೊಲ್ಲೂರ" ಬಳಿ ಈತನು ನಿವಾಸಿಯಾಗಿರಬಾರದೆಂದಿಲ್ಲ! (ಕವಿಯ ಪೂರ್ವಿಕರು ಹಾಗೂ ಉತ್ತರಕಾಲೀನರನ್ನು ಹೆಸರಿಸಿ ಬರೆದಿರುವ "ಕೆಲವು ನಿರ್ದಿಷ್ಟ ಆಧಾರ"ಗಳ ಸವಿವರ ಪರಿಚಯವನ್ನು ಇನ್ನೊಮ್ಮೆ ಶ್ರೀ ಚಂದ್ರ-

ಶೇಖರಯ್ಯನವರು ಬರೆದರೆ ಉಪಕಾರವಾಗುತ್ತಿತ್ತು. ಕವಿಯ ಪೂರ್ವಿಕರ ಹಾಗೂ ಅನಂತರದವರ ಬಗೆಗೆ ಹೆಚ್ಚು ವಿಷಯ ತಿಳಿದುಕೊಳ್ಳಬಹುದಿತ್ತು!)

ಆವೊಬ್ಬನೂ ತನ್ನ ಪೂರ್ವಿಕರ ನಿವಾಸದಲ್ಲಿರುವನೆಂದೂ, ತದುತ್ತರ-ಕಾಲೀನರು ಅಲ್ಲೇ ವಾಸಿಸುವರೆಂದೂ ಅಂದೂ, ಇಂದೂ, ಮುಂದೂ ಹೇಳಸಲ್ಲದುದು! ಹಾಗಾದರೆ, ಆತನ ನಿಶ್ಚಿತ ಸ್ಥಳಾದಿಗಳನ್ನು ತಿಳಿಯಲು ಆತನು ಉಲ್ಲೇಖಿಸಿದ–ಸ್ತುತಿಸಿದ ಸ್ಥಳದ-ದೇವರ ಹೆಸರುಗಳೇ ಮುಖ್ಯಾಧಾರಗಳಾಗಿವೆಯೆನ್ನಲು ಮರುಮಾತಿಲ್ಲ! ಆದುದರಿಂದ ನನ್ನ ಬರೆಹದಲ್ಲಿ ಜನತೆಗೆ ಪರಿಚಿತನಾದ ಈ ಕವಿಯ–ಕೃತಿಯ ಬಗೆಗೆ ಅನ್ಯಥಾಭಾವನೆಗೆಡೆಯಿಲ್ಲ!

"ಶರಜಾ + ನಾಗ"ನೆಂಬುದು ಕೇವಲ ಮೊದಲ ನೋಟಕ್ಕೆ ಕಾಣುವಂತೆ "ಸುಬ್ರಹ್ಮಣ್ಯ"ನೆಂದು ಬರೆದಿದ್ದೆನು. (೧೯೬೦ರಲ್ಲಿ ಉಡುಪಿ "ಭವ್ಯವಾಣಿ" ಪತ್ರಿಕೆಯ ಸಾಹಿತ್ಯ ಸಮ್ಮೇಳನಾಂಕ ನೋಡಿರಿ.) ಕೆಲವು ಕೃತಿಗಳಲ್ಲಿ ಕವಿಯ ನಾಮಧೇಯ, ಸ್ಥಳನಾಮಗಳು 'ಒಗಟು' ರೀತಿಯಲ್ಲಿ ಹಾಗೂ ಪರ್ಯಾಯ ರೂಪದಿಂದ ಅಥವಾ ರೂಪಾಂತರದಿಂದ ಹೇಳಲಾಗಿದೆಯೆಂದು ಬೇರೆ ಕೃತಿಗಳ ಪರಿಶೀಲನೆಯಿಂದ ವೇದ್ಯವಾಗುತ್ತದೆ. ಪರಂತು, ಶ್ರೀ ಸೇಡಿಯಾಪು ಕೃಷ್ಣ ಭಟ್ಟರು (ಮಂಗಳೂರು ಶ್ರೀ ಕಡೆಂಗೋಡ್ಲು ಶಂಕರಭಟ್ಟರ ಸಂಪಾದಕತ್ವದ "ರಾಷ್ಟ್ರಮತ"ದ ವಿಶೇಷಾಂಕದಲ್ಲಿ) ಸೂಚಿಸಿದಂತೆ, "ಕೆಳದಿನೃಪವಿಜಯ"ವನ್ನು ನೋಡಿದಾಗ 'ನಿಯೋಗಿ ಶರಜಾನಾಗಪ್ಪಯ್ಯ'ನೆಂಬುದಕ್ಕೂ ಈ ಕೃತಿಯ 'ಶರಜಾ ನಾಗಮಂತ್ರೀಶ' ಎಂಬುದಕ್ಕೂ ಏಕತೆಯಿರುವುದನ್ನು ನಾವೆಲ್ಲರೂ ಒಪ್ಪಬೇಕು. ಆದರೆ, 'ಶರಜಾ' ಎಂಬುದು ಈ ಮೊದಲ ಹಲವರಿಗೆ ಹೇಳಿರುವುದನ್ನು ಕಂಡರೆ, 'ಶರಜಾರಾಯ'ನೆಂಬುದಕ್ಕೆ ವಿಶೇಷಾರ್ಥವಿರಲೇಬೇಕೆಂದು ಕುತೂಹಲವಾದೀತು. 'ಶರಜಾ' ಎಂಬುದು ಹಲವರಿಗೆ ಒಮ್ಮೆಲೇ ಹೇಳಿರುವುದನ್ನು ಕಂಡರೆ, 'ಅದೊಂದು ಉಪಾಧಿಯಾಗಲಿ ಹುದ್ದೆಯಾಗಲಿ' ಇರಬೇಕೆಂದು ಊಹಿಸಿದರೆ ತಪ್ಪಲ್ಲ. ಇದಕ್ಕೆ ಡಾ. ಸರ್ಜಾ ಚಂದ್ರಶೇಖರಯ್ಯನವರು ಬರೆದಂತೆ, ಉರ್ದುಭಾಷೆಯ 'ಸಿಂಹ'ವೆಂಬ ಅರ್ಥವೇ ಸಾಕಾದೀತೆಂದು ಹೇಳಲು ಬರುವುದಿಲ್ಲ. ಏಕೆಂದರೆ, ಹಿಂದೀ ಭಾಷೆಯಲ್ಲಿ 'ಸರಜಾ' ಎಂಬುದಕ್ಕೆ 'ಸಿಂಹ' ಎಂಬಂತೆ 'ಸರದಾರ'ವೆಂದೂ ಅರ್ಥವಿರುವುದು. ಆಗ (ಸರಜಾ-ಶರಜಾ ಎಂದು ಉಚ್ಚಾರಭೇದ ಲಿಪಿಭೇದಗಳಿಂದ ಸಾಧುವಾದರೆ), ಸರಜಾರಾಯನೆಂಬುದಕ್ಕೆ ವಿಶೇಷಾರ್ಥವಿದೆಯೆಂದು ತಿಳಿಯುತ್ತದೆ. ಇನ್ನೂ ಈ ನುಡಿಗೆ ಬೇರೆ ಬಗೆತವಿದ್ದರೆ ತಿಳಿಯಬೇಕು. ಆ ನುಡಿಯೇ, ಆಂಗ್ಲ ರೀತಿಯಲ್ಲಿ 'ಸರ್ಜಾ' ಎನ್ನುವುದು ಹಾಗೂ ಹಿಂದೀ ನುಡಿಯಲ್ಲಿ ಎರಡನೆಯ ಅಕ್ಷರವನ್ನು ಪೂರ್ಣ ಬರೆದರೂ ಓದುವಾಗ 'ಸರ್‌ಜಾ' ಎಂದು ಅರ್ಧಾಕ್ಷರವಾಗಿ ಓದುವುದು ಸಾಜವಾಗಿದೆ.

'ಶರಜಾನಾಗಮಂತ್ರೀಶ'ನು ಬರೆದ ಈ ಕನ್ನಡ ಶುಕಸಪ್ತತಿ ಪದ್ಯ ಕಾವ್ಯದ ಪ್ರಸಾರಕ್ಕೆ (ಮುದ್ರಣರೂಪದಲ್ಲಿ ಕನ್ನಡಿಗರಿಗೆ ಒದಗಲು) ಹತ್ತು ವರ್ಷಕ್ಕಿಂತಲೂ ಹಿಂದಿನಿಂದ ವ್ಯವಸಾಯಕ್ಕೆ ತೊಡಗಿದ್ದೇನೆ. ಕನ್ನಡರಸಿಕರೆಲ್ಲರೂ ಈ ಬಗೆಗೆ ಸಹಕರಿಸುವರೆಂದೂ, ಹಸ್ತಪ್ರತಿಯುಳ್ಳವರು ಕಳುಹಬೇಕೆಂದೂ ಪುನಃ ವಿನಂತಿಸುತ್ತೇನೆ.

ಕಾವ್ಯದ ವಿಚಾರವಾಗಿ ಕೆಲವು ಮಾತುಗಳನ್ನು ಬರೆಯುವುದು ಅಪ್ರಸ್ತುತವಾಗಲಾರದು. ಇದರ ಹಸ್ತಪ್ರತಿಗಳು ಹಲವು ನನಗೆ ಒದಗಿವೆ. ಕೆಲವು ಪೂರ್ಣವಾಗಿದ್ದರೆ, ಕೆಲವು ಅಪೂರ್ಣತಃ ಬರೆದವು. ಒಟ್ಟಾರೆ ಈ ಕೃತಿಯಲ್ಲಿ ಎಪ್ಪತ್ತೆರಡು ಸಂಧಿಗಳಿವೆ. ಆ ಮೊದಲ ಸಂಧಿಯಲ್ಲಿ ವಿವಿಧ ದೇವರ ಸ್ತುತಿಗಳು ಹಾಗೂ ಕವಿಪರಿಚಯದ ಒಂದು ಪದ್ಯವೂ ಸೇರಿದೆ. ಆನಂತರ ಕಾವ್ಯಪೀಠಿಕೆಯಾಗಿ ಒಂದು ಸಂಧಿ ಬರೆಯಲಾಗಿದೆ. ಇಂದ್ರಲೋಕದಲ್ಲಿ ನಡೆದ ಚರ್ಚೆಯ ಫಲವಾಗಿ, ಪರೀಕ್ಷೆಗೆ ಭೂಲೋಕದಲ್ಲಿ ಅವತರಿಸಿದ ಇಂದ್ರ ಶಚಿಯರು ಹಾಗೂ ವಹ್ನಿ ಮತ್ತು ಶುಕಮುನಿಯ ಸೂಚನೆಯಿಲ್ಲಿದೆ. ಶುಕನು ವಹ್ನಿರಾಯನಿಗೆ ಹೇಳುವ ನೀತಿಬೋಧಕ ಕತೆಗಳ–ವಿಷಯಗಳ ಸಂಕಲನವಿದು. ಬೆಂಗಳೂರ ಶ್ರೀ ಕೃಷ್ಣಯ್ಯಶೆಟ್ಟಿಯವರಲ್ಲಿ ಅದಾಗಲೇ 'ಸಚಿತ್ರ ಶುಕಸಪ್ತತಿ' ಪ್ರಕಟವಾಗಿದೆ. ಅಂದರೆ ಈ ಕನ್ನಡ ಪದ್ಯಕೃತಿಗೂ ಅದಕ್ಕೂ ಅಲ್ಲಲ್ಲಿ ಕೆಲವು ಅಂತರಗಳಿವೆ ಇದಕ್ಕೆ ಕಾರಣವೇನೆಂದು ವಿಚಾರಿಸತೊಡಗಿದೆನು. ಮೈಸೂರಿನ ಸುಪ್ರಸಿದ್ಧ ವಿದ್ವಾಂಸರಾದ ಡಾ. ಎ. ವೆಂಕಟಸುಬ್ಬಯ್ಯನವರಿಂದ ತಿಳಿದ ಕೆಲವು ವಿಷಯಾಂಶಗಳಿಂದ ಮತ್ತೂ ಈ ಬಗೆಗೆ ತಿಳಿವ ಕುತೂಹಲವಾಗಿತ್ತು. ಬನಾರಸಿ ಲಾಲ್ ಅವರು ಕಾಶಿಯಲ್ಲಿ ಪ್ರಕಟಿಸಿದ ಶುಕಸಪ್ತತಿ (ಸಂಸ್ಕೃತ–ಪ್ರಾಕೃತ ಪದ್ಯ ಗದ್ಯ ರೂಪ ಕೃತಿ) ತರಿಸಿದೆನು. ಪುಣೆಯ ಭಾಂಡಾರ್ಕಾರ್ ಪ್ರಾಚ್ಯ ಸಂಶೋಧನ ಸಂಸ್ಥೆಯ ಹಸ್ತಪ್ರತಿ ತರಿಸಿದೆನು. ಇವೆರಡೂ ಒಂದೇ ಕೃತಿಯಾಗಿದೆ (ಕೆಲವೆಡೆ ಪಾಠಾಂತರಗಳಿವೆ). ಇವೆರಡಕ್ಕೂ ಈ ಕನ್ನಡ ಪದ್ಯಕೃತಿಯ ರೀತಿಗೂ ಹೋಲಿಕೆಯಿಲ್ಲ ಬೇರೆಬೇರೆಯೇ ಆಗಿದೆ. 'ಶುಕಸಪ್ತತಿ'ಯ ಕತೆ ದಾಕ್ಷಿಣಾತ್ಯರಲ್ಲಿ ಒಂದು ತರವಿದ್ದಂತಿದೆ. ಔತ್ತರೇಯರಲ್ಲಿ ಬೇರೆ ತರಹವಿದೆ. ಈ ದಾಕ್ಷಿಣಾತ್ಯ ರೀತಿಯೂ ಸಾಧಾರಣ ಸಾವಿರ ವರ್ಷದ ಹಿಂದಿನಲ್ಲಿ ಸಂಸ್ಕೃತದಲ್ಲಿ ಬರೆಯಲಾಗಿದೆ. ಈ ದಾಕ್ಷಿಣಾತ್ಯ ಪಾಠದ ಅನುಸಾರವಾಗಿ ಈ ಶರಜಾನಾಗಮಂತ್ರಿಯು ಕನ್ನಡ ಪದ್ಯಕಾವ್ಯ ಬರೆಯಲಾಗಿದೆಯೆಂದು ಶ್ರೀ ಸಾ. ಶಿ. ಮರುಳಯ್ಯನವರು ಇತ್ತೀಚೆಗೆ ಬರೆದು ತಿಳುಹಿದ್ದಾರೆ. (ಶ್ರೀಯುತರು ಈ ಬಗೆಗೆ ಬರೆದುದು, ರಾಷ್ಟ್ರಪ್ರಶಸ್ತಿವಿಜೇತ ಸುರತ್ಕಲ್ಲಿನ ಶ್ರೀ ಎಂ. ವಾಸುದೇವ ರಾಯರ ಸಂಭಾವನ ಗ್ರಂಥದಲ್ಲಿ ಪ್ರಕಟವಾಗಲಿದೆ).

ಈ ಕನ್ನಡ ಪದ್ಯಕೃತಿಯ ಹಸ್ತಪ್ರತಿಕಾರರು ಕೆಲವೆಡೆ ಮಾಡಿದ ಕೈ-ತಪ್ಪುಗಳನ್ನು ಶ್ರೀಯುತರು ತಮ್ಮ ಬರೆಹದಲ್ಲಿ ಸೂಚಿಸಿದ್ದಾರೆ. 'ಧರಣಿಗುತ್ತಮನಾಗಿ ರಾಜಿಪ ದೊರೆ ಕೆಳದಿಯ 'ಭವ' ಕ್ಷಿತೀಶನ' ಎಂದೊಂದು ಪ್ರತಿಯಲ್ಲಿದೆ. ಅದರ ಪರಿಚಯವಾಗಿ, 'ಭವ' ಅಂದರೆ 'ಶಿವ'ನೆಂದು ಅರ್ಥಾತ್ ಶಿವಪ್ಪನಾಯಕನ ಕಾಲದಲ್ಲಿ ಇವನಿದ್ದನೆಂದು ಬರೆಯಲಾಗಿದೆ! ಪರಂತು, ಶ್ರೀಯುತರಿಗೆ ಹಾಗೂ ನನಗೆ ದೊರಕಿದ ಹಲವು ಪ್ರತಿಗಳಲ್ಲಿ 'ಬಸವ'ನೆಂದು ಇರುವುದನ್ನೂ ಸೂಚಿಸಿದ್ದಾರೆ. 'ಕೆಳದಿನೃಪವಿಜಯ'ದಲ್ಲಿ ೧ನೆಯ ಬಸಪ್ಪ ರಾಜನ ಕಾಲದಲ್ಲಿ 'ಶರಜಾ ನಾಗಪ್ಪಯ್ಯ'ನ ಉಲ್ಲೇಖವಿದೆ. ಈ ಮೇರೆಗೆ ನೋಡಿದರೆ, ಆವೊಂದು ಹಸ್ತಪ್ರತಿಯನ್ನು ಮಾತ್ರ ಆಧರಿಸಿ ಹೀಗೆ ಇರಬೇಕೆಂದು ಆಗ್ರಹದಿಂದ ಪ್ರವರ್ತಿಸುವುದು ಅಕ್ಷಮ್ಯವಾದ ಅಪರಾಧವಾಗಿದೆ.

ದಾಕ್ಷಿಣಾತ್ಯ ರೀತಿಯ ಶುಕಸಪ್ತತಿಯಲ್ಲಿ ಹಲವು ಪುರಾಣೋಕ್ತ ಕತೆಗಳಿವೆ. ಅನಸೂಯಾ ಕತೆ, ಶ್ರೀರಾಮನ ಕತೆ, ಅಂಬರೀಷನ ಕತೆ, ಶಕುಂತಲೆಯ ಕತೆ ಇತ್ಯಾದಿ. ಆದರೆ ಅವುಗಳಲ್ಲಿ ತುಂಬಾ ಅಂತರವಿದೆಯೆಂಬುದು ಇದಾಗಲೇ ಪ್ರಕಟವಾದ ನನ್ನ ಲೇಖದಲ್ಲಿ ವಾಚಕರಿಗೆ ತಿಳಿಯದಿರದು. (೧೯೬೨ರಲ್ಲಿ ಬೆಂಗಳೂರ 'ಶರಣ ಸಾಹಿತ್ಯ'ದಲ್ಲಿ ಶ್ರೀರಾಮನ ಕತೆ ಬರೆಯಲಾಗಿದೆ. ಮಂಗಳೂರ 'ಪ್ರಭಾತ' ವಾರಪತ್ರಿಕೆಯಲ್ಲಿ 'ಧರ್ಮಪಾಲ'ನ ಕತೆಯಿದೆ. ೧೯೬೮ರಲ್ಲಿ 'ಕರ್ನಾಟಕ ಭಾರತಿ' ಹಾಗೂ ೧೯೬೯ರಲ್ಲಿ 'ಪ್ರಜಾವಾಣಿ'ಗಳಲ್ಲಿ 'ಶಕುಂತಲೆಯ ಕತೆ'ಯಿದೆ).

ಶುಕಸಪ್ತತಿ ಪದ್ಯಕಾವ್ಯದ ೩೬ ಸಂಧಿಗಳನ್ನು ಹಾಗೂ ಕವಿ-ಕಾವ್ಯ ಪರಿಚಯವನ್ನು ಸದ್ಯಃ ೧ನೆಯ ಸಂಪುಟವಾಗಿ ಪ್ರಕಟಿಸಲು ನಿಯೋಜಿಸುತ್ತಿದ್ದೇನೆ. ಇಂತಹ ಸರಸ-ಸರಳ ಪದ್ಯಕಾವ್ಯವು ಕನ್ನಡ ರಸಿಕರಿಗೆ ಆಪ್ಯಾಯನವಾಗುವುದೆಂಬುದಕ್ಕೆ ಸಂದೇಹವಿಲ್ಲ!

★ ಕೆ. ವೆಂಕಟರಾಯಾಚಾರ್ಯ

ಫಲಶಕ್ತಿ ಮತ್ತು ಸಮೃದ್ಧಿಯ ಪ್ರತೀಕ
ಗೌರಿ ಹಬ್ಬ

ಇಂದು ನಾಡಿನಾದ್ಯಂತ, ಅದರಲ್ಲೂ ವಿಶೇಷವಾಗಿ ಮಹಾರಾಷ್ಟ್ರದಲ್ಲಿ, ಗೌರಿಹಬ್ಬಕ್ಕಿಂತ ಗಣೇಶನ ಹಬ್ಬವನ್ನು ಹೆಚ್ಚಿನ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಇದಕ್ಕೆ ದಿವಂಗತ ಲೋಕಮಾನ್ಯ ತಿಲಕರು ಸ್ವಾತಂತ್ರ್ಯಪೂರ್ವದಲ್ಲಿ, ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ, ತಮ್ಮ ಸಂಸ್ಕೃತಿ–ಪರಂಪರೆಗಳನ್ನು ಮರೆತು, ಭಿನ್ನಭಿನ್ನವಾಗಿದ್ದ ಜನತೆಯನ್ನು ಒಟ್ಟುಗೂಡಿಸಲು ಉಪಯೋಗಿಸಿದುದೇ ಈ ಹಬ್ಬದ ವಿಶಿಷ್ಟಗುಣ. ಹೀಗೆ ಹಬ್ಬ ಮುಂತಾದ ಯಾವುದಾದರೊಂದು ಹಿನ್ನೆಲೆಯಲ್ಲಿ, ಒಟ್ಟುಗೂಡಿದ ಜನತೆಯನ್ನು ನಮ್ಮ ನಾಯಕರು ಆಂಗ್ಲ ಆಳರಸರ ಸಾಮ್ರಾಜ್ಯದಾಡಳಿತವನ್ನು ವಿರೋಧಿಸಲು ಉಪಯೋಗಿಸಿಕೊಂಡು, ದೇಶಕ್ಕೆ ಸ್ವಾತಂತ್ರ್ಯ ಗಳಿಸುವಲ್ಲಿ ನೆರವಾದರು. ಹೀಗೆ ಒಂದು ಧರ್ಮಕ್ಕೆ ಅಥವಾ ಪ್ರದೇಶಕ್ಕೆ ಸೇರಿದ ಹಬ್ಬವನ್ನು ಒಂದು ದೇಶಾಭಿವೃದ್ಧಿಯ ಕಾರ್ಯಕ್ಕೆ ಉಪಯೋಗಿಸಿದ ರೀತಿ, ಜನತೆ ಇದನ್ನು ಅರಿತುಕೊಂಡು ಅದರನ್ವಯ ಅದನ್ನು ಆಚರಣೆಗೆ ತಂದ ರೀತಿ, ರಾಷ್ಟ್ರದ ಒಕ್ಕಟ್ಟು ಹಾಗು ಉನ್ನತಿಗಾಗಿ ಜನತೆಯಲ್ಲಿ ಮೂಡುವ ದೇಶಾಭಿಮಾನದ ಹೆಗ್ಗುರುತಾಗಿ ಹಬ್ಬಗಳು ಉಳಿದುಬಂದವು. ಇದಕ್ಕೆ ಮಹಾರಾಷ್ಟ್ರದ ಗಣೇಶನ ಹಬ್ಬವೇ ಸಾಕ್ಷಿ.

ಇಂದು ಗಣಪತಿ ಹಬ್ಬಕ್ಕೆ ಎಷ್ಟರಮಟ್ಟಿಗೆ ಪ್ರಚಾರವಿದೆ ಎಂದರೆ ಗಣಪತಿಯು ಭೂಲೋಕಕ್ಕೆ ಬರುವುದರ ಅರ್ಥವೇ ಬದಲಾದಂತಿದೆ. ಆಂದರೆ ಗೌರಿಗೆ ಇದ್ದ ವಿಶೇಷವಾದ ಸ್ಥಾನ ನಶಿಸಿಹೋಗಿದ್ದು, ಗೌರಿಹಬ್ಬವು ಕೇವಲ ಮಹಿಳೆಯರ ಮತ್ತು ಕೌಟುಂಬಿಕವಾದ ಒಂದು ಆಚರಣೆಯಾಗಿದೆ. ಆದರೆ ನಾವು ಪುರಾಣಗಳನ್ನೇ ಆಗಲಿ, ನಾಡ ಪದ್ಧತಿಯನ್ನೇ ಆಗಲಿ ಕೆದಕಿದಾಗ ಸಿಗುವ ಮಾಹಿತಿಯಂತೆ, ಗಣಪತಿಗಿಂತ ಗೌರಿಗೇ ವಿಶೇಷವಾದ ಸ್ಥಾನವಿರುವುದು ಕಂಡುಬರುತ್ತದೆ. ಆದ್ದರಿಂದ ಬದಲಾವಣೆಯ ಗಾಳಿ ಸೋಂಕದ ಹಳ್ಳಿಗಳಲ್ಲಿ ಈ ಹಬ್ಬದ ಆಚರಣೆಯನ್ನು ನೋಡಿದಾಗ ಈ ವಿಷಯವು ಸ್ಪಷ್ಟವಾಗಿ ಮನದಟ್ಟಾಗುತ್ತದೆ.

ಈ ಲೇಖನವನ್ನು ಬರೆಯುವಲ್ಲಿ ನೆರವಾದ ಶ್ರೀ ಸೋಮಶೇಖರ ಇಮ್ರಾಪೂರ ಇವರಿಗೆ ನನ್ನ ಕೃತಜ್ಞತೆಗಳು.

ಹಳ್ಳಿಗರು ಫಲಶಕ್ತಿಯನ್ನು ಪಡೆಯಲು ಆಚರಿಸುವ ಅನೇಕ ಹಬ್ಬಗಳಲ್ಲಿ ಗೌರಿಹಬ್ಬವೂ ಒಂದು.[೧] ಈ ಹಬ್ಬವನ್ನು ಭಾದ್ರಪದ (ಆಗಸ್ಟ-ಸಪ್ಟಂಬರ್) ಮಾಸದಲ್ಲಿ ಸಂಸ್ಕೃತ ಗ್ರಂಥಗಳ ಹಾಗು ನಾಡಪದ್ಧತಿಯ ರೀತಿಯಂತೆ ಆಚರಿಸಲಾಗುತ್ತಿದೆ. ವ್ಯವಸಾಯ ಕಾರ್ಯಗಳ ದೃಷ್ಟಿಯಿಂದ ಭಾದ್ರಪದ ಮಾಸದ ವೇಳೆಗೆ ಮುಂಗಾರು ಬೆಳೆಗಳು ಸಮೃದ್ಧಿಯಾಗಿದ್ದು ಎಲ್ಲೆಲ್ಲೂ ಹೂಗಳು ಕಾಯಿಗಳಿಂದ ಸೃಷ್ಟಿ ಶೋಭಿಸುತ್ತಿರುತ್ತದೆ. ಯಥೇಚ್ಛವಾಗಿ ಬೆಳೆದುನಿಂತ ಹಸಿರನ್ನು ತಿಂದು ದನಗಳು ಹೆಚ್ಚಿನ ಹೈನ ನೀಡುತ್ತಿರುತ್ತವೆ. ಈ ಮಾಸವು ಕೃಷಿಕಾರ್ಯದಲ್ಲಿಯೂ ವಿರಾಮವನ್ನು ನೀಡುತ್ತದೆ. ಮುಂಗಾರು ಬಿತ್ತನೆ ಮುಗಿದು, ಕಳೆಕಿತ್ತು, ಪೈರುಗಳು ಕೊಯಿಲಿಗೆ ಬರುವುದನ್ನೇ ಕಾಯುತ್ತ ಕೂತಿರುವ ರೈತರಿಗೆ ಆಷಾಢಮಾಸಕ್ಕೆ ಮುಂಚೆ ನೆರವೇರಿಸದೇ ಬಿಟ್ಟಿದ್ದ ಅಥವಾ ಮುಂದೂಡಿದ್ದ ಮಂಗಲಕಾರ್ಯಗಳಿಗೆ ಅವಕಾಶ ಮಾಡಿಕೊಡುತ್ತದೆ. ಅದೂ ಅಲ್ಲದೆ ಮುಂದೆ ಕಾರ್ತಿಕಮಾಸದಲ್ಲಿ ನಡೆಯಬೇಕಾದ ಮದುವೆ ಮುಂತಾದ ಮಂಗಲಕಾರ್ಯಗಳಿಗೆ ನಾಂದಿಯಾಗುತ್ತದೆ. ಮೇಲಾಗಿ ಮುಂಬರುವ ಇಡೀ ವರ್ಷ ನಡೆಯಬೇಕಾದ ಕಾರ್ಯಗಳು ನಿರ್ವಿಘ್ನವಾಗಿ ನಡೆಯಲೆಂದು ಗಣಪತಿಯನ್ನು ಪೂಜಿಸುವ ಹಬ್ಬವೇ ಗೌರಿ-ಗಣೇಶರ ಹಬ್ಬ.

ಸಂಸ್ಕೃತ ಗ್ರಂಥಗಳ ಆಧಾರದಂತೆ ಗೌರಿಯು ಪರಶಿವನ ಹೆಂಡತಿ ಮತ್ತು ಹಿಮವಂತನ ಪುತ್ರಿ. ಆಕೆ ಭೂಲೋಕದಲ್ಲಿಯ ತನ್ನ ತೌರಿಗೆ ಬರುವ ಸಂದರ್ಭವೇ ಈ ಹಬ್ಬ. ತೌರಿಗೆ ಬಂದ ಗೌರಿಯನ್ನು ಕರೆದೊಯ್ಯಲು ಗಣಪತಿ ಬರುತ್ತಾನೆ. ಮನೆಗೆ ಬಂದ ಮಗಳು ಮತ್ತು ಮೊಮ್ಮಗನನ್ನು ಕೆಲಕಾಲ ತಮ್ಮಲ್ಲಿಟ್ಟುಕೊಂಡು ನಂತರ ಅವರನ್ನು ಕೈಲಾಸಕ್ಕೆ ಕಳುಹಿಸಿ ಕೊಡುವುದೇ ಗೌರಿ-ಗಣೇಶನ ಹಬ್ಬದ ಅರ್ಥ. ಕೆಲವು ಕುಟುಂಬಗಳು ಶ್ರಾವಣ ಮಾಸದಿಂದ ಮಂಗಳಗೌರಿ ವ್ರತವನ್ನು, ಮತ್ತೆ ಕೆಲವರು ಸ್ವರ್ಣಗೌರಿಯ ವ್ರತವನ್ನು ಮಾಡಿ ಗೌರಿಯನ್ನು ಪೂಜಿಸುತ್ತಾರೆ. ಈ ವ್ರತಗಳು ಸಾಮಾನ್ಯವಾಗಿ ಗೌರಿಹಬ್ಬಕ್ಕೆ ಮುಗಿಯುತ್ತವೆ. ಹೀಗೆ ಈ ವ್ರತವನ್ನು ಮಾಡುವುದರಿಂದಲೇ ಗೌರಿಯು ಒಲಿದು ತಮಗೆ, ತಮ್ಮ ಕುಟುಂಬದವರಿಗೆ ಆರೋಗ್ಯ, ಐಶ್ವರ್ಯವನ್ನು ನೀಡುತ್ತಾಳೆನ್ನುವುದೇ ಇದರ ಉದ್ದೇಶ.

ಜಾನಪದ ಪದ್ಧತಿಯಂತೆ ಗೌರಿಹಬ್ಬವನ್ನು ಆಚರಿಸುವ ರೀತಿ, ಹಾಗೂ ಸಂಸ್ಕೃತ ಆಧಾರಗಳಂತೆ ಆಚರಿಸುವ ರೀತಿಗಳಲ್ಲಿ ಭಿನ್ನತೆ ಇದ್ದು, ಅದು ಭಿನ್ನವಾದ

---

೧. ಫಲಶಕ್ತಿಗಳಿಗಾಗಿ ಆಚರಿಸುವ ಹಬ್ಬಗಳ ಬಗ್ಗೆ ಹೆಚ್ಚಿನ ವಿಷಯಗಳಿಗೆ ಇದೇ ಲೇಖಕರ 'ಕಾರ' ಹಬ್ಬದ ಸಾಮಾಜಿಕ ಹಾಗು ಆರ್ಥಿಕ ಉದ್ದೇಶಗಳು (ಕರ್ನಾಟಕ ಭಾರತಿ, ಸಂ. ೩, ಸಂ. ೧, ೧೯೭೦) ಎಂಬ ಲೇಖನವನ್ನು ನೋಡಿರಿ.

ಅರ್ಥ ಹಾಗು ಉದ್ದೇಶಗಳನ್ನು ಹೊಂದಿದೆ. ಕಾರಹಬ್ಬ, ಕಾಳವ್ವನ ಹಬ್ಬ ಮತ್ತು ಮಾರಿಹಬ್ಬಗಳಂತೆ ಗೌರಿಹಬ್ಬವೂ ಫಲಶಕ್ತಿಯನ್ನು ಪಡೆಯಲಿಕ್ಕೆಂದೇ ಆಚರಿಸುವ ಹಬ್ಬ. ಜಾನಪದ ಪದ್ಧತಿಯಂತೆ ಈ ಹಬ್ಬದಲ್ಲಿ ಗಣಪತಿಗೆ ಹೆಚ್ಚಿನ ಸ್ಥಾನವನ್ನು ನೀಡಿಲ್ಲ. ಗೌರಿಹಬ್ಬವನ್ನು ಆಚರಿಸುವುದರಿಂದ ಮನೆಯಲ್ಲಿ ಸದಾ ಹೈನು ಇರುತ್ತದೆ ಎಂಬ ನಂಬಿಕೆ ಇದೆಯಾದ್ದರಿಂದ ಗೌರಿಗೆ ವಿಶೇಷವಾದ ಸ್ಥಾನ-ಗೌರವಗಳನ್ನಿತ್ತು ಪೂಜಿಸುವರು ಎಂದು ನಾನು ಸಂಶೋಧನೆ ನಡೆಸಿರುವ ಚಿತ್ರದುರ್ಗ ಜಿಲ್ಲೆಯ ಹಳ್ಳಿಯೊಂದರಿಂದ ಪಡೆದ ಮಾಹಿತಿಗಳಿಂದ ತಿಳಿದು ಬರುತ್ತದೆ.

ಈ ಹಳ್ಳಿಯಲ್ಲಿ ಗೌರಿಯನ್ನು (೧) ಮಳಲಗೌರಿ, (೨) ಎಳೆಗೌರಿ ಮತ್ತು (೩) ಜಡೆಗೌರಿ ಎಂದು ಮೂರು ರೀತಿಯಲ್ಲಿ ಪೂಜಿಸುತ್ತಾರೆ. ಮಳಲ-ಗೌರಿಯನ್ನು ಗೌರಿಹಬ್ಬದ ದಿನ ಮಳಲಿನ ರೂಪದಲ್ಲಿ ನದಿ, ಹಳ್ಳ ಅಥವಾ ಕೆರೆಗಳಿಂದ, ತಾಮ್ರ ಅಥವಾ ಹಿತ್ತಾಳೆಯ ಗಿಂಡಿ ಅಥವಾ ವಾಟೆಗಳಲ್ಲಿ ತಂದು ಪೂಜಿಸುತ್ತಾರೆ. ಜಡೆಗೌರಿಯನ್ನು ಸಾಂಪ್ರದಾಯಿಕವಾಗಿ ಊರೆಲ್ಲ ಸೇರಿ, ಒಂದು ದೇವಸ್ಥಾನದಲ್ಲಿ ಅಥವಾ ಯಾವುದಾದರೊಂದು ಮನೆಯಲ್ಲಿ ಕೂಡಿಸುತ್ತಾರೆ. ಜಡೆಗೌರಿಗೆ ಮನುಷ್ಯನ ಆಕೃತಿಯಂತೆ ಮುಖ, ತಲೆ, ಕೂದಲು ಇದ್ದು ಅದನ್ನು ಒಡವೆ-ವಸ್ತ್ರಗಳಿಂದ ಅಲಂಕರಿಸಿ ಪೂಜಿಸುತ್ತಾರೆ.

ಫಲಶಕ್ತಿ ನೀಡಲು ಪೂಜಿಸುವ ಹಾಗು ನನ್ನ ಈ ಲೇಖನಕ್ಕೆ ಆಧಾರವಾಗಿರುವ ಗೌರಿಯೇ “ಎಳೆಗೌರಿ”. ಎಳೆ ಅಂದರೆ ದಾರ, ನೂಲು ಎಂದು ಅರ್ಥ. ಈ ಎಳೆಗೌರಿಯನ್ನು ಕೂಡ, ಗೌರಿ ಬರುವ ದಿನವೇ, ಜಡೆಗೌರಿಯನ್ನು ತರುವವರ ಮನೆಗೇ ಹೋಗಿ ತಯಾರಿಸುತ್ತಾರೆ. ಎಳೆಗೌರಿಯನ್ನು ತರುವ ಪದ್ಧತಿಯನ್ನು ಇಟ್ಟುಕೊಂಡಿರುವವರು ಗೌರಿ ಬರುವ ದಿನ ಬೆಳಗ್ಗೆ ಜಡೆಗೌರಿಯನ್ನು ಇಟ್ಟ ಮನೆಗೆ ಹತ್ತಿ, ರಾಟೆ ಅಥವಾ ತಕಲಿಯೊಂದಿಗೆ ಹೋಗಿ ನೂಲುತ್ತಾರೆ. ಎಳೆ-ಗೌರಿಯನ್ನು ಮಾಡಲು ಬೇಕಾಗುವಷ್ಟು ನೂಲು ತೆಗೆದನಂತರ ಜಂಗಮನಾಗಲಿ ಅಥವಾ ಬ್ರಾಹ್ಮಣನಾಗಲಿ ಈ ದಾರ(ಎಳೆ)ವನ್ನು ಸಾಂಪ್ರದಾಯಿಕವಾಗಿ ಬಂದ ರೀತಿಯಲ್ಲಿ ಕೂಡಿಸಿ, ಎರಡು ಹುಂಡಿಗಳನ್ನಾಗಿ ಮಾಡುತ್ತಾರೆ. ಇವಕ್ಕೆ ಅರಿಷಿಣದ ಲೇಪಮಾಡಿ, ಅಕ್ಕಿ, ಒಣಕೊಬ್ಬರಿ, ಉತ್ತತ್ತಿ ಮತ್ತು ಅರಿಷಿಣದ ಕೊಂಬು ಮುಂತಾದವುಗಳಿಂದ ತುಂಬಿದ ತಟ್ಟೆಯಲ್ಲಿಟ್ಟು, ಅದನ್ನು ಜಡೆಗೌರಿಯ ಮೂರ್ತಿಯ ಎದುರಿಗೆ ಇಡುತ್ತಾರೆ. ಇವು ಗೌರಿಯ ವಿಸರ್ಜನೆಯ ದಿನದ ವರೆಗೂ ಇಲ್ಲಿಯೇ ಇರುತ್ತವೆ. ವಿಸರ್ಜನೆಯ ದಿನ ಕುಟುಂಬದವರು ಅಂದರೆ ಗೌರಿಯ ಪ್ರತಿಷ್ಠಾಪನೆಯ ದಿನ ನೂಲು ತೆಗೆದವರು, ಎಳೆಗೌರಿಯನ್ನು ವಿಶೇಷವಾದ ರೀತಿಯಲ್ಲಿ, ಮಂಗಳವಾದ್ಯಗಳೊಡನೆ ಮುತ್ತೈದೆಯರನ್ನೊಡಗೂಡಿ, ತಮ್ಮ ತಮ್ಮ ಮನೆಗಳಿಗೆ ಕರೆತಂದು ಅತಿ ಸುರಕ್ಷಿತವಾದ ಮತ್ತು ಗೌಪ್ಯವಾದ

ಸ್ಥಳದಲ್ಲಿಡುತ್ತಾರೆ. ಆಗ ಆ ಗೌರಿಯೇ ಫಲಶಕ್ತಿಯನ್ನು ನೀಡುವ ವಸ್ತುವಿನ ಪ್ರತೀಕವಾಗುತ್ತಾಳೆ.

ದೀಪಾವಳಿಯ ಕೊನೆಯ ದಿನ, ಹಿರಿಯರ ಪೂಜೆ ಮುಗಿದು, ಹಬ್ಬದ ಊಟದನಂತರ, ಎಳೆಗೌರಿಯನ್ನು ಹೊರತಂದು ಪೂಜಿಸುತ್ತಾರೆ. ಪೂಜೆ-ಪುರಸ್ಕಾರಗಳು ಮುಗಿದನಂತರ ಈ ಎಳೆಗೌರಿಯನ್ನು ಮತ್ತು ಆಕೆಗೆ ಎಡೆ ಮಾಡಿದ್ದ ಹಬ್ಬದೂಟವನ್ನೂ ಒಂದು ಬಾಳೆಯ ಎಲೆಯಲ್ಲಿ ಸುತ್ತಿ, ಮನೆಯ ಅತಿ ಸುರಕ್ಷಿತ ಸ್ಥಳವೆನ್ನಲಾದ ಅಡಿಗೆಯ ಮನೆಯಲ್ಲಿ, ಅದರಲ್ಲೂ ಮೊಸರು ಕಡೆಯುವ ಗಡಿಗೆಯನ್ನಿಡುವ ಜಾಗದಲ್ಲಿ ಗುಂಡಿಯೊಂದನ್ನು ತೋಡಿ ಅಲ್ಲಿ ಇಡುತ್ತಾರೆ. ಮಣ್ಣು ಮುಚ್ಚುವುದಕ್ಕೆ ಮುಂಚೆ ಹಾಲು-ತುಪ್ಪದ ಮಿಶ್ರಣವನ್ನು ಅದರ ಮೇಲೆ ಮೂರು ಬಾರಿ ಹಾಕುತ್ತಾರೆ. ಈ ಕಾರ್ಯವನ್ನು ಮಾಡುವಾಗ ಕುಟುಂಬದ ಎಲ್ಲ ಸದಸ್ಯರು ಮತ್ತು ಜಂಗಮಗುರು ಮಾತ್ರ ಮನೆಯೊಳಗೆ ಇರತಕ್ಕದ್ದು. ಹಬ್ಬಕ್ಕೆ ಆಹ್ವಾನಿತರಾದ ನೆಂಟರಿಷ್ಟರು ಕೂಡ ಪದ್ಧತಿಪ್ರಕಾರ ಆ ಜಾಗೆಯಿಂದ ಹೊರಗೆ ಹೋಗಲೇಬೇಕು. ಇವರನ್ನು ಹೊರಗೆ ಕಳುಹಿಸಿದನಂತರ ಕದ-ಬಾಗಿಲುಗಳನ್ನು ಭದ್ರವಾಗಿ ಮುಚ್ಚಿ ಎಳೆಗೌರಿಯನ್ನು ಪೂಜಿಸಿ, ಮುಚ್ಚಿಬಿಡಲಾಗುವುದು. ಇದು ಜಾನಪದ ರೀತಿಯಲ್ಲಿ ಆಚರಿಸುವ ಗೌರಿಹಬ್ಬದ ಒಂದು ಚಿತ್ರ.

ನಾವು ಈ ಹಬ್ಬದ ಹಿನ್ನೆಲೆ, ಅರ್ಥ ಮತ್ತು ಉದ್ದೇಶಗಳನ್ನು ಸಂಶೋಧನಾದೃಷ್ಟಿಯಿಂದ ನೋಡಿದಾಗ ಇದು ಯಾವ ರೀತಿಯಲ್ಲಿ ಫಲ-ಶಕ್ತಿಯನ್ನು ನೀಡುತ್ತದೆ ಎಂಬುದು ಗೊತ್ತಾಗುತ್ತದೆ. ಜಾನಪದ ಪದ್ಧತಿಯಂತೆಯೂ ಈ ಹಬ್ಬಕ್ಕೆ, ಗೌರಿ ತನ್ನ ತೌರೂರಾದ ಭೂಲೋಕಕ್ಕೆ ಬರುತ್ತಾಳೆನ್ನುವುದಕ್ಕೆ ಸಂಕೇತವಾಗಿ ಜಡೆಗೌರಿಯನ್ನು ಇಡೀ ಗ್ರಾಮವೇ ಸೇರಿ, ಒಂದು ಕಡೆ ಇಟ್ಟು ಪೂಜಿಸುತ್ತಾರೆ. ಮಳಲಗೌರಿಯನ್ನು ನದಿ, ಹಳ್ಳ ಮತ್ತು ಕೆರೆ-ಗಳಿಂದ ತಂದು ಪೂಜಿಸುವುದಕ್ಕೂ ಅರ್ಥವಿದೆ. ಕೈಲಾಸದಿಂದ ಭೂಮಿಗೆ ಬರಲು ಗೌರಿಗೆ ಇರುವ ನೇರಮಾರ್ಗವೆಂದರೆ, ಶಿವನ ಜಡೆಯಿಂದ ಬರುವ ಗಂಗಾ ನದಿಯೇ. ಈ ಪಾವನವಾದ ಗಂಗಾನದಿಯ ಮಳಲು, ಗೌರಿಯೇ ಕೈಲಾಸದಿಂದ ತನ್ನೊಡನೆ ತಂದ ಭಾಗ್ಯದ ಸಂಕೇತವೆಂಬ ಭಾವನೆಯಿಂದ, ಮಳಲನ್ನೇ ತಂದು ಮಳಲಗೌರಿ ಎಂದು ಪೂಜಿಸುತ್ತಾರೆ.

ತೌರೂರಿಗೆ ಬಂದ ಗೌರಿಯು ಉಡುವ ಪೀತಾಂಬರ ಮತ್ತು ಭೂಷಣ ವಿಶೇಷಗಳ ಸಂಕೇತವೇ "ಎಳೆಗೌರಿ". ಗೌರಿಯು ತನ್ನ ಗಂಡನ ಮನೆಯಲ್ಲಿ ತನ್ನ ಪತಿ ಮತ್ತು ಇತರರಂತೆ ನಿರಾಭರಣೆಯಾಗಿ, ಅತ್ಯಂತ ಸರಳವಾದ ಉಡುಗೆ ತೊಡುಗೆಗಳನ್ನು ಧರಿಸಿರುತ್ತಾಳೆ. ಆದರೆ ತನ್ನ ತೌರೂರಿಗೆ ಬಂದ ದಿನ ಆಕೆಯ ಬಾಲ್ಯಸ್ನೇಹಿತೆಯರು, ಬಂಧುಗಳು ಆಕೆಗೆ ನಾನಾತರಹದ ಒಡವೆವಸ್ತ್ರಗಳನ್ನಿತ್ತು

ಭೂಲೋಕದಲ್ಲಿ ಇರುವಷ್ಟು ದಿನ ಉಪಯೋಗಿಸುವಂತೆ ಕೇಳಿಕೊಂಡು ಆಕೆಯ ಬಳಿ ಬಿಟ್ಟುಹೋಗುತ್ತಾರೆ. (ಕೆಲವು ಜನ ನಿವೇದಿತರು (Informants) ಹೇಳಿದಂತೆ ಇವು ಗೌರಿಗೇ ಸೇರಿದ ವಸ್ತುಗಳು. ತಾನು ಕೈಲಾಸಕ್ಕೆ ಹಿಂತಿರುಗುವಾಗ ಇವರ ಬಳಿ ಬಿಟ್ಟುಹೋಗಿರುತ್ತಾಳಾದ್ದರಿಂದ ಗೌರಿ ಬಂದಾಗ ಮತ್ತೆ ಹಿಂತಿರುಗಿಸುವರು.) ಕೈಲಾಸದಿಂದ ಗೌರಿಯು ತನ್ನವರು ಯಾರಿಗೂ ತಿಳಿಯದಂತೆ ಕದ್ದು ತಂದ ಭಾಗ್ಯವೇ ಮಳಲಗೌರಿಯಾದರೆ, 'ಎಳೆಗೌರಿ'ಯು ಕೈಲಾಸದ ನಿಬಂಧನೆಗೆ ವಿರುದ್ಧವಾಗಿ, ಗೌರಿಯು ತನ್ನ ತೌರೂರಿನಲ್ಲಿ ಉಡುವ ವಸ್ತ್ರಗಳು. ಈ ವಿಷಯ, ಗೌರಿಯನ್ನು ಕರೆತರಲು ಭೂಲೋಕಕ್ಕೆ ಬಂದಿರುವ ಗಣಪ್ಪನಿಗೆ ತಿಳಿದರೆ ಆವನು ತನ್ನ ತಂದೆಗೂ ತಿಳಿಸಿಬಿಟ್ಟಾನೆಂದು ಹೆದರಿ ಮಳಲಗೌರಿ ಮತ್ತು ಎಳೆಗೌರಿಯನ್ನು ತರುವವರು ಗಣಪತಿಯನ್ನು ತರಬಾರದೆಂಬ ಸಂಪ್ರದಾಯವಿದೆ.

ಎಳೆಗೌರಿಯನ್ನು ದೀಪಾವಳಿ ಹಬ್ಬದವರೆಗೆ ಜೋಪಾನವಾಗಿ ಮುಚ್ಚಿ ಇಡುವ ಪದ್ಧತಿಗೂ ವಿಶೇಷವಾದ ಅರ್ಥವಿದೆ. ಜಾನಪದದ ನಂಬಿಕೆಯಂತೆ ಗೌರಿಯು ಮುಂದಿನ ಹಬ್ಬವಾದ ದೀಪಾವಳಿಗೆ (ನಾಡಪದ್ಧತಿಯಂತೆ ಇದನ್ನು ಲಕ್ಷ್ಮವ್ವ(ಲಕ್ಷ್ಮಿ)ನ ಹಬ್ಬವೆಂದು ಕರೆಯುವರು) ಬರುತ್ತಾಳೆಂಬ ನಂಬಿಕೆ ಇದೆಯಾದರೂ ರೂಢಿಯಂತೆ ಎಂದೂ ಬರುವುದಿಲ್ಲ. ಆದರೂ ಎಳೆಗೌರಿಯನ್ನು ದೀಪಾವಳಿಯವರೆಗೆ ಕಾಯ್ದಿಡುವುದು ಪದ್ಧತಿ. ದೀಪಾವಳಿ ಹಬ್ಬದ ದಿನ ಗೌರಿ ಬರುವುದಿಲ್ಲವೆಂದು ತಿಳಿದು ಇದನ್ನು ವಿಶೇಷವಾದ ರೀತಿಯಲ್ಲಿ ಪೂಜಿಸಿ ಯಾರಿಗೂ ತಿಳಿಯದಂತೆ ಹೂಳುತ್ತಾರೆ. ಮೇಲೆ ಹಾಲು ತುಪ್ಪದ ಮಿಶ್ರಣವನ್ನೆರೆಯುವುದು—ಆಕೆಯ ವಸ್ತ್ರಗಳನ್ನು ತಾವಾರೂ ಉಪಯೋಗಿಸುವುದಿಲ್ಲ, ಈ ವಿಷಯವನ್ನು ಯಾರಿಗೂ ತಿಳಿಸುವುದಿಲ್ಲ ಮತ್ತು ಮುಂದಿನ ವರ್ಷ ಗೌರಿ ಬಂದಾಗ ಇದನ್ನು ಹಿಂತಿರುಗಿಸುವುದಾಗಿ ಅವರು ಗೌರಿಗೆ ಕೊಟ್ಟ ಪ್ರಮಾಣವಚನದ ಸಂಕೇತ. ಈ ವಚನವನ್ನು ಮುರಿದರೆ ಕುಟುಂಬಕ್ಕೆ, ಅದರಲ್ಲೂ ಮುಖ್ಯವಾಗಿ ದನಕರುಗಳಿಗೆ ಗೌರಿಯು ಕೇಡುಕನ್ನು ತರುತ್ತಾಳೆಂದು ನಂಬಿಕೆ ಇದೆಯಾದ್ದರಿಂದ ಕುಟುಂಬದ ಎಲ್ಲಾ ಸದಸ್ಯರು ಸಾಂಪ್ರದಾಯಿಕವಾದ ರೀತಿಯಲ್ಲಿ ಬಂದು ಎಲ್ಲಾ ಪದ್ಧತಿಗಳನ್ನೂ ಆಚರಿಸುವರು.

ಆದರೆ ಎಳೆಗೌರಿ ಹಬ್ಬದ ನಿಜವಾದ ಅರ್ಥವೇ ಬೇರೆ ಇದೆ. ವ್ಯವಸಾಯ-ಪ್ರಧಾನವಾದ ನಮ್ಮ ಗ್ರಾಮಗಳ ಆರ್ಥಿಕವ್ಯವಹಾರದ ಆಧಾರಗಳೆಂದರೆ ಭೂಮಿ ಮತ್ತು ದನಕರುಗಳು. ಇವೆರಡರಿಂದ ಲಭಿಸುವ ಉತ್ಪನ್ನವು ಗೌರಿಹಬ್ಬದಿಂದ ಬರಲು ಶುರುವಾಗಿ ವಿಶೇಷವಾಗಿ ದೀಪಾವಳಿಯವರೆಗೂ ಇರುತ್ತದೆ. ಹೀಗೆ ಬಂದ ಉತ್ಪನ್ನವನ್ನು ಮಾರಿ, ಬಂದ ಹಣವನ್ನು ರೈತರು ಜಾಗರೂಕತೆಯಿಂದ ಕೂಡಿಹಾಕುವರು. ಇದನ್ನು ಎಳೆಗೌರಿಯನ್ನಿಟ್ಟಿರುವ ಪೆಟ್ಟಿಗೆ ಅಥವಾ ಮಡಿಕೆಯಲ್ಲಿಟ್ಟು, ದೇವರನ್ನು ನೋಡಿಕೊಂಡಷ್ಟೇ ಜಾಗರೂಕತೆಯಿಂದ ನೋಡಿ

ಕೊಳ್ಳುವರು. ಹೀಗೆ ಕೂಡಿಟ್ಟ ಹಣವನ್ನು ದೀಪಾವಳಿಯ ವೇಳೆಗೆ, ಮನೆ ಕಟ್ಟಲು, ದನಕರುಗಳನ್ನು, ಹೊಲ, ಒಡವೆ ಮುಂತಾದವನ್ನು ಕೊಳ್ಳಲು ಅಥವಾ ಮದುವೆ ಮುಂತಾದ ಕಾರ್ಯಗಳನ್ನು ನೆರವೇರಿಸಲು ಉಪಯೋಗಿಸುತ್ತಾರೆ.

ಈ ಹಣವನ್ನು ದೀಪಾವಳಿಯ ವೇಳೆಗೆ ಖರ್ಚು ಮಾಡದಿದ್ದರೆ ಮುಂದಿನ ವರ್ಷದವರೆಗೂ ಸುರಕ್ಷಿತವಾಗಿರುವಂತೆ ಮಾಡಲು, ಇಂದಿನ ಬ್ಯಾಂಕ್ ಮುಂತಾದ ವಾಣಿಜ್ಯಸಂಸ್ಥೆಗಳಿಲ್ಲದ ಕಾಲದಲ್ಲಿ, ತಮ್ಮ ಮನೆಗಳಲ್ಲಿಯೇ ಸುರಕ್ಷಿತವಾದ ಸ್ಥಳದಲ್ಲಿ ಹೂಳುತ್ತಿದ್ದರು. ಹೀಗೆ ಹೂತಿರುವ ಹಣವನ್ನು ಎಣಿಸಲು ಬೇಕಾದ ಒಬ್ಬ ನಂಬಿಗಸ್ಥ–ಬುದ್ಧಿವಂತನೆಂದರೆ ಕುಟುಂಬದ ಗುರು. ಹೂತಿಟ್ಟ ಜಾಗ ಮತ್ತು ಹಣದ ಮೊತ್ತವು ಕುಟುಂಬದ ಎಲ್ಲರಿಗೂ ತಿಳಿದಿರಲೆಂದು (ಯಜಮಾನನಿಗೆ ಮಾತ್ರ ತಿಳಿದಿದ್ದರೆ, ಅವನೇನಾದರೂ ಅಕಾಲಮೃತ್ಯುವಿಗೆ ಈಡಾದರೆ ಈ ಹಣ ವ್ಯರ್ಥವಾಗುತ್ತದೆಯಾದ್ದರಿಂದ) ಎಲ್ಲರನ್ನೂ ಮನೆಯೊಳಗೇ ಕರೆಯುತ್ತಾರೆ. ಹೀಗೆ ಹೂತಿಟ್ಟ ಹಣದ ಮೊತ್ತ ಮತ್ತು ಜಾಗಗಳು ಹೊರಗಿನವರಿಗಾರಿಗೂ ತಿಳಿಯದಿರಲೆಂದು ಹಬ್ಬಕ್ಕೆ ಆಹ್ವಾನಿಸಲ್ಪಟ್ಟ ನೆಂಟರಿಷ್ಟರನ್ನು ಕೂಡ (ಪದ್ಧತಿ ಪ್ರಕಾರ ಅವರು ಒಳಗೆ ಇರಬಾರದು. ಇದ್ದರೆ ಅವರಿಗೇ ಕೆಡಕು ಬರುತ್ತದೆ ಎಂಬ ನಂಬಿಕೆ ಇದೆ) ಹೊರಗೆ ಕಳುಹಿಸಿ ಎಲ್ಲಾ ಬಾಗಿಲು-ಕಿಟಕಿಗಳನ್ನು ಮುಚ್ಚಿ, ಹೂಳುತ್ತಾರೆ. "ಈ ಹಣದ ಮೊತ್ತ ಮತ್ತು ಹೂತಿಟ್ಟ ಜಾಗವನ್ನು ಯಾರಿಗೂ ತಿಳಿಸುವುದಿಲ್ಲ, ಈ ಹಣವನ್ನು ಯಾವ ಕಾರಣಕ್ಕೂ ವರ್ಷದ ನಡುವೆ ಹೊರಗೆ ತೆಗೆಯುವುದಿಲ್ಲ ಮತ್ತು ಮುಂದಿನ ವರ್ಷದ ವೇಳೆಗೆ ಯಾವುದಾದರೂ ಉಪಯುಕ್ತವಾದ ಕಾರ್ಯಕ್ಕೆ ಖರ್ಚು ಮಾಡುತ್ತೇವೆ" ಎಂದು ಅವರು ತೆಗೆದುಕೊಂಡ ಭರವಸೆಯೇ ಗೌರಿಗೆ ಕೊಟ್ಟ ಪ್ರಮಾಣವಚನಗಳೆಂದು ಇಲ್ಲಿ ನಂಬಲಾಗಿದೆ. ಹೀಗೇನಾದರೂ ಮಾಡದೆ, ವಚನ ಮುರಿದು ಹಣವನ್ನು ಖರ್ಚುಮಾಡಿದರೆ ಮುಂದೆ ಯಾವುದಾದರೊಂದು ವಿಶೇಷ ಖರ್ಚಿಗೆ ಹಣವನ್ನೊದಗಿಸುವ ಮಾರ್ಗವೆಂದರೆ ಕುಟುಂಬದ ಆಸ್ತಿಗಳಾದ ಹೊಲ–ಮನೆ ಅಥವಾ ಚರಾಸ್ತಿಗಳಾದ ದನಕರುಗಳನ್ನು ಮಾರುವುದು. ಚಿರಾಸ್ತಿಗಳಾದ ಹೊಲಮನೆಗಳನ್ನು ಮಾರುವುದು ಕುಟುಂಬಕ್ಕೆ ಶ್ರೇಯಸ್ಕರವಾದದ್ದಲ್ಲವಾದ್ದರಿಂದ ಉಳಿದ ಒಂದೇ ಒಂದು ಮಾರ್ಗವೆಂದರೆ ದನಕರುಗಳನ್ನು ಮಾರುವುದು. ಇದನ್ನೇ "ಗೌರಿಯು ದನಕರುಗಳಿಗೆ ತರುವ ಕೆಡಕು" ಎಂದು ಮಾರ್ಮಿಕವಾಗಿ ಹೇಳಲಾಗಿದೆ.

ಹೀಗೆ ನಿತ್ಯಜೀವನದಲ್ಲಿಯ ಅನೇಕ ಅಡಚಣೆಗಳಿಂದಾಗಿ ಹಣ ಕೂಡಿ-ಹಾಕದಿರುವುದು ಮನುಷ್ಯನ ಸ್ವಭಾವ. ಇದನ್ನರಿತ ನಮ್ಮ ಪೂರ್ವಿಕರು ಹಣ ಕೂಡಿಸುವುದು, ಉಳಿತಾಯ ಮಾಡುವುದು ಮತ್ತು ಅದನ್ನು ಯಾವುದಾದ

ರೊಂದು ಉಪಯುಕ್ತ ಕಾರ್ಯಕ್ಕೆ ಉಪಯೋಗಿಸುವಂತೆ ಮಾಡುವುದನ್ನು ಒಂದು ಸಂಪ್ರದಾಯವನ್ನಾಗಿ ಮಾಡಿ ಹಬ್ಬದ ರೂಪದಲ್ಲಿ ಆಚರಣೆಗೆ ತಂದರು. ಈ ಆಚರಣೆಯನ್ನು ಭಯಭಕ್ತಿಯಿಂದ ಮಾಡಲೆಂದು ಗೌರಿಯ ರೂಪದಲ್ಲಿ ರೂಢಿಗೆ ತಂದು ಹಣವನ್ನು ಉಳಿಸುವಂತೆ ಮಾಡಿ ಅತ್ಯಾವಶ್ಯಕವಾಗಿ ಮಾಡಲೇ ಬೇಕಾದ ಕಾರ್ಯಗಳಿಗೆ ಉಪಯೋಗಿಸಲು ಅನುಕೂಲ ಮಾಡಿಕೊಟ್ಟರು. ಆದರೆ ಕಾಲಾನುಕ್ರಮದಲ್ಲಿ ಈ ಹಬ್ಬದ ನಿಜವಾದ ಅರ್ಥ ನಶಿಸಿಹೋಗಿ ಇದು ಬರೀ ಒಂದು ಸಂಪ್ರದಾಯ ಅಥವಾ ಪದ್ಧತಿಯ ಅನಿವಾರ್ಯವಾದ ಹಬ್ಬವಾಗಿ ಹೋಗಿದೆ. ಇದೇ ಪ್ರಕಾರ ಕಾಲಾನುಕ್ರಮದಲ್ಲಿ ಪುರುಷಪ್ರಧಾನವಾದ ಭಾರತ ಸಮಾಜದಲ್ಲಿ ಗೌರಿಗೆ ಇದ್ದ ವಿಶೇಷ ಗೌರವ ನಶಿಸಿಹೋಗಿ ಆಕೆಯ ಪುತ್ರನಾದ ಗಣಪತಿಗೆ ಹೆಚ್ಚಿನ ಅರ್ಥ, ಗೌರವಗಳು ಬೆಳೆದುಬಂದಿವೆ. ಹೀಗೆ ಪ್ರಧಾನವಾದ ವ್ಯಕ್ತಿಗಳು ಬದಲಾದರೂ ಜನತೆಯಲ್ಲಿರುವ ಭಯ–ಭಕ್ತಿಗಳು ಬದಲಾಗಿಲ್ಲ, ಬದಲಾಗುವುದೂ ಇಲ್ಲ. ಬದಲಾಗದೇ ಉಳಿದಿರುವ ಈ ಭಕ್ತಿಯನ್ನು ಒಂದು ಶಕ್ತಿಯನ್ನಾಗಿ ಮಾರ್ಪಡಿಸಿ ಕಾಲಗುಣಕ್ಕೆ ತಕ್ಕಂತೆ ದಿ. ತಿಲಕರು ಉಪಯೋಗಿಸಿದಂತೆ ಉಪಯೋಗಿಸಬಲ್ಲ ಮುಂದಾಳುಗಳು ಇದ್ದರೆ ಇದೇ ಶಕ್ತಿಯನ್ನು ಮತ್ತಾವುದಾದರೂ ಉಪಯುಕ್ತವಾದ ಕಾರ್ಯಸಾಧನೆಗೆ ಉಪಯೋಗಿಸಬಹುದು.

★ ಗುರುಮೂರ್ತಿ ಕೆ. ಗೌಡರ್

ಸಿಮ್ಲಾ ನಗರ

(ಸಿಮ್ಲಾ—ಪರ್ವತಾವಳಿಯ ನಡುವೆ ನಗುತ್ತಿರುವ ಶ್ಯಾಮಲ ಶೃಂಗಕನ್ಯೆ)

ಸಿರಿ ಹಿಮಾಚಲದೇಶಮುಡಿಯಲ್ಲಿ ತಡಿಯಲ್ಲಿ
ಅರಳಿ ಸಿಮ್ಲಾನಗರ ಕರೆಯುವಲ್ಲಿ ;
ಏರಿಹೋಗುವ ದಾರಿ—ದಾರಿ ದಾರಿಯಲೆಲ್ಲ ;
ಹೂ ಝುಮ್ಕಿಗಳನಿಟ್ಟು,
ಹಿಮ ನೆಯ್ದ ಹಚ್ಚನೆಯ ಕುತನಿ ತೊಟ್ಟು
ಉಟ್ಟು ದುಡಿಯುವ ಜನರ ಹಿಮನಗೆಯನು ;
ವೃಕ್ಷಕನ್ಯೆಯರೆಲ್ಲ ಗುಂಪಾಗಿ ನೆರೆದು ;
ಹಿಮಸೇಸೆಯನು ಒಮ್ಮೆ,
ಒಮ್ಮೊಮ್ಮೆ ಹೂಸೇಸೆ ಚೆಲ್ಲಿ ನಸುನಸು ನಕ್ಕು
ಸ್ವಾಗತವ ಕೋರುತಿರೆ,
ಸುತ್ತು ಕಡೆಗೂ, ಬೀಸಿಬಂದ ಹಚ್ಚನೆ ಗಾಳಿ ಬಲಿ ಬೀಸಿರೆ
ಚಳಿಗೆ ನಡುಗಿದ ಬೆಟ್ಟ ಮುದುಡಿ ಹಿಮವನೆ ಹೊದೆದು
ಮಲಗಿರುವ ಹೊತ್ತಿನಲಿ
ಎಚ್ಚತ್ತ ರಾತ್ರಿ ಹಿಮದಾಳದಲ್ಲಿ
ಧಿಗ್ಗೆಂದು ಉರಿದೇಳೆ ನಿನ್ನ ಪ್ರೇಮಾಗ್ನಿ
ಎಲ್ಲ ಗೋಡೆಗಳೊಡೆದು, ಪರಿವೇಷಗಳ ಕಳಚಿ
ನಿನ್ನೆದುರಿಗೇ ನಿಂತೆನೀಗ ಮಗುವಾಗಿ.
ಅಂಬೆಗಾಲಿಕ್ಕುತ್ತ ಸಿಮ್ಲಾ ಬೆಟ್ಟದ ತುಂಬ ಹರಿದಾಡಿದೆ,
ಗಿರಿಧಾರಿಯಾಗುತ್ತ ಬೆಟ್ಟವನೆ ಹೀಗೊಮ್ಮೆ ಹಿಡಿದೆತ್ತಿದೆ.
ಸುಳಿದಿರುಗಿ ಸುಳಿಸುಳಿವ ಗಾಳಿ ಮೊರೆಯಲ್ಲಿ
ಅಸ್ಥಿ ದೇಹದ ಕೊಳಲನೆತ್ತಿ ಊದಿದೆ; ಊದಿ
ಮೌನವಾದಾಗ,
ನೀನು ಚೆಲ್ಲಿದೆ ಮಂತ್ರ ಮಾಯೆ ಮೋಡಿ ;
ಎಂದು ನಾ ಬಂದದ್ದು ?—ಎಷ್ಟು ನಾ ಕುಳಿತದ್ದು ?
ಎಲ್ಲಿ ನಾ ನಿನ್ನ ಜೊತೆ ವಿಹರಿಸಿದ್ದು ?
ಇಲ್ಲ ಒಂದೂ ಕೂಡ ಉಳಿದಿಲ್ಲ ನೆನಪು.
ಇಲ್ಲಿ ಹಾರುವ ಹಕ್ಕಿ,
ಒಮ್ಮೆ ಕೊಳ್ಳದ ಚೆಲುವ ಹೆಕ್ಕಿ

ಹಾರುವ ಹಾಗೆ
ಆ ಎಲ್ಲ ನೆನಪುಗಳು ಹಾರಿಹೋಗಿವೆ ಇಂದು.
ಬಂದದ್ದು ನಿಜವಿಲ್ಲಿ,
ಇದು ನನ್ನದೇ—
ನನ್ನ, ನನ್ನ ದೇಶವು ಇದೆ—
ಕನ್ಯಾಕುಮಾರಿಯುಡಿ ಒಮ್ಮೆ ಕಡಲಾಗಿದೆ ;
ಚಾರ್ಮಾಡಿ, ಚಂದ್ರಗಿರಿ, ಎಲ್ಲೋರ, ನೀಲಗಿರಿ, ಪಂಚಗಣಿ—ಸಿಮ್ಲಾ
ಈ ಬೆಟ್ಟದಾಣಪಲಿ ಹೂವಾಗಿ ನಕ್ಕಿದ್ದೆ—ಇರಬಹುದು.
ನೀನಂದು ನನ್ನ ಜೊತೆಗಿದ್ದೆ ;
ಮತ್ತೀಗ ಜೊತೆಗೂಡಿ
ಬತ್ತಿದೀ ಕೊಳದಲ್ಲಿ ಜಲವ ತುಂಬುವ ಹುಚ್ಚು ಹೋರಾಟ ಹೂಡಿರುವೆ.
ಬಳ್ಳಿಯುನ್ನಲ್ಲ—
ಕಲ್ಲನ್ನೆ ಅರಳಿಸುವ, ಕಂಪನದಿ ಮಯಣಿಸುವ
ಸಾಹಸವ ಮಾಡಿರುವೆ.
“ ಓ ನನ್ನ ಭಾರತವೆ—ಓ ಪುಣ್ಯಭೂಮಿ,
ಜನುಮಜನುಮಾಂತರದ ಪರಿಧಿಗಳ ನೂಕಿ,
ಕಾಲ ಕಟ್ಟಿದ ಕೋಟೆಗಳನೆಲ್ಲ ಮೆಟ್ಟಿ,
ಬಂದಿರುವೆ ನಿನ್ನಡಿಗೆ.
ಹೇ ಪುಣ್ಯವಂತಿ,
ಚಿರಮಧುರ ಮೈತ್ರಿಯಲಿ
ವಾತ್ಸಲ್ಯವನು ಹರಿಸಿ
ಹರಸು” ಎನ್ನುವ ನನ್ನ ನುಡಿನುಡಿಯು ಸಿಡಿದಿರುವ
ಎಲ್ಲ ತುಣುಕುಗಳಲ್ಲಿ
ಹೊರಬರುವ ಹಂಚಿಕೆಯು ಹೂಡಿರುವೆಯಾ
ನೀನು ?— ಯಾರು ನೀನು ?
ಹೊರಗಣ್ಣ ಬಣ್ಣವನು ದಾಟಿ, ಒಳಗಣ್ ತೆರೆವ
ಈ ಮಧುರ ಕ್ಷಣದಲ್ಲಿ ನೀ ನನ್ನ ನೋಡಿರುವೆ
ಹೀಗೆಯೇ ನೋಡುತಿರು.
ಒಂದು ಸಲ ಈ ನೆಲವ ಅಂತರಿಕ್ಷದ ಸ್ತರದಿ
ನಿನ್ನ ನತ್ತಿನ ಹೊಳಪ ತುಂಬುವೆನು
—ನಂಬಿದನು.

★ ದೇವೇಂದ್ರಕುಮಾರ ಹಕಾರಿ

ಪೊನ್ನನ ಭುವನೈಕರಾಮಾಭ್ಯುದಯ*

ಕನ್ನಡದ ಪ್ರಥಮ ಕವಿಚಕ್ರವರ್ತಿ ಪೊನ್ನನ "ಭುವನೈಕರಾಮಾಭ್ಯುದಯ"ವನ್ನು ಕಳೆದುಕೊಂಡ ನಮಗೆ ಕಾವ್ಯಾವಲೋಕನ, ಶಬ್ದಮಣಿದರ್ಪಣಗಳಲ್ಲಿ ತೋರಿಬರುವ ಅದರ ಒಂದೆರಡು ಇಡಿ ಪದ್ಯ ಹಾಗೂ ಕೆಲವು ಪದ್ಯಖಂಡಗಳು ಮಾತ್ರ ನಮ್ಮ ಕೈಯಲ್ಲಿ ಉಳಿದಿವೆ. ನಮ್ಮ ಹಿರಿಯರ ಮಹತ್ವದ ಕಾಗದಪತ್ರವೊಂದರ ಕೆಲವು ತುಣುಕುಗಳನ್ನು ಮುಂದಿಟ್ಟುಕೊಂಡು ಒಂದು ದೊಡ್ಡ ಆಸ್ತಿಯ ವಿವರಗಳನ್ನು ಕಲ್ಪಿಸಿಕೊಳ್ಳುವವರಂತೆ ನಮ್ಮ ಇಂದಿನ ಸ್ಥಿತಿಯಾಗಿದೆ.

ಭುವನೈಕರಾಮಾಭ್ಯುದಯವನ್ನು ಕುರಿತ ಹಲವು ಪ್ರಶ್ನೆಗಳಲ್ಲಿ ಕಥಾನಾಯಕ, ಕಾವ್ಯರೀತಿ ಮತ್ತು ವಸ್ತುವನ್ನು ಕುರಿತವು ಪ್ರಮುಖವೆನಿಸಿವೆ.

ಅದರ ನಾಯಕ ಬನವಾಸಿಯ ಶಂಕರಗಂಡನೆಂದು ಡಾ. ಡಿ. ಎಲ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟರು. ತರುವಾಯ ಡಾ. ಬೇಂದ್ರೆಯವರು ಮೇಲಿನ ಅಭಿಪ್ರಾಯವನ್ನು ಅಲ್ಲಗಳೆದು ರಾಷ್ಟ್ರಕೂಟ ಮೂರನೆಯ ಕೃಷ್ಣನು ಅದರ ನಾಯಕನಿರಬೇಕೆಂಬ ಊಹೆಯನ್ನು ಮಾಡಿದರು.[೧] ಕ್ರಿ.ಶ. ೯೩೩ರಲ್ಲಿ ರಾಷ್ಟ್ರಕೂಟ ನಾಲ್ಕನೆಯ ಗೋವಿಂದ ಅಥವಾ ಗೊಜ್ಜಿಗನನ್ನು ಪಟ್ಟದಿಂದ ತಳ್ಳಿ ತನ್ನ ಸೋದರಮಾವನಾದ ಅಮೋಘವರ್ಷ ಬದ್ದೆಗನನ್ನು ಪಟ್ಟಕ್ಕೆ ಕೂಡ್ರಿಸಿದ ಎರಡನೆಯ ಅರಿಕೇಸರಿಯ ಸಾಹಸಸಂದರ್ಭವನ್ನು ಪಂಪನು ತನ್ನ ವಿಕ್ರಮಾರ್ಜುನವಿಜಯಕ್ಕೆ ಹಿನ್ನೆಲೆಯಾಗಿಟ್ಟುಕೊಂಡಿರುವನು. ಅದೇ ರೀತಿ ಮೂರನೆಯ ಕೃಷ್ಣನು ತಕ್ಕೋಲ ಕಾಳಗದಲ್ಲಿ ಚೋಳರಾಜಾದಿತ್ಯನನ್ನು ಕೊಂದ ಸಂದರ್ಭವನ್ನು ಪೊನ್ನನು ಹಿನ್ನೆಲೆಯಾಗಿಟ್ಟುಕೊಂಡು ತನ್ನ ಭುವನೈಕರಾಮಾಭ್ಯುದಯವನ್ನು ರಚಿಸಿರಬೇಕೆಂಬ ಸಂಗತಿಯು ಊಹಿಸಲ್ಪಟ್ಟಿತು. ಇಲ್ಲಿ ಪ್ರಥಮವಾಗಿ ಗಮನಿಸತಕ್ಕ ಸಂಗತಿಯೆಂದರೆ ಚೋಳರಾಜಾದಿತ್ಯನನ್ನು ಕೊಂದವನು ರಾಷ್ಟ್ರಕೂಟ ಮೂರನೆಯ ಕೃಷ್ಣನಲ್ಲ, ಗಂಗಬೂತುಗನು. "ಕನ್ನರದೇವಂ ಚೋಳನಂ ಕಾದುವಂದು ಬೂತುಗಂ ರಾಜಾದಿತ್ಯನಂ ಬಿಸುಗೆಯೆ ಕಳನಾಗಿ ಸುರಿಗಿಱಿದು ಕಾದಿಕೊಂದು" ಎಂದು ಆತಕೂರ ಶಾಸನದ ಸ್ಪಷ್ಟೋಕ್ತಿಯಿರುವಾಗ ರಾಜಾದಿತ್ಯನನ್ನು ಕನ್ನರನು ಕೊಂದವನೆನ್ನುವುದು ಉಚಿತವಲ್ಲ. ಆತಕೂರ ಶಾಸನಕ್ಕೆ ವಸ್ತುವಾದವನು, ಕದನೈಕರುದ್ರ, ಸಗರತ್ರಿನೇತ್ರ ಎಂಬ ಬಿರುದು

---

* ಈ ಲೇಖನವನ್ನು ಸಿದ್ಧಗೊಳಿಸುವಾಗ ಗುರುಗಳಾದ ಪ್ರೊ. ಎಂ. ಎಂ. ಕಲಬುರ್ಗಿ, ಎಂ.ಎ., ಪಿಎಚ್.ಡಿ. ಅವರು ಹಲವಾರು ರೀತಿಯಿಂದ ಸಲಹೆ ಸೂಚನೆಗಳನ್ನಿತ್ತು ಪ್ರೋತ್ಸಾಹಿಸಿದ್ದಾರೆ. ಅವರಿಗೆ ನನ್ನ ನೆನಕೆಗಳು ಸಲ್ಲುತ್ತವೆ.

೧. ಪ್ರಬುದ್ಧ ಕರ್ಣಾಟಕ, ಸಂಪುಟ-೧೫, ಸಂಚಿಕೆ ೨ ಮತ್ತು ೪.

ಗಳುಳ್ಳ ಮಣಲರತನಾದುದರಿಂದ ಶಾಸನದಲ್ಲಿ ಆತನ ಸ್ತುತಿಯು ವಿಶೇಷವಾಗಿ ಬರುವುದು ಸ್ವಾಭಾವಿಕವಾಗಿದೆ. ಆದುದರಿಂದ ಪ್ರಸ್ತುತ ಶಾಸನದಲ್ಲಿಯು "ಉಱದಿದಿರಾನ್ತ ಚೋಟಚತುರಂಗಬಲಂಗಳನಟ್ಟಿ...............ಮೆಚ್ಚದೊರಾರ್ ಸಗರತ್ರಿಣೇತ್ರನಂ" ಮತ್ತು "ನರಪತಿ ಬೆನ್ನೊಳಿಟ್ಟೊಡೆ ನ್............... ಬಿರಿಯೆ ಪಾಯಿದಂ ಕದನೈಕಶೂದ್ರಕಂ" ಎಂಬ ಸ್ತುತಿರೂಪದ ಈ ಎರಡು ಪದ್ಯಗಳನ್ನು ಬೇರೆಯವರಿಗೆ ಆರೋಪಿಸುವುದು ಯೋಗ್ಯವಲ್ಲ. ಇಷ್ಟಾದರೂ ಚಕ್ರವರ್ತಿಯೆಂಬ ನೆವದಿಂದ ತಕ್ಕೋಲವಿಜಯವನ್ನು ರಾಷ್ಟ್ರಕೂಟ ಕನ್ನರನಿಗೆ ಒಟ್ಟಿನಲ್ಲಿ ಆರೋಪಿಸಿ ಒಂದು ಕಾವ್ಯವನ್ನು ಕವಿಯೊಬ್ಬನು ರಚಿಸಿದ್ದರೆ ಅದು ತೀರ ಅವಾಸ್ತವವೆನ್ನುವಂತಿಲ್ಲ. ಆದುದರಿಂದ ಈ ಕೃತಿನಾಯಕನ ವಿಷಯದಲ್ಲಿ ದ್ವಂದ್ವಭಾವ ಮೂಡುತ್ತದೆ.

ಶಂಕರಗಂಡನು ಕಾವ್ಯನಾಯಕನಾಗಿರಬೇಕೆಂದು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ನಿರಾಕರಿಸಿದ ಶ್ರೀ ಬೇಂದ್ರೆಯವರು "ಚಕ್ರವರ್ತಿಯಿಂದ ಕವಿಚಕ್ರವರ್ತಿಯೆಂದು ಬಿರುದು ಪಡೆಯಬೇಕಾದರೆ ಅವನನ್ನೆ ಕುರಿತು ಕಾವ್ಯವನ್ನು ಬರೆದಿರಬೇಕು; ಅವನ ಸಾಮಂತನನ್ನು ಕುರಿತಲ್ಲ" ಎಂಬ ತರ್ಕವನ್ನು ಮುಂದೊಡ್ಡಿದ್ದಾರೆ. ಆದರೆ ಇದೊಂದು ಸರ್ವಸಾಮಾನ್ಯವಾದ ನಿಯಮವೆಂದು ಹೇಳಲು ಆಧಾರವಿಲ್ಲ. ಪೊನ್ನನಿಗೆ ಭುವನೈಕರಾಮಾಭ್ಯುದಯ ಬರೆದ ಕಾರಣ ಕವಿಚಕ್ರವರ್ತಿ ಎಂಬ ಬಿರುದು ದೊರೆತಿದೆಯೆಂದು ಹೇಳುವುದಕ್ಕೆ ಇಲ್ಲಿಯವರೆಗೆ ನಮಗೆ ಯಾವ ಪ್ರಮಾಣವೂ ದೊರೆತಿಲ್ಲ. ಅಲ್ಲದೆ ಚಕ್ರವರ್ತಿಯಿಂದ ಕವಿಚಕ್ರವರ್ತಿಯೆಂದು ಬಿರುದು ಪಡೆಯಲು ಆತನನ್ನು ಕುರಿತು ಒಂದು ಕಾವ್ಯವನ್ನು ಬರೆಯಲೇಬೇಕೆಂಬ ನಿಯಮವೂ ಇಲ್ಲ. ಈ ಮಾತಿಗೆ ಉದಾಹರಣೆಯಾಗಿ ಜನ್ನನನ್ನು ಹೆಸರಿಸಬಹುದು.[೧] ಕವಿಚಕ್ರವರ್ತಿಯಾದ ಜನ್ನನು ಬಲ್ಲಾಳನನ್ನು ಕುರಿತು ಕಾವ್ಯವನ್ನು ಬರೆದಿಲ್ಲ. ಆತನು ಬರೆದುದು ಜೈನಧರ್ಮಕ್ಕೆ ಸಂಬಂಧಪಟ್ಟ ಎರಡು ಮತೀಯ ಕಾವ್ಯಗಳನ್ನು. ಜನ್ನನು ಬಲ್ಲಾಳನನ್ನು ಕುರಿತು ಬೇರೆ ಕಾವ್ಯ ಬರೆದಿರಬಹುದೆಂದು ತರ್ಕಿಸುವುದು ಈಗಿನ ಸ್ಥಿತಿಯಲ್ಲಿ ದೂರದ ಮಾತಾಗುತ್ತದೆ.[೨]

---

೧. ಯಶೋಧರಚರಿತೆ, ೧ನೆಯ ಅವತಾರ, ಪ-೨೧.

೨. ಜನ್ನನ ಯಶೋಧರಚರಿತೆಯಲ್ಲಿ ಲೌಕಿಕ ಕಾವ್ಯಗಳಲ್ಲಿರುವಂತೆ ಬಲ್ಲಾಳನ ವಂಶದ ವಿವರವಾದ ವರ್ಣನೆಯು ಬಂದಿರುವುದನ್ನು ನೋಡಿದರೆ ಈ ಸಂಗತಿ ಸ್ಪಷ್ಟವಾಗುತ್ತದೆ. ಆತನು ಕವಿಚಕ್ರವರ್ತಿ ಬಿರುದಿಗಾಗಿ ಬಲ್ಲಾಳನನ್ನು ಕುರಿತು ಒಂದು ಕಾವ್ಯವನ್ನು ಬರೆದಿದ್ದ ಪಕ್ಷದಲ್ಲಿ ಮತೀಯ ಕಾವ್ಯನಾದ ಯಶೋಧರಚರಿತೆಯಲ್ಲಿ ಅದು ಸೇರಿಸಲ್ಪಡುತ್ತಲಿರಲಿಲ್ಲ.

ಶಂಕರಗಂಡನಿಗೆ 'ಭುವನೈಕರಾಮ'ನೆಂಬ ಬಿರುದು ಇರುವ ಬಗೆಗೆ ಸಂಶಯಾತೀತವಾದ ಶಾಸನಾಧಾರವಿದೆ.[೪] ಈ ರೀತಿ ೩ನೆಯ ಕೃಷ್ಣನಿಗೆ ಇತ್ತೆಂದು ಹೇಳುವ ಶಾಸನಗಳು ಈವರೆಗೆ ಹೊರಬಂದಿಲ್ಲ. ಈಚೆಗೆ ಭುವನೈಕರಾಮನೆಂಬ ಬಿರುದು ೩ನೆಯ ಕೃಷ್ಣನಿಗೆ ಇದ್ದುದಾಗಿ ಪುಷ್ಪದಂತನ ಮಹಾಪುರಾಣದಿಂದ ತಿಳಿದುಬಂದಿದೆ.[೫] "ಭುವಣೇಕ್ಕರಾಮುರಾಯಾಹಿರಾವು........" ಎಂದರೆ ಭುವನೈಕರಾಮ ರಾಜಾಧಿರಾಜ ಎಂದು ಸ್ಪಷ್ಟವಾಗಿ ಪುಷ್ಪದಂತನು ೩ನೆಯ ಕೃಷ್ಣನನ್ನು ಕರೆದಿದ್ದಾನೆ. ಅಂದರೆ ಭುವನೈಕರಾಮನೆಂಬ ಬಿರುದು ಚಕ್ರವರ್ತಿಗೂ ಆತನ ಸಾಮಂತನಿಗೂ ಏಕಕಾಲದಲ್ಲಿ ಇದ್ದಂತಾಯಿತು. ಇನ್ನೊಂದು ಸಂಗತಿಯೆಂದರೆ ಚೋಳರಾಜಾದಿತ್ಯನ ಶಿರವನ್ನು ೩ನೆಯ ಕೃಷ್ಣನು ಕತ್ತರಿಸಿದನೆಂದು ಅದೇ ಪದ್ಯದಲ್ಲಿ ಪುಷ್ಪದಂತನು ಹೇಳುತ್ತಾನೆ. ಈ ಸಂಗತಿ ಸತ್ಯಘಟನೆಯ ವಿಪರ್ಯಾಸವೆಂಬುದು ಆತಕೂರ ಶಾಸನದಿಂದ ಸ್ಪಷ್ಟವಾಗುತ್ತದೆ. ಹಾಗಾದರೆ ಭುವನೈಕರಾಮನೆಂಬ ಬಿರುದು ಇದ್ದುದು ಯಾರಿಗೆ? ಶಂಕರಗಂಡನಿಗೋ? ೩ನೆಯ ಕೃಷ್ಣನಿಗೋ? ಇದು ಬಹು ಜಟಿಲವಾದ ಪ್ರಶ್ನೆ. ಅದು ಇಬ್ಬರಿಗೂ ಇದ್ದ ಬಗ್ಗೆ ನಿಖರವಾದ ಆಧಾರಗಳು ದೊರೆತಿರುವದರಿಂದ ನಿರ್ಣಯವು ಸುಲಭವಾಗುತ್ತಿಲ್ಲ.

ಶಬ್ದಮಣಿದರ್ಪಣ ಕಾವ್ಯಾವಲೋಕನಗಳಲ್ಲಿ ಭುವನೈಕರಾಮನೆಂಬ ಅಂಕಿತವುಳ್ಳ ಪದ್ಯ ಹಾಗೂ ಪದ್ಯಖಂಡಗಳು ಒಟ್ಟು ನಾಲ್ಕು.[೬] ಅವುಗಳಲ್ಲಿ ಶಬ್ದಮಣಿದರ್ಪಣದ ೧೬೭ನೆಯ ಸೂತ್ರಕ್ಕೆ ಉದಾಹರಣೆಯಾಗಿರುವ ಪದ್ಯವು ಹೀಗಿದೆ—

> ಉದಯಾಸ್ತೋನ್ನತ ಶೈಲಸೇತು ಹಿಮವತ್ಕ್ಷಿತೀಧ್ರ ಪರ್ಯಂತ ಸಂ
> ಪದೆಯಿಂ ವಾರ್ಧಿತರತ್ತರಂಗನಿನದತ್ಕಾಂಚೀಕಲಾಪಾಂಚಿತಾ
> ಸ್ಪದೆಯಿಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ
> ರ್ಚಿದ ಗೆಲ್ಲಂ ಭುವನೈಕರಾಮ ಮಹಿಪಂಗಕ್ಕುಂ ಪೆರರ್ಗಕ್ಕುಮೇ :

ಇದೆ ಪದ್ಯವು ಕಾವ್ಯಾವಲೋಕನದ ೧೭೩ನೆಯ ಉದಾಹರಣಪದ್ಯವಾಗಿದೆ. 'ಸಮಸ್ತ ಭರತಖಂಡವನ್ನು ಸಾಧಿಸಿ ಕಬ್ಬಿಗನಿಗೆ ಒಪ್ಪಿಸಿದ ಗೆಲವು ಭುವ

---

೪. ಪ್ರಾಚೀನ ಕರ್ನಾಟಕ, ಸಂ. ೧, ಸಂ. ೨.

೫. ಕಾವ್ಯವ್ಯಾಸಂಗ, ಪು. ೧೧೭–೧೮ —ಶ್ರೀ ಎಲ್. ಆರ್. ಹೆಗಡೆ ಹಾಗೂ "ಕರ್ನಾಟಕ ಕವಿಚರಿತೆ", ಸಂಪುಟ ೧, ಪರಿಶಿಷ್ಟ.

೬. ಶಬ್ದಮಣಿದರ್ಪಣದ ೧೩೦, ೧೬೭, ೧೮೩, ೧೮೪ ಈ ಸೂತ್ರಗಳ ಉದಾಹರಣೆಗಳು (ಸಂ. ಡಿ. ಎಲ್. ಎನ್. ೧೯೬೮).

ನೈಕರಾಮನೃಪನ ಹೊರತು ಬೇರೆಯವರಿಗಲ್ಲ' ಎಂದು ಅದರ ಅಭಿಪ್ರಾಯವನ್ನು ಕ್ರೋಢೀಕರಿಸಬಹುದು.[೭]

ಅಂದರೆ ಭುವನೈಕರಾಮನು ಯುದ್ಧದಲ್ಲಿ ಗೆದ್ದ ಸಮಸ್ತ ವಸುಂಧರೆಯನ್ನು "ಕಬ್ಬಿಗ"ನಿಗೆ ಕೊಟ್ಟನೆಂದು ಅರ್ಥವೆ? ಇದು ಆಭಾಸ; ಭುವನೈಕರಾಮನು ಅಖಂಡ ಭರತಖಂಡವನ್ನು ಗೆದ್ದು ತರುವಾಯ ಕವಿಯೊಬ್ಬನಿಗೆ ಕೆಲವು ಭೂಮಿಯನ್ನು ಉಂಬಳಿಯಾಗಿ ಕೊಟ್ಟನೆಂದು ಅರ್ಥವೇ? ಹೀಗೆ ಅರ್ಥ ಹೊರಡಲು ಅಲ್ಲಿ ಅವಕಾಶವಿಲ್ಲ. ಈ ಪದ್ಯಕ್ಕೆ "ಉದಯಾಸ್ತೋನ್ನತ ಶೈಲಸೇತು ಹಿಮವತ್ಕುತ್ಕೀಲ ಪರ್ಯಂತ ಸಂಪದೆಯಂ........ನೆಲನಂ ಸಾಧಿಸಿ ಕಬ್ಬಿಗಂಗೆ ನಿರ್ವ್ಯಾಜದಿಂದಂ ನಿಮಿರ್ಚಿದ ಗೆಲ್ಲಂ ಭುವನೈಕರಾಮ ಮಹಿಪಂಗಕ್ಕುಂ ಪೆರರ್ಗಕ್ಕುಮೇ" ಎಂದು ಅನ್ವಯ ಜೋಡಿಸಬೇಕು. ಆಗ ಒಬ್ಬ ಚಕ್ರವರ್ತಿಗೆ ಭುವನೈಕರಾಮನು ನೆಲವನ್ನು ಗೆದ್ದು ಒಪ್ಪಿಸಿದನೆಂದು ಅರ್ಥವಾಗುತ್ತದೆ. ಆದುದರಿಂದ ಈ ಪದ್ಯವು ಸೂಚಿಸುವ "ಕಬ್ಬಿಗ" ಪದಕ್ಕೆ ಚಕ್ರವರ್ತಿಯೆಂದೇ ಅರ್ಥ ಹೇಳಬೇಕು. ರಾಷ್ಟ್ರಕೂಟ ಕೃಷ್ಣನಿಗೆ ಕನ್ನರ ಮತ್ತು ಕಚ್ಚೆಗ ಎಂಬ ಪರ್ಯಾಯನಾಮಗಳಿವೆ; ಕಬ್ಬಿಗ ಎಂಬ ಹೆಸರಾಗಲೀ ಬಿರುದಾಗಲೀ ಇಲ್ಲ; ಅದು ಬಿರುದಾಗಬೇಕೂ ಇಲ್ಲ. ಅದಕ್ಕಾಗಿ ಕಬ್ಬಿಗ ಎಂಬುದು 'ಕಚ್ಚೆಗ' ಎಂಬುದರಿಂದ ಹುಟ್ಟಿದ ದುಷ್ಟಪಾಠವಾಗಿರಬಹುದು. ಇದಕ್ಕೆ ಲಿಪಿಕಾರರ ಹಸ್ತದೋಷ ಕಾರಣವಾಗಿರಬೇಕು. ಪ್ರಾಚೀನ ಕನ್ನಡಲಿಪಿಯಲ್ಲಿ 'ಬ' ಮತ್ತು 'ಚ' ವರ್ಣಗಳಲ್ಲಿಯ ಅಂತರವು ಅನೇಕ ವೇಳೆ ಲಿಪಿತಜ್ಞರಿಗೇ ಗೊತ್ತಾಗುವದಿಲ್ಲ. ಪಂಪಭಾರತದ 'ಬಚ್ಚೆಸಾಸಿರ' ಎಂಬ ಪದವು ಮೂಲದಲ್ಲಿ ಸಬ್ಬಿಸಾಸಿರ ಅಥವಾ ಚಬ್ಬಿಸಾಸಿರ ಎಂದಿರಬೇಕೆಂಬ ವಿದ್ವಾಂಸರ ಊಹೆಯು ಇಂದು ಸತ್ಯವಾಗಿ ಪರಿಣಮಿಸಿದೆ.[೮] ಅದೇ ರೀತಿ ಇಲ್ಲಿಯ ಕಬ್ಬಿಗ ಪದದಲ್ಲಿಯ "ಬ್ಬಿ" ವರ್ಣವು ಮೂಲದಲ್ಲಿ "ಚ್ಚಿ" ಅಥವಾ "ಚ್ಚೆ" ಇರಬೇಕು. ಕನ್ನಡಲಿಪಿಯಲ್ಲಿ ಈ ಅಕ್ಷರದ ಸ್ಥಿತ್ಯಂತರಕಾಲದ ಲಿಪಿಕಾರರು ಅದನ್ನು "ಬ್ಬಿ" ಎಂದು ಮಾರ್ಪಡಿಸಿರಲು ಸಾಕು. ಆದುದರಿಂದ ಪ್ರಸ್ತುತ ಪದ್ಯದಲ್ಲಿ ಬರುವ "ಕಬ್ಬಿಗ"(ಕಚ್ಚೆಗ) ನೆಂದರೆ ಸಾಮಾನ್ಯ ಕವಿಯಾಗಿರದೆ ರಾಷ್ಟ್ರಕೂಟಚಕ್ರವರ್ತಿಯಾದ ೩ನೆಯ ಕೃಷ್ಣನಾಗಿರಬೇಕು; 'ಭುವನೈಕರಾಮ'ನೆಂದು ಬಿರುದಿರುವವನು ಆತನ ಸಾಮಂತನಾದ ಶಂಕರಗಂಡನಾಗಿರಬೇಕು.

---

೭. "ನೆಲನೆಂಬೀ ನಪುಂಸಕಮಂ ಬಿಟ್ಟು ಧರಾವನಿತೆಯೆಂದು ಯೋಜಿಸಿಕೊಳ್ವುದು" ಎಂಬ ದರ್ಪಣದಲ್ಲಿಯ ಟೀಕೆಯು ನನ್ನ ಅರ್ಥವಿವರಣೆಯನ್ನು ಸಮರ್ಥಿಸುತ್ತದೆ.

೮. ಪಂಪಮಹಾಕವಿ ಗ್ರಂಥದ ಪು. ೧೩೨ರ ಅಡಿಟಿಪ್ಪಣಿ ಹಾಗೂ ಪಂಪಭಾರತದ ಆಶ್ವಾಸ ೧೪, ಪದ್ಯ ೫೬.

ಇದೇ ಸಂದರ್ಭದಲ್ಲಿ ಕಾವ್ಯಾವಲೋಕನದ ೬೨೦ನೆಯ ಪದ್ಯವನ್ನು ನೋಡಬಹುದು.

ಅವಿಹಿತವೇಗಮೇಳ್ಗೆಯ ಜವಂ ಮೃಣಮುಕ್ತತಕಾಯಮೆತ್ತಿ ಕ
ಟ್ಟುವ ಮಂದಮುಚ್ಚೆ ಸೋರ್ವಸೋನೆ ಬೀಳ್ವ ಗಜಧ್ವಜಮಂಬರಕ್ಕೆ ನಿ
ಕ್ಕುವ ಜಯಕೇತು ಶಂದೆಯದೆ(ದ?) ದಂದುಗಮಂ ಕಿಡಿಸಿತ್ತು ಮುಂದಣೋ
ಡುವ ರಿಪುದಂತಿಗಂ ಪೆರಗಣಟ್ಟುವ ರಟ್ಟರ ಮೇರು ದಂತಿಗಂ ||

ಈ ಪದ್ಯದ ಅರ್ಥ ಖಿನಿದ್ದರೂ "ರಟ್ಟರಮೇರುದಂತಿ" ಎಂಬ ಒಂದು ಆನೆಯನ್ನು ಇದು ಉಲ್ಲೇಖಿಸುತ್ತದೆ. ರಟ್ಟರಮೇರುವೆಂಬುದು ರಾಷ್ಟ್ರಕೂಟ ಮೂರನೆಯ ಕೃಷ್ಣನ (ಪಟ್ಟದ) ಆನೆಯಾಗಿರಬಹುದೆಂದು ವಿದ್ವಾಂಸರ ಊಹೆ. ಆದರೆ ಬೆಟಗೇರಿಯ ಶಾಸನದಲ್ಲಿ ಶಂಕರಗಂಡನ ಕೆಲವು ಬಿರುದುಗಳಲ್ಲಿ "ರಟ್ಟರ [ಮೇರು]" ಎಂಬುದೊಂದು ಉಂಟು. ಇಲ್ಲಿ "ರಟ್ಟರ ಮೇರುದಂತಿ" ಎಂದರೆ ರಟ್ಟರ ಮೇರುವಿನ ದಂತಿ ಎಂದು ಹೊಸ ಅರ್ಥವನ್ನು ಹೇಳಬೇಕಾಗುತ್ತದೆ. ಹೀಗಾಗಿ ಈ ಪದ್ಯದಲ್ಲಿ ಬರುವ 'ರಟ್ಟರ ಮೇರು' ಶಂಕರಗಂಡನೆಂದೆ ತಿಳಿಯಬಹುದು. ಇದು ಭುವನೈಕರಾಮಾಭ್ಯುದಯದಿಂದ ಎತ್ತಿದ ಪದ್ಯವಾಗಿದ್ದ ಪಕ್ಷದಲ್ಲಿ ಆದರ ನಾಯಕನು ಶಂಕರಗಂಡನೆಂದೇ ಹೇಳಬೇಕಾಗುತ್ತದೆ.

ಕಾವ್ಯಾವಲೋಕನದಲ್ಲಿ ರಾಮಾಯಣ, ಭಾರತ, ಭಾಗವತ ಮುಂತಾದ ಪುರಾಣಕಾವ್ಯಗಳಿಂದ ಎತ್ತಿದುವೆಂದು ತೋರುವ ಪದ್ಯಗಳಿದ್ದಂತೆ ಶುದ್ಧ ಐತಿ-ಹಾಸಿಕ ಕಾವ್ಯದಿಂದ ಎತ್ತಿಕೊಂಡವೆಂದು ಹೇಳಬಹುದಾದ ಪದ್ಯಗಳೂ ಇವೆ. ಉದಾಹರಣೆಗೆ ೬೮, ೩೨೧, ೬೪೪, ೬೫೭, ೮೦೩, ೮೩೫, ೮೬೩ ಮುಂತಾದ ಪದ್ಯಗಳನ್ನು ನೋಡಬಹುದು.

---

೯. ಕಾವ್ಯಾವಲೋಕನದ ೬೧೮ ಹಾಗೂ ೬೧೯ನೆಯ ಪದ್ಯಗಳು 'ಪರಿವೃತ್ತಿ' ಹಾಗೂ ಯಥಾಕ್ರಮ (ಯಥಾಸಂಖ್ಯೆ) ಎಂಬ ಅಲಂಕಾರಗಳಿಗೆ ಲಕ್ಷ್ಯಗಳಾಗಿದ್ದು ೬೨೦ನೆಯ ಪದ್ಯವು ಈ ಎರಡೂ ಅಲಂಕಾರಗಳ ಮಿಶ್ರೋದಾಹರಣೆಯಾಗಿರುವಂತೆ ಕಾಣುತ್ತದೆ. ಅದಕ್ಕೆ ಕಾವ್ಯಾವಲೋಕನದ ಅಡಿಟಿಪ್ಪಣಿಯಲ್ಲಿ ಕೊಟ್ಟಿರುವ 'ಚ' ಪ್ರತಿಯ "ಎರಡಱೊಳಂ ಬಹುಳ ನಿಬಂಧ ಸಮುಚಿತಕ್ಕೆ" ಎಂಬ ಮಾತು ಇದೇ ಅರ್ಥವನ್ನು ಹೇಳುವಂತೆ ಕಾಣುತ್ತದೆ.

ಇವುಗಳಲ್ಲಿ ೬೮ನೆಯ ಪದ್ಯವು ಮಹತ್ವದ್ದು.

[೧೦] ಬಲ್ವೆಣನುರ್ಚಿ ಕೋಡೊಳಿರೆ ನೆತ್ತರುರೋಮಣಿಯಿಂ ನೆಲಕ್ಕೆ ಬಾ
ನಲ್ವರಿವನ್ನೆಗಂ ಪ್ರಹತದಿಂದಿರದೆತ್ತಿದೊಡಗ್ರಹಸ್ತದೊಳ್
ನೆಲ್ವ ಪೆಣಕ್ಕೆ ಪರ್ದೆರಗೆ [೧೧] ವೈರಿಯ ನಾಲ್ಕು ಬಲಕ್ಕಮೊಂದೆ ಬಂ
ಬಲ್ವರಿಯುತ್ತುಮಿರ್ದುದು ಜಯದ್ವಿರದಂ ಜಯಸಿಂಗಭೂಪನಾ ||

ಈ ಪದ್ಯದ ಕೊನೆಯ ಪಾದದ "ಜಯಸಿಂಗಭೂಪನಾ" ಎಂಬುದಕ್ಕೆ ಕಾವ್ಯಾವಲೋಕನದ ಇ ಮತ್ತು ಗ ಪ್ರತಿಗಳಲ್ಲಿ 'ಜಯಧೀರಭೂಪನಾ' ಎಂದು ಪಾಠಾಂತರವಿದೆ. ಕಾವ್ಯಾವಲೋಕನದ ಕರ್ತೃ ನಾಗವರ್ಮನು ಚಾಲುಕ್ಯ ಜಗದೇಕಮಲ್ಲನಲ್ಲಿ (೨ನೆಯ ಜಯಸಿಂಹನಲ್ಲಿ) ಕಟಕೋಪಾಧ್ಯಾಯನಾಗಿದ್ದ ನೆಂದು ಜನ್ನನು ಹೇಳಿರುವುದು ಸರ್ವವಿದಿತವಾದ ಸಂಗತಿ. (ಜನ್ನನ ಈ ಹೇಳಿಕೆಯ ಮೇಲೆ ಪಂಡಿತರು ನಾಗವರ್ಮನ ಕಾಲವನ್ನು ನಿರ್ಧರಿಸಿರುವುದು.) ಆದುದರಿಂದ ಮೇಲುನೋಟಕ್ಕೆ "ಜಯಸಿಂಗ" ಎಂಬ ಪಾಠವೇ ಯೋಗ್ಯವೆಂದು ಇಲ್ಲಿ ತೋರಬಹುದು. ಅಂದರೆ ನಾಗವರ್ಮನು ಈ ಪದ್ಯವನ್ನು ಜಯಸಿಂಹನ ಸ್ತುತಿರೂಪವಾಗಿ ರಚಿಸಿ ತನ್ನ ಗ್ರಂಥದಲ್ಲಿ ಸೇರಿಸಿರಬಹುದೆಂದು ಎನ್ನಿಸ ಬಹುದು. ಆದರೆ ಈ ಅಭಿಪ್ರಾಯ ಯೋಗ್ಯವಲ್ಲ. "ಜಯಧೀರ" ಎಂಬುದು ತೀರ ಅಪರೂಪವಾದ ಪದ. ಅದನ್ನು ಸಾಮಾನ್ಯ ಲಿಪಿಕಾರರು ಕಲ್ಪಿಸಿ ಪ್ರಕ್ಷೇಪಮಾಡಲಾರರು. 'ಜಯಧೀರ' ಎಂಬುದನ್ನು ಸಾಮಾನ್ಯ ಲಿಪಿ ಕಾರರು ತಿದ್ದಿ 'ಜಯಸಿಂಗ' ಎಂದು ಮಾರ್ಪಡಿಸುವುದು ಎಷ್ಟು ಸುಲಭವೊ ಅಷ್ಟೆ "ಜಯಸಿಂಗ" ಎಂಬುದನ್ನು ತಿದ್ದಿ 'ಜಯಧೀನ' ಎಂದು ಮಾರ್ಪಡಿಸು ವುದು ದುರ್ಲಭ. ಆದುದರಿಂದ ಇಲ್ಲಿ ಜಯಧೀರವೆಂಬುದು ಅಪರೂಪ ಪದ.

---

೧೦. ಈ ಪದ್ಯದ ಪ್ರಭಾವವು ಕೆಳಗಿನ ಪದ್ಯದ ಮೇಲೆ ಆದದ್ದು ಸ್ಪಷ್ಟವಾಗಿದೆ.

ಒಂದೆರಡಟ್ಟಿ ಕೋಡಮೊನೆಯೊಳ್ತಿರುಗುತ್ತಿರೆ ಬಲ್ವೆಣಂ ಮರು
ಳ್ದೊಂದೆರಡಗ್ರಹಸ್ತದೊಳಗುರ್ವಿಸೆ ಮೋದಿದ ತಾಳವಟ್ಟದೊ
ಳ್ಬಂದ ಪೆಣಂ ಪೆಡಂ ಮಗುಳೆ ಕಣ್ಗೆಸೆಗುಂ ಜಸನೇರಿದೊಂದು ಜ
ಕ್ಕಂದೊಳದಂತೆ ಸೇವ್ರಣ ಘರಟ್ಟನ ವೀರವಿಳಾಸ ಸಿಂಧುರಂ ॥

ಜನ್ನನ ಅಮೃತಾಪುರಶಾಸನ, **E.C. VI, T. K. No. 45**

೧೧. ದರ್ಪಣದ ೧೩ನೆಯ ಸೂತ್ರದ ಉದಾಹರಣೆ: "ಆನೆಯ ಮೇಲೆಯುಂ ಆಳ ಮೇಲೆಯುಂ ಕುದುರೆಯ ಮೇಲೆಯುಂ ಪರಿದುದೊಂದೆ ಗಜಂ ಭುವನೈಕರಾಮನಾ" —ಇದಕ್ಕೂ ಮೇಲಿನದಕ್ಕೂ ಸಾಮ್ಯವು ಎದ್ದು ಕಾಣುವಂತಿದೆ.

ಗ್ರಂಥಸಂಪಾದನಾಶಾಸ್ತ್ರದ ದೃಷ್ಟಿಯಿಂದ ಇಂಥ ಅಪರೂಪ ಪಾಠಗಳನ್ನೇ ಕವಿಯ ಮೂಲಪಾಠಗಳೆಂದು ಸ್ವೀಕರಿಸಬೇಕಾಗುತ್ತದೆ.

ಶಂಕರಗಂಡನಿಗೆ ಭುವನೈಕರಾಮ, ಅಭಿಮಾನಧವಳ, ರಾಜಭೂರಿಶ್ರವ, ವಿದ್ವಿಷ್ಟನಾರಾಯಣ, ರಟ್ಟರ [ಮೇರು], ಸತ್ಯಾರ್ಣವ, ಧರ್ಮರತ್ನಾಕರ ಮೊದಲಾದವುಗಳ ಜೊತೆಗೆ "ಜಯಧೀರ" ಎಂಬುದೂ ಒಂದು ಬಿರುದಿರುವ ಸಂಗತಿ ಬೆಟಗೇರಿಯ ಅದೇ ಶಾಸನದಿಂದ ತಿಳಿದುಬರುತ್ತದೆ. ಅಲ್ಲದೆ ಶಂಕರ-ಗಂಡರಸನು ಕೊಪ್ಪಳದಲ್ಲಿ ಮಾಡಿಸಿದ್ದು ತನ್ನ ಹೆಸರಿನ "ಜಯಧೀರ ಜಿನಾಲಯ"ವನ್ನು. ಅನೇಕ ಬಿರುದುಗಳನ್ನು ಬಿಟ್ಟು "ಜಯಧೀರ" ಎಂಬುದನ್ನು ಎತ್ತಿಕೊಂಡ ಕಾರಣ ಅದು ಶಂಕರಗಂಡನ ಪ್ರಮುಖ ಬಿರುದಾಗಿರಬೇಕೆಂದು ಊಹಿಸಬಹುದು. ಆದುದರಿಂದ ಮೇಲಿನ ಪದ್ಯವೂ ಶಂಕರಗಂಡನನ್ನು ಕುರಿತಿದೆಯೆಂದು ಹೇಳಲು ಏನೂ ಬಾಧೆ ಕಾಣದು. ಈ ಪದ್ಯದಲ್ಲಿಯೂ (ಕಾ. ಲೋ. ಪದ್ಯ ೬೮), ದರ್ಪಣದ ೧೩೦, ೧೮೩, ೧೮೪ ಈ ಸೂತ್ರಗಳಿಗೆ ಕೊಟ್ಟ ಉದಾಹರಣೆಯ ತುಂಡುಗಳಲ್ಲಿಯೂ ಗಜಯುದ್ಧದ ವರ್ಣನೆಯಿರುವುದು ನೇರವಾಗಿ ಒಂದೇ ಕಾವ್ಯ ಹಾಗೂ ಒಬ್ಬನೇ ಕಾವ್ಯನಾಯಕನನ್ನು ಸೂಚಿಸುವ-ದಿಲ್ಲವೆ?

ಮೇಲೆ ಸೂಚಿಸಿದ ಕಾವ್ಯಾವಲೋಕನ, ಶಬ್ದಮಣಿದರ್ಪಣದಲ್ಲಿಯ ಉದಾಹರಣೆಗಳು ಭುವನೈಕರಾಮಾಭ್ಯುದಯಕ್ಕೆ ಸಂಬಂಧಿಸಿದುವಾಗಿರಬೇಕು ಎಂದು ಪಂಡಿತರ ಊಹೆಯಷ್ಟೆ. ಗಜಯುದ್ಧ ಮುಖ್ಯವಾದ ಭುವನೈಕ-ರಾಮಾಭ್ಯುದಯವು ರಾಮಾಯಣದೊಂದಿಗೆ ತಗುಳ್ಚಿದ ಕಾವ್ಯವೆಂದು ಮತ್ತೊಂದು ಊಹೆ. ಆದರೆ ರಾಮಾಯಣದಲ್ಲಿ ಗಜಯುದ್ಧದ ಪ್ರಸ್ತಾಪಕ್ಕೆ ಅವಕಾಶ ತೀರ ಕಡಿಮೆ; ಹಾಗೂ ನಾಯಕನಾದ ರಾಮನು ಯಾವುದೇ ವಾಹನ ವನ್ನು ಏರದೆ ನೆಲದ ಮೇಲೆ ನಿಂತು ಯುದ್ಧ ಮಾಡಿದನೆಂದು ಪರಂಪರೆ ಬೇರೆ ಉಂಟು. ಅದಕ್ಕಾಗಿ ಇದು ರಾಮಾಯಣದೊಂದಿಗೆ ತಗುಳ್ಚಿ ಹೇಳಿದ ಕಾವ್ಯ ವಾಗಿರದೆ ಶುದ್ಧ ಚಾರಿತ್ರಿಕ ಕಾವ್ಯವಾಗಿರುವ ಸಂಭವವಿದೆ.

ಶಂಕರಗಂಡ ಹಾಗೂ ಪೊನ್ನರು ಜೈನರಾಗಿರುವುದರಿಂದ ಈ ರೀತಿಯ (ಅದು ಶುದ್ಧ ಲೌಕಿಕವಿರಲಿ ಅಥವಾ ಪುರಾಣಪುರುಷನೊಬ್ಬನೊಡನೆ ಹೋಲಿಸಿ ರಚಿಸಿದ ಐತಿಹಾಸಿಕ ಧ್ವನಿಯುಳ್ಳದ್ದಿರಲಿ) ಲೌಕಿಕ ಕಾವ್ಯವನ್ನು ಬರೆಯಲು ಶಕ್ಯವೇ? ಎಂಬುದೊಂದು ಪ್ರಶ್ನೆ. ಈ ಬಗೆಯ ಉದಾಹರಣೆಗಳು ಅಪರೂಪ. ಆದರೆ ಗಂಗರಾಜನಾದ ಎರೆಯಪ್ಪನು ಜೈನನು; ಆತನನ್ನು ಕುರಿತು ಜೈನನೆಂದು ಗ್ರಹಿಕೆಯಿರುವ ೧ನೆಯ ಗುಣವರ್ಮನು "ಶೂದ್ರಕ"ವೆಂಬ ಲೌಕಿಕ ಕಾವ್ಯ ವನ್ನೆ ಬರೆದಿರುವನಲ್ಲ? ಪರಾಕ್ರಮಿಗಳಾದ ಅರಸರು ಯಾವ ಮತದವರೆ ಇರಲಿ; ಅವರಲ್ಲಿ ಮಾನವಸಹಜವಾದ ಕೀರ್ತಿಕಾಮನೆಯು ಇರತಕ್ಕುದೆ.

ಆದಕ್ಕಾಗಿ ಶಂಕರಗಂಡನು ಜೈನನಾದರೂ ಲೌಕಿಕವಾದ ಭುವನೈಕರಾಮಾಭ್ಯುದಯುವನ್ನು ಬರೆಸಿರಬಹುದು.

ಒಟ್ಟಿನ ಮೇಲೆ ಪೂರ್ವನೇ ಹೇಳಿದಂತೆ ಭುವನೈಕರಾಮಾಭ್ಯುದಯುವು ಲೌಕಿಕ ಕಾವ್ಯವೆಂಬುದು ನಿಜ. ಬೆಟಗೇರಿಯು ಶಾಸನ, ಕಾವ್ಯಾವಲೋಕನದ ೬೮ನೆಯು ಪದ್ಯ ಸೂಚಿಸುವ "ಜಯುಧೀರ" ಎಂಬ ಬಿರುದು, ದರ್ಪಣದ ೧೬೭ನೆಯು ಸೂತ್ರದ ಉದಾಹರಣೆಯುಲ್ಲಿ "ಕಬ್ಬಿ(ಕಚ್ಚೆ)ಗ" ಎಂಬ ಹೆಸರು, ಬೆಟಗೇರಿಯು ಶಾಸನ ಹಾಗೂ ಕಾವ್ಯಾವಲೋಕನದ ೬೨೦ನೆಯು ಪದ್ಯಗಳಲ್ಲಿಯು ರಟ್ಟರಮೇರು, ಮತ್ತು ಬೆಟಗೇರಿಯು ಶಾಸನದಲ್ಲಿ ಬರುವ ಭುವನೈಕರಾಮನೆಂಬ ಬಿರುದು ಇವೆಲ್ಲ ಸಂಗತಿಗಳು ಕಾವ್ಯನಾಯುಕನು ಶಂಕರಗಂಡನಾಗಿರಬೇಕೆಂಬ ಊಹೆಗೆ ಬಲವಾದ ಆಧಾರಗಳಾಗುತ್ತವೆ. ಮೂರನೆಯು ಕೃಷ್ಣನು ನಾಯುಕನಾಗಿರಬೇಕೆಂಬ ಮಾತಿಗೆ ಪುಷ್ಪದಂತನ ಹೇಳಿಕೆಯುನ್ನು ಬಿಟ್ಟರೆ ಬೇರೆ ಆಧಾರಗಳಿಲ್ಲ. ಈಗಾಗಲೆ ನೋಡಿದಂತೆ ಚೋಳರಾಜಾದಿತ್ಯನ ಶಿರವನ್ನು ಕತ್ತರಿಸಿದವನು ರಾಷ್ಟ್ರಕೂಟ ೩ನೆಯು ಕೃಷ್ಣನೆಂದು ಹೇಳಿದ್ದು ಆಸ್ಥಾನ ಕವಿ (ಪುಷ್ಪದಂತ) ಮಾಡಿದ ಅತಿಸ್ತುತಿಯೆಂದು ಆತಕೂರ ಶಾಸನದಿಂದ ಗೊತ್ತಾಗುತ್ತದೆ. ಆದಕ್ಕಾಗಿ ಭುವನೈಕರಾಮಾಭ್ಯುದಯುದ ಕಥಾನಾಯುಕ ಶಂಕರಗಂಡನೆಂದು ಭಾವಿಸುವುದು ಸತ್ಯಕ್ಕೆ ಹೆಚ್ಚು ಸಮೀಪವಾಗಿದೆ.

★ ಎಂ. ಬಿ. ಭೋಯಿ

ಶೂನ್ಯಸಂಪಾದನೆಯಲ್ಲಿ 'ನಿಶ್ಶಬ್ದ' ವಿಚಾರ

ಶೂನ್ಯಸಂಪಾದನೆಯೆಂಬುದು 'ಅನುಭಾವ' ಚರ್ಚೆಯ ಉದ್ಗ್ರಂಥವಾಗಿರುತ್ತದೆ. 'ಅನುಭಾವ' ಚರ್ಚೆ(ಶೂನ್ಯ : ಅನುಭಾವ ; ಸಂಪಾದನೆ : ಚರ್ಚೆ)ಯಲ್ಲಿ ಭಾಗವಹಿಸಿದವರು ಅಲ್ಲಮಪ್ರಭು, ಮುಕ್ತಾಯಕ್ಕ, ಸಿದ್ಧರಾಮ, ಚೆನ್ನಬಸವಣ್ಣ, ಬಸವಣ್ಣ, ಮಹಾದೇವಿಯಕ್ಕ ಮುಂತಾದ ಶಿವಶರಣಶರಣೆಯರು. ಅನುಭಾವ ವಚನಗಳು ಬ್ರಹ್ಮಸೂತ್ರಗಳಾಗಿರುತ್ತವೆ. 'ಅನುಭವ'ವೆಂದರೆ ಅಂತರಂಗದ ರತ್ನ (ಬ್ರಹ್ಮ).[೧] ಅನುಭವದ ವಚನಗಳು ಬ್ರಹ್ಮವಾಗುವ ಅನೇಕ ವಿಧಾನಗಳನ್ನು ಚರ್ಚಿಸಿ ಅನುಭಾವದ ವಿವಿಧ ಮುಖಗಳನ್ನು ತೋರಿಸುತ್ತವೆ. ಇದನ್ನು ಈ ಗ್ರಂಥದಲ್ಲಿ ನೋಡುತ್ತೇವೆ.

ಅನುಭಾವ ವಚನಗಳು ಅನುಭಾವಿಗಳ ಮಾತುಗಳು. ಅವರ ಅಭಿಪ್ರಾಯದಲ್ಲಿ 'ಮಾತು' ಅಥವಾ 'ಶಬ್ದವು' 'ಜ್ಯೋತಿರ್ಲಿಂಗ'.[೨] ಶಬ್ದವು, ಕಾರಣ, ಪರಮಸತ್ಯವಿರುವಂತೆ ಪರಮಾರ್ಥಸೋಪಾನವೂ[೩] ಆಗಿರುವದೆಂಬ ವಿಚಾರವು ಅವರು ಸ್ವೀಕರಿಸಿರುವ ಸಿದ್ಧಾಂತವನ್ನು ಪ್ರತಿಬಿಂಬಿಸುತ್ತದೆ. ಹನ್ನೆರಡನೆಯ ಶತಮಾನದ ಶಿವಶರಣಶರಣೆಯರು 'ಶಬ್ದ'ದ ವಿವಿಧಾರ್ಥಗಳನ್ನು ಕುರಿತು ಚರ್ಚೆಯನ್ನು ಮಾಡಿದರು. ಶಬ್ದಗಳು ತತ್ತ್ವಜಿಜ್ಞಾಸುಗಳಿಗೆ ಬಹುಪ್ರಾಣಪ್ರಾಯವಾದ ವಿಷಯ. ತತ್ತ್ವಜ್ಞಾನಿಗಳು ಯಾವುದೇ ದರ್ಶನಪರಂಪರೆಗೆ ಸೇರಿರಬಹುದು ; ಕಾಲದೇಶಗಳಲ್ಲಿರಬಹುದು ; ಯಾವುದೇ ಭಾಷೆಯವರಾಗಿರಬಹುದು. ಶಬ್ದವನ್ನು ಕುರಿತು ವಿಚಾರಮಾಡುವುದು ಅವರೆಲ್ಲರಿಗೂ ಆಸಕ್ತಿಯ ಸಾಮಾನ್ಯ ವಿಷಯವಾಗಿರುತ್ತದೆ. ಈ ಸಂಗತಿಯು ತತ್ತ್ವಶಾಸ್ತ್ರ ಚರಿತೆಯನ್ನು ನೋಡುವುದರಿಂದ ತಿಳಿದುಬರುತ್ತದೆ. "In all ages, philosophers have in fact been greatly concerned about words, whatever their official definition of philosophy might be."[೪]

ಶೂನ್ಯಸಂಪಾದನೆಯಲ್ಲಿ ಅನೇಕ ಶಬ್ದಗಳ ಚರ್ಚೆಯನ್ನು ನೋಡುತ್ತೇವೆ. ಅವುಗಳಲ್ಲಿ 'ನಿಶ್ಶಬ್ದ'ವು ಒಂದು. ಅನುಭಾವಿಗಳು 'ನಿಶ್ಶಬ್ದ' ಪದವನ್ನು ಭಿನ್ನ

---

೧. ಲಿಂಗಲೀಲಾವಿಲಾಸಚಾರಿತ್ರ, (ಸಂ. ಪ್ರೊ. ಎಸ್. ಎಸ್. ಭೂಸನೂರಮಠ, ಮುರುಘಾಮಠ, ಧಾರವಾಡ, ೧೯೫೬) ಪು. ೨೨೩, ಸ. ೪, ಪ. ೩೭೭. ನ. ೧೬.

೨. ಶೂನ್ಯಸಂಪಾದನೆ (ಸಂ. ಪ್ರೊ. ಎಸ್. ಎಸ್. ಭೂಸನೂರಮಠ, ಆದವಾನಿ ಕಲ್ಮಠ, ೧೯೫೮) II. 28.

೩. ಚೆನ್ನಬಸವಣ್ಣನವರ ವಚನಗಳು (ಸಂ. ಡಾ. ಆರ್. ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ) ಪ್ರಸಾದಿಸ್ಥಲ, ವ. ೬೮೭.

೪. Clarity Is Not Enough (Ed. H D. Lewis, Allen & Unwin, 1963) p. 20.

ಭಿನ್ನ ಸಂದರ್ಭಗಳಲ್ಲಿ ಉಪಯೋಗಿಸುವರು. ಕಾರಣ ಅದರ ಸರಿಯಾದ ಅರ್ಥ ಗ್ರಹಣವಾಗಬೇಕಾದುದು ಅತ್ಯವಶ್ಯವೆಂದು ಮನವರಿಕೆಯಾಗದಿರದು. ಆದ್ದರಿಂದ ಅದರ ಗ್ರಹಣಕ್ಕಾಗಿ ಒಂದು ಪ್ರಯತ್ನದ ಆವಶ್ಯಕತೆಯು ಕಂಡುಬಂದಿದ್ದು ಆ ಆವಶ್ಯಕತೆಯನ್ನು ಈ ಸಂಶೋಧನಾತ್ಮಕ ಲೇಖನವು ಪೂರೈಸುವುದು.

'ನಿಶ್ಶಬ್ದ'ವೆಂದರೆ 'ಜ್ಞಾನಶೂನ್ಯಾವಸ್ಥೆ.' ಅದೇ ಪರಬ್ರಹ್ಮವು. ಷಟ್‌ಸ್ಥಲ ದರ್ಶನದ ಆಕರಗ್ರಂಥಗಳಲ್ಲಿ ಇದನ್ನು ಉಲ್ಲೇಖಿಸಲಾಗಿರುತ್ತದೆ:[೫] ನಿಶ್ಶಬ್ದಂ ಬ್ರಹ್ಮ ಉಚ್ಯತೇ.[೬] ಸ್ಥಲಕಟ್ಟಿನ ಪರಿಭಾಷೆಯಲ್ಲಿ ಇದನ್ನು ನೂರೊಂದನೆಯ ಸ್ಥಲವೆಂದು ಹೇಳುತ್ತಾರೆ: 'ಏಕೋತ್ತರಶತಸ್ಥಲ.' ಇದು ಒಂದು ಗ್ರಂಥದ ಹೆಸರೂ ಆಹುದು. ನೂರೊಂದು ಸ್ಥಲಗಳ ವಿವರಣೆಯನ್ನು ನಾವು ಸಂಸ್ಕೃತದಲ್ಲಿ ನೋಡುತ್ತೇವೆ. ಸಿದ್ಧಾಂತಶಿಖಾಮಣಿ ಮತ್ತು ಕೈವಲ್ಯಸಾರಗಳು ಎರಡು ಉತ್ಕೃಷ್ಟವಾದ ಗ್ರಂಥಗಳು ಏಕೋತ್ತರಶತಸ್ಥಲವನ್ನು ಬೋಧಿಸುವವು. ಇಂಥ ಹೆಸರುಳ್ಳ ದಾರ್ಶನಿಕ ಗ್ರಂಥಗಳು ಆಸ್ತಿಕ ಹಾಗೂ ನಾಸ್ತಿಕ ಪರಂಪರಾ ದರ್ಶನಸಾಹಿತ್ಯದಲ್ಲಿ ಉಪಲಬ್ಧವಿರುವುದನ್ನು ನಾವು ನೋಡುತ್ತೇವೆ. 'ಶತಪಥ ಬ್ರಾಹ್ಮಣ'ವು ವೈದಿಕಸಾಹಿತ್ಯದಲ್ಲಿಯ ಅತಿ ಮಹತ್ವದ ತಾತ್ವಿಕಗ್ರಂಥವು.[೭] ಶತಪಥವೆಂದರೆ ನೂರು ದಾರಿ. ಬೌದ್ಧಸಾಹಿತ್ಯದಲ್ಲಿ 'ಅಂಗುತ್ತರ ನಿಕಾಯ' ಎಂಬುದು ದಾರ್ಶನಿಕಗ್ರಂಥವು. ಅಂಗುತ್ತರವೆಂದರೆ ಆಚೆಗಿನ ಒಂದು (one beyond) ಅಥವಾ ಏಕೋತ್ತರ. ಏಕೋತ್ತರಶತಸ್ಥಲವು ಕಾಮಿಕಾಗಮದಲ್ಲಿದೆ.[೮] ಕಾಮಿಕಾದಿ ವಾತುಲಾಂತಸಿದ್ಧಾಂತವೆಂಬ ಮಹಾತಂತ್ರದಲ್ಲಿ ಏಕೋತ್ತರಶತಸ್ಥಲವನ್ನು ಹೇಳಲಾಗಿರುತ್ತದೆ.[೯] ಇದರ ಮೇಲಿಂದ 'ಜ್ಞಾನ-

---

೫. ಸಿದ್ಧಾಂತಶಿಖಾಮಣಿ, ಜ್ಞಾನಶೂನ್ಯಸ್ಥಲ, ಸಂ. ಎಸ್. ಆರ್. ಕರಿಬಸವಶಾಸ್ತ್ರಿ, ಮೈಸೂರು, ೧೯೧೪.

೬. ಶೂನ್ಯಸಂಪಾದನೆ, III. 118, ನಾದಬಿಂದೂಪನಿಷದ್, ೪೮-೪೯.

೭. Buddha, p. 24, Dr. H. Oldenberg, the Book Company Ltd., Calcutta, 1927.

೮. ಶಿವದಾಸಗೀತಾಂಜಲಿ (ಸಂ. ಡಾ. ಎಲ್. ಬಸವರಾಜ, ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲಾ, ಮೈಸೂರು, ೧೯೬೩) ಪು. XVII,

೯. ಸಿದ್ಧಾಂತಶಿಖಾಮಣಿ, V. 14. ಏಕೋತ್ತರಶತಸ್ಥಲದ ಉಲ್ಲೇಖವು ಹನ್ನೆರಡನೆಯ ಶತಮಾನದಲ್ಲಿಯ ಶಿವಶರಣ-ಶರಣೆಯರ ವಚನಗಳಲ್ಲಿ ಹೇರಳವಾಗಿರುವುದನ್ನು ನಾವು ನೋಡುತ್ತೇವೆ. ಉದಾಹರಣೆಗೆ ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯಮ್ಮನವರ ವಚನಗಳು, (ಸಂ. ಚೆನ್ನಪ್ಪ ಉತ್ತಂಗಿ, ಮತ್ತು ಸಂ. ಶಿ. ಭೂಸನೂರಮಠ) ಪು. ೫೮, ವ. ೧೯೩ ನ್ನು ನೋಡಬಹುದು. ಇದು ನೂರೊಂದು ಸ್ಥಲದ ಪುರಾತನತೆಯನ್ನು ತೋರಿಸುತ್ತದೆ.

ಶೂನ್ಯ' ಬೋಧಮಂತ್ರಗಳು ಆಗಮಮೂಲವೆಂದಂತಾಯಿತು. ವಚನಾಗಮಗಳೂ ಜ್ಞಾನಶೂನ್ಯವನ್ನು ಬೋಧಿಸುವುದರಿಂದ ವಚನಶಾಸ್ತ್ರವು ಕನ್ನಡದಲ್ಲಿ ಆಕರಸಾಹಿತ್ಯವಾಗಿರುವುದು. ಆದ್ದರಿಂದ ಜ್ಞಾನಶೂನ್ಯಸ್ಥಲವನ್ನು ತಿಳಿಸುವ ಮೂಲಸಾಹಿತ್ಯವು ಸಂಸ್ಕೃತ ಹಾಗೂ ಕನ್ನಡ. ಸಂಸ್ಕೃತದಲ್ಲಿ ಸಿದ್ಧಾಂತಶಿಖಾಮಣಿಯು ಆಗಮಗಳ ಸಾರೋದ್ಧಾರವಾಗಿದ್ದು ಜ್ಞಾನಶೂನ್ಯ ಬೋಧಿಸುವ ಉದ್ಗ್ರಂಥವಾಗಿರುವಂತೆ ಶೂನ್ಯಸಂಪಾದನೆಯು ವಚನಶಾಸ್ತ್ರದ ಸಾರೋದ್ಧಾರವಾಗಿರುವುದು. ಶಾಸ್ತ್ರಸಾಹಿತ್ಯ ಸಾರೋದ್ಧಾರ ಪದ್ಧತಿಯು ಬಹುಪುರಾತನವಾದುದು. ಗೀತೆಯು ಇದಕ್ಕೆ ಒಂದು ಉತ್ತಮ ನಿದರ್ಶನವಾಗಿರುತ್ತದೆ. ಅದು ಉಪನಿಷತ್ತುಗಳ ಸಾರೋದ್ಧಾರವೆಂಬುದನ್ನು ಅದರ ಕರ್ತೃವೇ ಹೇಳುವನು.

'ನಿಶ್ಶಬ್ದ' (ಜ್ಞಾನಶೂನ್ಯ) ಪದವು ತತ್ತ್ವಶಾಸ್ತ್ರದಲ್ಲಿ ಬಹುದೂರಗಾಮೀ ದಾರ್ಶನಿಕ ಪ್ರತಿಕ್ರಿಯಾಪದ ಶಬ್ದವಾಗಿರುವುದು. ನಿಶ್ಶಬ್ದವು ನ್ಯಾಯವೈಶೇಷಿಕರು ಹೇಳುವ ಆತ್ಮಲಕ್ಷಣವನ್ನು ತಿಳಿಸುವಂತೆ ಅದ್ವೈತಿಗಳ ನಿರ್ಗುಣವಾದವನ್ನು ಮತ್ತು ಸಾಂಖ್ಯರ ನಿಷ್ಕ್ರಿಯಾವಾದವನ್ನು ನಿವೇದಿಸುವುದು. ಇದು ವಸ್ತುಲಕ್ಷಣವನ್ನು ಕುರಿತಿದ್ದರೆ ಜ್ಞಾನಸಿದ್ಧಾಂತವನ್ನು ಕುರಿತು ಇದು ಜ್ಞಾನವೆಂಬುದು ಅಸಾಧ್ಯವೆಂದು ತಿಳಿಸುತ್ತದೆ. ಇದೇ ನಿರ್ಬೋಧತಾವಾದವು (Agnosticism). ಹೀಗೆ ವಸ್ತುನಿಷ್ಠಾವಾದ, ಜ್ಞಾನನಿಷ್ಠಾವಾದ ಪ್ರಣಾಲಿದ್ವಯಗಳಲ್ಲಿ ಗಂಭೀರವಾದ ತಾತ್ವಿಕ ಪ್ರತಿಕ್ರಿಯೆಗಳಿಗೆ ಇದು ಪ್ರಚೋದನೆಯನ್ನು ಈಯುತ್ತದೆ.

ಶೂನ್ಯಸಂಪಾದನೆಯಲ್ಲಿ 'ನಿಶ್ಶಬ್ದ'ದ ವಿಚಾರವು ಮುಖ್ಯವಾಗಿ ಮೂರು ತತ್ತ್ವಗಳನ್ನು ಕುರಿತು ಇರುತ್ತದೆ: ೧. ಅನುಭಾವವಾದ[೧೦], ೨. ಪರಬ್ರಹ್ಮ[೧೧], ೩. ಆಚಾರ[೧೨]. ಬೌದ್ಧದರ್ಶನದಲ್ಲಿ ಕೂಡ ನಿಶ್ಶಬ್ದದ ವಿಚಾರವು ಬರುತ್ತದೆ. ಗೌತಮ ಬುದ್ಧನೂ ಸಹ ತತ್ತ್ವತ್ರಯವನ್ನು ಕುರಿತು ನಿಶ್ಶಬ್ದವಾಗಿರಬೇಕೆಂದು ಬೋಧಿಸುವನು: ೧. ವಿಶ್ವದ ಆದಿ ಮತ್ತು ಅಂತ್ಯವನ್ನು ಕುರಿತು. ೨. ಆತ್ಮದ ಅಮೃತತ್ವವನ್ನು ಕುರಿತು. ೩. ನಿರ್ವಾಣವನ್ನು ಕುರಿತು.[೧೩] ವೈದಿಕಸಾಹಿತ್ಯವು ಬುದ್ಧನ ಕಾಲಕ್ಕಿಂತ ಪೂರ್ವದಲ್ಲಿಯೇ ಇದನ್ನು ಪ್ರತಿಪಾದಿಸಿರುತ್ತದೆ. ಉಪನಿಷತ್ತು ಆತ್ಮನ ವಿಚಾರದಲ್ಲಿ ನಿಶ್ಶಬ್ದ

---

೧೦. ಶೂನ್ಯಸಂಪಾದನೆ, II. 39.

೧೧. ಅದೇ, III. 118.

೧೨. ಅದೇ, XXI. 63, VIII. 38

೧೩. The Central Concept of Buddhism, ch. Silence of Buddha.

ವಾಗಿರೆಂದು ತಿಳಿಸುತ್ತದೆ.[೧೪] ಇದಕ್ಕೂ ಪೂರ್ವದಲ್ಲಿ ಋಗ್ವೇದವು ಕವಿಯ ಅನ್ವೇಷಣೆಗೆ ಮೂಲವಸ್ತುವು ಅಸಾಧ್ಯವೆಂದು ಹೇಳುತ್ತದೆ.[೧೫] ಶತಪಥ ಬ್ರಾಹ್ಮಣವು ಕರ್ಮದ ವಿಚಾರವನ್ನು ಹೇಳಬಾರದೆಂದು ಆದೇಶವೀಯುತ್ತದೆ.[೧೬] 'ನಿಶ್ಯಬ್ದ'(ಅನಿರ್ವಚನೀಯತೆ ಅಥವಾ ಮೌನ)ವು ಪರಬ್ರಹ್ಮದ ವಿಚಾರದಲ್ಲಿಯೇ ಇರಲಿ, ಅನುಭಾವದ ವಿಚಾರದಲ್ಲಿಯೇ ಇರಲಿ, ಆಚಾರದ ವಿಚಾರದಲ್ಲಿಯೇ ಇರಲಿ ನಿರ್ಬೋಧತ್ವ (Agnosticism) ವನ್ನು ಸೂಚಿಸುವುದು ; ಇಲ್ಲವೆ ಅವುಗಳನ್ನು ಕುರಿತು ತಾತ್ವಿಕವಿವರಣೆಯನ್ನು ಕೊಡಹೋದರೆ ಅದು ಪರಿಪೂರ್ಣವಾಗಲಾರ ದೆಂದು ಸೂಚಿಸುವುದು ; ಅಥವಾ ಬೋಧವಾದುದು ಅಭಿವ್ಯಕ್ತಗೊಳಿಸಲಸದಳ ವಾಗಿರುವಷ್ಟು ಇರುವದೆಂಬುದನ್ನು ತಿಳಿಸುವುದು. ಹೀಗೆ 'ನಿಶ್ಯಬ್ದ'ಕ್ಕೆ ಮೂದೆರನಾದ ವಿವರಣೆಯನ್ನು ಕೊಡಲು ಸಾಧ್ಯವಿರುತ್ತದೆ. ಬೌದ್ಧದರ್ಶನದಲ್ಲಿ ಬರುವ ನಿಶ್ಯಬ್ದ(ಮೌನ) ಪದಕ್ಕೆ ಮೂದೆರನಾದ ವಿವರಣೆಯನ್ನು ಕೊಟ್ಟಿರು ವುದು ಬೌದ್ಧದರ್ಶನ ವಿದ್ಯಾರ್ಥಿಗಳಿಗೆ ಹೊಸದೇನಲ್ಲ.

ಷಟ್‌ಸ್ಥಲದರ್ಶನದಲ್ಲಿ 'ನಿಶ್ಯಬ್ದ' ಪದದ ಬಳಕೆಯು ಎರಡು ಸಂಗತಿ ವಿಶೇಷದ ಕಡೆಗೆ ಲಕ್ಷ್ಯವನ್ನು ಸೆಳೆಯುತ್ತದೆ. ೧. ನಿಶ್ಯಬ್ದವೆಂಬುದು ತಾನು ಮತ್ತು ಇದಿರು; ೨. ವಸ್ತು ಮತ್ತು ಸ್ವಭಾವ. ತಾನು ನಿಶ್ಯಬ್ದವಾಗಿರ ಬೇಕೆಂದಾಗ ಜ್ಞಾನಸಿದ್ಧಾಂತಕ್ಕೆ ಸಂಬಂಧವಾಗಿರುವುದನ್ನು ಸೂಚಿಸುವುದು. ಆಗ ಯಾವುದು ಜ್ಞಾನಗಮ್ಯವೆಂದು ತಿಳಿದಿದ್ದೆವೋ ಆದು ಜ್ಞಾನಾತೀತವೆಂದು ಕಂಡುಬರುತ್ತದೆ. ಆಧುನಿಕ ಮನೋವಿಜ್ಞಾನವು ಈ ಮಾತನ್ನು ಎತ್ತಿತೋರಿ ಸುತ್ತದೆ.[೧೭] ಜ್ಞಾನಾತೀತವಾದ ವಸುವಿನ ಬಗ್ಗೆ ನಮಗೆ ಜ್ಞಾನವಿರುವ ದಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಇದೇ ಮಾತು ಜ್ಞಾನವೆಂಬುದು ಅಸಾಧ್ಯ ವೆಂದು ಹೇಳಲಾದುದರ ಅರ್ಥವನ್ನು ತಿಳಿಸುತ್ತದೆ. ಇದು ನಿರ್ಬೋಧತ್ವ. ಈ ನಿರ್ಬೋಧತ್ವವು ದ್ವಿವಿಧದಲ್ಲಿ ಪರಿಣಮಿಸುವುದನ್ನು ನಾವು ನೋಡಬಹುದು : ೧. ಇದಿರು ಎಂಬುದು ತಿಳುವಳಿಕೆಗೆ ಇಲ್ಲ; ೨. ಅರಿದೆನೆಂಬುದೆಲ್ಲವೂ ಮನೋ ವಿಕಾರ.[೧೮] ಇನ್ನು "ಇದಿರು", "ತಾನು" ಮತ್ತು "ತಾನು" ಹಾಗೂ

---

೧೪. ಕೇನೋಪನಿಷದ್, I. 3 ; ಕಠೋಪನಿಷದ್, VI. 12-13, ಮುಂಡಕ, III. 1-18.

೧೫. ಋಗ್ವೇದ, X. 129.

೧೬. Buddha, P. 48.

೧೭. The Meaning of Psychology, p. 173, Dr. C. K. Ogden Happer and Brothers, 1926.

೧೮. ಶೂನ್ಯಸಂಪಾದನೆ.

" ಇದಿರು " ನಿಶ್ಶಬ್ದವೆಂದಾಗ ಬೇರೊಂದು ತಿಳಿದುಬರುತ್ತದೆ. ನಿಶ್ಶಬ್ದವು ಬ್ರಹ್ಮ ಭಾವವಾದಾಗ ಸತ್ತಾ ಜ್ಞಾನಶೂನ್ಯವು. " ಜ್ಞಾನಶೂನ್ಯಸತ್ತಾ " ಎಂದಾಗ ಸದ್ವಸ್ತುವಿಗೆ ಇದಿರೆಂಬುದೊಂದಿಲ್ಲವೆಂದು ಅರ್ಥವಾಗುತ್ತದೆ. ಅಥವಾ ವಿವಿಧ ವೆಂಬುದು ಚಿದಾಭಾಸವಾಗಿರುತ್ತದೆ. ಇದಿರೆಂಬುದು ಸದ್ವಸ್ತುವಾಗಿದೆ ಎಂದರೆ ಚಿತ್ ಸಂಬಂಧವನ್ನು ಸೂಚಿಸುತ್ತದೆ. ಈ ಮಾತನ್ನು ಕಾಶ್ಮೀರ ಶೈವವು ಪ್ರತಿಪಾದಿಸುವಂತೆ ಬಾರ್ಕಲಿಯೂ ಹೇಳುತ್ತಾನೆ. ಎಲ್ಲ ಚಿದದ್ವೈತಗಳೂ ಇದೇ ಮಾತನ್ನು ಪ್ರತಿಪಾದಿಸುವವು. 'ಜ್ಞಾನಶೂನ್ಯಸತ್ತಾ' ಎಂಬುದನ್ನು ಬೇರೊಂದು ರೀತಿಯಲ್ಲಿ ಅರ್ಥೈಸಿದಾಗ ಸತ್ತಾ ಎಂಬುದು ಜ್ಞಾನಾಭಾವ ವುಳ್ಳದೆಂದಾಗುವುದು. ಜ್ಞಾನಾಭಾವಸತ್ತಾ ಎಂಬುದನ್ನು ದ್ವಿವಿಧವಾಗಿ ವಿವರಿಸಬಹುದು. ಜ್ಞಾನಾಭಾವವನ್ನು ಆರೋಪಿಸಿದಾಗ ಸದ್ವಸ್ತುವು ಜಡ ವಾಗಿಬಿಡುವುದು. ಇದರ ಪರಿಣಾಮದಿಂದ ಚಿತ್ಕ್ರಿಯೆಗಳೆಲ್ಲ ಕುರುಡಶಕ್ತಿಯ ಕ್ರಿಯೆಗಳಾಗಿಬಿಡುತ್ತವೆ ಅಥವಾ ಯಾಂತ್ರಿಕಕ್ರಿಯೆಗಳಾಗುತ್ತವೆ. ಇಲ್ಲವೆ ಮನೋವೃತ್ತಿಗಳೆಲ್ಲ ರಾಸಾಯನಿಕಕ್ರಿಯೆಗಳೆಂದು ಒಪ್ಪಿಕೊಂಡಂತಾಗುತ್ತದೆ. ಇದರಿಂದ ಆದರ್ಶವು ವಿಚಾರಹೀನವಾದ ಮಾತು ಆಗಿಬಿಡುವುದು : ಮೋಕ್ಷ, ಧರ್ಮ, ನೀತಿಗಳೆಲ್ಲ ಬೇರೊಂದರ್ಥಕ್ಕೆ ಅವಕಾಶಕೊಡುವವು. ಜ್ಞಾನಶೂನ್ಯವನ್ನು ಇನ್ನೊಂದು ಅರ್ಥದಲ್ಲಿ ವಿವರಿಸಿದಾಗ ನಿತ್ಯಜೀವನದಲ್ಲಿ ದೊರೆವ ಜ್ಞಾನವು ವೃತ್ತಿಜ್ಞಾನವು. ಅದು ಪ್ರತೀತಿ (commonsense view). ಇದು ಅಜ್ಞಾನ ವೆಂದು ಶಂಕಾವಾದಿಯು (skeptic) ನಿವೇದಿಸುವನು. ಇದು ಜ್ಞಾನಶೂನ್ಯತೆ. ಶಂಕಾವಾದಿಯು ಪ್ರತೀತಿಯನ್ನು ನಿರಾಕರಿಸಿ ತಾನು ಸಿದ್ಧಮಾಡಹೊರಟ ಜ್ಞಾನವು ಪ್ರತೀತಿಯಿಂದ ಭಿನ್ನವಾದುದೆಂದು ಪ್ರತಿಪಾದಿಸಿ ಪ್ರತೀತಿಯು ಅಜ್ಞಾನ ವೆಂದು ತೋರಿಸಿಕೊಡುವನು. ಶಂಕಾವಾದಿಯ ನಿಲವು ಹೀಗೆ ಇರುತ್ತದೆ : ಬಿಳಿಯ ಬಣ್ಣವು ಅನೇಕ ಬಣ್ಣಗಳ ಮಿಶ್ರಣವಿರುವುದು ಪ್ರತೀತಿಯ ವಾದವಲ್ಲ; ಅದು ಗೊತ್ತೂ ಇರುವುದಿಲ್ಲ. ಶಂಕಾವಾದಿಯು ಪ್ರತೀತಿಯಲ್ಲಿರುವ ಅಜ್ಞಾನ ವನ್ನು ಬಯಲಿಗೆಳೆದು ತನ್ನ ನಿಲವನ್ನು ಸ್ಥಾಪಿಸುವನು. ಅಂದರೆ ಬಿಳಿಯ ಬಣ್ಣವು ಏಳು ಬಣ್ಣಗಳ ಮಿಶ್ರಣವೆಂದು. ಇದು ವೈಜ್ಞಾನಿಕಜ್ಞಾನವೆಂದು ಶಂಕಾ ವಾದಿಯ ಅಭಿಪ್ರಾಯವಾಗಿರುವುದು ಕಂಡುಬರುತ್ತದೆ. ಆದರೆ ಶಂಕಾವಾದಿಯು ವಿಜ್ಞಾನವನ್ನೂ ಪ್ರಶ್ನಿಸುವನು. ಅದನ್ನು ಕೂಡ ಅವನು ನಿರಾಕರಿಸುವನು. ಅಂದರೆ ವಿಜ್ಞಾನ ಪ್ರತಿಪಾದಿಸುವುದು ಜ್ಞಾನಶೂನ್ಯ. ತಾನು ಸಿದ್ಧಮಾಡಹೊರಟ ಜ್ಞಾನವು ವಿಜ್ಞಾನಿಗೆ ಗೊತ್ತಿಲ್ಲವೆಂದು ಶಂಕಾವಾದಿಯ ವಾದವು. ಅದನ್ನು ಅವನು ಸುಜ್ಞಾನವೆಂದು ಹೇಳುವನು. ಹೀಗೆ ಪ್ರತೀತಿಯ ಜ್ಞಾನ, ವೈಜ್ಞಾನಿಕ ಜ್ಞಾನಗಳನ್ನು ನಿರಾಕರಿಸಿ ಸುಜ್ಞಾನವನ್ನು ಅಂದರೆ ಆತ್ಮಜ್ಞಾನವನ್ನು ಪ್ರತಿಪಾದಿಸಿ ದ್ದನ್ನೂ ಶಂಕಾವಾದಿಯು ನಿರಾಕರಿಸುವನು. ಸುಜ್ಞಾನ (metaphysical

knowledge)ವು ಕೂಡ ಜ್ಞಾನಶೂನ್ಯವೆಂಬ ವಾದವನ್ನು ಮಂಡಿಸುವನು. ಶಂಕಾವಾದಿ ಅಲ್ಲಮಪ್ರಭುವು ತನ್ನ ತಾನಱಿದೆನೆಂಬುದು ಮಱವೆಯೆಂದು[೧೯] ತನ್ನ ಶಂಕಾವಾದವನ್ನು ಪ್ರತಿಷ್ಠಾಪಿಸಿ ಜ್ಞಾನವು ಶೂನ್ಯವನ್ನು ಬೋಧಿಸುವುದೆಂದು ಹೇಳುವನು. ಹೀಗೆಂದರೆ ಇದೇನು ನಿರ್ಬೋಧತ್ವವೇನು ಎಂಬ ಪ್ರಶ್ನೆಯನ್ನು ಅಲ್ಲಮಪ್ರಭು ಶಂಕಾವಾದಿಯು ಒಪ್ಪುವುದಿಲ್ಲ. ಅತ್ಯಾತ್ಮ ಜ್ಞಾನ(transcendental metaphysical knowledge)ವನ್ನು ಬೋಧಿಸುತ್ತಿದ್ದಾನೆ. ಇದು ನಿಶ್ಯಬ್ದ. ಆದುದರಿಂದ ಶೂನ್ಯಸಂಪಾದನೆ ನಿಶ್ಯಬ್ದ.

★ ವ್ಹಿ. ಎಸ್. ಕಂಬಿ

---

೧೯. ಶೂನ್ಯಸಂಪಾದನೆ.

ನಾನಾರು ?

ನಾನಾರು ?
ನಿಮಗೆ ಗೊತ್ತಿಲ್ಲ ಬಿಡಿ.
ಯಾರಿಗೂ ಗೊತ್ತಿಲ್ಲ ನಾನಾರು.
ನನಗಿಲ್ಲ ಊರುಗೀರು
ನನ್ನದೆನ್ನುವ ಮನೆಮಾರು.
ತಂದೆತಾಯಿ ಬಂಧುಬಳಗ
ಗಂಡಹೆಂಡತಿ ನನಗಾರೂ ಇಲ್ಲ.
ಹೀಗೆಂದೊಡನೆ—
ನಾನು ಪರದೇಶಿ ದಿಕ್ಕೇಡಿ ಎಂದು
ತಿಳಿಯಬೇಡಿ.
ನಾನಲ್ಲ ಖೋಡಿ, ಹೇಡಿ ಅಡ್ನಾಡಿ.
(ಅನ್ನುವವರಿಗೇನು ಧಾಡಿ !)
ಸದಾ ಸದಾಚಾರಿ ಸುವಿಚಾರಿ.
ನಾನಲ್ಲ ವ್ಯಭಿಚಾರಿ.

ಹುಟ್ಟಿದವರಿಗೆಲ್ಲ ತಂದೆಯೇ ಇರಬೇಕೆಂದೇನು ನಿಯಮ?
ಕುಂತಿಗೆ ಗಂಡನಿದ್ದರೂ
ಪಾಂಡವರು ಹುಟ್ಟಿದ್ದು—
ತಂದೆಯಿಂದೇನಲ್ಲ !
(ಮಂದಿಯಿಂದಲೂ ಅಲ್ಲ)
ತಾಯಿಯೇ ಇಲ್ಲದೆ ಹುಟ್ಟಿದವಳು ಸೀತೆ
ಮತ್ತೆ ಅವಳೇ ಮಾತೆ;
ಜಗನ್ಮಾತೆ!
ಇನ್ನು ಹುಟ್ಟುವ ಕೂಸಿಗೇಕೆ ತಂದೆತಾಯಿ ಬೇಕು ?
(ಒಂದು ಟೆಸ್ಟ್ಯೂಬೇ ಸಾಕು !)
ಕರ್ಣಭೀಮಾರ್ಜುನಸೀತೆಯರಂತು ಹೆತ್ತುದೇ ನಾನು !
ನಾನು ತಾಯಿಯೇ ಅಲ್ಲ.
ತಂದೆಯೂ ನಾನಲ್ಲ.

ಕುಂತಿಯ ಗಂಡ ನಾನು
(ಮದುವೆಯ ಗಂಡನಲ್ಲ).
ನಾನು ಗಂಡುಸೇ ಅಲ್ಲ!
ಸೀತೆಯ ಮಾತೆ ನಾನು
ಜನಕನ ಹೆಂಡತಿಯಲ್ಲ!
ನಾನು ಹೆಂಗುಸೇ ಅಲ್ಲ,
ಹೆಣ್ಣು ಗಂಡು ಎರಡೂ ನಾನಲ್ಲ.
ಎರಡೂ ನಾನಲ್ಲದಿಲ್ಲ
ನಾನೇ ಎಲ್ಲ,
ಜಗದೇಕಮಲ್ಲ!

★ 'ಮಗು' ಬಿರಾದಾರ

ಚಾಳುಕ್ಯಚಕ್ರವರ್ತಿ ತ್ರೈಳೋಕ್ಯಮಲ್ಲದೇವನ ಕೊಕಟನೂರ ಶಾಸನ

ಕೊಕಟನೂರು ಗ್ರಾಮವು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಲ್ಲಿ ಅಥಣಿಯಿಂದ ಪೂರ್ವಕ್ಕೆ ಸುಮಾರು ೧೨ ಮೈಲು ಅಂತರದಲ್ಲಿ ಇದೆ. ಪ್ರಸ್ತುತ ಶಾಸನವು ಆ ಗ್ರಾಮದಲ್ಲಿ ಹೂಗಾರ ಓಣಿಯಲ್ಲಿ ಬೀದಿಯ ಪಕ್ಕಕ್ಕೆ ಬಿದ್ದಿರುತ್ತದೆ. ಶಾಸನವು ಮಳೆಬಿಸಿಲುಗಳಿಂದ ಮತ್ತು ಜನತೆಯ ಅಜ್ಞಾನದಿಂದ ಬಹಳವಾಗಿ ಕೆಟ್ಟುಹೋಗಿದೆ. ಅಲ್ಲಲ್ಲಿ ಕೆಲವು ಭಾಗಗಳು ಸವೆದು ಅಸ್ಪಷ್ಟವಾಗಿವೆ. ಅಲ್ಲಲ್ಲಿಗೆ ಗೆರೆಚುಕ್ಕೆಗಳು ಬಿದ್ದಿವೆ. ಆದುದರಿಂದ ಶಾಸನ ಓದುವುದು ಕಷ್ಟ ಸಾಧ್ಯವಾಗಿದೆ.

ಶಾಸನದ ಭಾಷೆ ಮತ್ತು ಲಿಪಿ ಕನ್ನಡ. ಆದರೆ ಮೊದಲಿನ ಮಂಗಲಪದ್ಯ ಮತ್ತು ಕಡೆಯ ಮೂರು ಫಲಶ್ರುತಿ ಪದ್ಯಗಳು ಸಂಸ್ಕೃತದಲ್ಲಿ ಇರುತ್ತವೆ. ಲಿಪಿಯು ಸುಂದರವಾಗಿದ್ದರೂ ಕಂಡರಿಸಿದವನು ಅಕ್ಷರಗಳನ್ನು ಎಲ್ಲ ಕಡೆಯೂ ಆಳವಾಗಿ ಕಂಡರಿಸಿಲ್ಲ. ಕೆಲವೆಡೆ ಅಕ್ಷರಗಳು ಸವೆದು ಹೋಗಲಿಕ್ಕೆ ಇದೂ ಒಂದು ಕಾರಣ.

ಶಾಸನದ ಸಾರಾಂಶ: ತ್ರೈಪುರುಷದೇವರ ಪ್ರಾರ್ಥನೆಯ ತರುವಾಯ ಶಾಸನವು ಚಾಳುಕ್ಯ ಚಕ್ರವರ್ತಿ **ತ್ರೈಳೋಕ್ಯಮಲ್ಲದೇವನ** ಪ್ರಸ್ತಾಪ ಮಾಡುತ್ತದೆ (ಸಾ. ೪–೬). ಆ ಮುಂದೆ ತ್ರೈಳೋಕ್ಯಮಲ್ಲದೇವನ ವಿಜಯಯಾತ್ರೆಗಳು ಮತ್ತು ಆತನು ಸೋಲಿಸಿದ ರಾಜಮನೆತನಗಳ ಹೆಸರು ಬರುತ್ತವೆ (ಸಾ. ೬-೯). ಇವು ಕೆಲಮಟ್ಟಿಗೆ ಸಾಂಪ್ರದಾಯಿಕವಾಗಿರುತ್ತವೆ. ಆದರೆ ಚೋಳ ಅರಸನ ಕೂಡ ದ್ವಂದ್ವಯುದ್ಧ ಮಾಡಿ ಅವನನ್ನು ಸೋಲಿಸಿದ ವರ್ಣನೆ ಹೊಸದು. ತರುವಾಯ ಚಕ್ರವರ್ತಿಯ ಪಾದಪದ್ಮೋಪಜೀವಿಯಾದ ಮಹಾಮಂಡಳೇಶ್ವರ **ಜೋಗಪಯ್ಯರಸನ** ಮತ್ತು ಆತನು ಕರಹಡನಾಲ್ಸಾಸಿರ ಮತ್ತು ಮಿರಿಂಜೆ ಮೂರುಸಾಸಿರಗಳನ್ನು ಆಳುತ್ತಿದ್ದ ಉಲ್ಲೇಖ ಬರುತ್ತದೆ (ಸಾ. ೯–೧೩). ಈ ಮಹಾಮಂಡಳೇಶ್ವರನ ವಂಶ ಯಾವುದೆಂಬುದು ಸ್ಪಷ್ಟವಿಲ್ಲ. ಅನೇಕ ಬಿರುದುಗಳೊಂದಿಗೆ 'ಮಾಣಿಕದೇವೀಲಬ್ಧ ವರಪ್ರಸಾದಂ' ಎಂಬ ಒಂದು ವಿಶಿಷ್ಟ ಬಿರುದು ಬರುತ್ತವೆ ಐದನೆ ಪದ್ಯದಲ್ಲಿ ಈ ಜೋಗಭೂಪನ ಶೌರ್ಯವರ್ಣನೆ, ತರುವಾಯ ಮುಂದೆ ರಡು ಪದ್ಯಗಳಲ್ಲಿ ಆತನ ಅರಸಿಯಾದ **ಪೊಲ್ಲಿಕಬ್ಬೆಯ** ಗುಣವರ್ಣನೆ ಬರುತ್ತವೆ (ಸಾ. ೧೩–೧೭). ಈ ದಂಪತಿಗಳು ಅರಸುಗೆಯ್ಯುತ್ತಿರುವ ಕಾಲದಲ್ಲಿ ಅಗ್ರಹಾರ ಕೊಗ್ಗಟನೂರಗ್ರಾಮದಲ್ಲಿ ವೈಶ್ಯಾಗ್ರಣಿ ಕೂಚಸೆಟ್ಟಿ ತ್ರೈಪುರುಷದೇವರ ದೇವಾಲಯವನ್ನು ಮಾಡಿಸಿದನೆಂದು ಮುಂದೆ ಹೇಳಿವೆ. ಆ ದೇವರಿಗೆ ಮಹಾ

ಮಂಡಳೇಶ್ವರ ಜೋಗಪಯ್ಯರಸರು ಮತ್ತು ಆತನ ಆರಸಿಯು **ಜನ್ನವಾಡ ಗ್ರಾಮವನ್ನು** ಶಕವರ್ಷ ೯೭೩ನೆಯ ವಿಕೃತಸಂವತ್ಸರದ ಪೌಷ್ಯ ಶುದ್ಧ ೮ ಸೋಮವಾರ ದಿನ ಉತ್ತರಾಯಣ ಸಂಕ್ರಾಂತಿಪರ್ವನಿಮಿತ್ತವಾಗಿ ಬಿಟ್ಟುಕೊಟ್ಟದ್ದು, ಆದಲ್ಲದೆ ತುಂಗುಳಪನ್ನೆರಡರ ಮಾನ್ಯಕಾರ ರೇವಗೌಡ ಮತ್ತು ಕನ್ನಗೌಡ ಇವರಿಗೆ ಹಣಕೊಟ್ಟು ಜನ್ನವಾಡಗ್ರಾಮದ ಮನ್ನೆ, ಎಂಟುಹಿಟ್ಟು ಮತ್ತು ದಶಬಂಧ ಇವುಗಳಿಗೆ ಸಲ್ಲತಕ್ಕ ಉತ್ಪನ್ನವನ್ನು ಕೂಚಸೆಟ್ಟಿ ಕ್ರಯಗೊಂಡು ಆ ದೇವರಿಗೆ ಬಿಟ್ಟದ್ದು ಈ ಸಂಗತಿಗಳು ಬಂದಿವೆ (ಸಾ. ೧೭–೨೩). ಆದೇ ಪ್ರಕಾರ ದೇವರಿಗೆ ಒಂದು ತೋಟ ಮತ್ತು ನಂದಾದೀವಿಗೆಗೆ ಎಣ್ಣೆ ಊರೊಡೆಯ ಪ್ರಮುಖ ಮಹಾಜನರು ಬಿಟ್ಟು, ದಿನಂಪ್ರತಿ ದೇವರಿಗೆ ದಂಡೆ, ಸರ, ಮಾಲೆ, ಪೂವು ಮುಂತಾದವುಗಳನ್ನು ಪೂರೈಸುವ ಸಲುವಾಗಿ ವ್ಯವಸ್ಥೆ ಮಾಡಿದ ಬಗ್ಗೆ ಹೇಳಲಾಗಿದೆ (ಸಾ. ೨೩–೨೬). ಅನಂತರ ದಾನಕೊಟ್ಟ ಜನ್ನವಾಡಗ್ರಾಮದ ಸೀಮೆಗಳ ವಿವರಗಳು ಬರುತ್ತವೆ (ಸಾ. ೨೭–೩೦). ಆದೇ ಕೂಚಸೆಟ್ಟಿ ತ್ರೈಪುರುಷದೇವರ ಶಾಲೆಯನ್ನು ಮಾಡಿಸಿ ಅಲ್ಲಿ ಓದುವ ವಿದ್ಯಾರ್ಥಿಗಳಿಗೆ ಮತ್ತು ಓದಿಸುವ ಉಪಾಧ್ಯಾಯರಿಗೆ ದಾನಕೊಟ್ಟದ್ದು ಹೇಳಿದೆ (ಸಾ. ೩೦–೩೧). ಶಾಲೆಯ ವರ್ಣನೆ ಒಂಬತ್ತನೆಯ ಪದ್ಯದಲ್ಲಿ ಬಂದಿದೆ (ಸಾ. ೩೧–೩೨). ಮುಂದೆ ಅಲ್ಲಿ ಬಂದು ವಾಸಿಸುತ್ತಿರುವ ಎಂಟು ಜನ ನಿವಿಷ್ಟರ ಸಲುವಾಗಿ ಮತ್ತು ಪೂಜಾರಿಯ ಸಲುವಾಗಿ ಭೂಮಿಯನ್ನು ದಾನಕೊಟ್ಟ ಸಂಗತಿ ಹೇಳಲಾಗಿದೆ (ಸಾ. ೩೫–೩೭). ಕವಿ ತನ್ನ ಹೆಸರು **ಜಿನವರ್ಮಪಂಡಿತ**ನೆಂದು ಹದಿನಾರನೆಯ ಪದ್ಯದಲ್ಲಿ ಹೇಳಿರುವನು. ವಿದ್ವಜ್ಜನಾಂಭೋಜಿನೀವನಹಂಸನೆಂದು ಬಿರುದಾಂಕಿತನಾಗಿದ್ದನು (ಸಾ. ೩೮–೪೦). ಕಡೆಯ ಐದು ಪದ್ಯಗಳು ಫಲಶ್ರುತಿಗೆ ಸಂಬಂಧಿಸಿದುವು.

ಚಕ್ರವರ್ತಿ **ತ್ರೈಳೋಕ್ಯಮಲ್ಲದೇವ** ಚಾಳುಕ್ಯ ರಾಜ್ಯವನ್ನು ಕ್ರಿ.ಶ. ೧೦೪೪ರಿಂದ ೧೦೬೮ರ ವರೆಗೆ ಆಳಿದನು. ಈತನ ಕಾಲದ ಅನೇಕ ಶಾಸನಗಳು ಸಿಗುತ್ತವೆ. ಮಹಾಮಂಡಳೇಶ್ವರ **ಜೋಗಪಯ್ಯರಸನ** ಹೆಸರು ಬೇರೆ ಯಾವ ಶಾಸನಗಳಲ್ಲಿ ನಿರ್ದಿಷ್ಟವಾದದ್ದು ಕಂಡುಬರುವದಿಲ್ಲ. ಈ ಶಾಸನದಲ್ಲಿ ಹೇಳಿದ ಪ್ರಕಾರ ಆತನು ಕರಹಡನಾಲ್ಕು ಸಾಸಿರ ಮತ್ತು ಮಿರಿಂಜೆಮೂರುಸಾಸಿರಗಳನ್ನು ಬೀಡಾನುವೃತ್ತಿಯಿಂದ ಆಳುತಿದ್ದನು. ಬೀಡಾನುವೃತ್ತಿಯ ಪ್ರಭುತ್ವ ವಂಶಪರಂಪರಾನುಗತ ಪ್ರಭುತ್ವವಾಗಿರದೆ ವ್ಯಕ್ತಿಗತ ಪ್ರಭುತ್ವವಿದ್ದಂತೆ ತೋರುತ್ತದೆ. ಉದಾಹರಣವಾಗಿ, ಭುವನೈಕಮಲ್ಲ ಸೋಮೇಶ್ವರನು ಬೆಳ್ವೊಲಮೂನೂರು ಮತ್ತು ಪುಲಿಗೆರೆಮೂನೂರು ಕ್ರಿ.ಶ. ೧೦೪೯ ತೇದಿಯಲ್ಲಿ ಬೀಳಾನುವೃತ್ತಿಯಿಂದ ಆಳುತ್ತಿದ್ದನೆಂದು ಹೊಂಬಳ[೧] ಶಾಸದನಲ್ಲಿ ಹೇಳಿದೆ. ಅಗ ಭುವನೈಕ

---

೧. S. I. I., XI, I, No. 84, p. 77, ll. 7-8.

ಮಲ್ಲನು ಇನ್ನೂ ರಾಜಕುಮಾರನಾಗಿದ್ದನು. ಅದೇ ಪ್ರಕಾರ ಅತ್ತಿಮಬ್ಬೆಯ ಮಗನಾದ ಪಡವಳ ತೈಲಪಯ್ಯನು ಮಾಸವಾಡಿ ನೂರನಾಲ್ವತ್ತನ್ನು ಬೀಳ-ವೃತ್ತಿಯಿಂದಾಳುತ್ತಿದ್ದನೆಂದು ಲಕ್ಕುಂಡಿ[೨] ಶಾಸನದಲ್ಲಿ ಹೇಳಿದೆ. ಭುವನೈಕ-ಮಲ್ಲನಾಗಲಿ ತೈಲಪಯ್ಯನಾಗಲಿ ಆ ನಾಡುಗಳನ್ನು ವಂಶಪರಂಪರಾನುಗತವಾಗಿ ಆಳುತ್ತಿರಲಿಲ್ಲವೆಂಬುದನ್ನು ನೆನೆದರೆ ನಮ್ಮ ಊಹೆಗೆ ಪುಷ್ಟಿ ಲಭಿಸುತ್ತದೆ.

ಶಾಸನದ ಐದನೆಯ ಸಾಲಿನಲ್ಲಿ '**ಮುಮುನಿಯಂ ಜಯಂಗೆಯ್ದು ಬಂದು**'ಯೆಂದು ಹೇಳಿದೆ. ಈ ಮುಮುನಿ ಶಾಣಿಯ ಶಿಲಾಹಾರ ಮನೆತನದ ಅರಸ ಈತನಿಗೆ ಶಾಸನಗಳಲ್ಲಿ 'ಮುಮ್ಮುಣಿ, ಮುಮ್ಮುರಿ ಮತ್ತು ಮಾಂಮಾಣಿ' ಯೆಂದೂ ಕರೆಯಲಾಗಿದೆ. ಈತನು ತನ್ನ ಮಗಳನ್ನು ಗೋವೆಯ ಕದಂಬ ಅರಸ ಚಟ್ಟಯ್ಯದೇವನಿಗೆ ಕೊಟ್ಟಿದ್ದನು.[೩] ಸೊರಬ ತಾಲೂಕಿನ ಭಾರಂಗಿ[೪] ಶಾಸನದಲ್ಲಿ ತ್ರೈಳೋಕ್ಯಮಲ್ಲದೇವನು ಮುಮ್ಮುರಿಯನ್ನು ಸೋಲಿಸಿದ ಬಗ್ಗೆ ಉಲ್ಲೇಖವಿದೆ. ತ್ರೈಳೋಕ್ಯಮಲ್ಲದೇವನ ಮಾನವಿ[೫] ಶಾಸನದಲ್ಲಿಯೂ ಆತನು ಮುಮ್ಮುಣಿಯನ್ನು ಸೋಲಿಸಿದ ಬಗ್ಗೆ ಉಲ್ಲೇಖವಿದೆ. ಅದೇ ಚಕ್ರವರ್ತಿಯ ಕೆಂಭಾವಿ[೬] ಶಾಸನದಲ್ಲಿ ಮಹಾಮಂಡಳೇಶ್ವರ ರೇವರಸನಿಗೆ ಮುಮ್ಮುಣಿ-ಕೊಂಕಣಿಗ ಜಳಧಿಬಡವಾನಳನೆಂಬ ಬಿರುದು ಬಂದಿದೆ. ಆದರೆ ತ್ರೈಳೋಕ್ಯ ಮಲ್ಲದೇವನು ಮುಮ್ಮುಣಿಯನ್ನು ಸರಿಯಾಗಿ ಕ್ರಿ.ಶ. ೧೦೫೦ ವರ್ಷದ ಉತ್ತರಾರ್ಧದಲ್ಲಿ ಜಯಿಸಿದ್ದನೆಂಬುದು ಪ್ರಸ್ತುತ ಕೊಕಟನೂರ ಶಾಸನದಿಂದ ಸ್ಪಷ್ಟವಾಗುತ್ತದೆ.

ಶಾಸನದಲ್ಲಿ ಹೇಳಿದ ದೇವತೆ **ತ್ರೈಪುರುಷದೇವ** ಅಥವಾ ತ್ರೈಮೂರ್ತಿದೇವ ಅಂದರೆ 'ಹರಿಹರಹಿರಣ್ಯಗರ್ಭ' ಇಲ್ಲವೆ 'ಅಜಹರಿರುದ್ರ'. ಈ ದೇವತೆಯ ವಿಷಯವಾಗಿ ಅನುಬಂಧವನ್ನು ನೋಡಬಹುದು.

ಶಾಸನದ ತೇದಿ: ೧೮–೧೯ನೆಯ ಸಾಲುಗಳಲ್ಲಿ 'ಶಕವರ್ಷ ೯೭೩ನೆಯ ವಿಕೃತ ಸಂವತ್ಸರದ ಪೌಷ್ಯ ಶುದ್ಧ ೮ ಸೋಮವಾರದಂದಿನುತ್ತರಾಯನ ಸಂಕ್ರಾನ್ತಿ ಪರ್ವನಿಮಿತ್ತಂ'ಎಂದು ಹೇಳಲಾಗಿದೆ. ಈ ವಿಕೃತ ಸಂವತ್ಸರ ಶಕ ವರ್ಷ ಒಂಬೈನೂರಾ ಎಪ್ಪತ್ಮೂರಕ್ಕೆ ಗತ(expired)ವಾಗಿದೆ ವರ್ತಮಾನ

---

೨. Ibid. No. 52, p. 41, l. 36. (A.D. 1027).

೩. Epi. Indica, Vol. XIII, Narendra Inscription, ll. 16–17.

೪. Epi. Carnatica, Vol. VIII, Sorab 325 (Circa A.D. 1118).

೫. A corpus of Inscriptions in the Kannada Districts of Hyderabad State; No. 5, Manvi Inscription (A.D. 1052). —Dr. P. B. Desai

೬. Epi. Indica, Vol. XII; Notes by Dr. Fleet; pp. 291 ff., Kembhavi Inscription (A.D. 1054).

(current)ವಾಗಿರುತ್ತದೆ. ಈ ವರ್ಷಕ್ಕೆ ಕ್ರಿ.ಶ. ೧೦೫೦-೫೧ ಸಮಾನವಾಗಿದೆ. ಪ್ರಸ್ತುತ ವರ್ಷದಲ್ಲಿ ಪೌಷ್ಯ ಶುದ್ಧ ಅಷ್ಟಮಿ ತೇದಿಯು ಸೋಮವಾರ ದಿವಸ ಸರಿಯಾಗಿ ಬರುತ್ತದೆ. ಅಂದರೆ ದಿನಾಂಕ ೨೪ ಡಿಸೆಂಬರ ೧೦೫೦ರ ಸೋಮವಾರ—ಮಕರಸಂಕ್ರಮಣವಾದರೂ ಸರಿಯಾಗಿ ಅದೇ ದಿನ ಬಂದಿತ್ತು. ಆ ದಿವಸ ಸಂಕ್ರಮಣದ ಕಾಲ ಸೂರ್ಯೋದಯದನಂತರ ೭ ಗಂಟೆಗೆ (ಮಧ್ಯಾಹ್ನ ಒಂದು ಗಂಟೆ) ಇತ್ತು.

ಶಾಸನದಲ್ಲಿ ಉಕ್ತವಾದ ಸ್ಥಳಗಳು : (೧) ಕರಹಡ ನಾಲ್ಸಾಸಿರ, (೨) ಮಿರಿಂಜೆ ಮೂಸಾಸಿರ, (೩) ತುಂಗುಳು, (೪) ತುಂಗುಳು ಪನ್ನೆರಡು, (೫) ಕೊಗ್ಗಟನೂರು, (೬) ಜನ್ನವಾಡ, (೭) ನಾಗರಹಾಳ, (೮) ಬಾಡಿಗೆ, (೯) ಎಡೆಯೂರು, (೧೦) ಜಿಂಜಿಲವಾಡ, (೧೧) ಕಲ್ಯಾಣ. (೧) **ಕರಹಡ ನಾಲ್ಸಾಸಿರವು** ಇತಿಹಾಸಕಾಲದ ನಾಲ್ಕು ಸಾವಿರ ಗ್ರಾಮಗಳುಳ್ಳ ಆಡಳಿತದ ದೊಡ್ಡ ವಿಭಾಗ. ಅದರ ಮುಖ್ಯ ಪಟ್ಟಣ ಕರಹಡ ಅಥವಾ ಈಗಿನ ಕರ್ಹಾಡ. ಇದು ದಕ್ಷಿಣ ಸಾತಾರೆ ಜಿಲ್ಲೆಯೊಳಗಿನ ಒಂದು ತಾಲೂಕು ಸ್ಥಳ. ಕೊಲ್ಲಾಪುರದಿಂದ ಉತ್ತರಕ್ಕೆ ಸುಮಾರು ೨೭ ಮೈಲು ಅಂತರದಲ್ಲಿದೆ.[೭] (೨) **ಮಿರಿಂಜೆ ಮೂಸಾಸಿರ** ಮೂರು ಸಾವಿರ ಹಳ್ಳಿಗಳ ಆಡಳಿತದ ಮತ್ತೊಂದು ವಿಭಾಗ. ಮಿರಿಂಜೆ ಅಂದರೆ ಈಗಿನ ಮಿರಜಿ ಊರು. ಅದೂ ದಕ್ಷಿಣ ಸಾತಾರೆ ಜಿಲ್ಲೆಯಲ್ಲಿ ಅದೆ. ಅದು ಕೊಲ್ಲಾಪುರದಿಂದ ಪೂರ್ವಕ್ಕೆ ಸುಮಾರು ೩೩ ಮೈಲು ಅಂತರದಲ್ಲಿದೆ. (೩) **ತುಂಗುಳು** ಈಗಿನ ತುಂಗಳ ಗ್ರಾಮ. ಅದು ಜಮಖಂಡಿ ತಾಲೂಕಿನಲ್ಲಿ ಕೃಷ್ಣಾ ನದಿಯ ಉತ್ತರಕ್ಕೆ ಮತ್ತು ಕೊಕಟನೂರಿನಿಂದ ಪಶ್ಚಿಮಕ್ಕೆ ಸುಮಾರು ಆರು ಮೈಲುಗಳ ಮೇಲೆ ಅದೆ. (೪) **ತುಂಗುಳು ಪನ್ನೆರಡು** ತುಂಗಳ ಗ್ರಾಮ ಮುಖ್ಯವಾದ ಹನ್ನೆರಡು ಹಳ್ಳಿಗಳ ಒಂದು ಆಡಳಿತದ ಚಿಕ್ಕ ವಿಭಾಗ. (೫) **ಕೊಗ್ಗಟನೂರು** ಈಗಿನ ಕೊಕಟನೂರು. ಅದು ಆಗಿನ ಕಾಲದಲ್ಲಿ ಒಂದು ಅಗ್ರಹಾರವಾಗಿತ್ತು. ಕೊಕಟನೂರಿನಲ್ಲಿ ಏಳೆಂಟು ಶಾಸನಗಳಿದ್ದು ಗಾವಠಾಣೆಯಲ್ಲಿ ಪುರಾತನ ಅವಶೇಷಗಳು ಅಲ್ಲಲ್ಲಿ ಕಂಡುಬರುತ್ತವೆ. ಕಾರಣ ಅದು ಸಂಶೋಧಕರಿಂದ ಹೆಚ್ಚಿನ ಪರೀಕ್ಷಣೆಗೆ ಅರ್ಹವಾಗಿರುವ ಸ್ಥಳ. (೬) **ಜನ್ನವಾಡವು** ತುಂಗುಳ ಪನ್ನೆರಡಕ್ಕೆ ಒಳಗಾಗಿದ್ದ ಒಂದು ಗ್ರಾಮ. ಈಗ ಆ ಹೆಸರಿನ ಊರು ಕಂಡುಬರುವುದಿಲ್ಲ. ಶಾಸನದಲ್ಲಿ ಹೇಳಿದ ಸೀಮೆಗಳ ಪ್ರಕಾರ ಅದು ತುಂಗಳದ ದಕ್ಷಿಣಕ್ಕೆ ಮೂರುನಾಲ್ಕು ಮೈಲು ಅಂತರದ ಮೇಲೆ ಇದ್ದಿರಬಹುದು. ಅದೇ ಪ್ರಕಾರ (೭) **ನಾಗರಹಾಳ** ಮತ್ತು (೯) **ಎಡೆಯೂರು**

೭. ಕರಹಡ ನಾಲ್ಕು ಸಾಸಿರದ ಸೀಮೆಗಳ ವಿವರಗಳ ಸಲುವಾಗಿ ಇಂಡಿಯನ್ ಅಂಟಿಕ್ವರಿ, ಭಾಗ ೩೦, ಪುಟ ೩೭೭-೩೮೦ಗಳಲ್ಲಿ ಡಾ. ಫ್ಲೀಟ್ ಅವರ ಟಿಪ್ಪಣಿಗಳನ್ನು ನೋಡಿರಿ.

ಗ್ರಾಮಗಳೂ ಅಳಿದುಹೋಗಿವೆ. (೮) **ಬಾಡಿಗೆ** ಈಗಿನ ಬಾಡಗಿಯಾಗಿದ್ದು ತುಂಗಳದಿಂದ ವಾಯುವ್ಯಕ್ಕೆ ಮೂರು ಮೈಲುಗಳಂತರದಲ್ಲಿದೆ. (೧೦) **ಜಿಂಜಿಲವಾಡ** ಈಗಿನ ಜುಂಜರವಾಡವಾಗಿದ್ದು ಕೃಷ್ಣಾನದಿಯ ಉತ್ತರದಡದ ಮೇಲೆ ಕೊಕಟನೂರು ಮತ್ತು ತುಂಗಳಗಳ ದಕ್ಷಿಣಕ್ಕೆ ಸುಮಾರು ಆರು ಮೈಲುಗಳ ಅಂತರದಲ್ಲಿ ಇದೆ.

ಕೊನೆಯದಾಗಿ **ಕಲ್ಯಾಣ**. ಅದು ಚಾಲುಕ್ಯರ ರಾಜಧಾನಿಪಟ್ಟಣ. ಈಗಿನ ಬೀದರ ಜಿಲ್ಲೆಯಲ್ಲಿ ಬಸವಕಲ್ಯಾಣವೆಂಬ ತಾಲೂಕು ಸ್ಥಳ. ಕಲ್ಯಾಣವು ಚಾಲುಕ್ಯರ ರಾಜಧಾನಿಪಟ್ಟಣವೆಂದು ಹೇಳುವ ಮೊಟ್ಟಮೊದಲಿನ ಉಲ್ಲೇಖ ಪ್ರಸ್ತುತ ಶಾಸನದಲ್ಲಿ ಬರುತ್ತದೆ. ಡಾ. ಫ್ಲೀಟ್ ಅವರು ತಮ್ಮ ಕಾಲದಲ್ಲಿ ಉಪಲಬ್ಧವಿದ್ದ ಸಾಮಗ್ರಿಯನ್ನವಲಂಬಿಸಿ ಕೆಂಭಾವಿ ಸಿದ್ಧೇಶ್ವರ ದೇಗುಲದಲ್ಲಿ ದೊರೆತ ಕ್ರಿ.ಶ. ೧೦೫೪ನೆಯ ಶಾಸನವೇ ಈ ವಿಷಯವನ್ನು ಹೇಳುವ ಪ್ರಥಮ ಶಾಸನವೆಂದು ಹೇಳಿದ್ದರು ಆದರೆ ಚಿನ್ನತುಂಬುಳದ್ ತ್ರೈಲೋಕ್ಯಮಲ್ಲದೇವನ ಕ್ರಿ.ಶ. ೧೦೫೨ನೆಯ ಶಾಸನದಿಂದ ಈ ತೇದಿ ಎರಡು ವರ್ಷ ಹಿಂದಕ್ಕೆ ಸರಿದಿತ್ತು. ಆದರೆ ಅಚ್ಚುಕಟ್ಟಾದ ತೇದಿಯಿಂದ ಸುಸ್ಪಷ್ಟವಾಗಿ ಕಲ್ಯಾಣವು ಚಾಲುಕ್ಯರ ರಾಜಧಾನಿಪಟ್ಟಣವಾಗಿತ್ತೆಂದು ಹೇಳುವ ಕ್ರಿ.ಶ. ೧೦೫೦ನೆಯ ಪ್ರಥಮ ಶಾಸನ ಈ ಕೊಕಟನೂರ ಶಾಸನವಾಗಿರುತ್ತದೆ.[೧೦]

ಶಾಸನಪಾಠ[೧೧]

(1)* 卐 ಸ್ವಸ್ತಿ ಶ್ರೀ ಜಯಾಭ್ಯುದಯಶ್ಚ ॥ 卐

[೧೨]ಲೋಕತ್ರಯ ಕಾಳತ್ರಯ ಗುಣತ್ರ[ಯೋಮ್ಮ]ತ್ರಯ ತ್ರಯ
ಮುಖ್ಯೇಭ್ಯೋ ಯೇಭ್ಯಃ ।

---

೮. Bombay Government Gazetteer, Vol. I, Part II, p. 440 and Epi. Indica, Vol. XII, p. 291.

೯. S.I I., Vol. IX, p. I, No. 111.

೧೦. ಚಾಳುಕ್ಯ ಚಕ್ರಿ ಜಯಸಿಂಗದೇವನ ರೋಣ ತಾಲೂಕ ರಾಜೂರ ಶಾಸನದಲ್ಲಿ ಕಲ್ಯಾಣ ರಾಜಧಾನಿಯಾಗಿತ್ತೆಂದು ಉಲ್ಲೇಖವಿದೆ. ಆದರೆ ಈ ಶಾಸನದ ತೇದಿ (ಕ್ರಿ.ಶ. ೧೦೩೩) ಕೃತಕವಾಗಿದ್ದು ಶಾಸನದ ಲಿಪಿಯೂ ಜಗದೇಕಮಲ್ಲನ ಕಾಲದ್ದೆನಿಸುವುದಿರುತ್ತದೆ. (S.I.I., Vol. XI, Part I, No. 69, pp. 59–60.)

೧೧. ೧೯೫೩ರಲ್ಲಿ ನಾನು ಅಥಣಿಯಲ್ಲಿ ರೆಸಿಡೆಂಟ ಮ್ಯಾಜಿಸ್ಟ್ರೇಟನಾಗಿದ್ದ ಸಮಯದಲ್ಲಿ ಮಾಡಿಕೊಂಡ ಶಾಸನದ ಅಚ್ಚುಗಳಿಂದ.

೧೨. ಮಾತ್ರಾವೃತ್ತದ ಒಂದು ಪ್ರಕಾರ (ಔಪಚ್ಛಂದಸಿಕ ವೃತ್ತ ?).

ತ್ರಿದಶಗುರುಭ್ಯಸ್ತೇಭ್ಯೋ ನಮೋಸ್ತು ಹರಿಹರ(2)ಹಿರಣ್ಯ
ಗರ್ಭೇಭ್ಯಃ || [೧*]

[೧೩][ನಿಮಗಾ] ಕಳ್ಪಾಯುಮಂ ಶ್ರೀಯುಮನ[ತ]ನುಜಯುಶ್ರೀಯುಮಂ
ಕೂರ್ತ್ತು [ಕಾವೀ]-
ಗೆ ಮಹತ್ಸಿನ್ದೂರರಾಗಾಸಿತಸಿತತನುಗಳ್(3) ವಾಗ್ವಧೂಗೋಮಿನೀಹಿ
ರ್ಮ್ಯಮಹೀಭೃತ್ಕನ್ಯಕಾಸಂಗಮಸುಖನಿರತರ್ ಹಾ ⏑ – – ಕ್ಷ್ವಲೀಲಾ
[ಗಮನರ್] ಮೂರ್ತ್ತಿತ್ರಯಾಳಂಕೃತರಜಹರಿರುದ್ರಾಭಿಧಾನ
ತ್ರಿದೇವರ್ || [೨*]

卐 (4)ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ **ಸತ್ಯಾಶ್ರಯಕುಳ**ತಿಳಕಂ ಚಾಳುಕ್ಯಾಭರಣಂ **ಶ್ರೀಮತ್ತ್ರೈಳೋಕ್ಯಮಲ್ಲ(5)ದೇವರ** ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ-ಪ್ರವರ್ದ್ಧಮಾನಮಾಚಂದ್ರಾರ್ಕ್ಕ[ತಾರಂ ಸಲೆ] **ಮುಮ್ಮುನಿಯುಂ ಜಯ್ಯಂಗೆಯ್ದು ಬಂದು** ಕಲ್ಯಾಣದ ನೆಲೆವೀಡಿನೊಳ್ (6)ಸುಖಸಂಕಥಾವಿನೋದದಿಂ ರಾಜ್ಯಂ ಗೆಯ್ಯುತ್ತಮಿರೆ

॥ ವೃತ್ತ[೧೪] ॥

ಬಳವತ್ ಪ್ರತ್ಯನ್ತ[ಚೋಳಾ]ವನಿಪನ ತಲೆಯಂ ಕೊಣ್ಡು ಸೆಣ್ಡಾಡಿದಂ ಕೇ
ರಳರಾಜ್ಯಶ್ರೀಯ ಬೇರಂ ಪಿಡಿದು ⏑⏑ ಸಿದಂ ಸಿಂಹಳೋ(7)ರ್ವ್ವೀಶವಂಶೋ
ತ್ಪಳಪಣ್ಣಂ – ⏑ – – ⏑⏑⏑⏑⏑⏑ – – ⏑ – – ⏑ – –
⏑ ⏑ – – – ⏑ – – ⏑⏑⏑⏑⏑ ಮದೋತ್ಸಾಹ ಚಾಳುಕ್ಯರಾಮಂ || [೩*]
[೧೫]ಅದಟಿಂ ಪಾಣ್ಡ್ಯನ ಮ್ರುತ್ತ್ಯುವಂ (8)ಮುಟಿದನಂ ಚೇರಮ್ಮ[ನಿಲ್ಪಂ] ಕಡ
ಲ್ಪಿದನಾ ಸಿಂಹಳನಂ [ತಡಂ ಕವಿದನಂ] ಕಾಂಭೋಜನಂ ಸೂಱೆಮಾ
ಡಿದನಂ ಕ್ಷತ್ರಿಯಕಾಳರಾತ್ರಿಯೆನಿಸಿರ್ದ್ದಾ ಚೋಳನಂ ದ್ವಂದ್ವಯು
ದ್ಧದೊಳಾನ್ತಿಕ್ಕಿದ ಜೆಟ್ಟಿಗರ್ (9)ಜಗದೊಳಾರ್ ತ್ರೈಳೋಕ್ಯ ಮಲ್ಲಂ
ಬರಂ || [೪*]

ತತ್ಪಾದಪದ್ಮೋಪಜೀವಿ || 卐 ಸಮಧಿಗತಪಂಚಮಹಾಶಬ್ದ ಮಹಾಮಣ್ಡಳೇಶ್ವರಂ ಸೌರ್ಯ್ಯಕಣ್ಠೀರವಂ ಭೃತ್ಯಚಿನ್ತಾಮಣಿ ಸತ್ಯ(10)ರಾಧೇಯಂ ಶೌಚಾಂ

---

೧೩. ಮಹಾಸ್ರಗ್ಧರೆ ವೃತ್ತ.
೧೪. ಅದೇ ವೃತ್ತ.
೧೫. ಮತ್ತೇಭವಿಕ್ರೀಡಿತ ವೃತ್ತ.
* ಈ ಇಂಗ್ಲಿಷ್ ಅಂಕಿಗಳು ಶಾಸನದ ಸಾಲುಗಳನ್ನು ಸೂಚಿಸುತ್ತವೆ.

ಜನೇಯಮಂ ಭುವನಾಭಿರಾಮಮಂ ಸಾಹಸೋದ್ದಾಮಮಂ ಸ್ವಾಮಿಸನ್ನಾಹಸಾಮನ್ತಪಕ್ಷ
ಪಾತಿ ಚೋಳಸಾಮನ್ತಬಳಜಳಧಿಬಡವಾನಳಂ ಚೋಳಕಟಕದಲ್ಲಳಂ(11)[ಉ]
ಭಯಬಳಾಚಾರ್ಯ್ಯನೇಕಾಂಗವೀರ ಮಾಣಿಕದೇವೀಲಬ್ಧವರಪ್ರಸಾದಂ . . . .
ಶಿರಶ್ಛೇದನ . . ಸನಿವಾರಸಿದ್ಧಿ . . . . . ನಾಮಾದಿಸಮಸ್ತಪ್ರಶಸ್ತಿಸಹಿತಂ
(12)**ಶ್ರೀಮನ್ಮಹಾಮಣ್ಡಳೇಶ್ವರಂ ಜೋಗಪಯ್ಯರಸರ್ ಕರಹಡನಾಲ್ಸಾ
ಸಿರಮೂ ಮಿರಿಂಜೆಮೂಸಾಸಿರಮುಮಂ** ಬೀಡಾನುವೃತ್ತಿಯಿಂ ದುಷ್ಟನಿಗ್ರಹ
ಶಿಷ್ಟಪ್ರತಿಪಾ(13)ಳನದಿನಾಳ್ದು ಸುಖದಿನರಸುಗೆಯ್ಯುತ್ತಮಿಬ್ಬ್||

|| ವೃತ್ತ[೧೬] ||

ಜಳಧಿಪ್ರೋದ್ಭೂತ – – ∪∪∪∪∪∪ – – ∪– – ∪ಳೋರ್ವ್ವೀ
ತಳಮಂ ತ್ರೈಳೋಕ್ಯಮಲ್ಲಪ್ರಿಥುವಿ(14)ಪತಿಗೆ ನಿಷ್ಕಂಟಕಂ ಮಾಡಿ ಬಾಹಾ
ಬಳದಿಂದಂ ಕೀರ್ತ್ತಿವಧು ∪∪ ∪∪ – – ∪ ವಿದ್ವಿಷ್ಟಭೂಭೃ
ತ್ಕುಳಕಾಳಂ ಮಣ್ಡಳೇಶಾಗ್ರಣಿ ವಿಜಯವಧೂವಲ್ಲಭಂ ಜೋಗಭೂಪಂ||[೫*]

|| (15)ಕಂದ ||

ಎನೆ ನೆಗಱ್ದ ಜೋಗಭೂಪಾ
ಳನ ವಿಪುಳೋರಸ್ಥಳೀನಿವಾಸಿನಿ ಧರಿವಾ
ರನಿಧಾನೆ . . . . . .
. . . ಯಶೋವಲ್ಲಿ **ಪೊಲ್ಲಿಕಬ್ಬರಸಿ** . . ||[೬*]

ಆ ಪುಣ್ಯವತಿಯ (16)ಭಾಗ್ಯದ ಸೌಭಾಗ್ಯದ [ಕಾ]ನ್ತಿಯುಮಗುನ್ತಿಯುಂ
ಪೊಗಳ್ವಡೆ ||

|| ವೃತ್ತ[೧೭] ||

ಜನಕಜೆ ಪಾಟ ಹೇಮವತಿ –∪∪ ರೋಹಿಣಿ ತತ್ಸರೂಪೆ ವಾ
ಗ್ವನಿತೆ ಸಮಂ ತಿಳೋತ್ತಮೆ ಸಮಾನ(17)ಮರುನ್ಧತಿ ಮಿಕ್ಕ ಪೊಲ್ಲಿ ಗೋ
ಮಿನಿ ದೊರೆ ಸತ್ಯಭಾಮೆ ಸರಿ ರೇಣುಕಿ –∪∪ ಮನ್ಮಥಪ್ರಿಯಾಂ-
[ಗನೆ ದೊರೆಯೆಂಬುದೆಂ]ಬುದು ಪೆಱದ್ದೊರೆಯೆಂಬುದೆ
ಪೊಲ್ಲಿಕಬ್ಬೆಯೊಳ್ || [೭*]

|| ವಚನಂ(18) ||

ಅನ್ತಾ ದಂಪತಿಗಳ್ ಪರಸ್ಪರಾನುರಾಗದಿನಿಷ್ಟ ವಿಷಯ ಕಾಮಬೋಗಮ-
ನನುಭವಿಸುತ್ತ; ಯುವರ್ಗ್ಗಮಿಬ್ಬ್ದು **ಶಕನೃಪಕಾಲಾತೀತ ಸಂವತ್ಸರಶತಂಗಳ್**

---

೧೬. ಮಹಾಸ್ರಗ್ಧರೆ ವೃತ್ತ.
೧೭. ಚಂಪಕಮಾಲೆ ವೃತ್ತ.

೯೭೩ನೆಯ ವಿಕೃತ [19]ಸಂವತ್ಸರದ ಪೌಷ್ಯ ಶುದ್ಧ ೮ ಸೋಮವಾರದಂದಿನುತ್ತರಾಯನ ಸಂಕ್ರಾನ್ತಿಪರ್ವ್ವನಿಮಿತ್ತವಗ್ರಹಾರಂ ಕೊಗ್ಗ್ರಟನೂರೊಳ್ ಕೂಚಸೆಟ್ಟಿ ಮಾಡಿಸಿದ ತ್ರೈಪುರುಷದೇವರ್ಗ್ಗೆ ದೇವರಂಗಭೋಗ[20]ಕ್ಕಂ ಧೂಪದೀಪ ನಿವೇದ್ಯಕ್ಕಂ ಖಣ್ಡಸ್ಫಟಿಕ(ಸ್ಫುಟಿತ) ಜೀರ್ಣ್ಣೋದ್ಧಾರಕ್ಕಂ ಶಾಲೆಯುಲೋದುವ ವಿದ್ಯಾರ್ತ್ಥಿಗಳನೋದಿಸುತೋ(ವೋ)ಜರು ಮಾಣಿಯರ್ಗ್ಗಶನಾಚ್ಛಾದನಕ್ಕಂ ಗುಣಶಾಸನದಿಂ ನಡೆವ [21]ನಿವಿಪ್ಪರೆಣ್ಬರ್ಗ್ಗಂ **ತುಂಗುಳು ೧೩ (೧೨)ಱ ಬಳಿಯ ಜನ್ನವಾಡಮುಂ** ಚತುಸ್ಸೀಮಾಭ್ಯನ್ತರಂ ಜಲಪಾಷಾಣಸಹಿತ . . . . . ಕಾಲ್ಗರ್ಚ್ಚಿ ಸರ್ವ್ವನಮಸ್ಯವಾಗಿ ಧಾರಾಪೂರ್ವ್ವಕಂ[22] ಮಾಡಿ ಬಿಟ್ಟ ಧರ್ಮ್ಮ ||

卐 ಮತ್ತಮಾ ಧರ್ಮ್ಮಕ್ಕಾಯೂರ ಮನ್ನೆಯಮುಮೆಂಟು ಪಿಟ್ಟುಮನೆರಡು ದಶವನ್ಧಮುಮಂ ಚತುಸ್ಸೀಮೆಯಿನ್ದೊಳಗುಳ್ಳ ಸಾಮ್ಯಮೆಲ್ಲಮಂ ಕೂಚಸೆಟ್ಟಿಯರ್ ತುಂಗುಳು [23]ಪನ್ನೆರಡಱ ಮನ್ನೆಯ ಪೊಂಕಗಾವುಣ್ಡನ ಮಮ್ಮಂ ರೇಪಗಾವುಣ್ಡಂಗಂ ಕನ್ನಗಾವುಂಡಂಗಂ ಪೊನ್ನಂ ಕೊಟ್ಟುಮಾಗಿ ಧಾರಾಪೂರ್ವ್ವಕಂ ಕಾಲಗರ್ಚ್ಚಿಗೊಣ್ಡು ಬಿಟ್ಟರಲ್ಲಿ ಕರುವನ ಪನ್ನಿರ್ಮ್ಮತ್ತರ್ಕ್ಕೆಯ್ಯು [24]ಕೂಚಸೆಟ್ಟಿ ಮರುವಣಮಂ [ತೆತ್ತುವರ್] || ಮತ್ತಮಾ ಧರ್ಮ್ಮಕ್ಕೆ ಕೊಗ್ಗ್ರಟನೂರೂರೊಡೆಯ ಪ್ರಮುಖಮಹಾಜನ . . . . . ಮಿಟ್ಟು ದೇವರ್ಗ್ಗೆ ಪೂವರ್ತ್ಥವಾಗಿ ಬಾಡಿಗೆಯ ಪಳ್ಳದ ತಡಿಯೊಳ್ ಕೇಶವಾದಿತ್ಯದೇವರ[25] ತೋಂಟದಿಂ ಮೂಡ ಧಾರಾಪೂರ್ವ್ವಕಂ ಮಾಡಿಬಿಟ್ಟ ತೋಂಟಂ ಪಾರ್ವ್ವರಗೋಲ ಮತ್ತರೆರಡಾ ತೋಂಟಕ್ಕೆ [ಜೋಗಪಯ್ಯರಸರ್] . . . . . . ಆಲಯ್ಯನಾ ದೇವರ್ಗ್ಗೆ [ಪಂಡೆ ೧೫] ಸರ ಮಾಲೆ ಪೂವಂ ದೇವಸವಳ [26]ನಿಬನ್ಧದಿನಿಕ್ಕಿದಂ || ಮತ್ತ . . . . ದೇವರ ನನ್ದಾದೀವಿಗೆಯ ಸೊಂಟಿಗೆಣ್ಣೆಗೆ [ವರ್ಷಂಪ್ರತಿ] . . . . ಲೊನ್ದು ಪಾಗಮಂ ಸಂಕ್ರಾನ್ತಿಪರ್ವ್ವನಿಮಿತ್ತಂ ಧಾರಾಪೂರ್ವ್ವಕಂ ಮಾಡಿ ಕೊಟ್ಟರ್ || [27]ಆ ಜನ್ನವಾಡದ ಸೀಮಾಸಂಬನ್ಧಮಾಯೂರ **ನಾಗರಹಾಳ** ವಾಯವ್ಯದ ದೆಸೆಗೆ ನಿಗುಂಬೆಯ [ಪಡಂ] ಪಡುವ ಮುಖದೆ ಬಂದು ಕೂಡಿವಸಿಯ ಪಳ್ಳದ ಕೂಡಲ ತೆಂಕಣ ಮಗ್ಗುಲೆನ್ದಿಯ ಬಳ್ಳಿ ಮೇರೆ [||] [28]ಅಲ್ಲಿಂ ಮೂಡಲಾ ಹಳ್ಳಂಬಿಡಿದು ಮೂಡ ಮುಖದೆ ನಾಗರಹಾಳಗಂ **ತುಂಗುಳಂಗಮಾ ಜನ್ನವಾಡದ** ಮುಗ್ಗುಡ್ಡೆಯಮೋಱಯಿಂ ಬಡಗಣೋಡವಿನ ಕೊತ್ತುರು ಮೇರೆ | ಅಲ್ಲಿಂ ತೆಂಕ ಮು[29]ಖದೆ ತುಂಬಿಗೆಱಯ ಮೂಡಣ ತೆಂಕಣ ಕೋಡಿ ಮೇರೆ | ಅಲ್ಲಿಂ ಪಡುವ ಮುಖದೆ **ಜಿಂಜಿಲವಾಡಕ್ಕಮಾ** ಜನ್ನವಾಡಕ್ಕಂ ನಡುವೆ ನಟ್ಟ ಕಲ್ಲು ಮೇರೆ | ಅಲ್ಲಿಂ ಪಡುವ**ಲೆಡೆಯೂರಿಂಗಂ** ಜನ್ನವಾಡಕ್ಕಂ [30]ನಡುವೆ ಪರಿದು ನಿಗುಂಬೆಯ ಕೂಡಿದ ನೀರ್ವ್ವರಿಯ ಮೇರೆ | ಅಲ್ಲಿಂ ಪಡುವ ನಿಗುಂಬೆಯ ಪಳ್ಳಮೆ ಮೇರೆ ||

॥ ಕಂದ ॥

ಸುರರಿತುವಿವಮಾನವೊಂದಿರ-
ಲೀ . . . ಕೂಚಸೆಟ್ಟಿ ಕೊರ್ಗ್ಗಟನೂರೊಳ್ |
(31)ಧರೆಗೆ ಪಡಿಚನ್ದವಾಗಿರೆ
ನಿರುತಂ ತ್ರೈಪುರುಷಶಾಲೆಯುಂ ಮಾಡಿಸಿದಂ ॥[8*]

॥ ವೃತ್ತ[೧೮] ॥

ಇದು ನಾಗೇಂದ್ರವಿಮಾನಮಲ್ತಿದು ದಿಶಾಧೀಶಸ್ಥಿರಾವಾಸಮ
ಲ್ತಿದು ದೇವೇಂದ್ರವಿಳಾಸಗೇಹಮಿದು (32)ಚಿತ್ರಂ ಧಾತ್ರಿಗಿತ್ತೆತ್ತ ಬಂ
ದುದಿದೆಂಬ ᴗ ᴗ – ᴗ – ᴗ ಸುಗುಮೇ ಕಲ್ಪಾನ್ತರಸ್ಥಾಯಿಯಾ
ಗೆ ದಲೀ ತ್ರೈಪುರುಷೋನ್ನತಾಯತನಮಂ ಪೈಶ್ಯೋತ್ತಮಂ ಕೂಚಣಂ ॥[೯*]

[೧೯] (33) ಇನತೇಜಂ ವಿಭು ಮಣ್ಡಳೇಶತಿಳಕಂ ತ್ರೈಮೂರ್ತ್ತಿದೇವರ್ಗ್ಗೆ ಬೋ
ಗನೃಪಾಳಂ ᴗ ᴗ – ತ್ತರಾಯನ ಮಹಾವಿಖ್ಯಾತಸಂಕ್ರಾನ್ತಿಪ
ರ್ವ್ವನಿಮಿತ್ತಂ ತಿಳಪಾತ್ರದಾನಸಹಿತಂ ಹಸ್ತೋದಕಂ(34)ಮಾಡಿ ಸ
ರ್ವ್ವನಮಸ್ಯಂ ಬಿಡೆ ಜನ್ನಪಾದಮೆನೆ ಪತ್ತಿಂ ಭೂರಿಭೂಚಕ್ರದೊಳ್ ॥ [೧೦*]

॥ ಕಂದ ॥

ಅಲ್ಲಿಗೆ ನಿವಿಷ್ಪರೆಣ್ಬರ
ನಲ್ಲದೆ [ಪುಗಿಸಲ್ಕ] –ᴗ ಗುಣಶಾಸನದಿಂ |
ದಲ್ಲಿ ನಡೆಯಲ್ಕೆ [ಒಪ್ಪುದು]
(35)ವಲ್ಲಭತನದಿನ್ದೆ ನಡೆಯಲೀಂ ಬೆಂಪಪುದೇ ॥ [೧೧*]

ಶಾಲೆಯ ಪರಿಸೂತ್ರದೊಳಾ
ತ್ಮಾಲಯಮಂ ಮಾಡಿಕೊಳ್ವುದಲ್ಲದೆ ಪೆಜತೊ |
ನ್ದಾಲಯದೊಳಿರ್ಪ್ಪವಂ ಪ್ರತಿ
ಕೂಲಂ ಲೋಲಂ (36)ನಿವಿಷ್ಪನಲ್ಲಂ ದುಷ್ಟಂ ॥ [೧೨*]

ಎಣ್ಬ ನಿಮಿಷ್ಪರನ್ತವ
ರುಣ್ಬಳಿಗಂ ತೊಂಬತಾಱು ಮತ್ತರ್ಕ್ಕೆಯ್ಯುಂ |

---

೧೮. ಮತ್ತೇಭವಿಕ್ರೀಡಿತ ವೃತ್ತ.
೧೯. ಅದೇ ವೃತ್ತ.

ಕಣ್ಬ[ಳ]ಯೊಳೆ ನೋ ೦೦೦೦
ಪಣ್ಬ ೦ ಪರ್ ಪಾರ್ವ್ವರಗೋಲಲಪನಳೆದಿಕ್ಕಲ್ ॥ [೧೩*]

ದೇವರ(37)ನನವರತಂ ಸ-
ದ್ಭಾವದೆ ಪೂಜಿಸುವೆನೆಂದ ದೇಹಾರಿಗೆ ಭೂ-
ದೇವೋತ್ತಮಂಗೆ ಕುಡುವರೆ
ಜೀವಿತಗೆಯ್ಯೆರಡು ಪತ್ತು ಮತ್ತರ್ಗ್ಗೆಯ್ಯಂ ॥ [೧೪*]

ಅನ್ತವರ್ಗ್ಗಳೆದಿಕ್ಕಿದ ನೆಲ
(38)ನನ್ತದು ಪೊೞ-ಗಿ ನಿನ್ದ ನೆಲನೆನೆತನಿತುಂ।
ಭ್ರಾನ್ತೇನದು ದೇವಸ್ವಮು
ದಂ ತಿನಲಾಟಿ ಪವಂಗೆ ದುರ್ಗ್ಗತಿಯಲ್ತೇ ॥ [೧೫*]

೨೦ಜನಿತೋತ್ಸಾಹವ ಮಣ್ಣಳೇಶತಿಳಕಂ ಶ್ರೀ ಜೋಗಭೂಪಂ (39) ಜಗ-
ಜ್ಜನಚಿನ್ತಾಮಣಿ ತಾನಿದಂ ಬೆಸಸಲೀ ತ್ರೈಮುಖತ್ತ್ರಿದೇವರ್ಗ್ಗೆ ಶಾ
ಸನಮಂ ಶಾಸನವಾಗಲೆಯ್ದೆ ಬರೆದಂ ವಿದ್ವಜ್ಜನಾಂಭೋಜಿನೀ-
ವನಹಂಸಂ **ಜಿನವರ್ಮ್ಮಪಣ್ಡಿ**ತನಿಳಾಭಾಸ್ವದ್ಯಶೋ(40)ಮಣ್ಡಿತಂ ॥ [೧೬*]

ಶಾಸನಮಿದಾವುದೆಲ್ಲಿಯು
ಶಾಸನಮಾರಿತ್ತರೇಕೆ ಸಲಿಸುವೆನಾನೀ
ಶಾಸನಮನೆಂಬ ದುರ್ಜ್ಜನ
ನಾ ಸಕಳಂ ರೌರವಕ್ಕೆ ಗಳಗಳನಿಳಿಗುಂ ॥ [೧೭*]

೨೧ಇದು ತಾನೈಹಿಕ (41)ಪಾರಮಾರ್ತ್ಥಿಕ ಸುಖೈಕಾವಾಸಮೀಧರ್ಮ್ಮ ಯಿ-
ನ್ತಿದನುಲ್ಲಂಘಿಸಿದಾತನುಗ್ರನರಕೋದೀರ್ಣ್ಣಾರ್ಣವಾವರ್ತ್ತಗ
ರ್ತ್ತದೊಳಾಳ್ಗುಂ ಪರಿರಕ್ಷೆಗೆಯ್ದವನುಪೇಂದ್ರಾಹೀಂದ್ರದೇವೇಂದ್ರ (42)ಸಂ
ಪದದೊಳ್ ಕೂಡುಗುಮೆಲ್ಲಿಯುಂ ಪಡೆಗುಮಾಕಲ್ಪಾಯುಮಂ
ಶ್ರೀಯುಮಂ ॥ [೧೮*] 卐

೨೨ಸಾಮಾನ್ಯೋಯಂ ಧರ್ಮ್ಮಸೇತುರ್ನ್ನೃಪಾಣಾಂ
ಕಾಲೇ ಕಾಲೇ ಪಾಲನೀಯೋ ಭವದ್ಭಿಃ।

---

೨೦. ಮತ್ತೇಭವಿಕ್ರೀಡಿತ ವೃತ್ತ.
೨೧. ಮತ್ತೇಭವಿಕ್ರೀಡಿತ ವೃತ್ತ.
೨೨. ಶಾಲಿನೀ ವೃತ್ತ.

ಸರ್ವ್ವಾನೇತಾನ್ಭಾವಿನಃ(೪೩) ಪಾರ್ತ್ಥಿವೇಂದ್ರಾ-
ನ್ಭೂಯೋ ಭೂಯೋ ಯಾಚತೇ ರಾಮಭದ್ರಃ || [೧೯*]

[೨೩]ಬಹುಭಿರ್ವ್ವಸುಧಾ ಭೋ(ಭು)ಕ್ತಾ ರಾಜಭಿಃ ಸಗರಾದಿಭಿ- |
ರ್ಯ್ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ (೪೪) ತಸ್ಯ ತದಾ ಫಳಂ || [೨೦*]

[೨೪]ಸ್ವದತ್ತಾಂ ಪರದತ್ತಾಂ ವಾ ಯೋ ಹರೇತು(ತ) ವಸುನ್ಧರಾಂ |
ಷಷ್ಠಿರ್ವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕೃಮಿಃ || [೨೧*]

ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ || 卐

ಅನುಬಂಧ

ತ್ರೈಪುರುಷದೇವ

ತ್ರೈಪುರುಷದೇವನೆಂದರೆ ಹರಿ ಹರ ಹಿರಣ್ಯಗರ್ಭನೆಂದು ನಾವು ಈ ಕೊಕಟನೂರ ಶಾಸನದಲ್ಲಿ ಕಂಡಿದ್ದೇವೆ. ಇದೇ ಪ್ರಕಾರ ಬದಾಮಿ ತಾಲೂಕಿನ ಬೇಲೂರು ಗ್ರಾಮದಲ್ಲಿಯ ತ್ರೈಪುರುಷದೇವರೂ ಕೂಡ ಬ್ರಹ್ಮ, ವಿಷ್ಣು ಮತ್ತು ಶಿವರಾಗಿದ್ದಾರೆ.[೨೫] ಕೆಲವೆಡೆ ಬ್ರಹ್ಮನ ಸ್ಥಳದಲ್ಲಿ ಸೂರ್ಯನನ್ನು ಸೇರಿಸಿ ಶಿವ, ವಿಷ್ಣು ಮತ್ತು ಸೂರ್ಯ ಈ ದೇವತೆಗಳು ತ್ರೈಮೂರ್ತಿಯೆಂದು ಹೇಳಲಾಗಿದೆ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಮಾಗಳ[೨೬] ಗ್ರಾಮದ ಶಾಸನ (ಕ್ರಿ.ಶ. ೧೨೦೯) ಇದಕ್ಕೆ ಉದಾಹರಣೆ. ಇದರಲ್ಲಿ ನಾರ್ಮರಸನೆಂಬವನು ಅಗ್ರಹಾರ ಮಾಗೊಳದಲ್ಲಿ ಸೋಮನಾಥದೇವ, ಪ್ರಸನ್ನಕೇಶವದೇವ ಮತ್ತು ಸೂರ್ಯದೇವ ಈ ತ್ರೈಮೂರ್ತಿದೇವರ ಪ್ರತಿಷ್ಠೆ ಮಾಡಿದನೆಂದು ಹೇಳಲಾಗಿದೆ.

ತ್ರೈಮೂರ್ತಿದೇವತೆ ಕೆಲವೆಡೆ ಮೂರು ಭಿನ್ನಭಿನ್ನ ವಿಗ್ರಹಗಳಾಗಿ, ಇನ್ನು ಕೆಲವೆಡೆ ಸಂಯುಕ್ತವಿಗ್ರಹವಾಗಿ ಇದ್ದಂತೆ ತೋರುತ್ತದೆ. ಮೇಲೆ ಹೇಳಿದ ಬೇಲೂರು ಗ್ರಾಮದ ತ್ರೈಪುರುಷದೇವರ ಮೂರ್ತಿಗಳು ಭಿನ್ನಭಿನ್ನವಾಗಿವೆ. ಈ ಮೂರ್ತಿಗಳ ವರ್ಣನೆ ಡಾ. ಫ್ಲೀಟ ಅವರು ಹೀಗೆ ಕೊಟ್ಟಿದ್ದಾರೆ: ಗರ್ಭಗುಡಿಯಲ್ಲಿ ಒಂದೆ ಅಭಿಷೇಕಪೀಠದ ಮೇಲೆ ಸುಮಾರು ಮೂರು ನಾಲ್ಕು ಅಡಿ ಎತ್ತರದ ಬ್ರಹ್ಮ, ವಿಷ್ಣು ಮತ್ತು ಶಿವ ಈ ದೇವತೆಗಳ ಸುಂದರವಾದ

---

೨೩. ಅನುಷ್ಟುಪ್ ವೃತ್ತ.

೨೪. ಅದೇ ವೃತ್ತ.

೨೫. I.A., XVIII, pp. 270 ff.

೨೬. S.I.I, IX, I, No. 329, pp. 343-47.

ಮೂರು ವಿಗ್ರಹಗಳು ಆ ಆ ದೇವತೆಗಳ ಲಾಂಛನ ಮತ್ತು ಪರಿವಾರಸಹಿತ ಇರುತ್ತವೆ ಎಂದು ಅವರ ವರ್ಣನೆ. ಮುಂದೆ ಉದಾಹರಿಸಿದ ಗದುಗಿನ[೨೭] ಶಾಸನದಲ್ಲಿ 'ಘೋಯಿಂಪಯ್ಯಂ ತ್ರೈಪುರುಷರ್ಕ್ಕಳಂ ನಿಲಿಸಿದಂ' ಎಂದು ಉಲ್ಲೇಖವಿರುವದರಿಂದ ಅಲ್ಲಿಯ ದೇವತೆಗಳ ವಿಗ್ರಹಗಳೂ ಬೇರೆಬೇರೆಯಾಗಿರ ಬಹುದೆಂದು ಅನಿಸುತ್ತದೆ. ಡಾ. ಪಿ. ಬಿ. ದೇಸಾಯಿಯವರು ತಮ್ಮ 'ಶಾಸನ ಪರಿಚಯ'ವೆಂಬ ಗ್ರಂಥದಲ್ಲಿ 'ಬ್ರಹ್ಮ, ವಿಷ್ಣು ಮತ್ತು ಶಿವ ದೇವತೆಗಳ ಸಂಯುಕ್ತ ತ್ರಿಮೂರ್ತಿ ವಿಗ್ರಹವನ್ನು ತ್ರೈಪುರುಷದೇವ ಎಂದು ಕರೆಯುತ್ತಿದ್ದರು' ಎಂದು ಹೇಳಿದ್ದಾರೆ.[೨೮] ಆದರೆ ಉದಾಹರಣೆ ಕೊಟ್ಟಿರುವದಿಲ್ಲ.

ಅಗ್ರಹಾರ ಮತ್ತು ಬ್ರಹ್ಮಪುರಿಗಳು ಪ್ರಾಚೀನ ಕಾಲದಲ್ಲಿ ಶಿಕ್ಷಣಕೇಂದ್ರಗಳಾಗಿದ್ದವು. ಅಲ್ಲಿ ಕಂಡುಬರುವ ತ್ರೈಪುರುಷದೇವರ ಶಾಸನಗಳಲ್ಲಿ ಶಾಲೆಯ ಉಲ್ಲೇಖವೂ ಬರುತ್ತದೆ. ಆ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ, ಶೈವ ಮತ್ತು ವೈಷ್ಣವ ಎರಡೂ ಮತಗಳ ಬಗ್ಗೆಯೂ ಭಕ್ತಿ, ನಿಷ್ಠೆ ಮತ್ತು ಆದರಭಾವ ದೃಢೀಕರಿಸುವ ಸಲುವಾಗಿ ಈ ದೇವರ ಪ್ರತಿಷ್ಠಾಪನೆ ಮಾಡುತ್ತಿದ್ದರೆಂದು ಕಾಣುತ್ತದೆ. ಈ ದೇವತೆಗೆ ದಾನ ಕೊಡುವಾಗ ವಿದ್ಯಾರ್ಥಿ ಮತ್ತು ಉಪಾಧ್ಯಾಯರ ಸಲುವಾಗಿಯೂ ದಾನ ಕೊಟ್ಟದ್ದು ಕಂಡುಬರುತ್ತದೆ. ಪ್ರಸ್ತುತ ಕೊಕಟನೂರ ಶಾಸನದಲ್ಲಿ ತ್ರೈಪುರುಷದೇವಾಲಯದ ಜೊತೆಗೆ ಶಾಲೆಯನ್ನು ಕಟ್ಟಿಸಿದ್ದು, ದೇವರ ಪೂಜೆ ಪುರಸ್ಕಾರಕ್ಕೆ ದತ್ತಿ ಕೊಡುವಾಗ ಶಾಲೆಯಲ್ಲೋದುವ ವಿದ್ಯಾರ್ಥಿಗಳ ಓದಿಸುವೋಜರ ಮತ್ತು ಮಾಣಿಯರ ಊಟ ಉಡಿಗೆ ಸಲುವಾಗಿ ದತ್ತಿ ಕೊಟ್ಟದ್ದು ಹೇಳಲಾಗಿದೆ.

ತ್ರೈಪುರುಷದೇವರ ಶಾಲೆಯ ಒಂದು ಮಾದರಿಯನ್ನು ಡಾ. ಫ್ಲೀಟ ಅವರು ಉಕ್ತವಾದ ಬೇಲೂರಿನ ಶಾಸನದ ಲೇಖದಲ್ಲಿ ವರ್ಣಿಸಿದ್ದಾರೆ. ಅದು ಹೀಗೆ: ಬೇಲೂರಿನ ತ್ರೈಪುರುಷ ದೇವಾಲಯವು ಇತರ ದೇವಾಲಯಗಳಂತೆ ಇರುವದಿಲ್ಲ. ಇದೊಂದು ವೈಶಿಷ್ಟ್ಯಪೂರ್ಣವಾದ ಕಟ್ಟಡ. ಮುಂಭಾಗದಲ್ಲಿರುವ ಐದುವರೆ ಅಡಿ ಎತ್ತರ, ಮೂರು ಅಡಿ ಅಗಲವಾದ ಬಾಗಿಲಿನಿಂದ ಒಳಗೆ ಹೋದರೆ ಹದಿನಾರು ಕಂಬಗಳಿರುವ ನಾಲ್ವತ್ತೈದು ಅಡಿ ಚಚ್ಚೌಕವಾದ ಒಂದು ದೊಡ್ಡ ಪಡಸಾಲೆ ಕಂಡುಬರುತ್ತದೆ. ಈ ಪಡಸಾಲೆಯ ಹಿಂದೆ ಮತ್ತೊಂದು ಪಡಸಾಲೆ ಇದ್ದು ಅದು ಕಿಂಚಿತ್ ಚಿಕ್ಕದು ಅಂದರೆ ಮೂವತ್ತು ಅಡಿ ಅಗಲು ಇಪ್ಪತ್ತು ಅಡಿ ಉದ್ದವಾಗಿದೆ. ಎರಡನೇ ಪಡಸಾಲೆಯ ಹಿಂದೆ ದೇವತೆಗಳನ್ನೊಳಗೊಂಡು ಗರ್ಭಗುಡಿಯಿರುತ್ತದೆ. ಎರಡನೇ ಪಡಸಾಲೆ ಮತ್ತು ಗರ್ಭಗುಡಿ ಇವುಗಳ ಬಾಗಿಲ ಮೇಲೆ ಗಜಲಕ್ಷ್ಮಿಯ ವಿಗ್ರಹಗಳಿವೆ. ಇದೇ ತ್ರೈಪುರುಷದೇವರ ಶಾಲೆ.

೨೭. E. I., XIX, No. 37, p. 220, ll. 19–21.

೨೮. ಶಾಸನ ಪರಿಚಯ ; No. 6, p. 7, 11–10–12.

ತ್ರೈಪುರುಷದೇವ ಮತ್ತು ಶಾಲೆ ಇವುಗಳ ಬಗ್ಗೆ ಶಾಸನಗಳಲ್ಲಿ ಕಂಡು ಬರುವ ಉಲ್ಲೇಖಗಳು ಹೀಗಿವೆ: (೧) ರಾಷ್ಟ್ರಕೂಟ ಚಕ್ರವರ್ತಿ ಮೂರನೇ ಕೃಷ್ಣನ ಸಾಲೊಟಗಿ[೧೯] ಗ್ರಾಮದ ಶಾಸನದಲ್ಲಿ (ಕ್ರಿ.ಶ. ೯೪೫), ಆತನ ಮಂತ್ರಿಯಾದ ಗಜಾಂಕುಶ ನಾರಾಯಣನು ಅಗ್ರಹಾರ ಪಾವಟ್ಟಿಗೆಯಲ್ಲಿ (ಸಾಲೊಟಗಿಯಲ್ಲಿ) ತ್ರೈಪುರುಷದೇವರ ದೇಗುಲಕ್ಕೆ ಪ್ರತಿಬದ್ಧವಾಗಿ ಶಾಲೆಯನ್ನು ಕಟ್ಟಿಸಿ ಅಲ್ಲಿಯ ಶಾಲಾ ವಿದ್ಯಾರ್ಥಿ–ಸಂಘಕ್ಕೆ ಮತ್ತು ವ್ಯಾಖ್ಯಾತೃಗಳಿಗೆ ವೃತ್ತಿಗಳನ್ನು ಕಲ್ಪಿಸಿಕೊಟ್ಟ ಬಗ್ಗೆ ಹೇಳಲಾಗಿದೆ.

(೨) ಚಾಲುಕ್ಯ ಚಕ್ರವರ್ತಿ ನೂರ್ಮಡಿ ತೈಲನ ಕೊಪ್ಪಳ ತಾಲೂಕಿನ ಮಾದಿನೂರ[೨೦] ಶಾಸನದಲ್ಲಿ (ಕ್ರಿ.ಶ. ೯೭೩) ಅಗ್ರಹಾರ ಮೊದೆಯನೂರಿನಲ್ಲಿ ದೇವತಾಭವನ ನಿರ್ಮಿಸಿ, ತ್ರೈಪುರುಷದೇವರ ಪ್ರತಿಷ್ಠೆ ಮಾಡಿ ದೇವರಂಗಭೋಗಕ್ಕೆ, ನಿವೇದ್ಯಕ್ಕೆ, ಭಟ್ಟವೃತ್ತಿಗೆ ಮತ್ತು ಪೂಜಾರಿಯ ಜೀವಿತಕ್ಕೆ ದಾನಕೊಟ್ಟ ಬಗ್ಗೆ ಉಲ್ಲೇಖವಿದೆ.

(೩) ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲ ಜಯಸಿಂಗದೇವನ ಬದಾಮಿ ತಾಲೂಕಿನ ಮೇಲೆ ನಿರ್ದಿಷ್ಟವಾದ ಬೇಲೂರ[೨೧] ಶಾಸನದಲ್ಲಿ (ಕ್ರಿ.ಶ. ೧೦೨೨) ಆತನ ಅಗ್ರಜೆ ಅಖಿಲವಿದ್ಯಾರ್ಥಿಜನಾವಳಿನಂದಿನಿ ಎಂಬ ಬಿರುದುಳ್ಳ ಅಕ್ಕಾದೇವಿ ಅಗ್ರಹಾರ ಪೆರೂರಿನಲ್ಲಿ (ಬೇಲೂರಿನಲ್ಲಿ) ತ್ರೈಪುರುಷಶಾಲೆಯನ್ನು ಮಾಡಿಸಿ ಐನೂರು ವಿದ್ಯಾರ್ಥಿಗಳ ಅಶನಾಚ್ಛಾದನಕ್ಕೆ ಐನೂರು ಮತ್ತರು ಭೂಮಿ, ಐಯ್ವತ್ತು ಮನೆ ಮತ್ತು ಎರಡು ತೋಟಗಳನ್ನು ದತ್ತಿಕೊಟ್ಟಳೆಂದು ಹೇಳಲಾಗಿದೆ. ಅಂದರೆ ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ಮತ್ತರು ಭೂಮಿ, ಹತ್ತು ವಿದ್ಯಾರ್ಥಿಗಳಿಗೆ ಒಂದು ಮನೆ ಕೊಟ್ಟಂತಾಯಿತು.

(೪) ಅದೇ ಚಕ್ರವರ್ತಿಯ ಮುಳುಗುಂದ[೨೨] ಶಾಸನದಲ್ಲಿ (ಕ್ರಿ.ಶ. ೧೦೨೮) ಬ್ರಹ್ಮಪುರಿಯ ಮಹಾಜನಮಿದ್ದು 'ತ್ರೈಪುರುಷದೇವರಂ ಪ್ರತಿಷ್ಠೆ ಮಾಡಿ ದೇವಾಲಯಮುಮಂ ಮಠಮುಮೆನಿಸಿಯಾಶ್ರಮುಮಂ ಮಾಡಿಸಿ' ಎಂದು ಹೇಳಿದೆ.

(೫) ಅದೆ ಚಕ್ರವರ್ತಿಯ ಗದುಗಿನ[೨೩] ಶಾಸನದಲ್ಲಿ (ಕ್ರಿ.ಶ. ೧೦೩೭) 'ತ್ರೈಪುರುಷದೇವರುಮಂ ಪೂಜಿಸುವ ಪೂಜಾರಿ ಬ್ರಾಹ್ಮಣ.... ' ಎಂದು ಒಬ್ಬ ದಾಮೋದರಸೆಟ್ಟಿ ಆ ದೇವರಿಗೆ ದಾನಗಳನ್ನು ಕೊಟ್ಟನೆಂದು ಹೇಳಿದೆ. ಗದುಗು ಆ ಕಾಲದ ಒಂದು ಪ್ರಖ್ಯಾತ ಅಗ್ರಹಾರವಾಗಿತ್ತು.

---

೧೯. E I, IV, No. 6, Salotagi Pillar Inscription, pp 57 ff.

೨೦ ಶಾಸನ ಪರಿಚಯ: No. 6, p. 7, ll. 10-12. ಡಾ. ಪಿ. ಬಿ. ದೇಸಾಯಿ.

೨೧. I. A., XVIII, pp. 270 ff.

೨೨. S. I. I., XI, I, No. 64. p. 54, ll. 20–21.

೨೩. Ibid., No. 72, p. 63, ll. 63–64

(೬) ಚಾಳುಕ್ಯ ಚಕ್ರವರ್ತಿ ತ್ರೈಳೋಕ್ಯಮಲ್ಲ ಆಹವಮಲ್ಲನ ಹುನಗುಂದ ತಾಲೂಕಿನ ನಂದವಾಡಿಗಿ[೩೪] ಶಾಸನದಲ್ಲಿ (ತೇದಿ ನಷ್ಟವಾಗಿದೆ, ಸುಮಾರು ಕ್ರಿ.ಶ. ೧೦೬೦), ಆ ಚಕ್ರವರ್ತಿಯ ಮಹಾಮಂಡಳೇಶ್ವರನಾದ ಭಾವನ ಗಂಧ ವಾರಣವೆಂಬ ಬಿರುದಿನ ವ್ಯಕ್ತಿಯು (ಪೆರ್ಮಾಳ ಮಾದರಸ) ಅಣ್ಣಿಗೇರಿಯಲ್ಲಿ 'ಚೋಳಂಗೊಂದ ತ್ರೈಪುರುಷಸಾಲೆಯುಂ' ಮಾಡಿಸಿದ ಬಗ್ಗೆ ಮತ್ತು ಕೋಹಳ್ಳಿಯಲ್ಲಿ 'ದಾನವಿನೋದ ತ್ರೈಪುರುಷದೇವರ ಸಾಲೆಯು' ಮಾಡಿಸಿದ ಬಗ್ಗೆ ಉಲ್ಲೇಖವು ಬಂದಿದೆ. ಅಣ್ಣಿಗೇರಿಯಲ್ಲಿ ಬ್ರಹ್ಮಪುರಿಯಿದ್ದ ಬಗ್ಗೆ ಮತ್ತೊಂದು ಶಾಸನದಿಂದ[೩೫] ಕಂಡುಬರುತ್ತದೆ.

(೭) ಆದೇ ತ್ರೈಳೋಕ್ಯಮಲ್ಲನ ರೋಣ ತಾಲೂಕಿನ ಸೂಡಿಯಲ್ಲಿಯ[೩೬] ಶಾಸನದಲ್ಲಿ (ಕ್ರಿ.ಶ. ೧೦೫೮) ಒಬ್ಬ ಅಧಿಕಾರಿಗೆ 'ತ್ರೈಪುರುಷದೇವಪಾದ-ಪಂಕಜಭ್ರಮರರಪ್ಪ' ಎಂದು ಕರೆಯಲಾಗಿದೆ.

(೮) ಆದೇ ಚಕ್ರವರ್ತಿಯ ಕಲಬುರ್ಗಿ ಜಿಲ್ಲೆಯ ನಾಗಾವಿ[೩೭] ಶಾಸನದಲ್ಲಿ (ಕ್ರಿ.ಶ. ೧೦೫೮) ತ್ರೈಪುರುಷಶಾಲೆಯ ಮಾಣಿಯರ್ಗೆ, ಶಾಲೆಯಲೋ-ದುವ ವಿದ್ಯಾರ್ಥಿಗಳಿಗೆ, ಉಪಾಧ್ಯಾಯರಿಗೆ ಮತ್ತು ಸರಸ್ವತಿ ಭಂಡಾರಿಗಳಿಗೆ ಭೂಮಿ ದಾನಕೊಟ್ಟ ಬಗ್ಗೆ ಉಲ್ಲೇಖವಿದೆ. ನಾಗಾವಿಯು ಆಗಿನ ಕಾಲದ ಪ್ರಖ್ಯಾತ ಅಗ್ರಹಾರವಾಗಿತ್ತು.

(೯) ಆರನೆ ವಿಕ್ರಮಾದಿತ್ಯನ ಮುದ್ದೇಬಿಹಾಳ ತಾಲೂಕಿನ ತುಂಬಿಗಿಯ[೩೮] ಶಾಸನದಲ್ಲಿ (ಕ್ರಿ. ಶ. ೧೦೮೬) ಅಗ್ರಹಾರ ತುಂಬಿಗೆಯ ಶಾಲೆಯ ತ್ರೈಪುರುಷದೇವರ್ಗೆ ದಾನಕೊಟ್ಟ ಬಗ್ಗೆ ಉಲ್ಲೇಖವಿದೆ.

(೧೦) ಆದೇ ಚಕ್ರವರ್ತಿಯ ಮುಂಡರಗಿ ತಾಲೂಕಿನ ಆಲೂರ[೩೯] ಶಾಸನದಲ್ಲಿ (ಕ್ರಿ.ಶ. ೧೦೯೧) ಅಗ್ರಹಾರ ಮಾಳದಾಲೂರಿನಲ್ಲಿ 'ಲೆಂಕಮಾದಿಯಣೇನ ಕಾರಿತ ತ್ರೈಪುರುಷದೇವಾಯತನ' ಎಂದು ಹೇಳಲಾಗಿದೆ.

(೧೧) ಆದೇ ಚಕ್ರವರ್ತಿಯ ನಾಂದೇಡ ಜಿಲ್ಲೆ ದೇಗಲೂರ ತಾಲೂಕಿನ ಹೊಟ್ಟುಲ[೪೦] ಗ್ರಾಮದ ಶಾಸನದಲ್ಲಿ (ಕ್ರಿ. ಶ. ೧೧೦೧) 'ಸರ್ವ್ವಜ್ಞನಮಶ್ಯ-

---

೩೪. Ibid., No. 103, p. 101, ll. 14–15 and 20–21.

೩೫. S. I. I., XV, No. 72, Annigeri Inscription of Somesvara IV, A. D. 1086–87: p. 98, ll. 56–57.

೩೬. S. I. I., XI, I, No. 93 read with Epi. Indica, Vol. XV, No. 6E (2), pp. 83–85.

೩೭. A. P., G. A. S., No. 3, 962.

೩೮. S. I. I., XI, II, No. 132, p. 154, ll. 37–39.

೩೯. Ibid., No. 136, p. 164, l. 50.

೪೦. Inscriptions from the Nanded District ; No. 12, p. 24, Kannada Texts —Dr. S Ritti & G. C. Shelke.

ದಗ್ರಹಾರ ಯೆರಿಗೆಯುಲ್ಲಿ ಶಾಲೆಯು ತ್ರೈಪುರುಷದೇವರಿಗೆ ರೆಬ್ಬೆಯುನಾಯುಕರು ಭೂಮಿಯು ದಾನ ಕೊಟ್ಟರು' ಎಂದು ಹೇಳಲಾಗಿದೆ.

(೧೨) ಹೊಯ್ಸಳ ಚಕ್ರವರ್ತಿ ಇಮ್ಮಡಿ ಬಲ್ಲಾಳನ ವಾಗಳ[೪೧] ಗ್ರಾಮದ ಶಾಸನ (ಕ್ರಿ.ಶ. ೧೨೦೯) (ಮೇಲೆ ಉದ್ಧೃತವಾಗಿದೆ).

ತ್ರೈಪುರುಷದೇವರೆಂದು ನಿರ್ದೇಶವಿರದಿದ್ದರೂ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರನ್ನು ಏಕತ್ರವಾಗಿ ಉಲ್ಲೇಖಿಸುವ ಒಂದು ಶಾಸನ[೪೨] ಬದಾಮಿಯುಲ್ಲಿ ಸಿಗುತ್ತದೆ. ವಿಜಯಾದಿತ್ಯ ಸತ್ಯಾಶ್ರಯುನ ಕಾಲದ ಈ ಶಾಸನದ ತೇದಿ ಕ್ರಿ.ಶ. ೬೯೯. ಇದರಲ್ಲಿ ರಾಜಮಾತೆ ವಿನಯುವತಿದೇವಿ ರಾಜಧಾನಿ ಬದಾಮಿಯುಲ್ಲಿ ಬ್ರಹ್ಮ, ವಿಷ್ಣು, ಮುಹೇಶ್ವರರ ಸ್ಥಾಪನೆ ಮಾಡಿದಳೆಂದು ಮತ್ತು ಆ ದೇವತೆಗಳಿಗೆ ಕೆಲವು ಸುಂಕಗಳನ್ನು ಬಿಟ್ಟುಕೊಟ್ಟಳೆಂದು ಹೇಳಲಾಗಿದೆ. ಇದು ಬ್ರಹ್ಮ ವಿಷ್ಣು ಮುಹೇಶ್ವರ ತ್ರಿಮೂರ್ತಿಗಳನ್ನು ಒಂದೆಡೆಯುಲ್ಲಿ ಹೇಳಿದ ನಮ್ಮ ನಾಡಿನ ಅತಿ ಮೊದಲಿನ ಶಾಸನ.

ಮೇಲಿನ ಸಂದರ್ಭಗಳಿಂದ ಚಾಳುಕ್ಯ, ರಾಷ್ಟ್ರಕೂಟ ಮತ್ತು ಹೊಯ್ಸಳರ ಕಾಲದಲ್ಲಿ ತ್ರೈಪುರುಷದೇವರ ಸಂಪ್ರದಾಯ ಅಸ್ತಿತ್ವದಲ್ಲಿತ್ತೆಂದು ಮತ್ತು ತ್ರೈಪುರುಷದೇವ, ಶಾಲೆ, ಅಗ್ರಹಾರ, ಬ್ರಹ್ಮಪುರಿಗಳು ಒಂದಕ್ಕೊಂದು ಸಂಬಂಧಪಟ್ಟದ್ದುವೆಂದು ಮನವರಿಕೆಯಾಗುತ್ತದೆ.

★ ಆರ್. ಎನ್. ಗುರವ

---

೪೧. S. I. I., IX, I, No. 329, pp. 343–47.

೪೨. Karnatak Inscriptions, Vol. I, No. 2, p. 3.

ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ

ಈ ಕಲಿಯುಗದೊಳಗಿನ ಕಥಿಯ ಕೇಳರಿ ಹಿರಿಯರಾ, ಸಣ್ಣದೊಡ್ಡವರಾ |
ಕಡ್ಲಿಮಟ್ಟಿ ಟೇಸನ(ಸ್ಟೇಶನ್)ದಾಗ ಇದ್ರಿ ತಿಕೀಟ ಮಾಸ್ತರಾ || ಹೋ ಜೀ ||ಪಲ್ಲ||

ತಾಯಿತಂದಿ ಕರದ ಹೇಳತಾರ ತನ್ನ ಮಗನಿಗಿ, ಹೋಗ ಊರಿಗಿ |
ಕರಕೊಂಡ ಬಾರೋ ನಿನ್ನ ಮಡದಿ ಕಾಶಿಬಾಯಿಗಿ || ಹೋ ಜೀ ||

ತಾಯಿತಂದಿ ಮಾತ ಕೇಳಿ ಮಗ ಹೊಂಟ ಊರಿಗಿ, ಅತ್ತಿಮಾವರ ಮನಿಗಿ |
ಅಳಿಯಾ ಬಂದನಂತ ಬಿಸಿನೀರ ಕೊಟ್ರ ಕಾಲಿಗಿ || ಹೋ ಜೀ ||

ಸತಿಪತಿ ಮಾತಾಡತಾರ ಉಂಡ ಮಂಚದ ಮ್ಯಾಲ ಮಲಗಿ, ಎದ್ರೊ ಬೆಳಗಾಗಿ |
ಅತ್ತಿಮಾವರಿಗಿ ಕೇಳತಾನ ಕಳಿಸರಿ ನನ್ನ ಸತಿಯಳಗಿ || ಹೋ ಜೀ ||

ಕಡು ಬ್ಯಾಸಗಿ ಬಿಸಲಾ ಕಳಸುದುಲ್ಲರಿ ಕೂಸಿಗಿ, ನಿಮ್ಮ ಸಿಸುವನಿಗಿ |
ಸೀರಿ ಕುಬಸಾ ತಂದಿಲ್ಲರಿ ಇನ್ನು ನಮ್ಮ ಮಗಳೀಗಿ || ಹೋ ಜೀ ||

॥ ಚಾಲ ॥

ಇಷ್ಟ ಕೇಳಿ ಅಳಿಯಾ ಖಿನ್ನ ಆಗಿ ಎತ್ತಿಕೊಂಡ ತನ್ನ ಕೂಸಿಗಿ,
ಮುದ್ದಾಡಿ ಅಂತಾನ ಮಗನೀಗಿ |
ಎರವಾಯಿತೋ ಮಗನ ನಿನ್ನ ಮಾರಿ ಇಂದೀಗಿ || ಹೋ ಜೀ ||

ನೀ ಬಾರೋ ನಿನ್ನ ಊರಿಗಿ ನಾ ಬರುವದಿಲ್ಲ ತಿರುತಿರುಗಿ,
ನಿನ್ನ ಜಿಂತಿ ಆಯಿಮುತ್ತ್ಯಾರಿಗಿ |
ನಿನ್ನ ಮುಖಾ ನೋಡುವದಕಾಗಿ ತಪಾ ಕುಂತಾರ ನಿನಗಾಗಿ || ಹೋ ಜೀ ||

ಕರದ ಹೇಳತಾನ ಸತಿಯಳಿಗಿ ಬಹು ಜೋಕೆ ಎನ್ನ ಪುತ್ರನಿಗಿ,
ಸರ್ವ ರೀತಿಯಿಂದ ಸರಿಯಾಗಿ |
ಸಂರಕ್ಷಣೆ ಮಾಡಿ ಕರಕೊಂಡ ಬಾರ ಕಂದನಿಗಿ || ಹೋ ಜೀ ||

ಅತ್ತಿಮಾವ ಅಂತಾರ ಅಳಿಯನಿಗಿ ಸಿಟ್ಟ ಹಚ್ಚಿಕೋಬ್ಯಾಡ್ರಿ ಮನಸಿಗಿ,
ಉಂಡ್ಹೋಗ್ರಿ ಇನ್ನೊಂದ ತಾಸಿಗಿ |
ಗಂಡ ಉಣಲಾರದ ಹೋದ್ರ ಅವನ ಮಡದಿ ಬಿದ್ದಾಳ ಪಾದಿಗಿ || ಹೋ ಜೀ ||

ಯಾರ ಕರದರ ಬರವಲ್ಲ ಸೆಟಗೊಂಡ ಹೊಂಟ ಬರಾರಾ, ಹೊಂಟ ಬರಾರಾರ |
ಕಡ್ಲಿಮಟ್ಟಿ ಟೇಶನ್ನದಾಗ ಇದ್ರಿ ತಿಕೀಟ ಮಾಸ್ತರಾ || ಹೋ ಜೀ ||
(ಕೂಡ ಪಲ್ಲ) || ೧ ||

ಅಂವ ಹೋಗುವರೊಳಗ ತಿಕೀಟ ಸುರುವ ಆಗಿತ್ತು, ತುಗೊಂಡಾನ ಜಮಾತ |
ಗಾಡ್ಯಾಗ ಕುಂತ ಹೋದಾನ ಮುಂದ ರಾಜಹಂಸ || ಹೋ ಜೀ ||

ಗಂಡ ಹೋದ ಬಳಿಕ ಗೆಣಿಸತಾಳ ಕುಂತ, ಜಲ್ಮ ಸುಡಲಿಂತ |
ಹವಣಿಕಿ ಮಾಡತಾಳ ತಾನೂ ಹೋಗಬೇಕಂತ || ಹೋ ಜೀ ||

ತಾಯಿತಂದಿಗಿ ಕರದ ಹೇಳತಾಳ ಕೇಳರಿ ನನ್ನ ಮಾತಾ, ಮನಸಿನೊಳು ಮರತಾ |
ನನ್ನ ಗಂಡನ ಕೂಡ ನಾ ಹೋಗತೀನ ಈ ಹೊತ್ತ || ಹೋ ಜೀ ||

|| ಚಾಲ ||

ತಾಯಿತಂದಿ ಹೇಳತಾರಲ್ಲ ನುಡಿ ಶ್ಯಾಣಿಗಿ ಸಕ್ಕರಿ ಹಾಲಾ,
ಉಂಡುಟ್ಟು ಹೋಗು ಕುಶಿಯಾಲಾ |
ನನ್ನ ಗಂಡನ ಬಿಟ್ಟು ನಾ ಹೆಂಗ ಉಣ್ಣಲೀ ಊಟಮುಲ್ಲ || ಹೋ ಜೀ ||

ಹಾದಿ ಬರುವಾಗ ತೊಲಬಾಗಿಲ ಎಡಗಾಲಿಗಿ ಬಡಿತ ಹೊಸ್ತಿಲಾ,
ಅಪಶಕುನ ಆಗ್ಯಾವರಿ ಸಾಮೇಲಾ |
ಬಂದ ಕಟಕ ಇವರಿಗಿ ತುಗೊಂಡ ಕತ್ತಿ ಕುಡಗೋಲ || ಹೋ ಜೀ ||

ಬೆಕ್ಕ ಅಡ್ಡ ಬಂದರ ಬಿಡಲಿಲ್ಲಾ ತನ್ನ ಪುರುಷನ ಮ್ಯಾಲ ಹಂಬಲ,
ನಿಕೆದೊಳಗ ಬರಿದಂಗ ಅಮಲ |
ಯಾವ ಮಾತಿನ ಖಬರಿಲ್ಲ ಲಕ್ಷ ಗಂಡನ ಮ್ಯಾಲ || ಹೋ ಜೀ ||

ಕೆಟ್ಟ ಬ್ಯಾಸಗಿ ಮಧ್ಯಾನ ಬಿಸಲಾ ಹುಟ್ಯಾ ಮಗಳು ಬರಿಗಾಲಿಲೆ ನಡದಿಲ್ಲಾ,
ಸಿಂಬಿಹಚ್ಚೆನಂಥ ಮೈತೊಗಲ |
ಕಾಲ ಸುಟ್ಟು ಗುಳ್ಳಿ ಎದ್ದು ಉರವತಾವರಿ ಅಂಗಾಲ || ಹೋ ಜೀ ||

ಸೀರಿ ಕುಬಸ ತಪ್ಪಲನ ತೊಯ್ದು ಹರಿಯುತಾವ ನೀರಾ, ಕೊರಳಾಗಿನ ಬೆವರಾ |
ಕಡ್ಲಿಮಟ್ಟಿ ಸ್ಟೇಶನ್ನದಾಗ ಇದ್ದ ತಿಕೀಟ ಮಾಸ್ತರಾ || ಹೋ ಜೀ ||
(ಕೂಡ ಪಲ್ಲ) || ೨ ||

ತನ್ನ ಗಂಡನ ಕೂಡಬೇಕಂತಾಳ ರಾಜಹಂಸ, ಗಂಡನ ಮ್ಯಾಲ ಧ್ಯಾಸ |
ಮಲ್ಲಿಗಿ ಹೂವಿನಂಥ ಮುಖ ಬಾಡಿ ಉಂಡಿಲ್ಲ ಉಪವಾಸ || ಹೋ ಜೀ ||

ತನ್ನ ಮನದಾಗ ತಾನೇ ಅಂತಾಳ ಭಗವಾನ—ಕೂಸಾ, ಎಲೋ ಜಗದೀಶಾ |
ನಮ್ಮವ್ವ ಎಲ್ಲಿ ಕರಕೊಂಡ ಹೊಂಟಾಳ ಇಂದಿನ ದಿವಸ || ಹೋ ಜೀ ||

ಸ್ಟೇಶನಕ ಹೋಗುದರೊಳಗ ಹೊತ್ತ ಉಳಿತ ಒಂದ ತಾಸ, ಆದೀತೋ ಮೋಸ |
ಗಾಡ್ಯಾಗ ಕುಂತ ಮುಂದ ಹೋಗಿದ್ದ ರಾಜಹಂಸ || ಹೋ ಜೀ ||

ಅಯ್ಯಯ್ಯೋ ಶಿವನ ಹೆಂಗ ಮಾಡಲಿ ಇಂದಿನ ದಿವಸ, ಬಂತ ವನವೇಸಾ |
ಮನಿಮಾರ ಇಲ್ಲದ ಹೆಂಗ ಕಳಿಯಬೇಕ ಇಂದಿನ ದಿವಸ || ಹೋ ಜೀ ||

|| ಚಾಲ ||

ಸುತ್ತ ಸುಳುವ ಇಲ್ಲ ಯಾರ್ಯಾಽರ ಒಬ್ಬಕ್ಕಿ ನಿಂತಾಳ ನಿರ್ಧಾರ,
ಆವಾಗ ಬಂದ ತಿಕೀಟ ಮಾಸ್ತರ |
ಆಕಿ ರೂಪ ನೋಡಿ ಅವನ ತಲಿಗೇರಿತು ಕಾಮಪೂರಾ || ಹೋ ಜೀ ||

ಬಂದ ಕೇಳತಾನ ಯಾವೂರಾ ಏನದ ಹೇಳ ನಿನ್ನ ಹೆಸರಾ,
ಏನ ಮಂದಿ ನಿನ್ನ ಪುತ್ತರಾ |
ನಿಮ್ಮತ್ತಿ ಮಾವಂದ ಹೆಸರ ಹೇಳ ನಿರ್ಧಾರಾ || ಹೋ ಜೀ ||

ಮಾಸ್ತರಗ ಹೇಳ್ಯಾಳ ಮಜಕೂರಾ ಏನ ತುಗೊಂಡ ಸುದತಿ ಮನಿಮಾರಾ,
ನನ್ನ ಗಂಡನೂರ ಶಿವಪೂರ ನಾ ಇರುವುದು ಖಾನಾಪೂರ |
ನನ್ನ ಗಂಡಗ ನನಗ ದಾರ್ಯಾಗ ಆತರಿ ಹೇರಪೇರ || ಹೋ ಜೀ ||

ಕರಿಬಂದ ಗಂಡಗ ಕಳಸಲಿಲ್ಲರಿ ತವರವರಾ, ಮಾಡಿ ತಕರಾರಾ |
ಕಡ್ಲಿಮುಟ್ಟಿ ಸ್ಟೇಶನ್ನದಾಗ ಇದ್ರಿ ತಿಕೀಟ ಮಾಸ್ತರಾ || ಹೋ ಜೀ ||
(ಕೂಡ ಪಲ್ಲ) || ೩ ||

ಇಷ್ಟ ಹೇಳುದರೊಳಗ ಸೂರ್ಯಾ ತಾಯಿ ಹೊಟ್ಟ್ಯಾಗ ಹೋದಾ,
ಬಿದ್ದಿತೋ ಕತ್ತಽಲ ಗಡದ |
ಕಾಶೀಬಾಯಿಗಿ ಇನ್ನ ಮಾಸ್ತರ ಕೊಡತಾನ ಬೋಧಾ || ಹೋ ಜೀ ||

ಈ ಸ್ಟೇಶನದೊಳಗ ಹುಲಿಕರಡಿ ಕಾಟ ತ್ವಾಳಿಂದ, ಮಾಡತಾವ ಲಬ್ಧ |
ಹೊಸ ಮನಿಶಾರ ನಾತಿಗಿ ಬರತಾವ ಗಿಡಗಂಟಿ ಜಿಗದ || ಹೋ ಜೀ ||

ಕಾಶಿಬಾಯಿ ಕುಂತಾಳ ಏನ ಒಳ್ಳೇ ಹುಟ್ಟ ಹಿಡದ, ಅಂಜಿ ಎದಿ ಒಡದಾ |
ಹೆಂಗ ಮಾಡಲಿ ಶಿವನ ಇವರೊಳಗ ಉಳಿದು ಆಗಽದಾ || ಹೋ ಜೀ ||

ಮಾಸ್ತರ ಹೇಳತಾನ ಬೋಧಾ ದೂರಿಂದ ಬಂದಽದಿ ನಡದ,
ನಿದ್ದಿಹತ್ತಿ ಮಲಗತೀಯ ದಣದ |
ನಾ ತಿಕೀಟ ಕೊಡುವಾಗ ಯಾರ ಎಬ್ಬಿಸತಾರ ಬಂದ || ಹೋ ಜೀ ||

॥ ಚಾಲ ॥

ನಾ ಇರುವ ಕೋಲಿ ಅsತಿ ಒಂದs ನಿನ್ನ ಪ್ರಕೃತಿ ಅsತಿ ಪಸಂದ,
ನೀರ ಫರಾಳ ಕೊಡುವೆನು ತಂದ |
ನಾ ಬಂದ ಎಬ್ಬಿಸತೀನ ಸ್ವಪ್ನ ಮಲಗ ಆನಂದ ॥ ಹೋ ಜೀ ॥

ಈ ಸ್ಟೇಶನ ಕಾರಭಾರ ನಂದsss ಇಲ್ಲಿ ಅಂಜಿಕಿ ಇಲ್ಲ ಯಾವಂದ,
ಹೊಸ ಗಾದಿ ಹಾಸ್ಯಾನ ಮತ್ತೊಂದ |
ಇಷ್ಟು ಹೇಳಿ ಮಲಗಿಸಿ ಮಾಸ್ತರ ತಿಕೀಟ ಕಚೇರಿಗಿ ಬಂದ ॥ ಹೋ ಜೀ ॥

ಮಾಸ್ತರ ಅಂತಾನ ಖುಷಿಯಿಂದಾ ಹಿಂತಾ ಹೆಣ್ಣ ಕಂಡಿದ್ದಿಲ್ಲ ಎಂದ,
ಪರಮಾತ್ಮ ನನ್ನ ದsಸಿsಂದಾ |
ಬೇಕಂತ ಕಳಿಸ್ಯಾನ ಕೈಲಾಸದಿಂದ ॥ ಹೋ ಜೀ ॥

ಕಾಶೀಬಾಯಿ ಗೇಣಿಸತಾಳ ಮನಸೊಂದ ಇವ ಏನ ಮಾಡತಾನ ಏಂದ,
ನನ್ನ ರೂಪಕ ಮರುಳಾಗಿ ಬಂದ |
ಅವ ಮುಕಮುಳುಗುವ ಕಂಡ ಗುಣ ತಿಳದಳರಿ ಹಾದೂಂದಾ ॥ ಹೋ ಜೀ ॥

ಪರಮಾತ್ಮಗಂತಾಳ ಪಾರಮಾಡೋ ಪರಮೇಶ್ವರಾ, ಸ್ವಾಮಿ ಶಂಕರಾ |
ಕಡ್ಲಿಮಟ್ಟಿ ಸ್ಟೇಶನ್ನದಾಗ ಇದ್ರಿ ತಿಕೀಟ ಮಾಸ್ತರಾ ॥ ಹೋ ಜೀ ॥
(ಕೂಡ ಪಲ್ಲ) ॥ ೪ ॥

ಗಂಡನ ಸ್ಮರಣೆ ಮಾಡತಾಳ ಒಂದ ಕಾಲಿನ ಮ್ಯಾಲ ನಿಂತ, ಗೆಳೆಯಾ ಎಷ್ಟ ಪಾಡ |
ಪತಿವ್ರತಾ ಇಂದಿಗಿ ಹಾನಿಯಾಗುವದು ಖಂತಾ ॥ ಹೋ ಜೀ ॥

ಅತ್ತಿಮಾವರಿಗಿ ಹೇಳತಾಳ ದೊಡ್ಡವರಿಲ್ಲ ನಿಮುಕಿಂತ, ಜಲ್ದ ಗಾಯಿಂತ |
ಹುಲಿಬಾಯಿಯೊಳಗ ಸಿಕ್ಕsನಿ ಬಿಡಿಸಬೇಕ್ರಿ ಈ ಹೊತ್ತ ॥ ಹೋ ಜೀ ॥

ಬಾಗಲ ತೆರದ ಹೊರಗ ಹೋದಿನಂದ್ರ ಕೀಲಿ ಮುಜಬೂತ, ಕಿಡಕಿ ಬಂದೋಬಸ್ತ |
ಅವನ ತಾಬಿಲನಾದರೆ ನೀನೇ ಕಾಯೋ ಸಾಕ್ಷಾಂತಾ ॥ ಹೋ ಜೀ ॥

ಅಷ್ಟರೊಳಗ ಗಾಡಿ ಬಂದ್ಹೋತ ತಿಕೀಟ ಬಂದಾತು; ಮಾಡಲಿಲ್ಲ ಸುಸ್ತ |
ಮಾರಿ ನೋಡಬೇಕಂತ ಕಾಶೀಬಾಯಿ ಮ್ಯಾಗ ಚಿತ್ತಾ ॥ ಹೋ ಜೀ ॥

॥ ಚಾಲ ॥

ಅಲ್ಲಿವಲ್ಲೀ ಇಟ್ಟ ಮೇಜಿನ ಮ್ಯಾಲ ರೊಕ್ಕ ರೂಪಾಯಿ ಖಜಿನದ ಚೀಲ,
ಸಂದಕದ ಬಾಯಿ ಮುಚ್ಚಲಿಲ್ಲ |
ದಪ್ತರ ಗಂಟ ಕಾಗದಪತ್ರ ಸುತ್ತಿ ಇಡಲಿಲ್ಲ ॥ ಹೋ ಜೀ ॥

ಹಾತ್ತೊರದ ತಪಾ ಮಾಡಲಿಲ್ಲ ಬಂದ ತೆರದಾನ ಕೋಲಿ ಬಾಗಲಾ,
ಕಾಶೀಬಾಯಿ ಜೀವದಾಗ ಜೆಲ್ಲಾ |
ಅಂತಾಕೋ ನನ್ನ ಪತಿವ್ರತಾಕ ಬಂದಿತ ಉರಲ || ಹೋ ಜೀ ||

ಮಾಸ್ತರಗ ಹೇಳತಾಳ ಅಕಲಾ ಸಮಾಧಾನ ಹಿಡಿರಿ ಗುಣಪಾಲ,
ನನಗೆ ತಿಳಿದಿಲ್ಲ ರಾತರಿ ಅಮಲ |
ಕಾಲ್ಮಡದ ಬರತೀನ ಕೂಸಿಗಿ ಹೊಚ್ಚರಿ ಶ್ಯಾಲ || ಹೋ ಜೀ ||

ಕಾಲ್ಮಡದ ಹೊರಗ ಮನದಾಗ ಅಂತಾಳ ಹೆಂತ ಚೋರಾ, ಕೆಟ್ಟ ಪಾಮರಾ |
ಕಡ್ಡಿಮುಟ್ಟ ಸ್ಟೇಶನ್ನದಾಗ ಇದ್ರಿ ತಿಕೀಟ ಮಾಸ್ತರಾ || ಹೋ ಜೀ ||
(ಕೂಡ ಪಲ್ಲ) ||೫||

ಕಾಲ್ಮಡದ ಬಂದ ಜಗ್ಲ್ಯಾಳ ಬಾಗಲ ಪಡಶಾ, ಹಾಕಿದಾಳ ಚಿಲಕ |
ಮಾಸ್ತರ ಅಂತಾನ ಇನ್ನಽ ಬರಲಿಲ್ಲ ಕಾಶೀಬಾಯಿ ಯಾಕ || ಹೋ ಜೀ ||

ಕುಂತಾವ ಎದ್ದ ಬಂದ ಬಾಗಿಲ ಹಂತೇಕ, ಹತ್ತಲಿಲ್ಲ ತರಕ |
ಅವನ ಪಾಲಕ ಆತು ಮುಳುಗಿದಂಗ ಮೂರು ಲೋಕ || ಹೋ ಜೀ ||

ತಲಿಗೇರಿದ ಕಾಮಪೂರ ಇಳಿದ ಬಂತ ತಿಳಿಯಾಕ, ತಪ್ಪಿತೋ ದಿಕ್ಕಾ |
ಕೈಮುಗಿದ ಕರುವತೀನ ಬಾರ ನನ್ನ ಅನುಕೂಲಕ | ಹೋ ಜೀ ||

|| ಚಾಲ ||

ಮುರಿಬೇಕ ಅಂತಾನ ಬಾಗಲ ಸುಳಿಕಿ ಬಾಗಲಾ ಜಗ್ಗತಾನ ಕೈಹಾಕಿ,
ಮುರುವುದಕ ಮಾಡ್ಯಾಣ ಹವಣಿಕಿ |
ಬಗಿಹರಿಯುವಲ್ಲದು ನಿಂತಲ್ಲಿ ನಿಂತ ಉಸರ್ಗ್ಯಾಕಿ || ಹೋ ಜೀ ||

ಕಿಡಿಕಿಯಿಂದ ನೋಡತಾನ ಹಣಿಕಿ ನೋಡಲಾರೆ ಇಕಿ ಚೆಲುವೀಕಿ,
ಏನ ಮಾಡಬೇಕ ಹಂಚಿಕಿ |
ಏನ ಬೇಡತಿ ಬೇಡ ಕೊಡತೀನ ರೋಖಾರೋಖ || ಹೋ ಜೀ ||

ಮುಂದ ಒಗದಾನ ಬಂಗಾರ ಒಂಕಿ ಅವ ಗಳಿಸಿಷ್ಟ ಇಡಲಿಲ್ಲ ಬಾಕಿ,
ಅಷ್ಟಿಷ್ಟಲ್ಲ ಅದಕಿಲ್ಲ ಎಣಿಕಿ |
ಕಿಡಿಕೆಂದ ಹಾಸಿ ಎಲ್ಲ ಒಗದ ಉಳಿಯಲಿಲ್ಲ ಬಾಕಿ || ಹೋ ಜೀ ||

ಇಷ್ಟೇ ಅದ ದೌತಿ ಲೇಖಣಿಕಿ ಬರದ ಕೊಡತೀನ ತಿಕೀಟ ಮಾಸ್ತರಕಿ,
ತರಿಸೂಽವೆ ಮೇಣೆಪಲ್ಲಕ್ಕಿ |
ನನಗ ಬೇಕಾಗಿಲ್ಲ ಅದರಾಗ ನೀನೇ ಕೂಡ್ರಽಕ್ಕಿ || ಹೋ ಜೀ ||

ಬರಿಬತ್ತಲೆ ನಿಂತ ಕಿಡಿಕೆಂದ ಒಗದಾನೋ ಏರಿ ಕಾಮಪೂರ |
ಕಡ್ಲಿಮಟ್ಟಿ ಸ್ಟೇಶನ್ನದಾಗ ಇದ್ರಿ ತಿಕೀಟ ಮಾಸ್ತರಾ || ಹೋ ಜೀ ||
(ಕೂಡ ಪಲ್ಲ) || ೧ ||

ಕಾಶೀಬಾಯಿ ಅಂತಾಳ ಹೆಂತ ಮಾತನಾಡಿದಿ ನನಗ, ಹಳ್ಳ ಕಡದಂಗ |
ಪತಿವೃತಾ ಗರತಿ ಮಾಡುದಲ್ಲ ಹಿಂಗ ಗಂಡನ ವ್ಯಾಗ || ಹೋ ಜೀ ||

ಹೊರಬಾಗಲದಾಗ ನಿಂತ ಉಗಳ್ಯಾಳ ಮಾರಿಮ್ಯಾಗ, ಮಳ್ಳ ಮಾಸ್ತರಗ |
ಏನ ಅಂತ ಉತ್ತರ ಕೊಡತಿ ನಾಳೆ ಮಹಾದೇವಗ || ಹೋ ಜೀ ||

ನಿನ್ನ ಬೆಳ್ಳಿಬಂಗಾರವಷ್ಟ ಆಳಮಕ್ಕಳ ಮೈಮ್ಯಾಗ, ನನ್ನ ಮನಿಯಾಗ |
ನನ್ನ ಪುರುಷ ಉಣವನೋ ಬಂಗಾರ ಗಂಗಾಳದಾಗ || ಹೋ ಜೀ ||

ಬ್ರಹ್ಮ ಏನಂತ ಬರದಾನ ನಿನ್ನ ಹಣಿಯಾಗ, ತಿಳವತೇನೋ ನಿನಗ |
ಬಂಗಾರ ಬದುಕ ಇದ್ರ ದಾನ ಮಾಡೋ ಬಲ್ಲಂಗ || ಹೋ ಜೀ ||

|| ಚಾಲ ||

ಮಾಸ್ತರ ಕೇಳಿ ಆವ ಬಿನ್ನ ಬದಲಾದಂವ್ರ ಮಾರಿಗೆಹ್ನ,
ಅದ್ರಾಸಿ ಭೂಮಿಗಿ ಬಿದ್ದಾನ |
ನಿನ್ನ ಬಿಟ್ಟರ ಬದಲುತ್ತರದಾವ ಅಂತಾನ || ಹೋ ಜೀ ||

ಎಡಬಲಕ ಹೊರಳಿ ನೋಡ್ಯಾನ ಮಲಗಿರುವ ಕೂಸಿನ ಎಬಿಸ್ಯಾನ,
ಮಲ್ಲಿಗಿ ಹೂವಿನಂತ ಶಿಶುವೀನ |
ಕೈಯಾಗ ಹಿಡಕೊಂಡ ಕೂಸೀನ ಕೊಲ್ಲತೀನ ಅಂತಾನ || ಹೋ ಜೀ ||

ನೀ ಬಂದರ ಬಿಡತೀನ ನಾನಾ ಬರದಿದ್ದರ ಹೊಡಿತೀನ ಪ್ರಾಣಾ,
ನನ್ನ ಕೈಯಾಗ ಕೂಸಿನ ಮರಣಾ |
ಸುಳ್ಳಲ್ಲ ತಿಳದ ಬಾರ ನಿನ್ನ ಗಂಡನ ಪ್ರಮಾಣ || ಹೋ ಜೀ ||

ಕಾಶೀಬಾಯಿ ಅಂತಾಳ ಕ್ಯೇಳ ಶ್ವಾನಾ ಬದುಕಿರಲಿ ನನ್ನ ಒಗತಾನಾ,
ಹಿಂತಾವ ಏಸ ಮಕ್ಕಳನ |
ನನ್ನ ಗಂಡಗ ಆಸೇವಾದರ ಮುಂದ ಎತ್ತಿ ಇಳಪೇನ || ಹೋ ಜೀ ||

ಹಿಂತಾ ಏಸ ನನ್ನ ಪುತ್ರ ಸತ್ತ ಹುಟ್ಟ್ಯಾರ, ಇಟ್ಟಿಲ್ಲೋ ಪರಕಾರಾ |
ಕಡ್ಲಿಮಟ್ಟಿ ಸ್ಟೇಶನ್ನದಾಗ ಇದ್ರಿ ತಿಕೀಟ ಮಾಸ್ತರಾ || ಹೋ ಜೀ ||
(ಕೂಡ ಪಲ್ಲ) || ೨ ||

ಮಾಸ್ತರಗ ಕರುಣ ಬರಲಿಲ್ಲ ಕಣಕದಂಥ ಪಿಂಡ, ಕಾಲಾಗ ಹಿಡಕೊಂಡ |
ಹರತುಳ್ಳ ಚಾಕುಲೆ ಕೂಸಿನ ಹಸ್ತ ಕಡಕೊಂಡ || ಹೋ ಜೀ ||

ಕಾಶೀಬಾಯಿ ನಗುವಳೋ ಒದ್ದಾಡು ಕೂಸಿನ ಕಂಡ, ಶಿವನೆ ಬಲಿಗೊಂಡ |
ಹಿಂತಾ ವ್ಯಾಳೆದಾಗ ಇದ್ರ ಮಗನ ಮಾರಿ ನೋಡತಿದ್ದ ಗಂಡ ||ಹೋ ಜೀ ||

ಮತ್ತ ಮಾಸ್ತರ ಮಾಡ್ಯಾನ ಕೂಸಿನ ಕೈಕಾಲ ತುಂಡ, ಮಾಡಿ ಒಗದ ರುಂಡ |
ಕಿಡಿಕೆಂದ ಹಾಸಿ ಒಗದ ಒಂದೊಂದs ತುಂಡ || ಹೋ ಜೀ ||

ಕಾಶೀಬಾಯಿ ಕಂದನ ಕಮಲ ತುಣಕ ಆಯಿಕೊಂಡ, ಉಡ್ಯಾಗ ಕಟಕೊಂಡ |
ಪರಮಾತ್ಮಗಂತಾಳೋ ನೀನೇ ನೋಡೋ ಕಣ್ಣಂಡ || ಹೋ ಜೀ ||

|| ಚಾಲ ||

ಕಾಶೀಬಾಯಿ ಗಂಡನ ವ್ಯಾಲೆ ಭಕ್ತಿ, ದುಷ್ಟಂದ ನಡಿಯಲಿಲ್ಲ ಶಕ್ತಿ |
ಅಷ್ಟರೊಳಗ ಗಾಡಿ ಬಂತ ಹೊತ್ತ ತಾಸ ಏರೇತಿ || ಹೋ ಜೀ ||

ಆಗಿಂದಾಗೆ ಬಂದಾಳ ಗುಣವಂತೀ, ಚಂದ್ರಮತಿ ಹಂತ ಸತ್ಯವಂತಿ |
ಸಾಹೇಬ ಇಳದ ಬರುವಾಗ ಅಡ್ಡಬಿದ್ದಾಳ ವಿನಂತಿ || ಹೋ ಜೀ ||

ಕಾಶೀಬಾಯಿ ಮುಖ ಬಾಡೇತಿ, ಸೀರೆಲ್ಲ ರಕ್ತ ಮುಳುಗೇತಿ |
ಉಡಿಬಿಚ್ಚಿ ತೋರಸತಾಳ ಸನ್ನ ಸುಡಿಗಿ ಹಿಂಗsತೀ || ಹೋ ಜೀ ||

ಚಿಲ್ಲಾಳನ ಹಂತ ಮಗನ ಕೋದ ಮಾಡ್ಯಾನ ಚೂರಚೂರಾ,
ಕೇಳರಿ ಸಾಹೇಬರಾ |
ಕಡ್ಲಿಮಟ್ಟಿ ಸ್ಟೇಶನ್ನದಾಗ ಇದ್ರಿ, ತಿಕೀಟ ಮಾಸ್ತರಾ || ಹೋ ಜೀ ||
(ಕೂಡ ಪಲ್ಲ) || ೮ ||

ತನ್ನ ಮುಂಗೈ ತಾನs ಕಡಕೊಂಡ ಅಂತಾನ, ಸಾಹೇಬ—ಹೆಂತ ಬೈಮಾನ |
ಕಟಕ ಆವರು ಕೊಲ್ಲಾಕಿಲ್ಲೊ ಇಂಥ ಶಿಶುವೀನಾ || ಹೋ ಜೀ ||

ಹೆಡಮುರಕಿ ಕಟ್ಟಿ ತರಿಸ್ಯಾರೋ ಮಳ್ಳ ಮಾಸ್ತರನ, ಕಳ್ಳ ಕಾಸ್ತರನ |
ಗಲ್ಲ ಭಡಾವ್ ಮಾಡಿರೆಂತ ಸಾಹೇಬ ಹುಕುಂ ಕೊಟ್ಟಾನ || ಹೋ ಜೀ ||

ಆ ಗಳಿಗಿಂದ ತಾರ ಮಾಡಿ ತರಿಸ್ಯಾರ ಆಕಿ ಪುರುಷನ, ರಾಜಹಂಸನ |
ಸತಿಪತಿಗಿ ಕೂಡಿಸಿಕೊಟ್ಟ ಬಹುಮಾನ || ಹೋ ಜೀ ||

ದೇಶದೊಳಗ ಸುದ್ದಿ ಹರಿಬಿತ್ತು ಕೇಳಿದ ಬಹು ಜನ, ಆದರೋ ಧನ್ಯ ಧನ್ಯ |
ಊರೂರಿಗೆ ಛಾಪಿಸಿ ಬಿಟ್ಟಾರೋ ವರ್ತಮಾನಾ || ಹೋ ಜೀ ||

|| ಚಾಲ ||

ಈ ಕಲಿಯುಗದೊಳಗಿನ ಗಂಡಸ್ಕರು ಮಹಾ ದುಷ್ಟರು ಮಹಾ ಪಾತಕರು |
ಪರಸ್ತ್ರೀಯರ ವ್ಯಾಲ ನೆದರೆತ್ತಿ ಪ್ರಾಣ ಕೊಡುವರು || ಪೋ: ಜೀ: ||

ಡೋಣಿ ಸಾಲಕ ಇಂಗಳಿಗಿಯುವರು, ಮಲಹಸನ ಪವ ಅಂಬುವರು |
ಹಿಂಗ ಪವ ಕಟ್ಟಿ ದೇಶದ ವ್ಯಾಲೆ ಹಾಡಾವರು || ಪೋ: ಜೀ: ||

ಬಡವ ಫಕೀರ ಅಂತಾರ ಮಾಸ್ತರ ಪೆಂತ ಮುಡದಾರ, ಕೇಳ್ರಿ ತುರಾಯಿದವರ |
ಕಡ್ಲಿಮಟ್ಟಿ ಸ್ಟೇಶನ್ನದಾಗ ಇದ್ರಿ ತಿಕೀಟ ಮಾಸ್ತರಾ || ಪೋ: ಜೀ: ||
(ಕೂಡ ಪಲ್ಲ) || ೯ ||

★ ಸಂ : ಜ್ಯೋತಿ ಹೊಸೂರ

ಪಂಪಭಾರತದ ಮಂಗಲಪದ್ಯ

ಶ್ರೀಯುನರಾತಿಸಾಧನಪಯೋನಿಧಿಯೊಳ್ ಪಡೆದುಂ, ಧರಿತ್ರಿಯುಂ ।
ಜೀಯೆನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡುಂ,+ ಆ ।
ತ್ಮೀಯ "ಸುಪುಷ್ಪವೃಷ್ಟಿ"ಯುನೊಡಂಬಡೆ ತಾಳ್ದಿಯುಂ,+ ಇಂತುದಾತ್ತನಾ ।
ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯಕೋಟಿಯಂ ॥[೧]

[ಪಾಠಾಂತರ ೧-೧ ಸುಪುಷ್ಪದೃಷ್ಟಿ (ಪ)]

ಇಲ್ಲಿ ಅರಿಕೇಸರಿಯು ನಾರಾಯಣನಿಗಿಂತ ಶ್ರೇಷ್ಠ ಅಂದರೆ 'ಉದಾತ್ತ ನಾರಾಯಣ'ನೆಂದು ವರ್ಣಿಸಬೇಕಾಗಿದೆ ಕವಿಗೆ. ಹಾಗೆ ವರ್ಣಿಸುವಲ್ಲಿ ನಾರಾಯಣ ನಿಗೆ ಸಂಬಂಧಿಸಿದ ಮೂರು ಸಂಗತಿಗಳು ಅವನಿಗಿಂತ ಅರಿಕೇಸರಿಯಲ್ಲಿ ಉದಾತ್ತ ವಾಗಿವೆಯೆಂದು ಶ್ಲೇಷದ ಮೂಲಕ ಸಾಧಿಸುತ್ತಾನೆ. ಆ ಮೂರು ಸಂಗತಿಗಳು ಹೀಗಿವೆ—

(೧) ಶ್ರೀಯುನರಾತಿ ಸಾಧನಪಯೋನಿಧಿಯೊಳ್ ಪಡೆದುಂ.......... ಇಂತುದಾತ್ತನಾರಾಯಣನಾದ........ಅರಿಕೇಸರಿ........

(೨) ಧರಿತ್ರಿಯುಂ ಜೀಯೆನೆ ಬೇಡಿಕೊಳ್ಳದೆ ವಿರೋಧಿನರೇಂದ್ರರ ನೊತ್ತಿಕೊಂಡುಂ .... ಇಂತುದಾತ್ತನಾರಾಯಣನಾದ............ ಅರಿಕೇಸರಿ.

(೩) ಆತ್ಮೀಯ ಸುಪುಷ್ಪವೃಷ್ಟಿಯುನೊಡಂಬಡೆ ತಾಳ್ದಿಯುಂ............ ಇಂತುದಾತ್ತನಾರಾಯಣನಾದ........ಅರಿಕೇಸರಿ

ಈ ಮೂರು ಸಂಗತಿಗಳನ್ನು ಅರ್ಥಮಾಡಿಕೊಳ್ಳುವಲ್ಲಿ ತಲೆಯೆತ್ತುವ ಎರಡು ಸಂದೇಹಗಳನ್ನು ಇಲ್ಲಿ ಚರ್ಚಿಸಬಹುದು.

(I) ಒಂದು ಮತ್ತು ಮೂರನೆಯ ಸಂಗತಿಗಳಲ್ಲಿ ಅರಿಕೇಸರಿಯ ವೈಶಿಷ್ಟ್ಯಗಳನ್ನು ವ್ಯಕ್ತವಾಗಿ, ನಾರಾಯಣನ ವೈಶಿಷ್ಟ್ಯಗಳನ್ನು ಅವ್ಯಕ್ತವಾಗಿ ಹೇಳಿದ್ದರೆ, ಎರಡನೆಯ ಸಂಗತಿಯಲ್ಲಿ ಮಾತ್ರ "ಭೂಮಿಯನ್ನು (ನಾರಾಯಣ ನಂತೆ) ಭಿಕ್ಷೆ ಬೇಡಿ ಗಳಿಸದೆ", ಎನ್ನುತ್ತ ನಾರಾಯಣನ ವೈಶಿಷ್ಟ್ಯವನ್ನೂ ವ್ಯಕ್ತ ವಾಗಿ ಹೇಳಿರುವನು. ಇಲ್ಲಿ 'ಜೀಯೆನೆ ಬೇಡಿಕೊಳ್ಳದೆ' ಎಂಬ ಮಾತನ್ನು ಬಿಟ್ಟಿದ್ದರೆ ನಾರಾಯಣನ ವೈಶಿಷ್ಟ್ಯಕ್ಕೆ ಗೌಪ್ಯ ಎಂದಾಗಿ ಮೂರೂ ಸಂಗತಿ ಗಳಲ್ಲಿ ಅಭಿವ್ಯಕ್ತಿ ಸಮಾನತೆ ಸಾಧ್ಯವಾಗುತ್ತಿತ್ತು. ಹಾಗೆ ಮಾಡಿಲ್ಲವಾದುದ ರಿಂದ ಒಂದು ಮೂರನೆಯ ಸಂಗತಿಗಳ ಅಭಿವ್ಯಕ್ತಿ ಧ್ವನಿಪೂರ್ಣವಾಗಿದ್ದರೆ,

---

೧. ಪಂಪಭಾರತ, ೧-೧.

ಎರಡನೆಯ ಸಂಗತಿಯ ಅಭಿವ್ಯಕ್ತಿ ವಾಚ್ಯವಾಗಿಬಿಟ್ಟದೆ. ಇದು ಈ ಪದ್ಯದ ಒಂದು ಸಣ್ಣ ದೋಷ.

(II) ಇಲ್ಲಿಯ 'ಸುಪುಷ್ಪವೃಷ್ಟಿ' ಎಂಬುದಕ್ಕೆ 'ಪ' ಪ್ರತಿಯಲ್ಲಿ 'ಸುಪುಷ್ಪದೃಷ್ಟಿ' ಎಂಬ ಭಿನ್ನ ಪಾಠವಿದೆ. ಈಗ ನಾರಾಯಣ ಮತ್ತು ಅರಿಕೇಸರಿ ಇಬ್ಬರಿಗೂ "ಸುಪುಷ್ಪವೃಷ್ಟಿ"(ಸುಪುಷ್ಪಗಳ ಮಳೆ)ಯಾಯಿ-ತೆಂದಾಗಲೀ, ಇಬ್ಬರಿಗೂ "ಸುಪುಷ್ಟದೃಷ್ಟಿ"(ಚನ್ನಾಗಿ ಬಲಿತ ಕಣ್ಣು)ಗಳಿವೆಯೆಂದಾಗಲೀ ಹೇಳಿದರೆ ನಾರಾಯಣನಿಗಿಂತ ಅರಿಕೇಸರಿ 'ಉದಾತ್ತ'ನೆಂದು ಹೇಳಿದ ಹಾಗಾಗಲಿಲ್ಲ. ಅದಕ್ಕಾಗಿ ಈ ಎರಡೂ ಪಾಠಗಳು ಅಪ್ರಯೋಜಕವೆಂದು ಹೇಳುತ್ತ ಡಾ. ಡಿ ಎಲ್. ನರಸಿಂಹಾಚಾರ್ ಅವರು ಇನ್ನೆರಡು ಪಾಠಗಳನ್ನು ಊಹಿಸುತ್ತಾರೆ. ಅವು: ಸುಪುಷ್ಪಪಟ್ಟ ಮತ್ತು ಸುಪುಷ್ಪದೃಷ್ಟಿ.

ಇವುಗಳಲ್ಲಿ 'ಸುಪುಷ್ಪಪಟ್ಟ' ಎಂಬ ಪಾಠವನ್ನು ಕುರಿತು ಅವರು ನೀಡಿದ ವಿವರಣೆ ಹೀಗಿದೆ. "ರಾಜರೂ ದೇವತೆಗಳೂ ಧರಿಸಬಹುದಾದ ಶಿರೋವೇಷ್ಟನಗಳಲ್ಲಿ ಜಟಾ, ಮೌಳಿ, ಕಿರೀಟ, ಕರಂಡ, ಶಿರಸ್ತ್ರಕ, ಕುಂದಲ (ಕುಂತಲ ?), ಕೇಶಬಂಧ, ಧಮ್ಮಿಲ್ಲ, ಅಲಕ, ಚೂಡ, ಮಕುಟ ಮತ್ತು ಪಟ್ಟ—ಎಂಬ ಹನ್ನೆರಡು ವಿಧಾನಗಳಿವೆ. ಇವುಗಳಲ್ಲಿ ಕೊನೆಯದಾದ ಪಟ್ಟ ಎಂಬುದರಲ್ಲಿ ಪತ್ರಪಟ್ಟ, ರತ್ನಪಟ್ಟ, ಪುಷ್ಪಪಟ್ಟ ಎಂಬ ಮೂರು ಬಗೆಗಳಿವೆ. ಇಲ್ಲಿ ಹೇಳಿರುವ ಪುಷ್ಪಪಟ್ಟ ಎಂಬುದು ತಲೆಗೆ ಹಾಕಿಕೊಳ್ಳುವ ಒಂದು ತೆರನಾದ ಕಿರೀಟವೆಂದು ಹೇಳಬಹುದು. ಇದನ್ನು ಪಟ್ಟಭಾಜ್ ದೊರೆಗಳೂ ಸಾಮಂತರೂ ಧರಿಸುತ್ತಿದ್ದರು. ಪಂಪನು ಈ ಶಬ್ದವನ್ನು ತನ್ನ ಪದ್ಯದಲ್ಲಿ ಬಳಸಿರಬೇಕು. ದೇವತಾಮೂರ್ತಿಗಳಿಗೆ ಬಗೆಬಗೆಯಾದ ಕಿರೀಟಗಳನ್ನು ಶಿಲ್ಪಿಗಳು ಕೆತ್ತುತ್ತಾರೆ. ಅವುಗಳಲ್ಲಿ ಪುಷ್ಪಪಟ್ಟ ಒಂದು. ಪ್ರಕೃತ ನಾರಾಯಣನು ಧರಿಸಿಕೊಂಡಿರುವದು ಪುಷ್ಪಪಟ್ಟ, ಅರಿಕೇಸರಿ ಹಾಕಿಕೊಂಡಿರುವದು ಸುಪುಷ್ಪಪಟ್ಟ. ಆದ್ದರಿಂದ ಅವನು ನಾರಾಯಣನಿಗಿಂತ ಮೇಲು ಎಂಬ ಸಮಂಜಸ ಅರ್ಥವಾಗುತ್ತದೆ"[೨] ಎಂದು ವಿವರಣೆ ನೀಡಿ 'ಸುಪುಷ್ಪಪಟ್ಟ' ಎಂಬ ಊಹಿತ ಪಾಠವನ್ನು ಒಪ್ಪಿಕೊಂಡಿರುವರು. ಈ ಅಭಿಪ್ರಾಯಕ್ಕೆ ಕೆಲವು ಆಕ್ಷೇಪಣೆಗಳಿವೆ.

(೧) ಮೇಲಣ ಪದ್ಯದ ಮೂರು ಸಂಗತಿಗಳಲ್ಲಿ ಸಮುದ್ರಮಂಥನ, ವಾಮನಾವತಾರಗಳು ನಾರಾಯಣನಿಗೆ ಮಾತ್ರ ಸಂಬಂಧಿಸಿದ ವಿಶಿಷ್ಟ ಸಂಗತಿಗಳು. ಈ 'ಪುಷ್ಪಪಟ್ಟ' ನಾರಾಯಣನಿಗೆ ಮಾತ್ರ ವಿಶಿಷ್ಟವಾದ ಕಿರೀಟವಲ್ಲ. ಎಲ್ಲ ದೇವತೆಗಳಿಗೂ, ಚಕ್ರವರ್ತಿಗಳಿಗೂ, ಸಾಮಂತರಿಗೂ ಸಾಮಾನ್ಯವಾಗಿರುವ ಕಿರೀಟ.

---

೨. ಕನ್ನಡ ಗ್ರಂಥಸಂಪಾದನೆ, ಪು. ೧೩೭.

(೨) ಈ ಮೂರು ಸಂಗತಿಗಳಲ್ಲಿ ಮೊದಲಿನ ಎರಡಕ್ಕೆ ಪೌರಾಣಿಕ ಘಟನೆಗಳನ್ನು ಬಳಸಿದ ಕವಿಯು ಮೂರನೆಯದಕ್ಕೆ 'ಸುಪುಷ್ಪಪಟ್ಟ' ಎಂಬ ಕಾಲ್ಪನಿಕ ಅಂಶವನ್ನು ಬಳಸಿರಲಾರ.

(೩) ನಾರಾಯಣನದು 'ಪುಷ್ಪಪಟ್ಟ' ಅರಿಕೇಸರಿಯದು 'ಸುಪುಷ್ಪಪಟ್ಟ' ಎಂದು ಡಾ|| ಡಿ. ಎಲ್. ಎನ್. ಅವರು 'ಸು' ಪ್ರತ್ಯಯದ ಮೇಲೆ ಅವಧಾರಣೆ ಕೊಡುತ್ತಾರೆ. ಆದರೆ 'ಸು' ಪ್ರತ್ಯಯದ ಮೂಲಕ 'ಉದಾತ್ತ' ಅರ್ಥ ಕಲ್ಪಿಸಲು ಹೊರಟಿರಲಾರ ಪಂಪ.

ಈ ಕಾರಣಗಳಿಂದಾಗಿ ಶ್ರೀಯುತರ ಈ ಊಹಿತ ಪಾಠ ಸ್ವೀಕಾರಯೋಗ್ಯ ಎನಿಸದು.

ಅವರು ಊಹಿಸಿದ (ಎಲ್ಲರೂ ಮೊದಲಿನಿಂದ ಊಹಿಸುತ್ತಿದ್ದ) ಇನ್ನೊಂದು ಪಾಠ 'ಸುಪುಷ್ಪದೃಷ್ಟಿ'. ಇದನ್ನು ಕುರಿತು "ಇಲ್ಲಿ ಹೂವಿನಂತಿರುವ ಕಣ್ಣುಳ್ಳವನು" ಎಂದರೆ ಇಬ್ಬರಿಗೂ ಅನ್ವಯಿಸುತ್ತದೆ. ಇಲ್ಲವೆ ಹೂವು ಬಂದಿರುವ ಕಣ್ಣುಳ್ಳವನು ಎಂದರೆ ಇಬ್ಬರಿಗೂ ನಿಂದೆಯಾಗುತ್ತದೆ. ಈ ಸಂದರ್ಭದಲ್ಲಿ 'ಕಮಲಗಣ್ಣಿನ ದೇವನೇ ಸಾಕೆಮಗೆ ಮಾಡುವುದೇನು' ಎಂಬ ಕುಮಾರವ್ಯಾಸನ ಮಾತನ್ನು (೫-೮-೬೩), ದುರ್ಯೋಧನ ಕೃಷ್ಣನನ್ನು ತಿರಸ್ಕರಿಸುವುದನ್ನು ನೆನೆಯಬಹುದು. ಆದ್ದರಿಂದ ಇಲ್ಲಿ ಸ್ವೀಕೃತ ಪಾಠವಾಗಲೀ, ಸೂಚಿತ ಪಾಠವಾಗಲೀ, ನಿಯೋಜಿಸಬಹುವಾದ ಪಾಠವಾಗಲೀ ಸಮರ್ಪಕವಾದ ಅರ್ಥವನ್ನು ಕೊಡುವಂತಿಲ್ಲ"[೩] ಎಂದು ಈ ಪಾಠವನ್ನು ನಿರಾಕರಿಸಿರುವರು. ಅವರ ಈ ಅಭಿಪ್ರಾಯವನ್ನು ಇಲ್ಲಿ ವಿವೇಚಿಸಬಹುದು.

(೧) ಪುಷ್ಪವೆಂದರೆ ಹೂವು. ಇಲ್ಲಿ ಪಂಪನು 'ಸುಪುಷ್ಪ' ಪದವನ್ನು ಒಳ್ಳೆಯ ಹೂವು ಎಂಬ ಅರ್ಥದಲ್ಲಿ ಬಳಸದೆ ಹೂವುಗಳಲ್ಲಿ ಒಳ್ಳೆಯದು ಎಂಬ ಅರ್ಥದಲ್ಲಿ 'ಕಮಲ'ಕ್ಕೆ ಪರ್ಯಾಯವಾಗಿ ಬಳಸಿರುವನು. ಆದಕ್ಕಾಗಿ 'ಹೂವಿನಂತಿರುವ ಕಣ್ಣುಳ್ಳವನು' ಎಂದಾಗಲೀ 'ಹೂವು ಬಂದಿರುವ ಕಣ್ಣುಳ್ಳವನು' ಎಂದಾಗಲೀ ಸಣ್ಣ ಅರ್ಥ ಹಚ್ಚಲು ಅವಕಾಶವಿಲ್ಲ ಇಲ್ಲಿ.

(೨) ದೂತನಾಗಿ ಬಂದ ಕೃಷ್ಣನನ್ನು ಕುಮಾರವ್ಯಾಸನ ದುರ್ಯೋಧನನು ನಿಂದಿಸುವನೇನೋ ನಿಜ. ಆದರೆ ಈ ದೌತ್ಯಪ್ರಸಂಗದಲ್ಲಿ 'ಕಮಲಗಣ್ಣಿನ ದೇವನೇ' ಎಂಬ ಪದ ಬಳಸುವದರ ಮೂಲಕ ಪರ್ಯಾಯವಾಗಿ ನಿಂದೆಯನ್ನೂ ಸಾಧಿಸಬೇಕೆಂದು ಕುಮಾರವ್ಯಾಸನ ಮನಸ್ಸಿನಲ್ಲಿರಲಿಕ್ಕಿಲ್ಲ. ಬಹುಶಃ 'ಹೂಗಣ್ಣು' ಪದ ನಿಂದೆಯ ಶ್ಲೇಷಾರ್ಥ ಪಡೆದು ಬಳಕೆಯಾದುದು ತೀರ

---

೩. ಕನ್ನಡ ಗ್ರಂಥಸಂಪಾದನೆ, ಪು. ೧೬೭.

ಇತ್ತೀಚಿನವನಾದ ಮುದ್ದಣನಿಂದ. ಅದಕ್ಕಾಗಿ 'ಹೂಗಣ್ಣು' ಪದಕ್ಕಿಂತ ಲೇಸಾದ 'ಕಮಲಗಣ್ಣು' ಎಂಬ ಪದದಲ್ಲಿ ನಿಂದೆ ಇದೆಯೆಂದು ಭಾವಿಸುವುದು ಸಂಗತವೆನಿಸದು. ಹಾಗಾದರೆ ನಮ್ಮ ಕವಿಗಳು ನಿಂದೆಯ ಪ್ರಸಂಗಗಳಲ್ಲಿ ಬಳಸಿದ ಕಮಲಾಕ್ಷಿ, ಕಮಲನೇತ್ರೆಗಳಲ್ಲಿಯೂ ಇಂಥ ಅರ್ಥವನ್ನೇ ಆರೋಪಿಸಬೇಕಾದೀತು.

(೩) ಮೇಲಣ ಪದ್ಯದ ಮೂರು ಸಂಗತಿಗಳಲ್ಲಿಯ ಒಂದು ಸಮುದ್ರ-ಮಂಥನ, ಇನ್ನೊಂದು ವಾಮನಾವತಾರಗಳೆಂಬ ಪುರಾಣ ಘಟನೆಗಳಾಗಿರುವದರಿಂದ ಮೂರನೆಯ ಸಂಗತಿಯೂ ಪುರಾಣ ಘಟನೆಯೇ ಇದ್ದಿರಬೇಕು. ಅಂದರೆ ವಿಷ್ಣುವು ಶಿವನ ಪಾದಕ್ಕೆ ಹೂವಿನ ಬದಲು ನೇತ್ರವನ್ನರ್ಪಿಸಿ 'ಸುಪುಷ್ಪ (= ಕಮಲ)ನೇತ್ರ'ನಾದ ಪೌರಾಣಿಕ ಘಟನೆ ಇದಾಗಿರಬೇಕು. ಇಲ್ಲದಿದ್ದರೆ ಎರಡಕ್ಕೆ ಪುರಾಣ ಘಟನೆ ಹೇಳಿ ಮೂರನೆಯದಕ್ಕೆ ಪುರಾಣ ಸಂಬಂಧಿಯಲ್ಲದ ಘಟನೆಯನ್ನು ಹೇಳಿದಂತಾಗುತ್ತದೆ.

(೪) ವಿಷ್ಣುವಿಗೆ 'ಸುಪುಷ್ಪ(ಕಮಲ)ದೃಷ್ಟಿ' ಮೂಲತಃ ಇದ್ದುದಲ್ಲ. ಕಮಲದ ಬದಲು ಶಿವನ ಪಾದಕ್ಕೆ ಕಣ್ಣು ಅರ್ಪಿಸಿದ ಕಾರಣ ಅದು ಅವನ ಕಣ್ಣಿಗೆ ಆಲಂಕಾರಿಕವಾಗಿ ಬಳಕೆಯಾದ ಪದ. ಆದರೆ ಅರಿಕೇಸರಿಯದು ಹೀಗಲ್ಲ. ಆತನು 'ಸುಪುಷ್ಪ(= ಕಮಲ)ದೃಷ್ಟಿ'ಯನ್ನು ಜನ್ಮತಃ ತಾಳಿರುವನು ಎಂದು ಹೇಳುವ ಉದ್ದೇಶವಿದ್ದಂತಿದೆ ಕವಿಗೆ. ಹೀಗಾಗಿ ಕವಿ ಉದಾತ್ತೀ-ಕರಣ ಸೂಚನೆಗಾಗಿ ಇಲ್ಲಿ ಬಳಸಿದ ಪದ 'ಸು' ಅಲ್ಲ, 'ಒಡಂಬಡೆ' ಎಂದು ಭಾವಿಸಬೇಕಾಗುತ್ತದೆ. ಇದರಿಂದ 'ಸುಪುಷ್ಪದೃಷ್ಟಿ' ಎಂಬುದೇ ಯೋಗ್ಯಪಾಠವೆನಿಸುತ್ತದೆ.

ಈ ವರೆಗಣ ವಿವೇಚನೆಯಿಂದ ನಮ್ಮ ಕಣ್ಣಿದುರಿಗಿರುವ 'ಸುಪುಷ್ಪದೃಷ್ಟಿ' 'ಸುಪುಷ್ಟದೃಷ್ಟಿ' ಎಂಬ ಪಾಠಗಳಿಗಿಂತಲೂ ಊಹಿತಪಾಠವಾದ 'ಸುಪುಷ್ಪಪಟ್ಟ'ಕ್ಕಿಂತಲೂ, ಇನ್ನೊಂದು ಊಹಿತ ಪಾಠವಾದ 'ಸುಪುಷ್ಪದೃಷ್ಟಿ' ಎಂಬುದೇ ಕವಿಯ ಪಾಠವೆಂದು, ಕೊನೆಯ ಪಕ್ಷ ಅರ್ಥದೃಷ್ಟಿಯಿಂದ ಹೆಚ್ಚು ಯೋಗ್ಯವಾದ ಪಾಠವೆಂದು ಹೇಳಬಹುದು.

★ ಎಂ. ಎಂ. ಕಲಬುರ್ಗಿ

ಭೂಅಂತರ್ಜಲ

(GROUND WATER)*

ಮಾನವ ಸಂಸ್ಕೃತಿ ಮೊದಲು ಹುಟ್ಟಿದ್ದು, ಬೆಳೆದದ್ದು ದೊಡ್ಡ ದೊಡ್ಡ ನದಿಗಳ ದಡಗಳಲ್ಲಿ. ನೀರು ಭೂಮಿಯ ಒಳಗೂ ದೊರೆಯುತ್ತದೆ ಎಂಬ ವಿಷಯ ತಿಳಿದ ತರುವಾಯ ಪ್ರಾಚೀನ ಜನಾಂಗಗಳು ನದೀತೀರಗಳಿಂದ ಬೇರೆಡೆ ಹೋಗಿ ವಾಸಿಸತೊಡಗಿದವು.

ಸಂಸ್ಕೃತಿ ಅಭಿವೃದ್ಧಿಯಾದಂತೆ ಮಾನವ ಜೀವನದ ವಿವಿಧ ರಂಗಗಳಲ್ಲಿ ನೀರಿನ ಬೇಡಿಕೆ ಹೆಚ್ಚಾಗುತ್ತಬಂದಿದೆ. ಆದರಲ್ಲಿಯೂ ನೀರಾವರಿ, ಕುಡಿಯುವ ನೀರಿನ ಪೂರೈಕೆ ಇತ್ಯಾದಿ ಅತಿ ಮುಖ್ಯವಾದುವು.

ಭೂಮಿಯ ಮೇಲೆ ದೊರೆಯುವ ಒಟ್ಟು ನೀರು ಸುಮಾರು ೩೦,೩೦೦ ಘನ ಮೈಲುಗಳೆಂದೂ ಹಾಗೂ ಭೂಮಿಯ ಅಂತರಾಳದಲ್ಲಿ ದೊರೆಯುವ ಒಟ್ಟು ನೀರು ೧,೦೦,೦೦೦ ಘನ ಮೈಲುಗಳೆಂದೂ ಅಂದಾಜು ಮಾಡಲಾಗಿದೆ. ಅಂದರೆ ಭೂಮಿಯ ಒಳಗಡೆ ದೊರೆಯುವ ನೀರು ಭೂಮಿಯ ಮೇಲೆ ದೊರೆಯುವ ನೀರಿಗಿಂತ ೩೩ ಪಾಲು ಹೆಚ್ಚಿಗೆಯಿದೆ.

ಭೂಜಲ ವಿಜ್ಞಾನದ ಬೆಳವಣಿಗೆಯು ಮೊದಮೊದಲು ಕುಂಠಿತವಾಗಿದ್ದರೂ ಇತ್ತಿತ್ತಲಾಗಿ ತಾಂತ್ರಿಕಜ್ಞರ ಭೂಭೌತಶಾಸ್ತ್ರಜ್ಞರ ಹಾಗೂ ಭೂವಿಜ್ಞಾನಿಗಳ ನಿರಂತರ ಅಧ್ಯಯನದಿಂದ ಪ್ರಗತಿಹೊಂದಿ ಇಂದು ಇತರ ವಿಜ್ಞಾನಗಳ ಮಾಲಿಕೆಯಲ್ಲಿ ಎಡೆಪಡೆದಿದೆ. ಈ ಭೂಜಲ ವಿಜ್ಞಾನದ ಆಳವಾದ ಅಭ್ಯಾಸದ ಮೂಲಕ ಇಂದು ಹೆಚ್ಚುತ್ತಿರುವ ನೀರಾವರಿ, ಕುಡಿಯುವ ನೀರಿನ ಪೂರೈಕೆ, ಔದ್ಯಮಿಕ ನೀರಿನ ಪೂರೈಕೆ ಇತ್ಯಾದಿಗಳ ಬೇಡಿಕೆಯನ್ನು ಕೆಲಮಟ್ಟಿಗಾದರೂ ಈಡೇರಿಸಲು ಸಾಧ್ಯವಾಗಿದೆ.


ನೀರು ಭೂಗರ್ಭದಲ್ಲಿ ಎಲ್ಲೆಡೆಯಲ್ಲಿಯೂ ಸಿಗುತ್ತದೆಂಬುದು ನಿರ್ವಿವಾದ; ಆದರೆ ನಮಗೆ ಬೇಕಾಗುವಷ್ಟು ಪ್ರಮಾಣದಲ್ಲಿ ಕಡಿಮೆ ಆಳದಲ್ಲಿ ಮತ್ತು ಕಡಿಮೆ ವೆಚ್ಚದಲ್ಲಿ ದೊರೆಯುವದೋ ಇಲ್ಲವೋ ಎಂಬುದೇ ಮುಖ್ಯ ಸಮಸ್ಯೆ. ಇದು ಅನೇಕ ಅಂಶಗಳನ್ನು ಅವಲಂಬಿಸಿದೆ. ಈ ಅಂಶಗಳ ಬಗ್ಗೆ ಇಲ್ಲಿ ವಿವೇಚಿಸಲಾಗಿದೆ.

ಭೂಅಂತರ್ಜಲದ ಮೂಲ ಮತ್ತು ದೊರೆಯುವ ಬಗೆ :

ಸಾಮಾನ್ಯವಾಗಿ ಭೂಮಿಯ ಮೇಲ್ಮೈಯಿಂದ ಒಳಗೆ ಹೋದಂತೆ ಕ್ರಮವಾಗಿ ಮಣ್ಣುನೀರು, ಶಿಲಾಕಣಾವೃತನೀರು, ಗುರುತ್ವಾಕರ್ಷಣ ನೀರು, ಪರ್ಚಡ

* ಈ ಲೇಖನವನ್ನು ಸಿದ್ಧಗೊಳಿಸುವಲ್ಲಿ ಉಪಯುಕ್ತ ಸಲಹೆಸೂಚನೆಗಳನ್ನಿತ್ತು ಮಾರ್ಗದರ್ಶನ ಮಾಡಿದ ಡಾ. ಎಂ. ಎಸ್. ಸದಾಶಿವಯ್ಯ ಅವರಿಗೆ ಋಣಿಯಾಗಿದ್ದೇವೆ.

ಭೂಮಿಯ ಮೇಲ್ಮೈ



Zone of Interconnected Openings (ಪರಸ್ಪರ ಹೊಂದಿಕೊಂಡ ಛಿದ್ರಗಳ ವಿಭಾಗ)	ಚರಜಲ ವಿಭಾಗ (Zone of Suspended Water)	ಚರಜಲ (Suspended Water)	ಮಣ್ಣು ನೀರು (Soil Water)	
			ಶಿಲಾಕಣಾವೃತ ನೀರು (Pellicular Water)	
			ಗುರುತ್ವಾಕರ್ಷಣ ನೀರು (Gravity Water)	
			ಪರ್ಚಡ ನೀರು (Perched Water)	
			ಕೇಶಾಕರ್ಷಣ ನೀರು (Capillary Water)	
	ಸ್ಥಿರಜಲ ವಿಭಾಗ (Zone of Saturation)	ಭೂಅಂತರ್ಜಲ (Ground Water)	ಭೂಅಂತರ್ಜಲ ಪಾತಳಿ → (Water table)	
			ಸ್ವಯಂಜಲ (Free Water)	
			ಸೀಮಿತ ಜಲ (Confined Water)	
			ಫಿಕ್ಸಡ ಜಲ (Fixed Water)	
			ಕೊನ್ನೇಟ ಜಲ (Connate Water)	
ಪರಸ್ಪರ ಬೇರ್ಪಟ್ಟ ಛಿದ್ರಗಳ ವಿಭಾಗ (Zone of disconnected openings)			ಭೂಗರ್ಭದಲ್ಲಿಯ ನೀರು (Internal Water)	ಅ) ರಾಸಾಯನಿಕವಾಗಿ ಸಂಯೋಗವಾದ ನೀರು (Chemically combined water) ಬ) ಸೂಕ್ಷ್ಮ ಛಿದ್ರಗಳಲ್ಲಿ ಸೆರೆಹಿಡಿಯಲ್ಪಟ್ಟ ನೀರು (Water fixed in disconnected interstices) ಕ) ಶಿಲಾರಸದಲ್ಲಿ ಕರಗಿದ ನೀರು (Water dissolved in magma)

ನೀರು, ಕೇಶಾಕರ್ಷಣ ನೀರುಗಳ ಸ್ತರಗಳು ಸಿಗುತ್ತವೆ. ಇದು ಚರಜಲವಿಭಾಗ (Zone of suspended water). ಈ ಚರಜಲ ವಿಭಾಗದ ಕೆಳಗೆ ಭೂಅಂತರ್ಜಲ ಪಾತಳಿ ಇರುತ್ತದೆ. ಈ ಭೂಅಂತರ್ಜಲ ಪಾತಳಿಯು ಕೆಳಗೆ ಕ್ರಮವಾಗಿ ಸ್ವಯಂಜಲ, ಸೀಮಿತಜಲ, ಫಿಕ್ಸಡ ಜಲ, ಕೊನ್ನೇಟ ಜಲಸ್ತರಗಳು ಸಿಗುತ್ತವೆ. ಇದು ಸ್ಥಿರಜಲವಿಭಾಗ (Zone of saturation). ಇದರ ಕೆಳಗೆ ಪರಸ್ಪರ ಬೇರ್ಪಟ್ಟ ಛಿದ್ರಗಳ ವಿಭಾಗವಿರುತ್ತದೆ. ಈ ಪೂರರಲ್ಲಿ ಸ್ಥಿರಜಲ ವಿಭಾಗದಲ್ಲಿ ದೊರೆಯುವ ನೀರಿಗೆ ಸಾಮಾನ್ಯವಾಗಿ 'ಭೂಅಂತರ್ಜಲ'ವೆಂದು (Ground water) ಕರೆಯುತ್ತಾರೆ. (ಚಿತ್ರ ನೋಡಿರಿ)

ಚರಜಲ ವಿಭಾಗದ ಗಾತ್ರ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಈ ಗಾತ್ರದಲ್ಲಿಯು ಜಲಸ್ತರಗಳಲ್ಲಿ ಮೇಲಣ ಸ್ತರಗಳು ಒಂದೊಂದು ಇರದೇ ಹೋದರೆ ಅಷ್ಟು ಪ್ರಮಾಣದಲ್ಲಿ ಭೂಅಂತರ್ಜಲ ಪಾತಳಿಯು ಮೇಲೆ ಮೇಲೆ ಬರುತ್ತದೆ. ಈ ಭೂಅಂತರ್ಜಲ ಪಾತಳಿಯ ಕೆಳಗೆ ಭೂಅಂತರ್ಜಲವಿರುತ್ತದೆ. ಇದು ಭೂಮಿಯು ಒಳಗಣ ಹವಾಮಾನ, ಸ್ಥಾನಿಕ ಭೂರಚನೆಗಳ ಮುಖಾಂತರ ನೈಸರ್ಗಿಕವಾಗಿ ಶಿಲೆಗಳಲ್ಲಿ ಸಂಚಯಗೊಂಡು ಕೆಲವೊಂದು ಪ್ರತಿರೋಧಕ ಶಕ್ತಿಗಳಿಂದ ಹಿಡಿಯಲ್ಪಟ್ಟಿರುತ್ತದೆ ಇವೆಲ್ಲವುಗಳಿಗೆ ತಕ್ಕಂತೆ ಅದು ತನ್ನ ಪ್ರಮಾಣದಲ್ಲಿಯೂ ಹಾಗೂ ಯೋಗ್ಯತೆಯಲ್ಲಿಯೂ ವಿಭಿನ್ನವಾಗಿರುತ್ತದೆ. ಈ ಭೂ-ಅಂತರ್ಜಲಕ್ಕೆ ಮೂಲವಾಗಿರುವ ನೀರು, ವಾಯು, ದ್ರವ ಹಾಗೂ ಘನ ಈ ಮೂರು ರೂಪಗಳಲ್ಲಿ ಇರುತ್ತದೆ. ವಾಯುಮಂಡಲ ಮತ್ತು ಭೂಗರ್ಭದಲ್ಲಿ ಬಾಷ್ಪರೂಪದಲ್ಲಿಯೂ, ಭೂಮಿಯ ಮೇಲೆ ಮತ್ತು ಒಳಗೆ ದ್ರವರೂಪದಲ್ಲಿಯೂ ಶೀತವಲಯಗಳಲ್ಲಿ ಬರ್ಫರೂಪದಲ್ಲಿಯೂ ಇರುತ್ತದೆ.

ಈ ನೀರನ್ನು ಅದು ದೊರೆಯುವ ಮೂಲಗಳನ್ನವಲಂಬಿಸಿ ಹೀಗೆ ವರ್ಗೀಕರಿಸಬಹುದು :

(೧) ವಾಯುಮಂಡಲ ನೀರು (Meteoric water)
(೨) ಜುವೆನೈಲ ನೀರು (Juvenile water)
(೩) ಶಿಲಾರಸ ನೀರು (Magmatic water)
(೪) ರೆಜ್ಯುನೇಟೆಡ್ ನೀರು (Rejuvenated water)
(೫) ಬಾಹ್ಯಾಕಾಶ ಜಲ (Cosmic water)
(೬) ಕೊನ್ನೇಟ ನೀರು (Connate water)

(೧) **ವಾಯುಮಂಡಲ ನೀರು (Meteoric water)** : ವಾಯುಮಂಡಲದಿಂದ ದೊರೆಯುವ ಜಲವೇ ವಾಯುಮಂಡಲ ನೀರು. ವಾಯುಮಂಡಲದಿಂದ ಭೂಮಿಯ ಮೇಲೆ ಬಿದ್ದ ನೀರು ಭೂಮಿಯಲ್ಲಿ ಇಳಿದು ಭೂ-

ಅಂತರ್ಜಲವನ್ನು ಕೂಡುತ್ತದೆ. ಭೂ-ಇತಿಹಾಸದ ಉದ್ದಕ್ಕೂ (Geologic time) ಈ ಪ್ರಕಾರವಾಗಿ ಸಂಗ್ರಹಿತವಾದ ನೀರು ಭೂಅಂತರ್ಜಲ ಸಂಗ್ರಹದ ಒಂದು ಮುಖ್ಯ ಅಂಗವಾಗಿದೆ.

(೨) **ಜುವೆನ್ಯಾಲ ನೀರು (Juvenile water)** : ಇದು ಜ್ವಾಲಾಮುಖಿಗಳ ಮುಖಾಂತರ ಬಂದು ಭೂಅಂತರ್ಜಲ ಸಂಗ್ರಹಕ್ಕೆ ಕೂಡಿಕೊಳ್ಳುತ್ತದೆ.

(೩) **ಶಿಲಾರಸ ನೀರು (Magmatic water)** : ಶಿಲಾರಸವು (Magma) ಘನರೂಪ ತಾಳುವಾಗ ನೀರು ಉಗಿ ಹಾಗೂ ದ್ರವರೂಪದಲ್ಲಿ ಹೊರಬರುತ್ತದೆ. ಅದು ಶಿಲಾರಸ ನೀರು.

(೪) **ರೆಜ್ಯುನೇಟೆಡ್ ನೀರು (Rejuvenanted water)** : ಶಿಲೆಗಳ ಅನೇಕ ಸೂಕ್ಷ್ಮ ಛಿದ್ರಗಳಲ್ಲಿ ಹುದುಗಿಕೊಂಡ ನೀರು, ಶಿಲೆಗಳು ರೂಪಾಂತರವಾಗುವಾಗ ಹಾಗೂ ಸಾಂದ್ರಗೊಳ್ಳುವಾಗ ಹೊರಸೂಸಿ ಭೂಅಂತರ್ಜಲ ಸಂಗ್ರಹವನ್ನು ಸೇರುತ್ತದೆ. ಇದು 'ರೆಜ್ಯುನೇಟೆಡ್ ಜಲ'.

(೫) **ಬಾಹ್ಯಾಕಾಶ ನೀರು (Cosmic water)** : ಬಾಹ್ಯಾಕಾಶದಿಂದ ಉಲ್ಕೆಗಳ ಮುಖಾಂತರ ಬಂದ ನೀರು 'ಬಾಹ್ಯಾಕಾಶ ಜಲ'. ಆದರೆ ಈ ರೀತಿ ಬಂದು ಸಂಗ್ರಹವಾದದ್ದು ಅತಿ ವಿರಳ.

(೬) **ಕೊನ್ನೇಟ ನೀರು (Connate water)** : ಸಾಗರ ತಳದಲ್ಲಿಯ ಜಲ ಶಿಲೆಗಳು (Sedimentary rocks) ಸಾಮಾನ್ಯವಾಗಿ ನೀರಿನಿಂದ ತುಂಬಿರುತ್ತವೆ. ಕಾರಣಾಂತರಗಳಿಂದ ಈ ಜಲಶಿಲೆಗಳು ಭೂಮಿಯ ಮೇಲೆ ಬಂದಾಗ, ಅವುಗಳಲ್ಲಿಯ ನೀರು ಹೊರಬಂದು ಅಂತರ್ಜಲ ಸಂಗ್ರಹವನ್ನು ಕೂಡುತ್ತವೆ.

ಈ ಭೂಅಂತರ್ಜಲ ಶಿಲೆ ಮತ್ತು ಖನಿಜಗಳ ಅನೇಕ ಲವಣಗಳನ್ನು ಕರಗಿಸಿಕೊಂಡಿರುತ್ತದೆ. ಅಂದರೆ ಸೋಡಿಯಂ (Sodium), ಪೊಟ್ಯಾಶಿಯಮ್ (Potassium), ಕ್ಯಾಲಶಿಯಮ್ (Calcium), ಮ್ಯಾಗ್ನೀಶಿಯಮ್ (Magnesium), ಕಬ್ಬಿಣ (Iron), ಅಲ್ಯೂಮಿನಿಯಮ್ (Alluminium) ಮತ್ತು ಆಮ್ಲ ಲವಣಗಳಾದ ಸಲ್ಫೇಟ್ (SO_4), ಕ್ಲೋರಾಯಿಡ್ (Cl) ಮತ್ತು ಕಾರ್ಬೋನೇಟ (CO_3)ಗಳನ್ನೂ ಒಳಗೊಂಡಿರುತ್ತದೆ. ಕೆಲವು ಸಲ ವಿರಳ ಮೂಲಧಾತು (Rare elements)ಗಳಾದ, ತಾಮ್ರ, ಸತುವು, ಲೀಥಿಯಂ (lithium) ಮತ್ತು ಬೇರಿಯಮ್ (Barium)ಗಳನ್ನು ಒಳಗೊಂಡಿರುತ್ತದೆ. ಇಂಥ ಧಾತುಗಳನ್ನು ಒಳಗೊಂಡ ಅಂತರ್ಜಲವು ವೈದ್ಯಕೀಯವಾಗಿ ಮಹತ್ವದ್ದು. ಇನ್ನೂ ಕೆಲವು ಸಲ ಆಮ್ಲಜನಕ, Na_2O, ಮಿಥೇನ (Methane) ಮೊದಲಾದ ವಾಯುಗಳಿಂದ ಸಂಯೋಜಿತವಾಗಿರುತ್ತದೆ. ಹೀಗೆ ಲವಣ, ಮೂಲಧಾತು ಹಾಗೂ ವಾಯುಗಳನ್ನೊಳಗೊಂಡ ಭೂಅಂತರ್ಜಲವು ಒತ್ತಡಕ್ಕೆ ಒಳಪಟ್ಟು

ಬುಗ್ಗೆಯು ಮುಖಾಂತರ ಹೊರಚಲ್ಲುತ್ತದೆ. ಇಂಥ ಬುಗ್ಗೆಗಳನ್ನೊಳಗೊಂಡ ಪ್ರದೇಶಗಳು ಪ್ರೇಕ್ಷಕರನ್ನು ಆಕರ್ಷಿಸುವ ಸ್ಥಳಗಳಾಗಿರುತ್ತವೆ.

ಭೂಅಂತರ್ಜಲಕ್ಕೆ ಅದರ ಭೌತಿಕ ಹಾಗೂ ರಾಸಾಯನಿಕ ಗುಣಧರ್ಮಗಳಿಂದಾಗಿ ವೈಶಿಷ್ಟ್ಯ ಪ್ರಾಪ್ತವಾಗಿರುತ್ತದೆ. ಲವಣಾಂಶಗಳು ಹೆಚ್ಚಾದಂತೆ ನೀರಿನ ಕಠಿಣತೆ, ಕಬ್ಬಿಣಕ್ಕೆ ತುಕ್ಕು ಹಿಡಿಯುವಿಕೆ ಹೆಚ್ಚಾಗುತ್ತವೆ. ಇಂತಹ ನೀರು ಒಕ್ಕಲುತನಕ್ಕೆ ಹಾಗೂ ಉದ್ಯಮಗಳಿಗೆ ನಿರುಪಯೋಗಿ.

ಭೂಮಿಯಲ್ಲಿ ನೀರು ಇರುವ ಬಗೆ :

ಮಳೆಯ ರೂಪದಿಂದ ಭೂಮಿಯ ಮೇಲೆ ಬಿದ್ದ ನೀರಾಗಲಿ, ಹರಿಯುವ ನೀರಾಗಲಿ, ನಿಂತ ನೀರಾಗಲಿ, ಭೂಮಿಯ ಪದರುಗಳ ಮುಖಾಂತರ ಕೆಳಸೋಸಿ ಭೂಮಿಯ ಒಳಗಣ ಭೂ–ಅಂತರ್ಜಲ ಸಂಗ್ರಹವನ್ನು ಸೇರುತ್ತದೆ. ಭೂ-ಅಂತರ್ಜಲ ಸಂಗ್ರಹವನ್ನು ಸೇರುವ ಮಳೆಯ ನೀರು ಈ ಕೆಳಗಿನ ಅಂಶಗಳನ್ನು ಅವಲಂಬಿಸಿರುತ್ತದೆ: (ಅ) ಭೂಮಿಯ ಒರಿಳಿತ, (ಬ) ಮಳೆಯ ಪ್ರಮಾಣ, (ಕ) ಮಳೆಯ ತೀಕ್ಷ್ಣತೆ ಹಾಗೂ ಅವಧಿ, (ಡ) ಮಣ್ಣಿನ ಗುಣಧರ್ಮ, (ಇ) ಮಣ್ಣಿನ ಕೆಳಗಿನ ಶಿಲಾರಚನೆ ಮತ್ತು ಅಲ್ಲಿಯ ಶಿಲಾಜಾತಿ.

ಭೂಗರ್ಭದಲ್ಲಿ ನೀರಿನ ಚಲನವಲನೆ ಹಾಗೂ ದೊರೆಯುವಿಕೆ, ಶಿಲೆಗಳ ವ್ಯಾಪ್ತತೆ (Permeability) ಹಾಗೂ ಸಚ್ಛಿದ್ರತೆ (Porosity) ಗಳೆಂಬ ಎರಡು ಮುಖ್ಯ ಗುಣಧರ್ಮಗಳಿಂದ ಸಂಗ್ರಹಿಸಲ್ಪಟ್ಟಿರುತ್ತದೆ. ಶಿಲೆಗಳು ಎಷ್ಟೇ ವ್ಯಾಪ್ತತೆಯುಳ್ಳವುಗಳಾಗಿದ್ದರೂ ಅಲ್ಲಿ ಸಂಗ್ರಹವಾದ ಎಲ್ಲ ಭೂ-ಅಂತರ್ಜಲವನ್ನು ಪೂರ್ತಿಯಾಗಿ ಪಡೆಯಲು ಸಾಧ್ಯವಾಗುವದಿಲ್ಲ. ಈ ಸಂಗ್ರಹದ ಕೆಲವೊಂದು ಪಾಲು ಮಾತ್ರ ಪಡೆಯಲು ಸಾಧ್ಯ. ಮಿಕ್ಕಿದ್ದು ಈ ಶಿಲೆಗಳಲ್ಲಿಯೇ ಉಳಿಯುವದು.

ಭೂ-ಅಂತರ್ಜಲ ಪಾತಳಿಯು ಜಲಸಂಗ್ರಹಕ್ಕೆ ಯೋಗ್ಯವಾದ ಶಿಲೆಗಳೊಡನೆ ಹೊಂದಿಕೊಂಡಿರುತ್ತದೆ. ಇದು ಕೇಶಾಕರ್ಷಣ ನೀರಿನ ಮತ್ತು ಸ್ವಯಂ ಜಲ ಭಾಗಗಳ ನಡುವಿನ ಪಾತಳಿಯಾಗಿರುತ್ತದೆ. ತೋಳವೆ ಭಾವಿಗಳಲ್ಲಿ ನಿಲ್ಲುವ ನೀರಿನ ಪಾತಳಿಯೇ ಈ ಭೂಅಂತರ್ಜಲ ಪಾತಳಿ.

ಭೂವಿಜ್ಞಾನಿಗಳಿಗೆ ಸ್ಥಿರಜಲ ವಿಭಾಗದಂತೆ ಚರಜಲ ವಿಭಾಗವೂ ಅಷ್ಟೇ ಮಹತ್ವದ್ದು. ಈ ಚರಜಲ ವಿಭಾಗದಲ್ಲಿಯೇ ನೀರಿನ ಗುಣಧರ್ಮ ಹಾಗೂ ಚಲನವಲನವನ್ನು ನಿಗ್ರಹಿಸುವ ರಾಸಾಯನಿಕ ಕ್ರಿಯೆಗಳು ನಡೆಯುತ್ತವೆ. ಇಲ್ಲಿಯ ಶಿಲೆ ಮತ್ತು ಖನಿಜಗಳು ಪ್ರಕೃತಿಯ ವಾತಾವರಣದ ಪ್ರಭಾವದಿಂದಾಗಿ ಲವಣಾಮ್ಲಗಳನ್ನು ಸ್ರವಿಸುತ್ತಿರುತ್ತವೆ. ಈ ಲವಣಾಮ್ಲಗಳು ಭೂಅಂತರ್ಜಲದಲ್ಲಿ ಕೂಡಿಕೊಳ್ಳುತ್ತವೆ.

ಚರಜಲ ವಿಭಾಗದಲ್ಲಿ ದೊರೆಯುವ ನೀರನ್ನು ಐದು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ : (೧) **ಮಣ್ಣು ನೀರು (Soil water) :** ಈ ನೀರು ಸಣ್ಣ ಸಣ್ಣ ಕಲ್ಲು ತುಣುಕುಗಳ ಮೇಲ್ಮೈಯಲ್ಲಿ ತೆಳ್ಳಗಿನ ಹಾಳೆಯಂತೆ ಸಂಗ್ರಹಿಸಲ್ಪಟ್ಟಿರುತ್ತದೆ. (೨) **ಶಿಲಾಕಣಾವೃತ ನೀರು (Pellicular water) :** ಈ ನೀರು ಶಿಲೆಗಳ ಕಣಗಳನ್ನು, ಸೀಳುಗಳನ್ನು ತೆಳ್ಳಗಿನ ಹಾಳೆಯಂತೆ ಆವರಿಸಿರುತ್ತದೆ. ಶಿಲೆಗಳಲ್ಲಿಯ ಕೇಶಗಳಂತಹ ಛಿದ್ರಗಳ ಮೂಲಕ ಕೇಶಾಕರ್ಷಣ ಕ್ರಿಯೆಯಿಂದಾಗಿ ಚಲಿಸುತ್ತಿರುತ್ತದೆ. (೩) **ಗುರುತ್ವಾಕರ್ಷಣ ನೀರು (Gravity water):** ಶಿಲಾಕಣಾವೃತ ನೀರಿನ ಭಾಗದಲ್ಲಿ ಹೆಚ್ಚಾದ ನೀರು ಗುರುತ್ವಾಕರ್ಷಣ ಶಕ್ತಿಯಿಂದಾಗಿ ಕೆಳಗಡೆಗೆ ಚಲಿಸುತ್ತಿರುತ್ತದೆ. ಇದೇ 'ಗುರುತ್ವಾಕರ್ಷಣ ನೀರು'. (೪) **ಪರ್ಚಡ ನೀರು (Perched water) :** ಗುರುತ್ವಾಕರ್ಷಣ ನೀರಿನ ಭಾಗದ ಕೆಳಗಿನ ಭಾಗವನ್ನು ಪರ್ಚಡ ನೀರಿನ ಭಾಗ ಎಂದು ಕರೆಯುತ್ತಾರೆ. (೫) **ಕೇಶಾಕರ್ಷಣ ನೀರು (Capillary water) :** ಕೇಶಾಕರ್ಷಣ ನೀರಿನ ಭಾಗವು ಪರ್ಚಡ ನೀರಿನ ಭಾಗದ ಕೆಳಗಿರುತ್ತದೆ. ಇಲ್ಲಿ ನೀರು ಕೇಶಾಕರ್ಷಣ ಶಕ್ತಿಯಿಂದಾಗಿ ಚಲಿಸುತ್ತಿರುತ್ತದೆ.

ಸ್ಥಿರಜಲವಿಭಾಗ(Zone of saturation)ದಲ್ಲಿಯ ನೀರನ್ನು ನಾಲ್ಕು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ : (೧) **ಸ್ವಯಂಜಲ (Free water):** ಈ ನೀರು ಛಿದ್ರಗಳ ಜಾಳಿಗೆಯ ಮುಖಾಂತರ ಭೂಅಂತರ್ಜಲ ಪಾತಳಿಯಿಂದ ನಿಗ್ರಹಿಸಲ್ಪಟ್ಟು ಅದರ ಏರಿಳಿತಗಳಿಗೆ ತಕ್ಕಂತೆ ಚಲಿಸುತ್ತದೆ. (೨) **ಸೀಮಿತ ನೀರು (Confined water):** ಸ್ವಯಂಜಲ ಭಾಗದ ಕೆಳಗಿನ ಭಾಗಕ್ಕೆ ಸೀಮಿತ ಜಲ ವಿಭಾಗವೆನ್ನುತ್ತಾರೆ. ಈ ಭಾಗದಲ್ಲಿಯ ನೀರು ಭೂಜಲದ ಅಸಮಾನ ಒತ್ತಡಗಳಿಂದಾಗಿ ಚಲಿಸುತ್ತಿರುತ್ತದೆ. (೩) **ಫಿಕ್ಸಡ ಜಲ (Fixed water):** ಈ ಜಲವು ಸ್ಥಿರಜಲದಿಂದ ಕೂಡಿದ ಶಿಲೆಗಳ ಸೂಕ್ಷ್ಮ ಸೀಳು ರಂಧ್ರಗಳಲ್ಲಿ (Interstices) ಶಾಶ್ವತವಾಗಿ ಹಿಡಿಯಲ್ಪಟ್ಟಿರುತ್ತದೆ, ಅಥವಾ ಅತಿ ನಿಧಾನವಾಗಿ ಚಲಿಸುತ್ತಿರುತ್ತದೆ. ಸಾಮಾನ್ಯವಾಗಿ ಯಾವದೇ ವಿಧಾನಗಳ ಮೂಲಕ ಈ ಜಲವನ್ನು ಪಡೆಯಲು ಸಾಧ್ಯವಿಲ್ಲ. (೪) **ಕೊನ್ನೇಟ ನೀರು** (ಇದರ ಬಗ್ಗೆ ಮೇಲೆ ನೋಡಿರಿ.)

ಸ್ಥಿರಜಲವಿಭಾಗದಂತೆ ಚರಜಲವಿಭಾಗವೂ ಬಹು ಮುಖ್ಯವಾದುದು. ಅದರಲ್ಲಿಯೂ ಮಣ್ಣಿನ ನೀರಿನ ಭಾಗವು (Soil water) ಅತಿ ಮುಖ್ಯವಾದುದು. ಇಲ್ಲಿಯ ಮಣ್ಣು ಗಿಡಗಂಟಿಗಳ ಬೇರುಗಳಿಂದಾಗಿ ಶಿಥಿಲವಾಗಿರುತ್ತವೆ. ಈ ಮಣ್ಣು ನೀರಿನ ಭಾಗವು ಕೆಲವು ಇಂಚುಗಳಿಂದ ಹಿಡಿದು ೬೦ ಫೂಟು ಆಳವಾಗಿರಬಹುದು. ಈ ಭಾಗ ಸಸ್ಯಗಳ ಜೀವಾಳವಾಗಿರುವದರಿಂದ ವ್ಯವಸಾಯ ತಜ್ಞರು ಈ ಭಾಗವನ್ನು ಕೂಲಂಕಷವಾಗಿ ಅಭ್ಯಸಿಸುತ್ತಾರೆ.

ಭೂಅಂತರ್ಜಲ ಪಾತಳಿಯು ಆಳ ಸ್ಥಳದಿಂದ ಸ್ಥಳಕ್ಕೆ ಹೆಚ್ಚುಕಡಿಮೆ ಆಗುತ್ತಿರುತ್ತದೆ. ಸಾಮಾನ್ಯವಾಗಿ ಶಿಲೆಗಳ ಸಚ್ಛಿದ್ರತೆ (Porosity) ಭೂಮಿಯ ಆಳಕ್ಕೆ ಹೋದಂತೆ ಕಡಿಮೆಯಾಗುತ್ತದೆ. ಸ್ಫಟಿಕ ಶಿಲೆಗಳಿರುವ ಪ್ರದೇಶಗಳಲ್ಲಿ (Crystalline rocks) ಅತಿ ಹೆಚ್ಚೆಂದರೆ ೩೦೦ ಅಡಿ ಆಳದವರೆಗೆ ಭೂಅಂತರ್ಜಲವು ದೊರೆಯಬಹುದು. ಹೆಚ್ಚು ಸಚ್ಛಿದ್ರತೆ ಹಾಗೂ ವ್ಯಾಪ್ತತೆಯುಳ್ಳ ಕೆಲವು ಶಿಲೆಗಳಲ್ಲಿ ೬೦೦೦ ಅಡಿ ಆಳದಲ್ಲಿ ಭೂಅಂತರ್ಜಲ ದೊರೆತ ಉದಾಹರಣೆಗಳೂ ಇವೆ. ಆಸ್ಟ್ರೇಲಿಯದಲ್ಲಿಯ ಕೆಲವು ಕೊಳವೆಬಾವಿಗಳು ೪,೦೦೦ ಅಡಿ ಆಳವಿದ್ದರೂ ಯಥೇಚ್ಛವಾಗಿ ಜಲವನ್ನು ಕೊಡಬಲ್ಲವಾಗಿವೆ.

ಭೂಅಂತರ್ಜಲ ಸಂಗ್ರಹವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಗುರುತ್ವಾಕರ್ಷಣಶಕ್ತಿಯಿಂದ ಸರಿದುಹೋಗಬಹುದು

ವಾಯುಮಂಡಲ, ಭೂಮಿಯ ಮೇಲಣ ಜಲಸಂಗ್ರಹಗಳಾದ ನದಿ, ಸರೋವರ, ಮಣ್ಣು ನೀರು, ಭೂಅಂತರ್ಜಲ ಸಂಗ್ರಹ—ಈ ನಾಲ್ಕು ಪ್ರಮುಖ ಜಲಸಂಗ್ರಹಗಳಾಗಿವೆ. ಭೂಅಂತರ್ಜಲಕ್ಕೂ, ವಾತಾವರಣಕ್ಕೂ ನಿಕಟವಾದ ಸಂಬಂಧವಿರುವದರಿಂದ ನಾವು ಜಲಚಕ್ರವನ್ನು (Hydrologic Cycle) ಕಲ್ಪಿಸಬಹುದು.

ಈ ಜಲಚಕ್ರವು ವಾಯುಮಂಡಲದಲ್ಲಿಯ ನೀರಿನ ಬಾಷ್ಪದ ಚಲನವಲನ, ಉಗಿಯಿಂದ ಮಳೆಯಾಗುವದು, ಭೂಮಿಗೆ ಬೀಳುವದು, ಭೂಮಿಯ ಮೇಲಿನ ನೀರಿನ ಪ್ರವಾಹ, ಬಾಷ್ಪೀಭವನ ಇವೆಲ್ಲವುಗಳನ್ನು ಕೂಡಿದೆ. ಮೇಲುನೋಟಕ್ಕೆ ಹೊಳೆ, ಹಳ್ಳ, ನದಿಗಳೇ ಭೂಮಿಯ ಮೇಲಿನ ಬೃಹದ್ ಜಲಸಂಗ್ರಹಗಳೆಂಬ ಭಾವನೆಯುಂಟಾಗಬಹುದು. ಆದರೆ ಪೃಥ್ವಿಯ ಮೇಲೆ ಸುರಿದ ಮಳೆಯ ಶೇಕಡಾ ೩೬ರಷ್ಟು ಮಾತ್ರ ಚಿಕ್ಕ ಚಿಕ್ಕ ಹಳ್ಳ, ನದಿಗಳಾಗಿ ಸಮುದ್ರಕ್ಕೆ ಕೂಡುತ್ತದೆ. ಮಿಕ್ಕ ಶೇಕಡಾ ೬೪ರಲ್ಲಿ ಕೆಲವಂಶ ಮಣ್ಣು ಹಾಗು ಸಸ್ಯಗಳ ಮುಖಾಂತರ ಹೀರಲ್ಪಟ್ಟು, ಉಳಿದ ಕೆಲವಂಶ ಭೂಅಂತರ್ಜಲ ಸಂಗ್ರಹಕ್ಕೆ ಕೂಡುತ್ತದೆ.

ಇನ್ನು ಶಿಲೆಗಳಲ್ಲಿ ಭೂಅಂತರ್ಜಲ ಅಡಕವಾಗಿರುವ ಬಗೆಯನ್ನು ವಿವೇಚಿಸಬಹುದು.

ಜಲಶಿಲೆಗಳು (Sedimentary rocks) : ಈ ಶಿಲಾಸಮುದಾಯದಲ್ಲಿ ಸುಣ್ಣದ ಕಲ್ಲು, ಅಮೃತಶಿಲೆ, ಜೇಡಿಪದರುಗಲ್ಲು (Shales) ಹಾಗೂ ಉಸುಕಿನ ಕಲ್ಲು ಪ್ರಮುಖವಾದವು.

ಭೂಅಂತರ್ಜಲವು ಆಮ್ಲಜನಕವಾಯುವಿನೊಂದಿಗೆ ಸಂಯೋಜಿತವಾದಾಗ ಲವಣಗಳನ್ನು ಕರಗಿಸಿಕೊಳ್ಳುವ ಅದರ ಸಾಮರ್ಥ್ಯವು ಹೆಚ್ಚುತ್ತದೆ. ಇಂತಹ ಜಲವು ಸುಣ್ಣದ ಕಲ್ಲು ಹಾಗೂ ಅಮೃತಶಿಲೆಗಳ ಪ್ರದೇಶದಲ್ಲಿ ಸಂಚರಿಸುವಾಗ

ಈ ಶಿಲೆಗಳು ಅಧಿಕವಾಗಿ ಕರಗುತ್ತವೆ. ಈ ಕ್ರಿಯೆ ಶಿಲೆಗಳ ಸೀಳುಗಳಿದ್ದಲ್ಲಿ ತೀವ್ರಗೊಳ್ಳುವದು. ಇಂತಹ ಶಿಲಾಸೀಳುಗಳು ಈ ಮೇಲಣ ಕ್ರಿಯೆಗೆ ಒಳ-ಪಟ್ಟಾಗ ಕ್ರಮೇಣ ಅಗಲವಾಗುತ್ತಹೋಗಿ ಒಂದಕ್ಕೊಂದು ಕೂಡಿಕೊಂಡು ಭೂಅಂತರ್ಜಲ ಸಂಗ್ರಹಕ್ಕೂ ಹಾಗೂ ಚಲನವಲನೆಗೂ ಸಹಾಯುವಾಗುತ್ತವೆ. ಇಂತಹ ಪ್ರದೇಶಗಳಲ್ಲಿ ಭೂಅಂತರ್ಜಲ ಸಂಗ್ರಹದ ಸಂಭವ ಕಡಿಮೆ.

ಜೇಡಿಪದರುಗಲ್ಲುಗಳಲ್ಲಿ (Shale) ಸಚ್ಛಿದ್ರತೆ ಹಾಗೂ ವ್ಯಾಪ್ತತೆ ಗುಣ ಕಡಿಮೆ. ಇಂತಹ ಶಿಲೆಗಳು ಭೂಅಂತರ್ಜಲ ಸಂಗ್ರಹಕ್ಕೆ ಮತ್ತು ಚಲನವಲನಗಳಿಗ ಯೋಗ್ಯವಾದವುಗಳಲ್ಲ. ಆದರೆ ಕೆಲವೆಡೆ ಈ ಶಿಲೆಗಳ ಎರಡು ಸ್ತರಗಳ ಮಧ್ಯೆ ಸಾಕಷ್ಟು ಪ್ರಮಾಣದಲ್ಲಿ ಭೂಅಂತರ್ಜಲಸಂಗ್ರಹವು ಇರಬಲ್ಲದು. ಅಲ್ಲದೇ ಇಂತಹ ಸ್ಥಳಗಳು ಈ ನೀರಿನ ಚಲನವಲನಗಳಿಗೂ ಯೋಗ್ಯವಾಗಿವೆ. ಆದರೆ ಇವು ಅಪವಾದಾತ್ಮಕ ಉದಾಹರಣೆಗಳು.

ಉಸುಕಿನ ಶಿಲೆಗಳಲ್ಲಿ ಛಿದ್ರಗಳು ಗಾತ್ರದಲ್ಲಿ ಅಗಲ ಮತ್ತು ಅಧಿಕವಾಗಿರುತ್ತವೆ. ಆದುದರಿಂದ ಈ ಶಿಲೆಗಳಲ್ಲಿ ಸಚ್ಛಿದ್ರತೆ ಹಾಗೂ ವ್ಯಾಪ್ತತೆಯು ಪ್ರಮಾಣ ಹೆಚ್ಚು. ಇಂತಹ ಶಿಲಾಸಮುದಾಯ ಪ್ರದೇಶದಲ್ಲಿ ಭೂಅಂತರ್ಜಲವು ವಿಪುಲವಾಗಿ ದೊರೆಯುವದು.

ಚೆಣಚುಗಲ್ಲುಗಳಲ್ಲಿ ಶಿಲಾಸೀಳುಗಳು ಅಧಿಕವಾಗಿರುವದರಿಂದ ಭೂಅಂತ-ರ್ಜಲದ ಸಂಚಲನೆಗೆ ಅನುಕೂಲವಾಗಿರುತ್ತದೆ.

ಸ್ಫಟಿಕ ಶಿಲೆಗಳು (Crystalline rocks) : ಈ ಸಾಂದ್ರರೂಪದ ಶಿಲೆಯಲ್ಲಿ ಬಿರುಕುಗಳು, ಶಿಲಾಸೀಳುಗಳು ಅಧಿಕಪ್ರಮಾಣದಲ್ಲಿ ಇರುತ್ತವೆ. ಇವುಗಳಿಂದಾಗಿ ಈ ಶಿಲೆ ಸಣ್ಣ ಸಣ್ಣ ತುಂಡುಗಳನ್ನೊಳಗೊಂಡ ಗಟ್ಟಿಯಾಗಿರುತ್ತದೆ. ಇದು ಸಾಮಾನ್ಯವಾಗಿ ಗ್ರನೈಟ ಶಿಲೆ (Granite), ರೂಪಾಂತರಿತ ಗ್ರನೈಟ (Gneiss) ಹಾಗೂ ಭಿನ್ನಸ್ತರ(Schists)ಗಳೆಂಬ ಮೂರು ಜಾತಿಗಳನ್ನೊಳಗೊಂಡಿವೆ. ಇವುಗಳ ರಂಧ್ರಗಳಲ್ಲಿ ನೀರು ಹಿಡಿಯಲ್ಪಟ್ಟಿರಬಹುದು ಅಥವಾ ಚಲಿಸುತ್ತಿರಬಹುದು. ಇಂತಹ ಶಿಲಾರಂಧ್ರಗಳು ಸಾಮಾನ್ಯವಾಗಿ ಭೂಮಿಯ ಮೇಲ್ಗಡೆಯಿಂದ ಆಳದವರೆಗೆ ಪಸರಿಸಿರುತ್ತವೆ. ಈ ರಂಧ್ರ ಮತ್ತು ಸೀಳುಗಳು ನಿಸರ್ಗದ ಸವಕಳಿ ಕ್ರಿಯೆಗೊಳಪಟ್ಟು ವಿಸ್ತಾರವಾಗುವುದರಿಂದ ಇಂತಹ ಸ್ಥಳಗಳಲ್ಲಿ ನೀರಿನ ಸಂಗ್ರಹವಾಗುವದು.

ರೂಪಾಂತರ ಶಿಲೆಗಳು (Metamorphic rocks) : ಇವುಗಳಲ್ಲಿ ಭಿನ್ನಸ್ತರ ಶಿಲೆಗಳು (Schists) ಹಾಗೂ ಪಾಟೀಕಲ್ಲುಗಳು ಪ್ರಮುಖವಾದವು. ಸ್ವಾಭಾವಿಕ ಪದರು-ಪದರುಗಳ ರಚನೆಯಿಂದಾಗಿ ಇವುಗಳಲ್ಲಿ ಬಿರುಕುಗಳು

ಹೆಚ್ಚು. ಈ ಬಿರುಕುಗಳು ಪ್ರಾಕೃತಿಕ ಶಿಥಿಲೀಕರಣದಿಂದಾಗಿ (Weathering) ವಿಸ್ತಾರಗೊಂಡು ಭೂಅಂತರ್ಜಲ ಸಂಗ್ರಹಕ್ಕೆ ಯೋಗ್ಯವಾಗಬಹುದು.

ಜ್ವಾಲಾಮುಖಿ ಶಿಲೆಗಳು (Volcanic rocks): ಜ್ವಾಲಾಮುಖಿ ಲಾವಾ ರಸವನ್ನು ಕಾರಿದಾಗ ಭೂಅಂತರಾಳದಲ್ಲಿ ದೊಡ್ಡ ದೊಡ್ಡ ಕಂಡಿಗಳುಂಟಾಗುತ್ತವೆ. ಈ ಕಂಡಿಗಳಲ್ಲಿ ನೀರು ಸಂಗ್ರಹವಾಗಬಹುದು. ಇನ್ನು ಹೊರಬಿದ್ದ ಲಾವಾರಸ ಗಟ್ಟಿಯಾಗುವಾಗ ಉಂಟಾಗುವ ವಾಯುಕೋಶಗಳಲ್ಲಿ, ಎರಡು ಲಾವಾಶಿಲಾಸ್ತರಗಳ ಮಧ್ಯದಲ್ಲಿರುವ ಕಂಡಿಗಳಲ್ಲಿ ನೀರು ಸಂಗ್ರಹವಾಗಬಹುದು. ಆದರೆ ಇಂತಹ ಜಲಸಂಗ್ರಹಗಳು ಕೆಲವೇ ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತವೆ. ಸಾಮಾನ್ಯವಾಗಿ ಇವು ಗಟ್ಟಿಶಿಲೆಗಳಾಗಿರುವದರಿಂದ ಜಲ ಸಂಗ್ರಹಕ್ಕೆ ಅಷ್ಟೇನು ಯೋಗ್ಯವಾದವುಗಳಲ್ಲ.

ಒಟ್ಟಿನಲ್ಲಿ ಸಚ್ಛಿದ್ರ ಶಿಲಾಸಮುದಾಯ ಪ್ರದೇಶದಲ್ಲಿ ಭೂಅಂತರ್ಜಲ ಸಂಗ್ರಹ ವಿಪುಲ. ಇಂತಹ ಶಿಲಾಪ್ರದೇಶಗಳಲ್ಲಿ ನಿತ್ಯೋಪಯೋಗಕ್ಕೆ ಸಾಕಾಗುವಷ್ಟು ನೀರನ್ನು ಸಾಮಾನ್ಯವಾಗಿ ೧೦೦ ಅಡಿ ಆಳದವರೆಗೆ ಪಡೆಯಬಹುದು. ಭೂಮಿಯ ತೀರ ಆಳಕ್ಕೆ ಹೋದಂತೆ ಶಿಲೆಗಳ ಸೀಳುಗಳ ಗಾತ್ರ ಹಾಗೂ ಸಚ್ಛಿದ್ರತೆ ಕಡಿಮೆಯಾಗುವದರಿಂದ ಈ ಪ್ರದೇಶಗಳಲ್ಲಿ ತೀರ ಆಳಕ್ಕೆ ಕೊರೆದ ಭಾವಿಗಳಿಂದ ನೀರನ್ನು ಹೆಚ್ಚು ಪಡೆಯಲು ಸಾಧ್ಯವಿಲ್ಲ. ಗ್ರಾನೈಟ ಶಿಲೆಗಳು (Granites) ಇರುವ ಪ್ರದೇಶದಲ್ಲಿ ಜಲವು ಸದಾ ಸೂಸುತ್ತಿರುವ ಇಲ್ಲಿಯ ಭಾವಿಗಳಿಂದ ನಿಮಿಷಕ್ಕೆ ೨ ರಿಂದ ೧೦ ಗ್ಯಾಲನ್‌ಗಳಷ್ಟು ನೀರನ್ನು ಪಡೆಯಬಹುದು.

ಕೆಲವು ಪ್ರದೇಶಗಳಲ್ಲಿ ಭೂಅಂತರ್ಜಲವು ಕಾರಂಜಿಯಂತೆ ಪುಟಿಯುವದನ್ನು ನೋಡಬಹುದು. ಕೆಲವೆಡೆ ಇದು ಅತಿ ಒತ್ತಡದಿಂದ ಪುಟಿದು ಮೇಲೆ ಸೂಸುವದು. ಇವುಗಳಿಗೆ 'ಬುಗ್ಗೆ' ಹಾಗು 'ಆರ್ಟಿಸಿಯನ್' ಭಾವಿಗಳೆನ್ನಲಾಗಿದೆ.

ಭೂಅಂತರ್ಜಲವು ಭೂಮಿಯ ಒಳಗಿನ ಉಷ್ಣತೆಯಿಂದಾಗಿ ಕಾಯ್ದು ಬುಗ್ಗೆಗಳ ಮುಖಾಂತರ ಬರುವದು. ಇವೇ 'ಬಿಸಿನೀರಿನ ಬುಗ್ಗೆಗಳು'. ಬುಗ್ಗೆಗಳಿಂದ ಸಿಗುವ ನೀರು ಕೆಲವು ಪ್ರದೇಶಗಳಲ್ಲಿ ದಿನ ಒಂದಕ್ಕೆ ಕೆಲವು ಗ್ಯಾಲನ್ನಿನಿಂದ ೫ ಲಕ್ಷ ಗ್ಯಾಲನ್ ವರೆಗೂ ಇರಬಹುದು.

'ಆರ್ಟಿಸಿಯನ್' ಜಲಸಂಗ್ರಹಕ್ಕೆ ಪದರುಗಳಿರುವ ಶಿಲಾಪ್ರದೇಶವು ಯೋಗ್ಯವಾದುದು. ಇಲ್ಲಿ ಒತ್ತಡದಿಂದ ಹಿಡಿಯಲ್ಪಟ್ಟ ಜಲವು, ಕಡಿಮೆ ಒತ್ತಡ ಪ್ರದೇಶದಲ್ಲಿ ಹೊರಬಂದಾಗ ಶಿಲಾಸೀಳುಗಳ ಮುಖಾಂತರ ಹೊರ ಸೂಸುತ್ತದೆ.

ಭಾರತದ ಭೂಅಂತರ್ಜಲ ಪ್ರದೇಶಗಳು :

ಭೂಅಂತರ್ಜಲದ ಸಂಗ್ರಹ ಹಾಗೂ ಚಲನವಲನ ಆ ಆ ಪ್ರದೇಶದ ಶಿಲಾ ಗುಣಧರ್ಮವನ್ನು ಅವಲಂಬಿಸಿದೆಯೆಂದು ಈ ಹಿಂದೆ ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಭೂಅಂತರ್ಜಲಕ್ಕೆ ಸಂಬಂಧಿಸಿದಂತೆ ಪ್ರಮುಖ ಶಿಲಾಸ್ತೋಮಗಳು, ಅವುಗಳ ವಿಸ್ತಾರ, ವರ್ತನೆ ಇತ್ಯಾದಿಗಳ ಬಗ್ಗೆ ವಿವೇಚಿಸಬಹುದು.

ಭಾರತದಲ್ಲಿಯ ಶಿಲಾಸ್ತೋಮಗಳನ್ನು ಈ ಕೆಳಗಿನಂತೆ ವರ್ಗೀಕರಿಸುತ್ತಾರೆ :

(೧) ಆರ್ಷೇಯ ಸ್ಫಟಿಕ ಹಾಗೂ ರೂಪಾಂತರ ಶಿಲಾಸ್ತೋಮ ಪ್ರದೇಶ (Pre-Cambrian Crystalline rocks).
(೨) ಕಡಪಾ ಹಾಗೂ ವಿಂಧ್ಯ ಶಿಲಾಸ್ತೋಮ ಪ್ರದೇಶ.
(೩) ಗೊಂಡವಾನ ಶಿಲಾಸ್ತೋಮ ಪ್ರದೇಶ.
(೪) ಮಿಸೋಝೋಯಿಕ ಹಾಗೂ ಟರ್ಷಿಯರಿ ಶಿಲಾಸ್ತೋಮ ಪ್ರದೇಶ.
(೫) ಇತ್ತೀಚಿನ ಶಿಲಾಸ್ತೋಮ ಪ್ರದೇಶ

ಇವುಗಳಿಗೆ ಸಂಬಂಧಪಟ್ಟ ವಿವರಣೆ ಹೀಗಿದೆ :

(೧) ಆರ್ಷೇಯ ಸ್ಫಟಿಕ ಹಾಗೂ ರೂಪಾಂತರ ಶಿಲಾಸ್ತೋಮ ಪ್ರದೇಶ : ಭಾರತದ ಬಹು ಭಾಗವನ್ನು ವ್ಯಾಪಿಸಿರುವ ಈ ಶಿಲಾಸ್ತೋಮಗಳಲ್ಲಿ ಭೂಅಂತರ್ಜಲವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವು ಬಹಳ ಕಡಿಮೆ. ಇಂತಹ ಶಿಲಾಸಮುದಾಯದಲ್ಲಿ ಭೂಅಂರ್ಜಲವು ಶಿಥಿಲಗೊಂಡ ಮೇಲಿನ ಹೊದಿಕೆಗೆ ಮಾತ್ರ ಸೀಮಿತವಾಗಿರುತ್ತದೆ. ಸಾಮಾನ್ಯವಾಗಿ ಈ ಶಿಥಿಲೀಕರಣವು ೧೦೦ ಅಡಿಗಳವರೆಗೆ ಪಸರಿಸಿರುವದು. ಭೂಅಂತರ್ಜಲವು ಇಂತಹ ಪ್ರದೇಶಗಳಲ್ಲಿ ಋತುಗಳಿಗನುಗುಣವಾಗಿ ಸ್ಥಳದಿಂದ ಸ್ಥಳಕ್ಕೆ ಬದಲಿಯಾಗುತ್ತದೆ. ಈ ಶಿಲಾಸ್ತೋಮಗಳು ದೊರೆಯುವ ದಕ್ಷಿಣ ಭಾರತದ ಪ್ರದೇಶಗಳಲ್ಲಿ ಭೂಅಂತರ್ಜಲ ಪಾತಳಿಯು ಅಜಮಾಸು ೧೦ ಅಡಿಗಳಿಂದ ೫೦ ಅಡಿಗಳವರೆಗೆ ಇರುತ್ತದೆ. ಇಲ್ಲಿಯ ಶಿಲಾಸ್ತೋಮಗಳು ಶಿಥಿಲಗೊಂಡಿರುವದರಿಂದ ಭೂಅಂತರ್ಜಲದ ಪ್ರಮಾಣ ಮತ್ತು ಸಾಮರ್ಥ್ಯಗಳ ಬಗ್ಗೆ ಹೇಳುವದು ಕಠಿಣವಾಗಿದೆ. ಸರಾಸರಿ ದಿನವೊಂದಕ್ಕೆ ೧೦,೦೦೦ ದಿಂದ ೧೨,೦೦೦ ಗ್ಯಾಲನ್ನಿನಷ್ಟು ನೀರನ್ನು ಇಲ್ಲಿ ಪಡೆಯಬಹುದು.

(೨) ಕಡಪಾ ಮತ್ತು ವಿಂಧ್ಯ ಶಿಲಾಸ್ತೋಮ ಪ್ರದೇಶ : ಈ ಗುಂಪಿಗೆ ಸಂಬಂಧಿಸಿದ ಶಿಲೆಗಳನ್ನು ಆಂಧ್ರ ರಾಜ್ಯದ ಕಡಪಾ, ಕರ್ನೂಲ, ನಮ್ಮ ರಾಜ್ಯದ ಬಿಜಾಪುರ, ಬೆಳಗಾಂವಿ, ಗುಲಬರ್ಗಾ ಹಾಗೂ ವಿಂಧ್ಯಪ್ರದೇಶದ ವಿಶಾಲ ಭಾಗಗಳಲ್ಲಿ ಕಾಣಬಹುದು. ಇವು ಮುಖ್ಯವಾಗಿ ಸುಣ್ಣದ ಕಲ್ಲು, ಉಸುಕಿನ ಕಲ್ಲು,

ಪಾಟೀಕಲ್ಲು, ಭಿನ್ನಸ್ತರ ಶಿಲೆ (Schist), ಚೂರುಕಲ್ಲುಂಡೆ (Conglomerate) ಇವುಗಳನ್ನೊಳಗೊಂಡಿವೆ. ಈ ಪ್ರದೇಶಗಳಲ್ಲಿ ಜಲಸಂಗ್ರಹ ಕಡಿಮೆ. ಭೂ ಅಂತರ್ಜಲ ಪಾತಳಿ ಹೆಚ್ಚು ಆಳ. ಆದ್ದರಿಂದ ನಮ್ಮ ರಾಜ್ಯದಲ್ಲಿ ಮೇಲ್ಕಾಣಿಸಿದ ಜಿಲ್ಲೆಗಳ ಕೆಲ ಭಾಗಗಳಲ್ಲಿ ಭೂಅಂತರ್ಜಲ ಪಾತಳಿಯು ತೀರ ಆಳ ಮತ್ತು ಜಲಸಂಗ್ರಹವಾದರೂ ಅತಿ ಕಡಿಮೆ ಇದೆ. ಆದರೆ ಇದೇ ಗುಂಪಿನ ಚೂರು ಕಲ್ಲುಂಡೆ, ಉಸುಕಿನ ಕಲ್ಲುಗಳು ದೊರೆಯುವ ಪ್ರದೇಶಗಳಲ್ಲಿ ವಿಶೇಷವಾಗಿ ವಿಂಧ್ಯ ಪ್ರದೇಶದ ಕೆಲಭಾಗಗಳಲ್ಲಿ ಭೂಅಂತರ್ಜಲ ಪಾತಳಿಯು ಮೇಲೆ ಇದ್ದು ಅಲ್ಲಿ ವಿಪುಲ ಜಲ ಸಿಗುತ್ತದೆ.

(೩) ಗೊಂಡವಾನ ಶಿಲಾಸ್ತೋಮ ಪ್ರದೇಶ : ಇವುಗಳಲ್ಲಿ ಮುಖ್ಯವಾಗಿ ಜೇಡಿಪದರುಗಲ್ಲು (Shales), ಉಸುಕಿನಕಲ್ಲು ಮತ್ತು ಚೂರುಕಲ್ಲುಂಡೆ ಶಿಲೆಗಳು ಇವೆ. ಸಾಮಾನ್ಯವಾಗಿ ಈ ಶಿಲೆಗಳು ಜಲಸಂಗ್ರಹ ಮತ್ತು ಜಲೋತ್ಪತ್ತಿಗೆ ಯೋಗ್ಯವಾಗಿರುವದರಿಂದ ಈ ಪ್ರದೇಶಗಳಲ್ಲಿ ಭೂಅಂತರ್ಜಲ ಸಂಪತ್ತು ವಿಪುಲವಾಗಿರುತ್ತದೆ. ಈ ಶಿಲಾಸ್ತೋಮಗಳು ಬಿಹಾರ ಪ್ರಾಂತದ ದಕ್ಷಿಣಭಾಗ, ಪಶ್ಚಿಮ ಬಂಗಾಲ, ಮಹಾನದಿ ಹಾಗೂ ಗೋದಾವರಿ ನದಿಗಳ ತಗ್ಗು ಪ್ರದೇಶಗಳ ಕೆಲಭಾಗಗಳಲ್ಲಿ ವ್ಯಾಪಿಸಿವೆ. ಈ ಎಲ್ಲ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಜಲೋತ್ಪತ್ತಿಯು ಪ್ರಮಾಣ ನಿಮಿಷಕ್ಕೆ ೮೦ ಗ್ಯಾಲನ್‌ಗಿಂತ ಹೆಚ್ಚು ಇರುವದು

(೪) ದಕ್ಷಿಣ ತಪ್ಪಲು ಶಿಲಾಸ್ತೋಮ ಪ್ರದೇಶ : ಮಧ್ಯ ಪ್ರದೇಶದ ಗ್ವಾಲ್ಹೇರದಿಂದ ದಕ್ಷಿಣದ ಗೋವೆ, ಬೆಳಗಾಂವಿಯವರೆಗೆ, ಪಶ್ಚಿಮದ ಮುಂಬಯಿಂದ ಪೂರ್ವದ ಅಮರಕಂಟದವರೆಗೆ ಸುಮಾರು ೨,೦೦,೦೦೦ ಚದರ ಮೈಲುಗಳ ವಿಶಾಲ ಪ್ರದೇಶವನ್ನು ಈ ದಕ್ಷಿಣ ತಪ್ಪಲು ಶಿಲಾಸ್ತೋಮಗಳು ಆವರಿಸಿವೆ. ನಮ್ಮ ರಾಜ್ಯದ ಬೆಳಗಾಂವಿ, ಬಿಜಾಪುರ, ಗುಲಬರ್ಗಾ ಹಾಗೂ ಬೀದರ ಜಿಲ್ಲೆಗಳ ಉತ್ತರ ಭಾಗಗಳಲ್ಲಿ ಈ ಶಿಲೆಗಳನ್ನು ಕಾಣಬಹುದು. ಅತಿ ಗಡಸು ರಚನೆಯಿಂದಾಗಿ ಈ ಶಿಲೆಗಳು ಜಲಸಂಗ್ರಹಕ್ಕೆ ಎಳ್ಳಷ್ಟೂ ಯೋಗ್ಯವಾದವುಗಳಲ್ಲ. ಆದರೆ ಕೆಲವೆಡೆ ಇವುಗಳ ಲಾವಾಸ್ತರಗಳ ಮಧ್ಯೆ ಜಲಸಂಗ್ರಹವಾಗಿರುತ್ತದೆ.

(೫) ಮಿಸೋರೊಯಿಕ್ ಮತ್ತು ಟರ್ಷಿಯರಿ ಶಿಲಾಸ್ತೋಮಗಳ ಪ್ರದೇಶ : ಈ ಶಿಲೆಗಳು ಮದ್ರಾಸ, ಪಂಜಾಬ, ಆಂಧ್ರಪ್ರದೇಶ ಹಾಗೂ ಕೇರಳ ರಾಜ್ಯಗಳ ಕೆಲ ಭಾಗವನ್ನು ವ್ಯಾಪಿಸಿವೆ. ಸಾಮಾನ್ಯವಾಗಿ ಇವು ಇತ್ತೀಚಿನ ಉಸುಕಿನ ಶಿಲೆಗಳನ್ನೊಳಗೊಂಡಿವೆ. ಟರ್ಷಿಯರೀ ಶಿಲೆಗಳು ದೊರೆಯುವ ಪಂಜಾಬ, ಆಂಧ್ರ, ಮದ್ರಾಸ ಹಾಗೂ ಹಿಮಾಲಯ ಕೆಲಭಾಗಗಳಲ್ಲಿ

ಜಲಸಂಗ್ರಹ ಹಾಗೂ ಜಲೋತ್ಪತ್ತಿ ವಿಪುಲವಾಗಿದೆಯಲ್ಲದೆ ಭೂಅಂತರ್ಜಲ ಪಾತಳಿಯು ಅತಿ ಮೇಲ್ಮಟ್ಟದಲ್ಲಿದೆ. ಈ ಶಿಲೆಗಳ ಸಡಿಲುರಚನೆ(unconsolidated) ಜಲಸಂಗ್ರಹಕ್ಕೆ ದಾರಿಮಾಡಿಕೊಟ್ಟಿದೆ. ಇದು ಆ ಪ್ರದೇಶದಲ್ಲಿಯ ರೈತರಿಗೆ ಪ್ರಕೃತಿದತ್ತ ವರದಾನವಾಗಿದೆ.

(೬) **ಇತ್ತೀಚಿನ ಶಿಲಾಸ್ತೋಮಗಳ ಪ್ರದೇಶ :** ಈ ಶಿಲೆಗಳು ಸಾಮಾನ್ಯವಾಗಿ, ಸಿಂಧು, ಗಂಗಾ ನದಿಯ ರೇವಿನ ಪ್ರದೇಶ, ಹಿಮಾಲಯದ ಕೆಲವು ಪ್ರದೇಶ ಹಾಗೂ ಭಾರತದ ಇತರ ಭಾಗಗಳಲ್ಲಿ ಅಲ್ಲಲ್ಲಿ ವ್ಯಾಪಿಸಿವೆ. ಈ ಶಿಲೆಗಳ ರಚನೆ, ಜಲಸಂಗ್ರಹಕ್ಕೂ ಜಲೋತ್ಪತ್ತಿಗೂ ಯೋಗ್ಯವಾಗಿದೆ.

ಹೀಗೆ ಭೂಮಿಯ ಒಳಗೆ ಅಂದರೆ ಭೂಅಂತರ್ಜಲ ಪಾತಳಿಯ ಕೆಳಗೆ ಇರುವ ನೀರು, ಭೂಮಿಯ ಮೇಲೆ ಇರುವ ನೀರಿಗಿಂತ ೩೩ ಪಟ್ಟು ಹೆಚ್ಚು ಇದೆ. ಅದರ ಅಂಕಿ ಅಂಶ ಹೀಗಿದೆ :

ಪೃಥ್ವಿಯ ಮೇಲಿನ ಸಿಹಿನೀರಿನ ಸಂಗ್ರಹ. . .	ಘನ ಮೈಲುಗಳಲ್ಲಿ
ಸರೋವರಗಳು	೩೦,೦೦೦
ನದಿಗಳು	೩೦೦
ಒಟ್ಟು	೩೦,೩೦೦
ಭೂಅಂತರ್ಜಲ ಸಂಗ್ರಹ	೧೦,೦೦,೦೦೦

ಪ್ರಮಾಣ ೧ : ೩೩

ಹೀಗೆ ಹೊರಗಿನ ನೀರಿಗಿಂತ ೩೩ ಪಟ್ಟು ಹೆಚ್ಚು ಒಳಗಿನ ನೀರು ಇದೆ. ಆದರೆ ಸರಕಾರವಾಗಲಿ, ಜನತೆಯಾಗಲಿ ಹೊರಗಿನ ನೀರಿಗಾಗಿ ಅಣೆಕಟ್ಟು ಮೊದಲಾದವುಗಳಿಗೆ ಗಮನಕೊಟ್ಟಷ್ಟು, ಈ ಒಳಗಿನ ವಿಪುಲ ಜಲಸಂಪತ್ತನ್ನು ಪಡೆಯಲು ಸಾಕಷ್ಟು ಗಮನ ಕೊಟ್ಟಿಲ್ಲ. ಈ ದಿಸೆಯಲ್ಲಿ ಮುಂದುವರಿದರೆ ಭಾರತದ ಜಲಸಂಪತ್ತಿನ ಕೊರತೆ ನೀಗಬಹುದಾಗಿದೆ.

ಗ್ರಂಥಋಣ

1. Indian Mineral Wealth—by *J. Coggin Brown* and *A. K. Dey*, Oxford University Press (Third Edition), 1955.
2. Ground Water—by *C. F. Tolman*, McGraw Hill Book Co., Inc., 1937.

3. Geology for Engineers—by *J. M. Trefethen*, D. Van Nostrand Company Inc., 1960.

4. Ground Water Hydrology—by *D. K. Todd*, Willey, New-York, 1959

5. Progress of the Mineral Industry of India (1906-1955), The Mining, Geological and Metallurgical Institute of India.

6. Geo-Hydrology—by *Roger Deweist*.

7. Our Groundwater Resources and How to utilise them—by *B P. Radhakrishna* (1968), Bulletin of the Mysore Geologists Association (No. 20).

★ ಎಂ. ಬಿ. ದುರ್ಗವಮಠ
ಮತ್ತು
ಬಿ. ಕೆ. ಒಡೆಯರ

ತನ್ನರಿವು ತನಗೆ........

ನನ್ನ ಮಗ್ಗುಲಲ್ಲೇ ಒಣಗಿ ನಿಂತಿರುವ
ಏ ಸನಾತನಿ, ಸುಡು ನಿನ್ನ ಹಾಳು ನಂಬಿಕೆ.
ಅದಕು ಮೊದಲು
ಬಿಡು ಎಳ್ಳು-ನೀರು ಅದರ ಮೇಲೆ.......

ವಿವೇಕಿ ನೀನಯ್ಯ, ಪುಣ್ಯಕ್ಕೆಂದು ಹೊರೆ ಹೊತ್ತ
ಆ ಸನಾತನಕ್ಕಾಗಿ 'ನಿನ್ನತನ'ವೆಲ್ಲ ಕೊಚ್ಚಿಹೋಗಿ,
ಆಗಿರುವೆ ನೀನವಿವೇಕಿ.

ಸನಾತನ: ಅದು ಶುದ್ಧ ಬಳಸುದಾರಿ.
ನಿನ್ನತನ ಮಾತ್ರ ಅಲ್ಲ ಆ ಹಾದಿ.
ಹಿಡಿ ನೀ ಈ ಹಾದಿ:
ಕೊಂಡೊಯ್ಯುವುದು ನಿನ್ನನ್ನಲ್ಲಿಗೆ.

ಎಲ್ಲಿಂದು ಈಗಲೇ ಕೇಳಬೇಡ.
ಕೇಳಿದರೆ ಕೆಟ್ಟೆ ನೀನು.
ಈ ಹಾದಿ ಹತ್ತುವ ಮುಂಚೆ
ಬಿಡು ಎಳ್ಳು-ನೀರು:
ಆ ಭೂತಕಾಲದ ಪಿಂಡಕ್ಕೆ........

ಆ ಕಾಲಧರ್ಮ ಒಯ್ದಿದೆ ನಿನ್ನನ್ನೆಲ್ಲಿಗೋ.
ಅಲ್ಲ, ಒದ್ದಿದೆ ತನ್ನ ಹಾಳು ಕಾಲಿನಿಂದ.
ಒದ್ದ ಕಾಲಿಗೆ ಹುಳ ಬೀಳಲೆಂದು
ಶಪಿಸಬೇಡವೋ, ದುರ್ಮತಿ!
'ನಮೋ' ಅಂತ ಕೈಜೋಡಿಸಲೂ ಬೇಡ,
ಛೀಮಾರಿ ಹಾಗೆ ಕಾಲು ಹಿಡಿಯಲೂ ಬೇಡ.
ಬಿಡು ನಿನ್ನ ಆ ಬಳಸುದಾರಿ.

ಕಣ್ಣಿರದ ಆ ಕರ್ಮಚಕ್ರ ಕೊಯ್ಯುತಿದೆ ನಿನ್ನ,
ತಲೆಯಿರುವ ರುಂಡ !
ರುಂಡ ಕಳಕೊಂಡ ಭಂಡನಾಗುವಾಸೆ ನಿನಗೆ?
'ಛೀ ನಿನ್ನ' : ಖರೇ ಛೀಮಾರಿ ನೋಡು ನೀನೀಗ.

ಈ ಒಣ ಉಪದೇಶ ಸಾಕೆಂದು ಬೊಬ್ಬಿಡುವಿಯೇಕೆ?
ಬೇಕು ಬೇಕೆನಿಸುವಷ್ಟಿದೆ ಈ ಹಸಿ ಉಪದೇಶ.
'ಅದರಿಂದುಂಟೇನು?' ನೀ ಕೇಳಬಹುದು.
ಉಂಟಯ್ಯ ಉಂಟು : ನಿನ್ನ ಪರಿವರ್ತಿಸುವ
ಮಂತ್ರವದರಲ್ಲುಂಟು.

ಈ ದಿವ್ಯಮಂತ್ರ ಬಿಡಿಸುವುದು : ನಿನ್ನ ಅಪರಾತಪರಾ ಹಾದಿ.
ಅದಕಾಗಿ,
ಪೂರ್ಣಪ್ರಜ್ಞನಾಗಿ ನಿಲ್ಲು; ತೊರೆದು ನಿಲ್ಲು :
ನಿನ್ನ ಸಾಚಾತನದಲ್ಲಡಗಿದ ಭಂಡ ಬಿರುಸುತನ.
ನಾಚಿಕೆ ಅನುಮಾನವೇಕಯ್ಯ,
ಈ ಉಚ್ಛಿಷ್ಟ ಬಿಟ್ಟು ನಿಂತಿರಲು ?

ಮುಜುಗರ ಇದ್ದರೆ ನೋಡು,
ನಾನೇ ತಿಲತರ್ಪಣ ಮಾಡಿಸುವೆ ಬ್ರಾಹ್ಮಣನ ತೆರದಿ.
ನಂತರದ ಹೊಸ ಸಂಕಲ್ಪ ಹಚ್ಚುವುದು ನಿನ್ನ
ವಾಸ್ತವದ ಧರ್ಮಕ್ಕೊಯ್ಯು.
ಅದೇ 'ನಿನ್ನತನ' ಕಾಪಿಡುವ ಧರ್ಮವಯ್ಯ.

ಅದಕೇ, ಬಿಡು ಎಳ್ಳು-ನೀರು ಮುಂಜಿ :
'ತನ್ನ ತಾನರಿವಡೆ, ತನ್ನರಿವೇ ತನಗೆ ಗುರು' ಅಲ್ಲವೇನಯ್ಯ ?

★ ಎಸ್. ಜಿ. ಬಿದರಕೊಂಡಿ

ರಾಮೊನ್ ಕಟ್ಟಿದ ರಾಜ್ಯ

(ವೈಜ್ಞಾನಿಕ ಕಥೆ)

ಸೂರ್ಯ ಪೂರ್ವದಿಗಂತದಲ್ಲಿ ಯಾಂತ್ರಿಕವಾಗಿ ಉದಯಿಸಿದ್ದ, ಅಥವಾ ಪೃಥ್ವಿಯು ಈ ಭಾಗವೇ ಸೂರ್ಯನತ್ತ ಹೊರಳತೊಡಗಿತ್ತೆನ್ನಿರಿ. ಆದರೆ ಈ ಸೂರ್ಯೋದಯವನ್ನು ಸ್ವಾಗತಿಸಲು ನಾಗರಿಕತೆ ಉಳಿದಿದ್ದರೆ ತಾನೆ? ಅದು ಅರ್ಧ ಶತಮಾನದಷ್ಟು ಹಿಂದೆಯೇ ಅಳಿದುಹೋಗಿತ್ತು. ಈಗ ಉಳಿದಿರುವ ಮಾನವಕುಲ ಒಂದು ರೀತಿ ಬರಿ ಜೀವಂತ 'ಪಳೆಯುಳಿಕೆ' ಮಾತ್ರ. ಆದಕ್ಕೇನೂ ಡಾರ್ವಿನ್ನನ ವಿಕಾಸವಾದ ಅನ್ವಯಿಸುವಂತಿದ್ದಿಲ್ಲ; ಪರಮಾಣು ಯುದ್ಧಾದಿಗಳಲ್ಲಿ (nuclear warfare) ಭೂಪೃಷ್ಠವನ್ನಷ್ಟೇ ಅಲ್ಲದೆ ಸಾಗರಗಳನ್ನೂ ಆಕಾಶವನ್ನೂ ಅಣುವಿಸರಣದಿಂದ ತುಂಬಿದ ಆ ಅಮಾನುಷ ವೈಜ್ಞಾನಿಕ ನಾಗರಿಕತೆ ತನ್ನ ಸಮಾಧಿಯತ್ತ ಧಾವಿಸುತ್ತಿತ್ತು. 'Live and let die (ಬದುಕು, ಉಳಿದವರು ಹಾಳಾಗಲಿ)' ಎಂಬ ಮೂಲತತ್ತ್ವವನ್ನು ಅನುಸರಿಸಿದ ಆದು ಬದುಕುವುದೆಂತು ?

ಜಗತ್ತಿನ ಜನಸಂಖ್ಯೆ ಬರಿ ಒಂದು ಕೋಟಿಗಿಳಿದಿತ್ತು. ಅದೂ ಹೋದ ಶತಮಾನದ ನಗರಗಳಲ್ಲಿರದೆ (ಅವೆಲ್ಲ ಬಾಂಬ ದಾಳಿಗಳಲ್ಲಿ ನಾಶವಾಗಿದ್ದವು) ಕೆಲವೊಂದು ನದಿ–ಸರೋವರ, ಬೆಟ್ಟ–ಕೊಳ್ಳಗಳ ಆಶ್ರಯಗಳಲ್ಲಿ ಹಂಚಿ ಹೋಗಿತ್ತು. ೨೧ನೆಯ ಶತಮಾನದ ಮನುಷ್ಯನಿಗೂ ಶಿಲಾಯುಗದ ಮನುಷ್ಯ ನಿಗೂ ಹೆಚ್ಚು ವ್ಯತ್ಯಾಸವಿರಲಿಲ್ಲ. ಮೊದಲಿನಾತ ನಾಗರಿಕತೆಗೆ ನಾಂದಿ ಹಾಡಿದ್ದರೆ ಈತ ಅದಕ್ಕೆ ಮಂಗಳ ಹಾಡಿದ್ದ. ಶಿಲಾಯುಗದವನಿಗೆ ಪ್ರಾಣಿಯ ನಿಸರ್ಗ ಸಹಜವಾದ ಸರಳತೆ ಇದ್ದರೆ, ಇಂದಿನ ಮನುಷ್ಯನಿಗೆ ದುಷ್ಟಜಂತುವಿನ ಕ್ರೌರ್ಯ ಕಪಟಗಳು ಬಳುವಳಿಯಾಗಿ ಬಂದಿದ್ದವು.

ವಿಜ್ಞಾನ, ಮಾನವತೆ ಮತ್ತು ಧರ್ಮ ಜಗತ್ತಿನಲ್ಲಿ ಮಾಯವಾಗಿ ಪಶು ಸಮಾನವಾದ ತಿಳಿಗೇಡಿ ಜನತೆ ಮಾತ್ರ ಉಳಿದಿತ್ತು. ಯಾವುದೇ ರಾಜಕೀಯ ವ್ಯವಸ್ಥೆ ಇಲ್ಲದ್ದರಿಂದ ಎಲ್ಲಿ ಎಂಥ ಜೀವನ ಮತ್ತು ಆಡಳಿತ ನಡೆದಿದ್ದವೆಂದು ಹೇಳಲು ಸಾಧ್ಯವಾಗದಷ್ಟು ಗೊಂದಲವೇ ತುಂಬಿತ್ತು.

ಇಂಥ ಜಗತ್ತಿನಲ್ಲಿ ಕೂಡ ಇವಕ್ಕೆಲ್ಲ ವ್ಯತಿರಿಕ್ತವಾದ ಒಂದು ಪ್ರದೇಶ ವಿತ್ತು. ಅದು ಉಳಿದ ಅನಾಗರಿಕ ವಸತಿಗಳಿಂದ ನೂರಾರು ಕಿಲೋಮಿಟರು ಗಳಷ್ಟು ದೂರವಿದ್ದು, ಕಳೆದ ಶತಮಾನಗಳ ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ಧಾರ್ಮಿಕ ಪರಂಪರೆಗಳನ್ನು ಕಾಯ್ದುಕೊಂಡು ಬರಲು ಸಮರ್ಥವಾಗಿದ್ದ ಪುಟ್ಟ ನಾಗರಿಕ ವಸತಿಯಾಗಿತ್ತು.

ಬರಿ ನೂರೈವತ್ತು ಜನಸಂಖ್ಯೆಯು ಈ ಪ್ರದೇಶ ಸ್ವಯಂಪೋಷಕ ಮತ್ತು ಸ್ವಯಂಚಾಲಕವಾಗಿರುವಂತೆ ಪ್ರಾಚಾರ್ಯ ಯೋಗಿನ್ ಯೋಜಿಸಿದ್ದರು. ಅರ್ಧ ಶತಮಾನದ ಹಿಂದೆ ಇದೊಂದು ಪ್ರಾದೇಶಿಕ ವಿಶ್ವವಿದ್ಯಾಲಯವಾಗಿದ್ದು ಭಾರತದ ಶಾಂತಿನಿಕೇತನದ ಮಾದರಿಯದಿತ್ತು. ಆಗಿನ್ನೂ ತರುಣರಾಗಿದ್ದ ಪ್ರೊಫೆಸರ್ ಯೋಗಿನ್‌ರು ವಿಜ್ಞಾನ ಮತ್ತು ಮಾನವಶಾಸ್ತ್ರಗಳನ್ನು ಕಲಿಸುವ ಉಭಯ ಹೊಣೆಗಾರಿಕೆ ಹೊತ್ತು ಈ ವಿಶ್ವವಿದ್ಯಾಲಯ ಸೇರಿದ್ದರು. ಮಹಾಯುದ್ಧಗಳ ಕಾವಿಗೆ ಜಗತ್ತು ತತ್ತರಿಸಿ ಹೆಚ್ಚು ಕಡಿಮೆ ನಾಶವಾದರೂ ಯಾವ ಮಾಯೆ ಯಿಂದಲೋ ಈ ವಿಶ್ವವಿದ್ಯಾಲಯದ ಕ್ಷೇತ್ರ ನಾಗರಿಕ ನೆಲೆಯಾಗಿ ಇನ್ನೂ ಬದುಕಿಕೊಂಡಿತ್ತು.

ರಾಜಕೀಯ ಅನಿಶ್ಚಿತತೆ ಮತ್ತು ಸಾಮಾಜಿಕ ಚೌಕಟ್ಟಿನ ನಾಶದ ಕಾರಣ ವಾಗಿ ಇಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ಇಳಿದದ್ದಲ್ಲದೆ, ಕೆಲವೇ ವರ್ಷಗಳಲ್ಲಿ ಈ ವಿಶ್ವವಿದ್ಯಾಲಯ ಮುಚ್ಚಲ್ಪಟ್ಟಿತ್ತು. ಮತ್ತೆ ಕೆಲ ವರ್ಷಗಳಲ್ಲಿ ಈ ವಿಶ್ವ-ವಿದ್ಯಾಲಯದ ವಿಚಾರ ಅಳಿದುಳಿದ ಜಗತ್ತು ಸಂಪೂರ್ಣ ಮರೆತುಬಿಟ್ಟಿತ್ತು.

ಪ್ರಾಚಾರ್ಯ ಯೋಗಿನ್‌ರು ಈ ಸಂಕಟಸಮಯದಲ್ಲಿ ಧೃತಿಗೆಡದೆ, ವಿಶ್ವ-ವಿದ್ಯಾಲಯ ಮುಚ್ಚಿದ ಮೇಲೆ ಕೂಡ ಅಲ್ಲಿದ್ದ ಹತ್ತಾರು ಕುಟುಂಬಗಳನ್ನೇ ಹುರಿದುಂಬಿಸಿ, ಆ ವಿಶ್ವವಿದ್ಯಾಲಯವನ್ನು ಒಂದು ಆಶ್ರಮವಾಗಿ ಪರಿವರ್ತಿಸಿ ದ್ದರು. ಈಗ ಅದು ಅವರ ಮಾರ್ಗದರ್ಶನದಲ್ಲಿ ನೂರೈವತ್ತು ಜೀವಗಳನ್ನು ಪೋಷಿಸಬಲ್ಲ ಸ್ವಾವಲಂಬೀ ಘಟಕ(ecological unit)ವಾಗಿತ್ತು.

• • •

ಟೋಬಾನ್ ಒಂದು ಹಾಳಾದ ದೇಶ. ಪ್ರಾಚಾರ್ಯ ಯೋಗಿನ್‌ರ ವಸತಿ ಯಿಂದ ಸುಮಾರು ೩೦೦ ಕಿಲೋಮಿಟರುಗಳಷ್ಟು ದೂರ ಅದರ ರಾಜಧಾನಿ ಶಾಂಪೇನ್. ಯೋಗಿನ್‌ರ ವಿಶ್ವವಿದ್ಯಾಲಯ ಟೋಬಾನ್ ದೇಶದ ಅಂಚಿನಲ್ಲಿತ್ತು. ಈಗ ಟೋಬಾನ್ ಆಗಲಿ ಅಥವಾ ಮತ್ತಾವ ದೇಶವೇ ಆಗಲಿ ತನ್ನತನವನ್ನೇ ಕಳೆದುಕೊಂಡಿದ್ದರಿಂದ ಇಂಥ ಭೌಗೋಳಿಕ ಗಡಿಗಳಲ್ಲಿ ಯಾರೂ ಆಸ್ಥೆ ತಳೆದಿದ್ದಿಲ್ಲ.

ಆದರೂ ಹೆಸರಿಗೆ ಒಬ್ಬ ಯುವಕ ಟೋಬಾನ್‌ದ ರಾಜನೆಂದು ಹೇಳಿ-ಕೊಳ್ಳುತ್ತಿದ್ದ. ಆತನ ಹೆಸರು ರಾಮೊನ್. ಆತನೇನೂ ಸ್ವಭಾವತಃ ದುಷ್ಟನಾಗಲೀ ಕಪಟಿಯಾಗಲೀ ಇರಲಿಲ್ಲ. ಆದರೆ ಇಂದಿನ ಹಿನ್ನೆಲೆಯಲ್ಲಿ ಅದೊಂದು ಹೆಚ್ಚಳವಾಗಿರದೆ ಕೊರತೆಯೆನಿಸಿತ್ತು. ರಾಮೊನ್ ಸರ್ವಾಧಿಕಾರಿ ಯಾಗಿ ಟೋಬಾನ್‌ದ ಆಡಳಿತ ವಹಿಸಿಕೊಂಡ ಕಥೆ ಸ್ವಾರಸ್ಯಮಯವಾಗಿದೆ.

೨೦ನೆಯ ಶತಮಾನದ ಕೊನೆಕೊನೆಗೆ ಜನರು ಧರ್ಮದೇವರುಗಳನ್ನು ಮರೆತಿದ್ದರಷ್ಟೇ? ೨೧ನೆಯ ಶತಮಾನದ ಪ್ರಾರಂಭಕ್ಕೆ ವಿಜ್ಞಾನದ ಭಾರೀ

ಉಪಕರಣಗಳು, ಮಾರಕಾಸ್ತ್ರಗಳು, ಕಂಪ್ಯೂಟರುಗಳು ಮನುಷ್ಯನಿಗೆ ದೇವರಾದವು. ಅವುಗಳನ್ನು ಉತ್ಪಾದಿಸುವ ಕಾರಖಾನೆಗಳು ಮತ್ತು ಬಳಸುವ ಸ್ಥಳಗಳು ದೇವಾಲಯಗಳಂತಾದವು. ಯಾರಿಗೆ ಈ ಯಂತ್ರಗಳನ್ನು 'ಪಳಗಿಸಿ' ಉಪಯೋಗಿಸಲು ಬರುತ್ತಿತ್ತೋ ಅವರೇ ಶಕ್ತಿಶಾಲಿಗಳೆನಿಸುತ್ತಿದ್ದರಲ್ಲದೆ ಅವರು ಹೇಳಿದ್ದೇ ನ್ಯಾಯನೀತಿಯಾಗಿರುತ್ತಿತ್ತು. ಜಗತ್ತು ಕೆಲವು ಯುದ್ಧಗಳನ್ನು ಕಂಡಮೇಲೆ ಅಳಿದುಳಿದ ಜನಕ್ಕೆ ಯುದ್ಧವೆಂದರೇನೆಂದು ತಿಳಿದುಕೊಳ್ಳುವಷ್ಟು ಪ್ರಜ್ಞೆ ಉಳಿಯದ್ದರಿಂದ ಎಲ್ಲರೂ ಉದಾಸೀನತೆಯಿಂದ ಜೀವನ ನೂಕುತ್ತಿದ್ದರು. ಇಂಥ ಪರಿಸ್ಥಿತಿಯಲ್ಲಿ ಅಲ್ಲಿಯ ಆಡಳಿತೆ ಯಾರಾದರೂ ವಹಿಸಿಕೊಂಡರೆ ಸಾಕಾಗಿತ್ತು. ಅರಾಜಕತೆ ಹೋಗಲಾಡಿಸಬೇಕೆಂಬ ವಿವೇಕ ಯಾರಿಗೂ ಉಳಿದಿರಲಿಲ್ಲ. ರಾಮೊನ್ ಒಬ್ಬ ಸಾಹಸೀ ಯುವಕ. ಅವನು ಮಧುರವಾಗಿ ಹಾಡಬಲ್ಲವನಾಗಿದ್ದ; ಸುಂದರವಾದ ಚಿತ್ರಗಳನ್ನು ಬರೆಯಬಲ್ಲವನಾಗಿದ್ದ. ಟೋಬಾನ್ ದೇಶಕ್ಕೆ ತಾನು ರಾಜನಾದರೆ ಎಷ್ಟು ಸುಖ ಎಂದು ನಾಲ್ಕಾರು ಜನರ ಮುಂದೆ ಆಡಿ ತೋರಿಸಿದ್ದ. ಅವರಲ್ಲೊಬ್ಬರು ತಮಾಷೆಗೆ, ' ನೀನೇ ರಾಜನೆಂದು ತಿಳಿದುಕೋ; ಈ ದಿಕ್ಕಿಲ್ಲದ ದೇಶದಲ್ಲಿ ಯಾರು ವಿರೋಧಿಸುವರು ? ' ಎಂದರು. ಸರಿ, ರಾಮೊನ್ ತಾನೇ ರಾಜನೆಂದು ಹೇಳಿಕೊಳ್ಳುತ್ತ ತಂಡವೊಂದನ್ನು ಕಟ್ಟಿಕೊಂಡು ಆಡಳಿತ ಪ್ರಾರಂಭಿಸಿದ. ಅವನ ಪುಣ್ಯಕ್ಕೆ ಶಾಂಪೇನ್‌ದ ಬೃಹದ್ ಯಂತ್ರಾಗಾರವೊಂದು ಅವನ ಸ್ವಾಧೀನಕ್ಕೆ ಬಂದಿತು. ಇದರಿಂದ ಆತ ಶಕ್ತಿಶಾಲಿಯೂ ಎನಿಸಿದ. ದಿಕ್ಕಿಲ್ಲದ ದೇಶಕ್ಕೆ ಒಬ್ಬ ದೊರೆ ಸಿಕ್ಕಂತಾಯಿತು. ಕೆಲದಿನಗಳಲ್ಲಿ ರಾಮೊನ್ ತಾನೇ ಅಧಿಕೃತ ರಾಜನೆಂದು ಸಾರಿಕೊಂಡ. ಯಾರೂ ವಿರೋಧ ತೋರದ್ದರಿಂದ ಆತನ ಪಟ್ಟ ಭದ್ರವಾಯಿತು.

ಶಾಂಪೇನ್ ನಗರ ಹಾಳುಸುರಿಯುತ್ತಿತ್ತು. ಹೆಚ್ಚು ಜನರು ಮಾನಸಿಕ ಮತ್ತು ದೈಹಿಕ ರೋಗಗಳಿಂದ ಬಳಲುತ್ತಿದ್ದರು. ಯಾವುದೇ ರಚನಾತ್ಮಕ ಚಟುವಟಿಕೆ ಅಲ್ಲಿ ನಡೆದಿದ್ದಿಲ್ಲ. ಬೀದಿ-ಪೇಟೆಗಳೆಲ್ಲ ನಾಶವಾಗಿದ್ದವು. ವಾಹನಗಳ ಓಡಾಟವೂ ಇರಲಿಲ್ಲ. ಏಕೆಂದರೆ ಅವುಗಳನ್ನು ನಡೆಸಲು ಇಂಧನ ಬೇಕಷ್ಟೇ ? ಆ ಇಂಧನ ದೊರಕಿಸಿ ವ್ಯವಸ್ಥಿತವಾಗಿ ಯಾಂತ್ರಿಕ ಸಂಪರ್ಕ ಸಾಗಾಟಗಳನ್ನು ಚಾಲನೆಯಲ್ಲಿಡುವ ಬುದ್ಧಿವಂತರು ಯಾರೂ ಉಳಿದಿರಲಿಲ್ಲ. ಹಿಂದಿನ ತಲೆಮಾರಿನವರು ವೈಜ್ಞಾನಿಕ ನಾಗರಿಕತೆಯ ತುತ್ತತುದಿಗೇರಿ ಐಷಾರಾಮದಲ್ಲಿ ಜೀವನ ಸಾಗಿಸುತ್ತಿದ್ದುದರಿಂದ ಮುಂದಿನ ಪೀಳಿಗೆಗಳ ಯೋಚನೆ ಮಾಡದೆ ಪರಸ್ಪರ ಘರ್ಷಣೆಗಳಲ್ಲಿ ಹಾಳಾಗಿದ್ದರು. ಕುಟುಂಬಜೀವನವೆನ್ನುವದಂತೂ ಹೋದ ಶತಮಾನದಲ್ಲಿಯೇ ಅರ್ಥ ಕಳೆದುಕೊಂಡಿದ್ದರಿಂದ ಈಗಿನವರು ಪಶುಗಳಂತೆ ತಿಂದುಂಡು, ಪ್ರೀತಿ-ಜಗಳ ಮಾಡುತ್ತ ಕಾಲಹರಣ ಮಾಡುತ್ತಿದ್ದರು.

ರಾಜ ರಾಮೊನ್ ಕೂಡ ವಿಲಾಸಪ್ರಿಯ ಮತ್ತು ರಸಿಕ. ಆದರೆ ಇಂಥ ಹಳಸುತ್ತಿರುವ ಪ್ರಜೆಗಳ ನಡುವೆ ಆತ ಸುಖ ದೊರಕಿಸುವುದು ಹೇಗೆ ಸಾಧ್ಯ ? ಆತನ ಮನಸ್ಸು ಯಾವುದೋ ಸುಖಶಾಂತಿಗಾಗಿ ಪರಿತಪಿಸುತ್ತಿತ್ತು; ಏನೋ ಅವ್ಯಕ್ತ ಆಶೆ-ಭಾವನೆಗಳು ಆತನನ್ನು ಹಗಲಿರುಳು ಕಾಡುತ್ತಿದ್ದವು. ತನ್ನ ಹಿಂದಿನ ತಲೆಮಾರಿನವರಿಗೆ ಅಂಥ ಅದ್ಭುತ ಯಂತ್ರಗಳನ್ನು ರಚಿಸಲು ಹೇಗೆ ಸಾಧ್ಯವಾಯಿತು? ಜಗತ್ತಿನಲ್ಲಿ ನೂರಾರು ಕೋಟಿಗಟ್ಟಲೆ ಜನಸಂಖ್ಯೆ ಹೇಗೆ ಅಭಿವೃದ್ಧಿಯಾಗಿತ್ತು ? ತಮಗೆ ಬೇಕಾದಂಥ ಸ್ವತಂತ್ರ ಜೀವನ ನಡೆಸಲು ಅವರಿಗೆಲ್ಲ ಹೇಗೆ ಸಾಧ್ಯವಾಗಿತ್ತು ? ಇಷ್ಟೆಲ್ಲ ಬುದ್ಧಿಯಿದ್ದ ಜನಕ್ಕೆ ಯುದ್ಧ ಮಾಡಬಾರದೆಂಬ ತಿಳುವಳಿಕೆ ಹೇಗೆ ಬರಲಿಲ್ಲ? ಇಂಥ ಹಲವಾರು ವಿಚಿತ್ರ ಸಮಸ್ಯೆಗಳು ಆತನನ್ನು ಕೆಣಕುತ್ತಿದ್ದವು.

• • •

ಒಂದು ದಿನ ರಾಜ ರಾಮೊನ್ ಇದ್ದಕ್ಕಿದ್ದಂತೆ ರಾಜಧಾನಿ ಬಿಟ್ಟು ಹೊರಟ. ಈ ಬಗ್ಗೆ ಯಾರೂ ವಿಚಾರಿಸಲಿಲ್ಲ ಕೂಡ. ಹಳೆಯ ವಿಮಾನವೊಂದು ಶಾಂಪೇನ್ ನಗರದಲ್ಲಿತ್ತು. ಅದನ್ನು ಹಾರಾಡಿಸುವದು ಹೇಗೆಂದು ಕೂಡ ಜನ ಮರೆತಿದ್ದರು. ಅದು ಪರಮಾಣುಶಕ್ತಿಚಾಲಿತ ಯಂತ್ರವಾಗಿದ್ದರಿಂದ ಇಷ್ಟು ವರ್ಷಗಳ ಮೇಲೂ ಬೇರೆ ಇಂಧನವಿಲ್ಲದೆ ಕೆಲಸ ಮಾಡಬಲ್ಲದಾಗಿತ್ತು. ರಾಮೊನ್ ಒಬ್ಬ ಮುದುಕನಿಂದ ಆ ವಿಮಾನ ನಡೆಸುವುದನ್ನು ಕಲಿತುಕೊಂಡಿದ್ದ. ಆ ವಿಮಾನ ಹಾರಿಸಿಕೊಂಡು ಶಾಂಪೇನ್ ಬಿಟ್ಟ. ಮೋಜಿಗಾಗಿ ಹೆಣ್ಣುಗಳನ್ನಾಗಲೀ, ಮಾತಿಗಾಗಿ ಗೆಳೆಯರನ್ನಾಗಲೀ ಜೊತೆಗೆ ಕರೆದೊಯ್ಯಲಿಲ್ಲ.

ಆತ ಗೊತ್ತುಗುರಿಯಿಲ್ಲದೆ ವಿಮಾನವನ್ನು ಅರ್ಧ ಘಂಟೆ ಹಾರಿಸಿರಬಹುದು. ಒಂದು ಉತ್ತಮ ಪರಿಸ್ಥಿತಿಯಲ್ಲಿದ್ದ ವಿಮಾನಗಳ ಇಳಿದಾಣ ಕಣ್ಣಿಗೆ ಬಿದ್ದು ಆಶ್ಚರ್ಯಪಟ್ಟ. ಕುತೂಹಲದಿಂದಲೇ ಅಲ್ಲಿ ವಿಮಾನ ಇಳಿಸಿದ.

ರಾಮೊನ್‌ಗೆ ಅಲ್ಲಿ ಅದ್ಭುತ ಸ್ವಾಗತ ಸಿಕ್ಕಿತು. ಈ ಅನಿರೀಕ್ಷಿತ ಸ್ವಾಗತದಿಂದ ಆತ ಪುಳಕಿತನಾದ. ಇನ್ನು ವಿಜ್ಞಾನ ಮತ್ತು ನಾಗರಿಕತೆಗಳನ್ನುಳಿಸಿಕೊಂಡ ಪ್ರದೇಶವೊಂದು ಇಷ್ಟು ಹತ್ತಿರವಿದ್ದದ್ದು ಆತನಿಗೆ ಆನಂದವುಂಟುಮಾಡಿತು. ಈ ಪ್ರದೇಶ ಮತ್ತಾವುದೂ ಇರದೆ ಪ್ರಾಚಾರ್ಯ ಯೋಗಿನ್‌ರ ಆಶ್ರಮವಾಗಿತ್ತು.

ಸ್ವತಃ ಪ್ರಾಚಾರ್ಯರೇ ರಾಮೊನ್‌ನನ್ನು ಎದುರುಗೊಂಡು, 'ವಿಜ್ಞಾನ ನಾಶವಾಗಿ ಹೋಗಿದ್ದ ಈ ಅಂಧಕಾರದಲ್ಲಿ ಬೆಳಕಿನಂತೆ ವಿಮಾನ ನಡೆಸಿಕೊಂಡು ಬಂದ ಮಾನವನಿಗೆ ಸ್ವಾಗತ' ಎಂದರು. ತಾನು ಟೋಬಾನ್‌ದ ರಾಜನೆಂದು ಹೇಳಿದಾಗಂತೂ ಪ್ರಾಚಾರ್ಯರಿಗೆ ಹಿಡಿಸಲಾರದಷ್ಟು ಆನಂದವಾಯಿತು. 'ನಮ್ಮ ಆಶ್ರಮ ಟೋಬಾನ್ ದೇಶದ ಪ್ರಥಮದರ್ಜೆಯ ವಿಶ್ವವಿದ್ಯಾಲಯ

ವಾಗಿತ್ತು. ನಾವೆಲ್ಲ ತಮ್ಮ ಪ್ರಜೆಗಳೇ' ಎಂದು ನಮ್ರವಾಗಿ ನಿವೇದಿಸಿಕೊಂಡರು.

ಬರಿ ಕ್ರೌರ್ಯ-ಬೀಭತ್ಸಗಳಿಂದ ತುಂಬಿದ ಮಾತು ನಡತೆಗಳನ್ನು ನೋಡಿ ರೂಢಿಯಾಗಿದ್ದ ರಾಜನಿಗೆ ಇಲ್ಲಿಯ ವಿನಯ-ಸುಶೀಲತೆ ನೋಡಿ ಸ್ವರ್ಗಸುಖ ಸಿಕ್ಕಂತಾಯಿತು. ಪ್ರಾಚಾರ್ಯ ಯೋಗಿನ್‌ರು ಎಲ್ಲ ಯಂತ್ರಗಳಿಗಿಂತ ಹೆಚ್ಚು ಶಕ್ತಿಶಾಲಿಯಾದ ದೇವರಂತೆ ಕಂಡುಬಂದರು.

* * *

ಇಲ್ಲಿಗೆ ರಾಮೊನ್‌ನ ಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು. ಮೊದಲು ಅವನ ಕುರುಚಲುಗಡ್ಡ, ಕೊಳೆಯಾದ ಶರೀರ ಸ್ವಚ್ಛವಾಗಿ, ಕಾಡು ಪ್ರಾಣಿಯಂತೆ ಕಾಣುತ್ತಿದ್ದ ರಾಮೊನ್ ನಾಗರಿಕನಾಗಿ, ಕಳಾಪೂರ್ಣನಾಗಿ ಕಂಗೊಳಿಸತೊಡಗಿದ.

ನಾಲ್ಕಾರು ದಿವಸಗಳಲ್ಲಿ ಆಶ್ರಮದ ಜೀವನ ಅವನಿಗೆ ರೂಢಿಯಾಯಿತು. ಶಾರೀರಿಕ ಮತ್ತು ಬೌದ್ಧಿಕ ಶ್ರಮಗಳಲ್ಲಿ ಆಸಕ್ತಿಯುಂಟಾಗಿ ಅದರ ಸುಖ ಗೊತ್ತಾಗತೊಡಗಿತು. ಸ್ವತಃ ಪ್ರಾಚಾರ್ಯರೇ ಅವನಿಗೆ ವಿಜ್ಞಾನ, ಸಂಸ್ಕೃತಿ ಮತ್ತು ನಾಗರಿಕತೆಗಳ ಮೂಲಪಾಠಗಳನ್ನು ಹೇಳಿಕೊಡತೊಡಗಿದರು. ಹೀಗೆ ರಾಮೊನ್ ಅಲ್ಲಿ ಸುಮಾರು ಆರು ತಿಂಗಳು ನಿರಾತಂಕವಾಗಿ ಕಾಲಕಳೆದ.

ಅಷ್ಟರೊಳಗೆ ಆತನಲ್ಲಿ ಎಷ್ಟು ಬದಲಾವಣೆಯಾಗಿತ್ತೆಂದರೆ ಟೋಬಾನ್ ದೇಶದ ರಾಜನೆಂದು ಘೋಷಿಸಿಕೊಂಡು ಆ 'ಕಾಡು' ಜನರ ಮಧ್ಯದಲ್ಲಿ ತಾನು ಈ ಮೊದಲು ಇದ್ದದ್ದು ನೆನಪಾದರೆ ನಾಚಿಕೆಯಾಗತೊಡಗಿತು. ತಾನು ಹೋದ ಶತಮಾನ ಅಥವಾ ಅದಕ್ಕೂ ಮೊದಲು ಹುಟ್ಟಿ ಬದುಕಿದ್ದರೆ ಎಷ್ಟು ಚೆನ್ನಾಗಿತ್ತಲ್ಲ ಎಂದು ಅವನಿಗೆ ಹಳಹಳಿಯೆನಿಸುತ್ತಿತ್ತು. ಆದರೆ ಈಗ ಮುದುಕರಾಗಿದ್ದರೂ ಜ್ಞಾನ-ತೇಜಸ್ಸುಗಳಿಂದ ಕಂಗೊಳಿಸುತ್ತಿದ್ದ ಪ್ರಾಚಾರ್ಯ ಯೋಗಿನ್‌ರು ಹಿಂದಿನ ನಾಗರಿಕ ಶತಮಾನಗಳ ಜೀವಂತ ಪ್ರತಿನಿಧಿಯಾಗಿದ್ದಂತೆ ಆತನಿಗೆನಿಸಿ ಎಷ್ಟೋ ಸಮಾಧಾನವೆನಿಸುತ್ತಿತ್ತು.

ಪ್ರಾಚಾರ್ಯರೂ ಆಶ್ರಮವಾಸಿಗಳೂ ರಾಮೊನ್‌ನನ್ನು ರಾಜನಂತೆಯೇ ಕಾಣುತ್ತಿದ್ದರು. ಇದೊಂದು ಅವನಿಗೆ ಇನ್ನಷ್ಟು ಸಂಕೋಚಕ್ಕೀಡುಮಾಡಿತ್ತು. ತಾನು ಯಾವುದೇ ಬಲಪ್ರದರ್ಶನ ಮಾಡದಿದ್ದಾಗ ಕೂಡ ತತ್ತ್ವಕ್ಕಾಗಿ ಈ ಸಜ್ಜನರು ತನಗೆ ಗೌರವ-ಮರ್ಯಾದೆ ಕೊಡುತ್ತಿದ್ದುದು ಒಂದು ಪವಾಡವೆನಿಸಿ ಬಿಟ್ಟಿತ್ತು. ತಾನು ಇಂಥ ಪ್ರಜೆಗಳನ್ನು ಆಳುವ ನಿಜವಾದ ಯೋಗ್ಯತೆ ಗಳಿಸಿಕೊಳ್ಳಬೇಕೆಂದು ಆತ ನಿರ್ಧಾರದ ಪ್ರತಿಜ್ಞೆ ಮಾಡಿದನು.

* * *

ಒಂದು ಆಹ್ಲಾದಕರ ಮುಂಜಾವು. ರಾಜ ರಾಮೊನ್ ಆಶ್ರಮದ ಹೂದೋಟದಲ್ಲಿ ಕೆಲಸ ಮಾಡುತ್ತಿದ್ದನು. ಪ್ರಾಚಾರ್ಯರ ಮೊಮ್ಮಗಳು ದೇವಿ

ಹೂ ಕೊಯ್ಯಲು ಬಂದಳು. ಚೆಲುವೆಯಾದ ದೇವಿಯನ್ನು ರಾಮೊನ್ ಒಂದರೆಕ್ಷಣ ಎವೆಯಿಕ್ಕದೆ ನೋಡಿ ಅವ್ಯಕ್ತ ಯಾತನೆಪಟ್ಟ. ಆತನಿಗೆ ದೇವಿ ಅದ್ಭುತ ಶಕ್ತಿಯಾಗಿ ಕಂಡಳೇ ಹೊರತು ಒಂದು ಹೆಣ್ಣಾಗಿ ಅಲ್ಲ. ಅದರಲ್ಲೂ ಅನಾಗರಿಕ ಪಶುವಾಗಿದ್ದ ತಾನು ದೇವಿಯನ್ನು ಬಯಸುವ ವಿಚಾರ ಕನಸು ಮನಸುಗಳಲ್ಲಿ ಕೂಡ ಮಾಡಲಾರ. ವೃದ್ಧ ಪ್ರಾಚಾರ್ಯರ ತರುಣ ಪ್ರತಿನಿಧಿಯಾಗಿ, ನಾಗರಿಕತೆ ಮಾನವತೆ ಸಂಸ್ಕೃತಿಗಳ ದೀಪ್ತಿಯಾಗಿ ಆಕೆ ಆತನಿಗೆ ಕಂಡಳು.

ಆತ ಪ್ರಾಚಾರ್ಯರೆಡೆಗೆ ಹೋಗಿ ಮನವಿ ಮಾಡಿಕೊಂಡ: 'ಗುರುಗಳೇ, ತಾವು ನನ್ನ ಕಣ್ಣು ತೆರೆದು ಸುಖಶಾಂತಿಯ ಮಾರ್ಗ ತೋರಿದಿರಿ, ನಿಜ ಆದರೆ ನನಗೆ ಅತೃಪ್ತ ಆಕಾಂಕ್ಷೆಗಳೇನಾದರೂ ಉಳಿದಿದ್ದರೆ ಅವುಗಳನ್ನು ನಾನು ನಿಯಂತ್ರಿಸಿಕೊಳ್ಳಬೇಕೇ ?'

ಪ್ರಾಚಾರ್ಯರು ಶಿಷ್ಯನನ್ನು ದಿಟ್ಟಿಸಿ ನೋಡಿ ಅಪ್ಪಣೆ ಕೊಟ್ಟರು: 'ಇಲ್ಲ ಮಗು, ನೀನು ತರುಣ, ಮೇಲಾಗಿ ಹೊಣೆಗಾರ ರಾಜ. ನಾಗರಿಕವಾದ ಯಾವುದೇ ಬಯಕೆಯನ್ನು ನಿಯಂತ್ರಿಸಿಕೊಳ್ಳುವದನ್ನು ಜಗತ್ತು ನಿನ್ನಿಂದ ಅಪೇಕ್ಷಿಸದು. ಅದೇನು ಹೇಳು.'

ರಾಮೊನ್ ಹಿಂಜರಿಯುತ್ತಲೇ ಹೇಳಿದ: 'ನೋಡಿ, ನಿಮ್ಮ ಸನ್ನಿಧಿಯಲ್ಲಿ ದಿನವೆಲ್ಲ ಕಳೆದರೂ ಹೇಗೆ ಬೇಸರವಾಗುವದಿಲ್ಲವೋ ಹಾಗೆ ನಿಮ್ಮ ಮೊಮ್ಮಗಳಾದ ದೇವಿಯ ಸನ್ನಿಧಿಯಲ್ಲೂ ಆಗಬಹುದೆಂಬ ಅನಿಸಿಕೆ ನನಗಿದೆ. ಇದು ನನ್ನ ದೌರ್ಬಲ್ಯವಿರಬಹುದು. ಆದರೆ ಕಾಡುಮನುಷ್ಯನಾಗಿದ್ದ ನಾನು ದೇವಿಯನ್ನು ಆರಾಧಿಸುವದು ಸರಿಯೇ ?'

ಪ್ರಾಚಾರ್ಯರ ಮುಖ ಅರಳಿತು. ರಾಮೊನ್‌ನ ಬೆನ್ನ ಮೇಲೆ ಮೃದುವಾಗಿ ಕೈಯಾಡಿಸಿ ಅವರೆಂದರು: 'ರಾಜ ರಾಮೊನ್, ನೀನು ಪ್ರೇಮದಲ್ಲಿ ಸಿಲುಕಿದ್ದೀಯೆ. ಶಾಂಪೇನ್‌ದ ಹೆಣ್ಣುಗಳನ್ನು ಬಯಸಿದಂತೆ ನೀನು ದೇವಿಯನ್ನು ಬಯಸದಿದ್ದುದು ಶುದ್ಧ ಪ್ರೇಮದ ಲಕ್ಷಣ. ಅದೊಂದೇ ಲಕ್ಷಣ ನಿನ್ನನ್ನು ದೇವರ ಮಟ್ಟಕ್ಕೊಯ್ಯಬಹುದು. ಬರಿ ಟೋಬಾನ್ ದೇಶವನ್ನಷ್ಟೇ ಅಲ್ಲದೆ, ಇಡೀ ಪ್ರಪಂಚವನ್ನು ವಿನಾಶದ ದವಡೆಯಿಂದ ಪಾರುಮಾಡುವ ಶಕ್ತಿ ಮತ್ತು ಯೋಗ್ಯತೆ ನಿನಗಿದೆ. ನನ್ನ ಪ್ರೀತಿಯ ಮೊಮ್ಮಗುವನ್ನು ಹೃತ್ಪೂರ್ವಕವಾಗಿ ನಿನಗೊಪ್ಪಿಸುತ್ತೇನೆ. ಆದರೆ ಒಂದು ನಿರ್ಬಂಧನೆ.'

'ಏನದು ಪ್ರಾಚಾರ್ಯ ?' ರಾಮೊನ್ ಉದ್ವೇಗದಿಂದ ಕೇಳಿದ.

'ನೀನು ಈ ಆಶ್ರಮಜೀವನ ತ್ಯಜಿಸಿ ಟೋಬಾನ್ ದೇಶದ ರಾಜ್ಯಭಾರ ವಹಿಸಿಕೊಂಡು ನಾಗರಿಕತೆ–ಮಾನವತೆಗಳನ್ನು ಪುನರುಜ್ಜೀವಗೊಳಿಸಬೇಕು.'

‘ ಅದೇ ನನ್ನ ಕನಸಾಗಿದೆ ಕೂಡ. ಆದರೆ ಇದಕ್ಕೆ ನನ್ನದೂ ಒಂದು ನಿರ್ಬಂಧನೆಯುಂಟು, ಗುರುಗಳೇ.’

‘ ಏನದು, ಮಗೂ ?’

‘ ತಾವು ನನ್ನ ಗುರುವಾಗಿ, ಮಾರ್ಗದರ್ಶಿಯಾಗಿ ನನ್ನೊಡನೆ ಇರಬೇಕು. ನಿಮಗಾಗಿ ಶಾಂಪೇನ್‌ದಲ್ಲಿ ಒಂದು ವಿಶ್ವವಿದ್ಯಾಲಯ ಸ್ಥಾಪಿಸುವೆ. ಇಲ್ಲಿಯವರೆಲ್ಲರೂ ಅಲ್ಲಿ ಬಂದು ಎಲ್ಲರಿಗೂ ಮಾರ್ಗದರ್ಶನ ಮಾಡಲಿ.’

* * *

ರಾಮೊನ್ ಆಶ್ರಮವಾಸಿಗಳೊಂದಿಗೆ ಶಾಂಪೇನ್ ನಗರಕ್ಕೆ ಬಂದ. ಆತ ಮರಳಿದಾಗ ಕೂಡ ಮೊದಮೊದಲು ಯಾರಿಗೂ ಏನೂ ಆಸ್ಥೆ ಹುಟ್ಟಲಿಲ್ಲ. ಆದರೆ ಕೆಲ ದಿನಗಳಲ್ಲೇ ರಾಮೊನ್‌ನ ಬದಲಾದ ವ್ಯಕ್ತಿತ್ವದ ಪ್ರಭಾವ ಪ್ರಜೆಗಳ ಅನುಭವಕ್ಕೆ ಬರತೊಡಗಿತು. ಏಕೆಂದರೆ ಸಾಮೂಹಿಕ ಮತ್ತು ಅನಿರ್ಬಂಧಿತ ಜೀವನ ತೊರೆಯಲು ಪ್ರಜೆಗಳು ಏನು ಮಾಡಬೇಕೆಂದು ರಾಜ ಶಾಸನ ಮಾಡಿದ. ಅದಕ್ಕೆ ಯಾರೂ ವಿರೋಧವೊಡ್ಡುವ ಶಕ್ತಿಯುಳ್ಳವರಾಗಿರಲಿಲ್ಲ. ಎರಡನೆಯದಾಗಿ, ವಿವಾಹ ಮೊದಲಾದ ಕೆಲವೊಂದು ಮೂಲ ಧಾರ್ಮಿಕವಿಧಿಗಳನ್ನು ಕಡ್ಡಾಯವಾಗಿ ಹೇರಿದ. ಮೂರನೆಯದಾಗಿ, ಎಲ್ಲರೂ ಶಿಕ್ಷಣ ಪಡೆಯಬೇಕೆಂದು ನಿರ್ಬಂಧಿಸಿದ.

ಈ ಹೊಸ ಕಾಯದೆಕಟ್ಟಳೆಗಳಿಗೆ ವಿರುದ್ಧವಾಗಿ ಪ್ರಜರೇನೂ ರೊಚ್ಚಿಗೆದ್ದು ಕ್ರಾಂತಿ ಮಾಡಲಿಲ್ಲ. ಏಕೆಂದರೆ ಗೊತ್ತುಗುರಿಯಿಲ್ಲದೆ ಅಸಹಾಯರಾಗಿ ಬಾಳುವೆ ಮಾಡುತ್ತಿದ್ದ ಅವರಿಗೆ ಈ ವಿಷಯಗಳಲ್ಲಿ ಸಾವಕಾಶವಾಗಿ ಆಸ್ಥೆ ಹುಟ್ಟತೊಡಗಿತು. ವ್ಯಕ್ತಿತ್ವ ಕಳೆದುಕೊಂಡು ಪಶುಗಳಂತೆ ಬೆಳೆದುಬಂದದ್ದು ಅವರ ತಪ್ಪಾಗಿರದೆ ಅವರ ಹಿರಿಯರ ತಪ್ಪಾಗಿತ್ತೆಂದು ನೆನಪಿಡಬೇಕು. ರಾಮೊನ್ ತನ್ನ ಪ್ರಜರನ್ನು ಪ್ರೀತಿವಿಶ್ವಾಸಗಳಿಂದ ಕಂಡು ಸುಧಾರಣೆ ಪ್ರಾರಂಭಿಸಿದ್ದರಿಂದ ಟೋಬಾನ್ ದೇಶದಲ್ಲಿ ಮತ್ತೆ ನಾಗರಿಕತೆ ತಲೆಯೆತ್ತುವಂತಾಯಿತು.

ಈ ಕ್ರಾಂತಿ ಸಾವಕಾಶವಾಗಿ ಜಗತ್ತಿನ ಮೂಲೆಮೂಲೆಗೆ ಹಬ್ಬತೊಡಗಿತು. ಜನರು ಮತ್ತೆ ಉತ್ಸಾಹದಿಂದ ಚಟುವಟಿಕೆ ಪ್ರಾರಂಭಿಸಿದರು. ಎಲ್ಲರೂ ವಿಜ್ಞಾನ ಮತ್ತು ಮಾನವಶಾಸ್ತ್ರಗಳ ಅಭ್ಯಾಸವನ್ನು ಮತ್ತೆ ಪ್ರಾರಂಭಿಸಿದರು. ಜಗತ್ತಿನ ತುಂಬ ಮತ್ತೆ ಸಂಪರ್ಕಸಾಧನಗಳೇರ್ಪಟ್ಟವು. ಜನಜೀವನಕ್ಕೆ ಮತ್ತೆ ಒಂದು ಗೊತ್ತುಗುರಿ, ಅರ್ಥ ಬಂದಿತು.

ಮುಖ್ಯವಾಗಿ ಕುಟುಂಬಜೀವನ ಮತ್ತೆ ರೂಢಿಯಲ್ಲಿ ಬಂದಿತು. ಅದರಿಂದ ಸಮಾಜದ ಬುಡಕಟ್ಟು ಮತ್ತೆ ಭದ್ರವಾಯಿತು. ಜಗತ್ತು ಬದುಕಿಕೊಂಡಿತು.

ಈ ಅದ್ಭುತಕ್ರಾಂತಿಗೆ ಕಾರಣಪುರುಷರಾಗಿದ್ದ ಪ್ರಾಚಾರ್ಯ ಯೋಗಿನ್ ತಮ್ಮ ಕನಸು ನನಸಾಗಿದ್ದನ್ನು ಸ್ವತಃ ಕಂಡು ಅನುಭವಿಸಿ ಕೃತಾರ್ಥರಾಗಿ ಒಂದು ದಿನ ನಗುನಗುತ್ತ ಪ್ರಾಣ ಬಿಟ್ಟರು. ರಾಣಿಯಾಗಿದ್ದ ದೇವಿ ಇದರಿಂದ ತಬ್ಬಲಿಯಂತಾದ ರಾಜ ರಾವೊನ್‌ನ ನೆರಳಾಗಿ ನಿಂತು, ಅವತಾರಪುರುಷರಾಗಿದ್ದ ತನ್ನ ಅಜ್ಜನವರು ಹೊತ್ತಿಸಿದ ದೀವಿಗೆಯ ರಕ್ಷಕಳಾದಳು.

ಪ್ರಾಚಾರ್ಯ ಯೋಗಿನ್‌ರ ಆಶ್ರಮ ಈಗ 'ಮಹಾತ್ಮಾ ಯೋಗಿನ್ ವಿಶ್ವವಿದ್ಯಾಲಯ'ವಾಗಿ ವಿಜ್ಞಾನಸಂಸ್ಕೃತಿಗಳ ಅಭಿವೃದ್ಧಿಗೆ ಕಾರಣವಾಗಿದೆ.

★ ರಾಜಶೇಖರ ಭೂಸನೂರಮಠ

ಕೃಷ್ಣಗ ಗೊಲತ್ಯಾರು ಸ್ವಾಧೀನs*

ಕೋಲು ರನ್ನದ ಕೋಲ | ಕೋಲು ಚಿನ್ನದ ಕೋಲ |
ಕೋಲೆನ್ನ ಹವಳದ್ದು ಪವಳದ್ದುವ್ಮಾ |

ಕೋಲನಾಡುನು ಬಾರ ಜಾಣರಂಗನ ಕೂಡ
ಜಾಣೆರೆಲ್ಲರು ಕೂಡಿ ವನದೊಳುವ್ಮಾ |

ಹನ್ನೆರಡು ವರುಷದ ಸಣ್ಣವನಿರುತನಕ
ಮುನ್ನೂರು ದನಗೊಳ ಕಾವುರವ್ಮಾ |

ತುರುಮುಂದ್ಯಾಗ ನಿಂತಕೊಂಡು ಬರುವಂತಾ ನಾರೆರ್‍ನ
ಯಾರೆಂದು ಹೆಸರ ಕೇಳ್ಯಾರುವ್ಮಾ |

ಹೊತ್ತೀರಿ ಕೊಡವನ್ನ ಮುತ್ತೀನ ನತ್ತಿಟ್ಟು
ಯಾರ ಮನೆಯುವರೆಂದು ಕೇಳ್ಯಾರುವ್ಮಾ |

ಕಡಗದ ನೀ ಕೈ ಎಡಗೈ ಬೀಸ್ತೀರಿ
ನಡಿನಾಗ ಒಡ್ಯಾನ ಇಟ್ಟೇರಿವ್ಮಾ |

ಸುಮ್ಮನ ದನಕಾಯೋ ಗುಮ್ಮಿಸಿಕೊಂಡಿಯೋ
ನಮ್ಮವರು ಕೇಳಿದರ ಒದ್ದಾರುವ್ಮಾ |

ದೇವಕ್ಕಿ ಮಗ ನೀನು ದೇವರ್‍ನ ನೆನಸ್ತೀದಿ
ಬುದ್ಧಿ ಇಲ್ಲದ ನಮ್ನ ತರುಬೀದಿವ್ಮಾ |

ನೆತ್ತಿಮ್ಯಾಗಿನ ಕೊಡವ ಎತ್ತಿ ತಾ ಒಗೆದಾನ
ಸುತ್ತೆರಗಿ ಅವರನ್ನ ತಿರುವ್ಯಾನವ್ಮಾ |

ಅತ್ತಿಮನಿ ಸೊಸ್ತ್ಯಾರು ಅಳವುತ ಹೊರಟಾರು
ಗೋಳಿಟ್ಟು ತಮ್ಮನಿಗೆ ಹೊಕ್ಕಾರುವ್ಮಾ |

ಸಿಂಗಾರ ಸರ ಹಾಕಿ ಬಂಗಾರ ಬಂದಿಟ್ಟು
ಸಂಗೀತಕ್ಹೋಗ್ಯವರು ಬರುವುರವ್ಮಾ |

---

* ಈ ಗೀತೆಯುನ್ನು ಸಂಗ್ರಹಿಸುವಲ್ಲಿ ಸಹಕರಿಸಿದ ಬಟಕುರ್ಕಿಯ ಶ್ರೀ ಈಶ್ವರಪ್ಪ ನಂ. ಗುಂಡಾಳಿಯುವರಿಗೆ ನನ್ನ ಕೃತಜ್ಞತೆಗಳು.

ಗಂಡರು ಕೇಳ್ಯಾರು ಪುಂಡ ಕೃಷ್ಣ ನಿನ್ನ
ತುಂಡ ಬೀಳುವಂಗ ಕಡಿದೇವುವ್ಮಾ |

ಹುಡುಕುತ ಹೊಂಟಾರು ಹುಡುಗ ಕೃಷ್ಣನ್ನವರು
ಅಡಗಿಕೊಂಡ ತಮ್ಮ ತಾಯೊಳುವ್ಮಾ |

ಯಸೋದೆ ನೀ ಕೇಳ ಎಲ್ಲಿ ಹೋಗ್ಯಾನ ಮಗಾ
ಬಲ್ಲಂಗ ಹೆಂಗ್ಸುರ್ನ ತಿರುವ್ಯಾನುವ್ಮಾ |

ಎಲ್ಲಿ ಹೋಗಿಲ್ಲ ಮಗಾ ಇಲ್ಲೆ ಇದ್ದಾನೆಂದು
ಎಲ್ಲರೂ ನಿಮ್ಮಿಚ್ಚೆ ಬಂದೀರಿವ್ಮಾ |

ಯಸೋದೆ ಸಿಟ್ಟೆದ್ದು ಎಲ್ಲರಿಗಂತಾಳ
ಹೆಂಡರ ಮಾತ್ಕೇಳಿ ಬಂದೀರಿವ್ಮಾ |

ಹುಡಿಗ್ಯಾರ ಮಾತೇನು ಹುಡುಗಾಟನಾಡಿಪ್ಪ
ತಡ ಮಾಡ್ದ ನಿಮ್ಮನಿಗೆ ಹೋಗಿರಿವ್ಮಾ |

ಪರನಾರಿಯುವರನ್ನ ತಿರುವಿದಿ ಏನ ಕೃಷ್ಣ
ಪರನಾರ‍್ಯಾರ ಸಂಗ ನಿನಗ್ಯಾಕವ್ಮಾ |

ಹಡಪವ್ವ ಕೇಳ್ ನೀನು ಹುಡಿಗ್ಯಾರ ಮನಿಯಾಗ
ತುಡಿಗಿಲೆ ಹಾಲ್ಮೊಸರ ಉಳಸಾವವ್ಮಾ |

ಬಡದಾಟ ಹಚ್ಚುವೆ ಬಯಲಿಗೆ ತರಬುವೆ
ಕಡೆಯು ಕಾಲಕೆ ಬಂಡ ಮಾಡುವೆವ್ಮಾ |

ಸಂಕ್ರಾಂತ್ರಿ ದೊಳು ತಾವು ಸರಿಸರಿ ಗೆಳತ್ಯಾರು
ಪರಿಪರಿಯಾಗಿ ತಾವು ಹೊಂಟಾರವ್ಮಾ |

ಎಳ್ಳುಬೆಲ್ಲವ ಹಿಡಿದು ಜಳಕವ ಮಾಡೂತ
ನೀರಾಟದೊಳು ತಾವು ಹೊಂಟಾರವ್ಮಾ |

ಅಬ್ಬರದೊಳು ತಾವು ಉಟ್ಟಿಪ್ಪ ಹೋಗುವಾಗ
ಮಡಿಯು ಸೀರಿ ಬಿಟ್ಟು ಹೋದಾರುವ್ಮಾ |

ಉಟ್ಟ ಬಟ್ಟೆಯು ಕಳೆದು ಇಟ್ಟಾರ ದಂಡಿ ಮ್ಯಾಲ
ನಟ್ಟನಡುವ ಹೋಗಿ ನಿಂತಾರುವ್ಮಾ |

ನೀರಾಟದೊಳು ತಾವು ನೀರ ನೀ ಉಗ್ಯಾಡಿ
ಮಾರಿಮಾರಿ ನೋಡಿ ನಗುವುರಮ್ಮಾ ।

ಯಾರ ಅಂಜೀಕಿಲ್ಲ ನೀರಾಟನಾಡತಾರ
ಮುರಹರ ಮುಕ್ಕುಂದ ಕಂಡಾನುಮ್ಮಾ ।

ದಂಡೆ ಮ್ಯಾಲಿನ ಸೀರಿ ಪೆಂಡಿಯು ಕಟ್ಯಾನ
ಪುಂಡ ಕೃಷ್ಣ ನಗಿಪೋದಾನುಮ್ಮಾ ।

ಹತ್ಯಾನ ಮರವನ್ನ ಬಿಜ್ಯಾನ ಪೆಂಡಿಯು
ವಾಲಿವಾಲಿಗೊಂದು ಹಾಕ್ಯಾನುಮ್ಮಾ ।

ನೀರಾಟ ತೀರಿತು ಆಗೆದ್ದು ನೋಡ್ಯಾರ
ಸೀರೆಲ್ಲಿ ಕಾಣೋಲ್ಲು ದಂಡಿಲಿಮ್ಮಾ ।

ವಾರಿಗಿ ಗೆಳತ್ಯಾರು ಅಳವುತ ನಿಂತಾರು
ಟೊಂಗಿಲಿ ಅವನು ಇದ್ದಾನುಮ್ಮಾ ।

ಪಚ್ಚೆದಂಚಿನ ದಡಿಯು ಪಟ್ಟೊಳ್ಳೆ ಬೆರಕಿದು
ಅತ್ತಿ ಕೊಟ್ಟದು ಸೀರಿ ಅದುವೊಂದಮ್ಮಾ ।

ಬಿಟ್ಟುಹೋದರ ನನ್ನ ಬಿಗದ ಹಾಕುವರು
ಯಾರ ಬಂದರು ನನ್ನ ಬಿಡಲಾರುಮ್ಮಾ ।

ಮೇಲದುಂಡಿನ ಸೀರಿ ಮ್ಯಾಲ ಹಾಕಿದ ಬುಗುಡಿ
ರುದ್ದರಗಂಟಿದ ಬೆರಕಿದುಮ್ಮಾ ।

ಚಾರಕಾನೆಯ ಸೀರಿ ತಸ್ಮೆಯು ದಡೀದು
ಸೆರಗಿನೊಳು ಕಸುತಿ ತಗಿಸಿತ್ತುಮ್ಮಾ ।

ಕಾಡಿಗಿಗಣ್ಣಿನ ಸೀರಿ ಕಡಿಯಾಕ ಒಂದಿತ್ತು
ದಡಿಯೊಳ ಹೂವೊಂದ ತಗಿಸಿತ್ತುಮ್ಮಾ ।

ಉಡಲಾಕ ಸೀರಿಲ್ಲ ತೊಡಲಾಕ ಕುಬಸಿಲ್ಲ
ಮಡಿವಿನೊಣಗ ನಾವು ನಿಂತೀವುಮ್ಮಾ ।

ಯಾರ ಬಂದಾರಿಲ್ಲ ಯಾರ ಓದಾರ ಸೀರಿ
ಯಾವ ತುಡಗಾನವನು ನೋಡ್ಯಾನುಮ್ಮಾ ।

ಅತ್ರಿಮುನಿ ಸೊಸ್ತ್ಯಾರು ಅತ್ತಿತ್ತ ನೋಡ್ಯಾರು
ಹೊತ್ತ ಮೀರಿತ್ಹೆಂಗ ಮಾಡೂನುಮ್ಮಾ |

ಮ್ಯಾಲಕ ಮಾರ್ಯಾಗಿ ವಾಲಿಯು ನೋಡ್ಯಾರ
ಜೋತಾಡು ಸೀರಿಗೋಳು ಕಂಡಾವ್ರುಮ್ಮಾ |

ಎಲ್ಲಾ ಸೀರಿಗೋಳು ಇಲ್ಲಿ ಕಾಣಸ್ತಾವು
ಅಲ್ಲಿತನಕೆಂಗ ಹೋಗುದುಮ್ಮಾ |

ಬಂಡ ನಾರ್ಯಾರ್ನ ನೋಡಿ ಕಂಡು ನಕ್ಕಾನು ಕೃಷ್ಣ
ಬಯುಲಿಗಿ ಬರ್ರೆಂದು ಅಂದಾನುಮ್ಮಾ |

ಗೋಪಾಲಕೃಷ್ಣ ನಾನು ಗೊತ್ತ ಇಲ್ಲೆನ ನಿಮಗ
ಸುತ್ತರದು ಬರ್ರೆಂದ ಗಿಡವನ್ನುಮ್ಮಾ |

ಹಂಗ ಬಾ ಅಂತಿದಿ ಹೆಂಗ ಬರುವ್ರನು ಕೃಷ್ಣ
ಬತ್ತಲೆ ನೀರೊಳಗ ನಿಂತಿವುಮ್ಮಾ |

ಚಲ್ನಮ್ಮ ಸೀರಿಯು ಅಲ್ಲಿಗಿ ಬರ್ತೀವಿ
ಎಲ್ಲರು ನಿಮ್ ಪಾದಕ ಶರಣರುಮ್ಮಾ |

ಬತ್ತಲಿ ನೀವ್ ಬಂದು ಸುತ್ತರಗಬೇಕ್ ಗಿಡ
ಗೊತ್ತಿರಲಿ ನಿಮ ಸೀರಿ ಕೊಡುವೆನುಮ್ಮಾ |

ಹಿಂದ ಮುಂದ ಕೈ ಹಚಗೊಂಡ ಹೋದಾರ
ಮುಕ್ಕುಂದ ಗಿಡಮ್ಯಾಲೆ ಕುಂತಿದ್ದಮ್ಮಾ |

ಗಿಡವ ಸುತ್ತಾರ್ದ್ದಿವಿ ಹುಡುಗ ಕೊಡೊ ಸೀರಿಯು
ಪದವಿಸಿ ಕಯ್ ಮುಗಿದೀವಿಮ್ಮಾ |

ಅಡಿಅಡಿಗೆ ಬೇಡುವೆವು ಕೊಡು ನಮ್ಮ ಸೀರಿಯು
ಒಡೆಯರು ಬೈದಾರು ಹೊತ್ತಾತುಮ್ಮಾ |

ಹಿಡಿ ನಿಮ್ಮ ಸೀರಿಯು ಕೊಡು ನನಗ ವಚನವ
ಕಡೆತನಕ ಮಡದ್ಯಾರಾಗಿರಬೇಕುಮ್ಮಾ |

ಮೋಸ ಮಾಡಿದ್ಯೊ ಕೃಷ್ಣ ಲೇಸ ಆದಿತೊ ನಿನಗ
ಪಾಶದೊಳಗ ನಾವು ಸಿಕ್ಕಿವೊಮ್ಮಾ |

ಕೊಟ್ಟೆವು ವಚನವ ಕೊಡು ನಮ್ಮ ಸೀರಿಯ
ಒಡೆಯರಾಗಿ ನೀವು ಇರಬೇಕುವ್ವಾ |

ನಂಬಗಿವ್ಯಾಲೆ ಶಂಬು ಕೊಟ್ಟನ ಸೀರಿ
ಸಂಭ್ರಮದಿಂದ ಉಟಕೊಂಡಾರುವ್ವಾ |

ದೇಶದೊಳಗ ನಮ್ಮ ವಾಸುಳ್ಳ ಬಟಕುರ್ಕಿ
ಭಕ್ತರು ಮಾಡಿದ ಕವಿತಾವುವ್ವಾ |

ಎಲ್ಲಣ್ಣ ಹಾಡಿದು ಎಲ್ಲರೂ ಕೇಳಿರಿ
ಕೃಷ್ಣಗ ಗೊಲತ್ಯಾರು ಸ್ವಾಧೀನವ್ವಾ |

ಕೋಲು ರನ್ನದ ಕೋಲ | ಕೋಲು ಚಿನ್ನದ ಕೋಲ |
ಕೋಲೆನ್ನ ಮುತ್ತಿನ ರತನದ್ದು ಕೋಲ |

(ಹಾಡಿದವರು : ರುದ್ರವ್ವವ್ವಾ ಗುಂಡಾಳಿ)

★ ಸಂ. : ಎಸ್. ಎಸ್. ಕೋಟಿನ

ವೀರಶೈವ ಅಪ್ರಕಟಿತ ಕೃತಿಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
666	ಮಂತ್ರಮಾಹಾತ್ಮ್ಯದ ಕಂದ	ಎ. ಗುರುಶಾಂತದೇವ	1550	ಕಂ.	III. 427
667	ಯಜುರ್ವೇದಭಾಷ್ಯ ಟೀಕೆ	ಗುರುನಂಜ	1500	ಟೀ.	II. 167–68
668	ಯೋಗಕಲಾಪಸಾರ	ಗುರುಸಿದ್ಧ	1720	ಭಾ. ಷ.	ಪ್ರಲೀ., ಪೀಠಿಕೆ viii
669	ರಥೋದ್ಧರಣಕಾವ್ಯ	ಸಂಗನಬಸವೇಶ್ವರ	1600	ವ.+ವೃ.+ಷ.	II. 325–26
670	ರಸಿಕಮನೋರಂಜನ ವಿಲಾಸ	ಕುಂಡಲಗಿರಿ	1590	ಚಂ.	KA. 301
671	ರಾಘವಾಂಕನ ಕಾವ್ಯ (ಸಿದ್ಧನಂಜೇಶ)ದ ಸ್ತೋತ್ರಪದ್ಯಗಳ ಟೀಕೆ	?	?	ಟೀ.	III. 428
672	ರಾಜಯೋಗತಾರಾವಳಿ	ಸೋ. ರೇವಣಾಚಾರ್ಯ	1623	ಹಾ ?	ಕ.ಕ.ಚ.ಅ., ಸಂ. 1859
673	ರಾಜಯೋಗದ ವಚನ	ಚೆನ್ನಬಸವ	1160	ವ.	I. 176
674	ರಾಜಶೇಖರವ್ಯಾಖ್ಯಾನ (ಷಡಕ್ಷರದೇವ)	ಅಲಂದೆ ಬಸವಯ್ಯ	1844	ಟೀ.	ಶ. ಸಾ., 4-5-6
675	ರಾಜಶೇಖರವಿಳಾಸದ ವ್ಯಾಖ್ಯಾನ (ಷಡಕ್ಷರದೇವ)	?	?	ಟೀ.	K. 350
676	ರಾಜಶೇಖರವಿಳಾಸ (ಷಡಕ್ಷರದೇವ) ಪದದ್ವಯವ್ಯಾಖ್ಯಾ	ನಂಜುಂಡ	?	ಟೀ.	KB. 316

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
677	ರಾಜೇಶ್ವರಪುರಾಣ	ಕರಿಬಸವಾರ್ಯ	?	?	ಶಿಭ., 6 (ಪು. 233)
678	ರಾಮನಾಥವಿಲಾಸ	ಸದಾಶಿವಯೋಗಿ	1534	ಚಂ.	II. 271-74
679	ರಾಮನಾಥಶತಕ	?	1500	ವೃ-101	III. 270
680	ರಾಮಪುರದ ಸಿದ್ಧರಾಮನ ಕಥೆ	?	17 ಶ.	ಸಾಂ.	III. 428
681	ರಾಮೇಶ್ವರಶತಕ	?	?	?	ಶಿಭ., 3·11 (ಪು. 108)
682	ರುದ್ರದೇವರ ಕಾವ್ಯ	?	17 ಶ.	?	III. 428
683	ರುದ್ರಭಾರತ	?	1700	ಗ.	III. 309
684	ರುದ್ರಭಾರತ ಟೀಕೆ	ಸೋ. ರೇವಣಾಚಾರ್ಯ	1623	ಟೀ.	III. 496
685	ರುದ್ರಭಾರತ ಸೃಷ್ಟಿ	ಚೆನ್ನಬಸವ	1160	ಗ?	I. 176
686	ರುದ್ರಾಕ್ಷ ಮಹಿಮೆ	?	17 ಶ.	ಷ.	III. 428
687	ರುದ್ರಾಕ್ಷಸ್ಥಲ ವಿಷಯ	ಅಂ/ಸಂಗಯ್ಯ	?	ಹಾ.	GOML. IV., ಸಂ. 702
688	ರೇಣುಕವಿಜಯ ಚಂಪೂ	ಸಿದ್ಧಲಿಂಗದೇವ	1700	ಚಂ. 8·912	K. 624
689	ರೇಣುಕಾಚಾರ್ಯ ಮಹಾತ್ಮೆ	?	?	ಯ.	ಶ. ಸಾ., 21·5 (ಪು. 192)
690	ರೇವಣಸಿದ್ಧ/ಚಾರಿತ್ರ	ಮಲ್ಲಯ್ಯ	?	ಹಾ.	KB. 474
691	ರೇವಣಸಿದ್ಧೇಶ್ವರಕಾವ್ಯ	ಮಲ್ಲಣ್ಣ	1413	ಭಾ. ಷ. 3·310	II. 46
692	ರೇವಣಸಿದ್ಧೇಶ್ವರರಗಳೆ	ಜಡೆಯ ಸಿದ್ಧಲಿಂಗೇಶ	?	ರ.	III. 428

693	ಲಯಗ್ರಾಹಿ	ಚೆನ್ನವೀರದೇಶಿಕ	1650	?	RCS. No. 2 (ಪು.9)
694	ಲಯಗ್ರಾಹಿಶತಕ	ನಂದಿದೇವ	?	ವೃ–92	ಶ್ರೀ ಜಿ.ಎ. ಶಿವಲಿಂಗಯ್ಯನವರ ಪ್ರತಿ
695	ಲಿಂಗಚಾರಿತ್ರ (91 ಪ್ರಸಂಗ)	?	17 ಶ.	?	III. 429
696	ಲಿಂಗಚಿದಾಮೃತಬೋಧೆ	?	?	ವ.	ವ.ವಾ.ಭಾಂ. (ಧಾ)
697	ಲಿಂಗತ್ರಿವಿಧಿ ನೀತಿ	ಕಾಡಸಿದ್ಧೇಶ್ವರ	18 ಶ.	ತ್ರಿ–210	KRI. VI., ಸಂ. 74
698	[ಲಿಂ]ಗದ ಮಹಿಮೆ	ಮುರಿಗೆದೇಶಿಕ	1560	?-7	ಶ್ರೀ ಎಲ್. ಬಿ. ಅವರ ಪ್ರತಿ
699	ಲಿಂಗಪುರಾಣ	ಗುರುಲಿಂಗದೇಶಿಕ	1600	ವಾ.ಷ. 36·1821	K. 658/1
700	ಲಿಂಗಪುರಾಣಟೀಕೆ	?	18 ಶ.	?	III. 429
701	ಲಿಂಗಪುರಾಣದ ಪದ್ಯಗಳು	?	17 ಶ.		III. 429
702	ಲಿಂಗಪೂಜಾ ವಿಧಾನ	ಅಂ/ಗುರುಚನ್ನವೀರೇಶ	?	?–56	ಶ್ರೀ ಎಲ್. ಬಿ. ಅವರ ಪ್ರತಿ
703	ಲಿಂಗಯ್ಯ ಚರಿತ್ರೆ	?	17 ಶ.	?	III. 429
704	ಲಿಂಗಲೀಲಾವಿನೋದ	?	17 ಶ.		III. 429
705	ಲಿಂಗಸ್ಮೃತಿ	ದೇ. ನಂಜುಂಡ	1841	ವೃ-27	III. 196
706	ಲಿಂಗಸೂತ್ರ	?	?	?	III. 429
707	ಲಿಂಗಸೂತ್ರದ ವಚನ	ಕ. ವೀರಣ್ಣೊಡೆಯ	1430	ವ.	ಕ.ಕ.ಚ. ಅ., ಸಂ. 1945
708	ಲಿಂಗಸ್ತೋತ್ರದ ಪದ	?	?	ವಾ. ಷ.	K. 325/21
709	ಲಿಂಗಸ್ತೋತ್ರ ಷಟ್ಪದಿ	?	1500	ಪ. ಷ. 111	III. 276
710	ಲಿಂಗಾರ್ಚನರಗಳೆ	ವಿರೂಪಾಕ್ಷ	1600	ರ.	II. 347

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
711	ಲಿಂಗಾರ್ಚನೆ	?	17 ಶ.	ದ್ವಿ.	III. 429
712	ಲಿಂಗಾಚಾರರಚನಾಗಮ ಟೀಕೆ	ಗುರುಸಿದ್ಧ	1720	ಟೀ.	III. 429
713	ಲಿಂಗಾವಧೂತರ ವಚನ	ಲಿಂಗಾವಧೂತ	?	ವ.	III. 429
714	ಲಿಂಗಾಷ್ಟಕ	?	?	?	III. 429
715	ಲಿಂಗಾಂಗಪ್ರಣಮ ಸಂಯೋಗಶಾಸ್ತ್ರ	ಗುರುಲಿಂಗದೇವ	?	ಟೀ.-112	ಶ್ರೀ ಎಲ್. ಬಿ. ಅವರ ಪ್ರತಿ
716	ವಚನ	ಕ. ನಾಗಿದೇವ	1430	ವಾ. ಷ.–8	III. 241
717	ವಚನ	ಕಾರುಗಹಳ್ಳಿ ಶಾಂತಯ್ಯ	1700	ವ.	II. 532
718	ವಚನ	ಬೆಂಗಳೂರು ಮುದ್ದುವೀರಸ್ವಾಮಿ	1700	ವ.	II. 531, III. 454
719	ವಚನಗಳು	ದೊಡ್ಡ ಷಡಕ್ಷರಿ	1650	ಷ.	II. 428-29
720	ವಚನಗಳು	ಭಿಕ್ಷದ ಸಂಗಯ್ಯ	?	ವ.	ಶ್ರೀ ಎಲ್. ಬಿ. ಅವರ ಪ್ರತಿ
721	ವಚನಸಾರ	?	17 ಶ.	ವ.	III. 429
722	ವಜ್ರಬಾಹುಚರಿತೆ	ಇಮ್ಮಡಿ ತೋಂಟದಯ್ಯ	1530	ವಾ. ಷ.	K. 829
723	ವಟಪುರಸಿದ್ಧನಾಥ ಸ್ತೋತ್ರ	?	?	ಭಾ. ಷ. + ಟೀ. 5	GOML. V., ಸಂ. 849
724	ವರಗಬಸವೇಶ್ವರನ ತಾರಾವಳಿ	?	?	?	III. 429
725	ವರರಮ್ಯರತ್ನಾಕರ	ಕಲ್ಲೂರ ಲಿಂಗಣಾಚಾರ್ಯ	1613	ಭಾ.ಷ.	ಶ್ರೀ ಶಾಂತರಸರ ಪ್ರತಿ

726	ವಲ್ಲೀಕಂಠಾಭರಣ	ನಂದಿನಾಥ	1745	ಯ–9. 1610	III. 54–5
727	ವಾಣಿಜೋತ್ಪತ್ತಿ	?	18 ಶ.	ವಾ. ಷ.	III. 429
728	ವಾತುಲತಂತ್ರ ಟೀಕೆ	ಗುಬ್ಬಿಯ ಮಲ್ಲಣ್ಣ	1475	ಟೀ.	II. 101–04
729	ವಾರಕೊಂಡ ಷಟ್ಪದಿ	ಕರಿವೀರನೊಡೆಯ ರಾಮೇಶ್ವರ	?	ವಾ. ಷ.–15	GOML. IV., ಸಂ. 790
730	ವಿಕ್ರಮವಿಲಾಸ	ವೀರಜಿನಪತಿ	1650	ಸಾಂ. 23.1621	II. 425–26
731	ವಿನೋದರಸಮಂಜರಿ	ವೀರನಗೆರೆ ಪುಟ್ಟಣ್ಣ	19 ಶ.	?	III. 220
732	ವಿಭೂತಿ ಮಹಿಮೆ	ಕುಮಾರ ಚೆನ್ನಬಸವ	1550	?	[ಅಲಭ್ಯ]
733	ವಿಭೂತಿ ಮಹಾತ್ಮ್ಯ ಟೀಕೆ	?	?	ಟೀ.	III. 429
734	ವಿರಕ್ತರ ಕಾವ್ಯ	ಮೊದಿಯರುದ್ರ	1737	ವಾ + ಪ + ಭಾ-ಷ. 6.742	III. 39–40
735	ವಿರಕ್ತಶತಕ	ಶಾಂತಮಲ್ಲ	1630	ಭೋ. ಷ-106	' ಜ್ಯೋತಿ ಬೆಳಗುತಿದೆ '–ಪು. 199
736	ವಿರಾಟಪರ್ವ (ಕೀಚಕವಧಾ) ದುಂದುಮೆ	ನವಲಗುಂದದ ಹಿರೇಮಠದ ಶರಳ ಬಸ[ವ]ಲಿಂಗ	?	ದುಂದುಮೆ	KRI. VI., ಸಂ. 77
737	ವಿರೂಪಾಕ್ಷಪಂಚಾಶಿಕೆ	ಗುರುಸಿದ್ಧ	1720	ಭಾ. ಷ. 13.673	III. 277, 429
738	ವಿರೂಪಾಕ್ಷ ಶತಕ	ಯೋಗಾನಂದ	1750	ಕಂ–103	III. 106-07
739	ವಿರೂಪಾಕ್ಷಸ್ತುತಿ	?	1600	ವಾ.ಷ.-20	III. 287
740	ವಿರೂಪಾಕ್ಷಾಷ್ಟಕ	?	?	?	III. 429
741	ವಿವೇಕಚಿಂತಾಮಣಿ (ನಿಜಗುಣಶಿವಯೋಗಿ) ಟೀಕೆ	?	?	ಟೀ.	KRI. IV., ಸಂ. 58

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು,	ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
742	ವಿವೇಕ ವಿಜಯ	ವೀ. ಪುಟ್ಟಣ್ಣ	19 ಶ.	?		III. 220
743	ವಿಶೇಷಾರ್ಥಪ್ರಕಾಶಿಕಾ (ಮೊಗ್ಗೆಮಾಯಿದೇವ) ಟೀಕೆ	ಉಜ್ಜೈನೀಶ	1550	ಟೀ.		II. 259
744	ವಿಶೇಷಾರ್ಥಪ್ರಕಾಶಿಕೆ (ಮೊಗ್ಗೆಮಾಯಿದೇವ) ಟೀಕೆ	ಕಾಶಿ ಗುರುಲಿಂಗದೇವ	?	ಟೀ.		ಕ.ಕ.ಚ.ಅ., ಸಂ. 2044
745	ವಿಶೇಷಾನುಭವ ಷಟ್ಸ್ಥಲ	ಚನ್ನವೀರಾಚಾರ್ಯ	?	ವ+ಟೀ.	742	RCS. No. 2 (ಪು. 2-3)
746	ವಿಂಶತಿವೇದಾಂತ	ಅವಧೂತ ಶಿವಯೋಗಿ	1750	?		III. 429
747	ವೀರಗುಂಡಯ್ಯನ ಕಥೆ	?	18 ಶ.	ಗ.		III. 429
748	ವೀರತಂತ್ರ ಟೀಕೆ	?	?	ಟೀ.		JKU. VI., ಪು. 22
749	ವೀರಭದ್ರ ಕಲ್ಯಾಣ	ವಿರೂಪಾಕ್ಷ		ಭಾ+ವಾ. ಷ.		ಬ.ಶ.ರ., 662
750	ವೀರಭದ್ರ ಚರಿತೆ	ಚೆಲುವ ?	1725	?		III. 30 [ಅಲಭ್ಯ]
751	ವೀರಭದ್ರ ತಾರಾವಳಿ	ಮೋಡ್ಲೇರಿ ಶಿವಲಿಂಗ	1570	ಹಾ.	27	KB. 466
752	ವೀರಭದ್ರದೇವಚರಿತೆ	ವೀರೇಶ್ವರಕವಿ	17 ಶ.	?		III. 430
753	ವೀರಭದ್ರದೇವರ ಖಡ್ಗ	?	?	ಗ.		K. 241/2
754	ವೀರಭದ್ರಪುರಾಣ	?	?	ಭಾ.	ಷ.–25–?	ಸ.ದೀ., 147 (ಪು. 17-20)
755	ವೀರಭದ್ರಮಂತ್ರ	?	17 ಶ.	?		III. 430

756	ವೀರಭದ್ರರಾಜಸ್ತುತಿ	ರಾಮಚಂದ್ರ	?	?	III. 430
757	ವೀರಭದ್ರಲೀಲಾರತ್ನ	ಶಾಂತವೀರ	1600	ಸಾಂ –9–1649	K. 581
758	ವೀರಭದ್ರಲೀಲಾವಿಜಯ	ನಿಶ್ಚಿಂತಾತ್ಮ	1750	ಭಾ. ಷ. 9.300	III. 107–8
759	ವೀರಭದ್ರವಿಜಯ	ವಿರುಪಣಯ್ಯ	1750	ಭಾ. ಷ. 6–?	III. 255-56
760	ವೀರಭದ್ರಸ್ತವ	ಚನ್ನವೀರ ದೇಶಿಕ	1650	?	Res. No. 2 (ಪು. 9)
761	ವೀರಭದ್ರಸಾಂಗತ್ಯ	ಸೋಮ	1700	ಸಾಂ. 5.515	II. 538–39
762	ವೀರಭದ್ರಾಷ್ಟಕ	?	?	ವ್ಯ.–8	K. 1006; KB. 642/9
763	ವೀರಮಾಹೇಶ್ವರತಂತ್ರ ಟೀಕೆ	ಚೆನ್ನವೀರ	1550	ಟೀ.	II. 570
764	ವೀರಮಾಹೇಶ್ವರತಂತ್ರ ಟೀಕೆ	ವೀರಗುರುಲಿಂಗಾರಾಧ್ಯ	?	ಟೀ. ಪಟಲ–9	ಸದೀ., 152 (ಪು. 25–8)
765	ವೀರಮಾಹೇಶ್ವರಾಚಾರ ಸಂಗ್ರಹ ಟೀಕೆ	ಶ್ರೀಧರಾಂಕ	1550	ಟೀ.	II. 259-60
766	ವೀರಮಾಹೇಶ್ವರಾಚಾರ ಸಾರೋದ್ಧಾರ ಟೀಕೆ	ಸಾನಂದ ಶಿವಯೋಗಿ	1480	ಟೀ.	II. 128
767	ವೀರಮಾಹೇಶ್ವರಾಚಾರ ಸುಧಾನಿಧಿ	ಬಸವಲಿಂಗ	16 ಶ.	ಟೀ.	KA. 322
768	ವೀರಶೈವಚಿಂತಾಮಣಿ ಟೀಕೆ	ಉದ್ದಾನ ಸಿದ್ಧಲಿಂಗದೇವ	1750	ಟೀ.	III. 62
769	ವೀರಶೈವ ತತ್ವ	?	?	?	GOML IV., ಸಂ. 792
770	ವೀರಶೈವತತ್ವ ಪ್ರಕಾಶ	?	?	?	III. 430
771	ವೀರಶೈವಪ್ರದೀಪಿಕೆ	?	17 ಶ.	?	III. 430
772	ವೀರಶೈವ ಮತೋಪನ್ಯಾಸ	?	?	?	III. 430
773	ವೀರಶೈವ ಮಹಾತಂತ್ರ ಟೀಕೆ	?	18 ಶ.	ಟೀ.	III. 430

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
774	ವೀರಶೈವಲಿಂಗಪೂಜಾವಿಧಾನ	?	?	ಗ.	ಶ್ರೀ ಎಲ್. ಬಿ. ಅವರ ಪ್ರತಿ
775	ವೀರಶೈವ ವಿಷಯ	?	?	ಷ. ಇ	GOML IV., ಸಂ. 793–95
776	ವೀರಶೈವ ಶಿಖಾರತ್ನ	ಶಿವಸಿದ್ಧರಾಮ	1700	ಪ+ಭೋ+ವಾ ಷ. 16•632	ಜಿ. ಕ. 9–8 (ಪು. 563–65)
777	ವೀರಶೈವಶಿಖಾರತ್ನ	ಬಾಲಸಂಗಮ	1200	ವಿ. 16•732	K. 493, III. 430 ?
778	ವೀರಶೈವಸಂಪಾದನೆ	?	17 ಶ.	?	III. 430
779	ವೀರಶೈವಸಿದ್ಧಾಂತಜ್ಞಾನ	?	17 ಶ.	?	III. 430
780	ವೀರಶೈವಸಿದ್ಧಾಂತಶಿಖಾಮಣಿ ಟೀಕೆ	ಉಜ್ಜಿನೀಶ	1550	ಟೀ.	II. 259
781	ವೀರಶೈವಸಿದ್ಧಾಂತಶಿಖಾಮಣಿ ಟೀಕೆ	ಸೋಸಲೆ ರೇವಣಾಚಾರ್ಯ	1623	ಟೀ.	II. 365-66
782	ವೀರಶೈವಸಿದ್ಧಾಂತಸುಧಾನಿಧಿ	?	?	ಗ.	III. 430
783	ವೀರಶೈವಸುಧಾನಿಧಿ ಟೀಕೆ	ಸಂಗನಬಸವಪ್ಪ	1750	ಟೀ.	III. 61–2
784	ವೀರಶೈವಾಗಮ	?	?	ವಾ. ಷ. 11	KA. 506
785	ವೀರಶೈವಾಚಾರನಿರೂಪಣ ಟೀಕೆ	?	?	ಟೀ.	III. 430
786	ವೀರಶೈವಾಚಾರ ಪೇಟಿಕೆ	?	17 ಶ.	?	III. 430
787	ವೀರಶೈವಾಭರಣ	?	?	?	III. 430
788	ವೀರಶೈವೋತ್ಕರ್ಷ ಪ್ರದೀಪಿಕೆಯ ಟೀಕೆ	?	17 ಶ.	ಟೀ.	III. 430

789	ವೀರಶೈವೋಪನಿಷತ್ತಿನ ಟೀಕೆ	ಶಿವಸಿದ್ಧೇಶ್ವರ	18 ಶ.	ಟೀ.	III. 430
790	ವೀರಸಂಗಯ್ಯ ದುಂದುಮೆ	ಶಾಲಿಚೆನ್ನಬಸವ	1800	ಹಾ	III. 163
791	ವೀರಸಂಗಯ್ಯನ ಚರಿತೆ	ಸಿದ್ಧಮಲ್ಲೇಶ	1650	ಸಾ. 5.487	II. 437
792	ವೀರಸಂಗಯ್ಯನ ಸಾಂಗತ್ಯ	?	?	ಹಾ.	ಶಿಭ., 7.1 (ಪು. 62)
793	ವೀರಾಗಮ	?	17 ಶ.	?	III. 430
794	ವೀರಾಂಕಚರಿತೆ	?	18 ಶ.	ಸಾ.	III. 430
795	ವೀರೇಶಚರಿತೆ	ಕರ್ಣಪಾರ್ಯ	1140	?	I. 149-50
796	ವೀರೇಶ್ವರ ಚರಿತೆ	ಚೆನ್ನಣ	1650	ಸಾಂ-37 ?	II. 432; KA. 369
797	ವೀರೇಶ್ವರನ ಕಂದ	?	17 ಶ.	ಕಂ.	III. 430
798	ವೀರೇಶಾಷ್ಟಕಂ	ಅಳಿಯಲಿಂಗರಾಜ	19 ಶ.	ವೃ.	KB. 647/10
799	ವೃಷಭಶತಕ	ಪಾ. ಸೋಮ	1190	?	ಶಿಭ., 7.1 (ಪು. 62)
800	ವೃಷಭಸ್ತೋತ್ರ	?	17 ಶ.	?	III. 430
801	ವೃಷಭೇಶ್ವರಪುರಾಣ ಟೀಕೆ	ಗುರುದೇವ	1350	ಟೀ. ಅ. 43	ವೀರಶೈವ., 1.3 (1961)
802	ವೃಷಭೇಶ್ವರ ಸ್ತುತಿ	?	?	ಷ+ಟೀ. 24+17	GOML III., ಸಂ. 801
803	ವೃಷಭೇಂದ್ರ ಪುರಾಣ	ಶಿವರಾತ್ರಿಸ್ವಾಮಿ	?	?	III. 430 [ಅಲಭ್ಯ]
804	ವೃಷಭೇಂದ್ರವಿಜಯ ಶಬರಶಂಕರ ವಿಲಾಸಗಳ ಘಟ್ಟಿ ಪದ್ಯಗಳಿಗೆ ಟೀಕೆ	?	18 ಶ.	ಟೀ.	III. 430
805	ವೇದಭಾಷ್ಯ	ಹರಭಕ್ತ	1250	ಟೀ.	I. 432 [ಅಲಭ್ಯ]

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
806	ವೇದಾಂತಪಟಲ	ಪ. ನನ್ನಪ್ಪಶಾಸ್ತ್ರಿ	19 ಶ.	?	III. 469
807	ವೈಭೋಗ ರಾಜಾಸ್ಥಾನ	ಪ್ರಭುಗ	1500	ಚಂ.	II. 201-02
808	ವೈಯಾರ ವಚನ	ಪೂರ್ಣಾನಂದಯೋಗಿ	?	ವ. 12	ಶ್ರೀ. ಎಲ್. ಬಿ. ಅವರ ಪ್ರತಿ
809	ವೈರಾಗ್ಯ ಷಟ್ಪದಿ	ಮುರಿಗೆಯ ಶಾಂತವೀರ	1530	ವಾ. ಷ. 101	III. 212-14
810	ವೈರಾಗ್ಯ ಷಟ್ಪದಿ	ಸೋಮೇಶ್ವರ	15 ಶ. [?]	ಷ.	III. 430
811	ವೈಷ್ಣವವಾದ ಖಂಡನ	ನಂಜುನಾಥಾಚಾರ್ಯ	1500	ಗ.	III. 370
812	ಶತಕತ್ರಯ (ಮುಗ್ಗೆಮಾಯಿದೇವ) ವ್ಯಾಖ್ಯಾನ	ಮಲ್ಲಿಕಾರ್ಜುನ	1593	ಟೀ.	III. 380
813	ಶರಣಮುಖಮಂಡನವೆಂಬ ವಚನಶಾಸ್ತ್ರ	?	?	ವ 4-403	KB. 643
814	ಶರಣರ ಕಥೆ	?	18 ಶ.	ಯು.	III. 430
815	ಶರಣಶತಾಷ್ಟನಾಮಾಷ್ಟಕ	?	?	ವೃ.	K. 998/9
816	ಶರಣಸ್ತೋತ್ರದ ವಚನ	ಎ. ಗುರುಶಾಂತದೇವ	1565	ವ. 110	II. 298
817	ಶರಣುಬಸವ ರಗಳೆ	ಪಾ. ಸೋಮನಾಥ	1195	ರ.	I. 344
818	ಶರಣುಬಸವ ರಗಳೆ ಕಂದ	ಬಸವಲಿಂಗ	1830	ಕಂ.	III. 259
819	ಶರಣುಬಸವ ರಗಳೆಯ ಟೀಕೆ	?	?	ಟೀ.	III. 430
820	ಶರಣೆಯರ ನಾಮ	?	?	?	K. 468/'2
821	ಶರಭ ಚಾರಿತ್ರ	ರಾಘವಾಂಕ	1200	?	I. 264 [ಅಲಭ್ಯ]

822	ಶರಭಚಾರಿತ್ರ	ಸಿದ್ಧಿಂತಾತ್ಮ	1750	ಭಾ. ಷ. 10.526	ಕ. ಸಾ., 21.5 (ಪು. 191)
823	ಶಂಕರ ಉಮಾ ಸ್ತೋತ್ರ	?	?	ಕಂ+ ವೃ.	K. 625/2
824	ಶಂಕರಕಥೆ	?	18 ಶ.	?	III. 430
825	ಶಂಕರಕಿಂಕರಪ್ರಿಯ ಶತಕ	?	1350	ವೃ.	ಶಂ. ಶ., ಪೀಠಿಕೆ xvi
826	ಶಂಕರಗದ್ಯ ರಗಳೆ	ಶಂಕರದೇವ	1500	ರ.	ಹ.ಕೃ. ಸಂ., 150
827	ಶಂಕರದೇವರ ಕಂದ	?	?	ಟೀ.	ಶಂ.ದೇ.ಕಂ. xv
828	ಶಂಕರಲಿಂಗನ ಕಾವ್ಯ	ಶಂಕರಲಿಂಗ ?	1750	ಸಾಂ. 13.1651	KB 628
829	ಶಂಕರಸಾರ್ಧಕ	?	17 ಶ.	ವಾ. ಷ.	III. 430
830	ಶಂಕರ ಶತಕ	ಶಂಕರದೇವ	1500	ವೃ.	ಶಂ.ಶ., ಪೀಠಿಕೆ xiii
831	ಶಂಕರ ಶತಕ	ಬಸವಪ್ಪಶಾಸ್ತ್ರಿ	1843-91	ಕಂ.	III. 468
832	ಶಂಕರಸಂಹಿತಾ ಟೀಕೆ	ನಾದಪ್ಪ	19 ಶ.	ಟೀ.	III. 430
833	ಶಂಕರಸಂಹಿತೆ	ಬಸವರಾಜೇಂದ್ರ	?	?	III. 430
834	ಶಂಕರಸಂಹಿತೆ	ಮುಮ್ಮಡಿತಮ್ಮ	1665	ವಾ.ಷ.80.4100?	II. 450-53
835	ಶಂಕರಾಷ್ಟಕ	ದೇ. ನಂಜುಂಡ	1841	ವೃ -8	III. 196
836	ಶಂಕರೇಶ್ವರ ಶತಕ	ಶಂಕರದೇವ	1500	ವೃ.	ಶಂ.ಶ., ಪೀಠಿಕೆ xiii
837	ಶಂಭುಪೂಜಾವಿ..	ಕುಮಾರ ಚೆನ್ನಬಸವ	1550	?	II. 254; [ಅಲಭ್ಯ]
838	ಶಂಭುಲಿಂಗನ ಕಂದ	?	16 ಶ.	ಕಂ.	III. 430
839	ಶಂಭುಲಿಂಗನ ಕಂದದ ಟೀಕೆ	?	17 ಶ.	ಟೀ.	III. 430

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
840	ಶಾರದಾಚೌಪದನ	ಶಾಂತೀಶ್ವರ ?	?	ಚೌ. 32	KRI V., ಸಂ. 60
841	ಶಾರೀರಪ್ರಕಾಶಿಕೆ	ಸೋಸಲೆ ರೇವಣಾಚಾರ್ಯ	1623	?	II. 365–66
842	ಶಾಂತವೀರ ಛಂದಸ್ಸು	ಶಾಂತವೀರ ರಾಚಿದೇವ ಕಿತ್ತೂರ	19 ಶ.	?	[ಅಲಭ್ಯ]
843	ಶಾಂತವೀರ ಸಾಂದ್ಯದ ಪದ	?	?	ವಾ. ಷ. 24	KRI. III., ಸಂ. 19
844	ಶಾಂತವೀರ ನಿಘಂಟು	ಶಾಂತವೀರ ರಾಚಿದೇವ ಕಿತ್ತೂರ	?	?	[ಅಲಭ್ಯ]
845	ಶಾಂತವೀರೇಶ್ವರನ ವಚನ	ಅಂ/ಶಾಂತವೀರೇಶ್ವರಾ	?	ವ. 86	OUL., ಸಂ. 130
846	ಶಾಂತಿಗಣೇಶ್ವರನ ಸಾಂಗತ್ಯ	?	17 ಶ.	ಸಾಂ.	III. 430
847	ಶಾಂಭವೀಚಕ್ರೋದ್ಧರಣೆ	?	1600	ಗ+ವ. ಇ	III. 288
848	ಶಾಂಭವೀ ವಚನ	ಸ್ವತಂತ್ರ ಸಿದ್ಧಲಿಂಗೇಶ್ವರ	1480	ವ.	ಶ್ರೀ ಎಲ್. ಬಿ. ಅವರ ಪ್ರತಿ
849	ಶಿಖಾಧಾರಣ ಖಂಡನ	ಪ. ನನ್ನಪ್ಪಶಾಸ್ತ್ರಿ	19 ಶ.	ಗ.	III. 469
850	ಶಿತಿಕಂಠ ವ್ಯಾಖ್ಯಾನ	?	17 ಶ.	ಟೀ.	III. 431
851	ಶಿಬಿರಾಯ ಚರಿತೆ	ಕವಿ ಚೆನ್ನ	1750	ತ್ರಿ 5.523	III. 254–55
852	ಶಿರಿಯಾಳಶೆಟ್ಟಿ ಕಥೆ	ಅಂ/ಗುರುಶಾಂತ ಮಲ್ಲೇಶ	?	ಯು.	KB. 265
853	ಶಿವಕಥಾಮೃತಸಾರ	?	?	ಷ.	III. 431
854	ಶಿವಕಲ್ಯಾಣ	ಲಿಂಗಣ್ಣ	1750	ಯು.	ಶ. ಸಾ., 30.9 (ಪು.3 24)
855	ಶಿವಕವಚ	?	17 ಶ.	?	III. 431

856	ಶಿವಕವಚ ಟೀಕೆ	?	?	ಟೀ.	III. 431
857	ಶಿವಕಾರುಣ್ಯಾಹ್ವಾನ ಶತಕ	ಸಂ/ಬರೆಹದ ಗುರುನಂಜೇಸ್ವಾಮಿ	1620	ವೃ.-115	ಶಂಶ., ಪೀಠಿಕೆ viii–ix
858	ಶಿವಗಣಚಾರಿತ್ರ	ಶಾಂತವೀರ ದೇಶಿಕ	1650	ಸಾಂ -42.2740	II. 377-79
859	ಶಿವಗಣ ಸಂಗೀತ	ಕರಿಬಸವಾರ್ಯ	?	ಹಾ.	ಶಿಭ., 6 (ಪು. 233)
860	ಶಿವಗಣಾನಂದಾಬ್ಧಿ ಚಂದ್ರೋದಯ ಶತಕ	?	1300	ವೃ.	ಶಂಶ., ಪೀಠಿಕೆ xviii
861	ಶಿವಜ್ಞಾನಚಾರಿತ್ರ	ಶಾಂತವೀರದೇಶಿಕ	1650	?	III. 431
862	ಶಿವಜ್ಞಾನಬೋಧೆ	?	?	ಟೀ	K. 355/12; III. 431
863	ಶಿವತತ್ವಸುಧಾಂಬುಧಿ	?	?	?	III. 431
864	ಶಿವದರ್ಶನಾಷ್ಟಕ	ಶಂಕರದೇವ	1500	ಕಂ. 9	III. 397
865	ಶಿವದೀಕ್ಷೆ ವಿವೇಕಸಿಂಧು ಚಿಂತಾಮಣಿ	ಜ್ವಲಕಂಠ ಮಹಾಸ್ವಾಮಿ	?	?-19	K. 1131/9
866	ಶಿವನಾಮ ಮಹಾತ್ಮ್ಯೆ	?	?	ಹಾ. 7	GOML. IV., ಸಂ. 866
867	ಶಿವಪ್ಪಯ್ಯನವರ ಪುರಾಣ	ಶಿವಪ್ಪ	1700	ಸಾ.ಷ. 15.13/3	ಶಿಭ., 11.1
868	ಶಿವಪಾದರೇಣುಕಾ ಸಹಸ್ರ	?	?	?	III. 431
869	ಶಿವಪಾರಮ್ಯ ವಿಷಯ	?	?	ಹಾ. 37	GOML IV., ಸಂ. 808
870	ಶಿವಪಾರಿಜಾತ	?	19 ಶ.	?	III. 431
871	ಶಿವಪ್ರಾರ್ಥನಾ ಶತಕ	ಆ. ಗುರುಸಂಗಮೇಶಾ	1673-96	?	ಸಧಿ., 54-5
872	ಶಿವಪೂಜಾವಿಧಾನ	ನಿರ್ವಾಣಮಂತ್ರಿ	1725	ಗ.	III. 28
873	ಶಿವಪೂಜಾವಿಧಾನ	ಮೃತ್ಯುಂಜಯ ಗುರು ?	?	ಗ.	K. 175/7

ಅ. ಸಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
874	ಶಿವಪೂಜೆಯ ಫಲ	?	18 ಶ.	?	III. 431
875	ಶಿವಭಕ್ತ ಚರಿತ್ರೆ	?	?	ಭಾ.ಷ. 2·446	KA. 519
876	ಶಿವಭಕ್ತರ ಪುರಾಣ	?	?	?	III. 431
877	ಶಿವಭಕ್ತರ ರಗಳೆ	?	17 ಶ.	ರ.	III. 431
878	ಶಿವಭಕ್ತವಿಲಾಸ	?	?	?	III. 431
879	ಶಿವಭಕ್ತವಿಷಯ	?	?	?	GOML IV., ಸಂ. 807
880	ಶಿವಮಲ್ಲಿಕಾಮಾಲೆ	?	17 ಶ.	?	III. 431
881	ಶಿವಮಹತ್ವಸಾರಶಿಖಾಮಣಿಸಂಗ್ರಹ ಶತಕ	ಶಾಂತವೀರದೇಶಿಕ	1650	ವೃ. 100	III. 381–83
882	ಶಿವಮಹಿಮ್ನಶತಕ	?	?	ವೃ.	ಶ.ಸಾ., 4-5-6
883	ಶಿವಮಹಿಮಾಸ್ತೋತ್ರ	ವೀರಸಂಗಯ್ಯ		ವ. 111	ವ.ವಾ.ಭಾಂ. (ಧಾ)
884	ಶಿವಮಹಿಮಾಸ್ತೋತ್ರ (ವೀರಸಂಗಯ್ಯ)	ಸಂ./ಸಂಪಾದನೆ ಸಿದ್ಧವೀರಣ್ಣೊಡೆಯ	1600	ವ. 111	ವ.ವಾ.ಭಾಂ. (ಧಾ)
885	ಶಿವಯೋಗ	?	17 ಶ.	ಗ.	III. 431
886	ಶಿವಯೋಗಚಿಂತಾಮಣಿ	?	?	ವ.	ಕ.ಕ.ಚ.ಅ., ಸಂ. 2265
887	ಶಿವಯೋಗಚಿಂತಾಮಣಿ	ಕಂಥೆಯ ಸಿದ್ಧಲಿಂಗ ಶಿವಯೋಗಿ	?	ಟೀ.	K. 643
888	ಶಿವಯೋಗರತ್ನಾಕರ	ಹುಬ್ಬಳ್ಳಿಯ ಸಂಗಯ್ಯ	19 ಶ.	ಗ.	III. 249–50

889	ಶಿವಯೋಗಿಗಣವರನ ಕಾವ್ಯ	ಸಿದ್ಧಲಿಂಗ	1860	ಭಾ.ಷ. 16.776	III. 391-92: ಸದಿ., 66-7 (ಪು. 23-34)
890	ಶಿವರಹಸ್ಯ	?	17 ಶ.	?	III. 431
891	ಶಿವರಹಸ್ಯ ಟೀಕೆ	?	19 ಶ.	ಟೀ.	III. 431
892	ಶಿವಲಾವಣ್ಯಪುಣ್ಯಾಗ್ರಗಣ್ಯ ಶತಕ	?	1300	ವೃ.	ಶಂಶ., ಪೀಠಿಕೆ xvii-viii
893	ಶಿವಲಿಖಿತ	?	?	ಟೀ.	K. 283/9
894	ಶಿವಲಿಂಗನಾಂದ್ಯ	ಇಮ್ಮಡಿ ಮುರಿಗೆಯಸ್ವಾಮಿ	1590	ಭಾ + ಷಾ. 25	II. 313
895	ಶಿವಲಿಂಗನಾಂದ್ಯ	?	?	ಕಂ. 42	K. 325/18
896	ಶಿವಲಿಂಗನುಡಿಮಾಷಟ್ಪದ	ಮುರಿಗೆಯ ಶಾಂತವೀರ	1530	ವಾ.ಷ. 105	II. 572
897	ಶಿವಲಿಂಗಮಾಹೇಶ್ವರ ಚಾರಿತ್ರ	ಸಾ. ಮಡಿವಾಳಯ್ಯ	?	ಶ.ಷ. 9.1399	KB. 471
898	ಶಿವಲಿಂಗವಿಕಳತೆಸನ್ನಿದರ್ಶನ ಅರ್ಚನ ಪೂಜಾಸಾರಶತಕ	ಬರೆಹದ ಗುರುನಂಜೇಸ್ವಾಮಿ	1620	ವೃ.110	ಶಂ.ಶ., ಪೀಠಿಕೆ viii ಇ.
899	ಶಿವಲಿಂಗಷಟ್ಪದ (ಗುರುಸಿದ್ಧ)	?	?	ಟೀ.	KRI. VII., ಸಂ. 71
900	ಶಿವಲಿಂಗಾಂತಿಕ	?	?	ಗ.	III. 431
901	ಶಿವಲಿಂಗೇಶ್ವರ ಪುರಾಣ	ಗುರುಪಾದಪ್ಪ	?	ಭಾ. ಷ.	ಶಸಾ., 15.1 (ಪು. 17-21)
902	ಶಿವವಚನ	?	?	ಹಾ.	K. 184/7
903	ಶಿವಶರಣಪಂಚಕ	?	?	ವೃ. 5	GOML IV., ಸಂ. 84
904	ಶಿವಶರಣಂ	ಬಸವರಾಜಯ್ಯ	17 ಶ.	?	III. 431

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
905	ಶಿವಶರಣರ ಕಥೆ	?	17 ಶ.	?	III. 431
906	ಶಿವಶರಣಾಷ್ಟಕ	?	17 ಶ.	?	III. 431
907	ಶಿವಷಟ್ಪದಿ	ಪ್ರಧಾನಿ ವೆಂಕಪ್ಪ	18 ಶ.	ಷ	III. 431
908	ಶಿವಷಣ್ಮುಖ	?	?	ರ. ಲಲಿತ	K. 220
909	ಶಿವಸರ್ವಾಂಗಸ್ತುತಿ	ಶಿವಲಿಂಗಯೋಗಿ	1700	ವೃ. 35	II. 559
910	ಶಿವಸ್ತವ ಶಿರೋಮಣಿ	?	?	?	III 431
911	ಶಿವಸಿದ್ಧಾಂತ ಗೌಪ್ಯ	ಚಿಕ್ಕಬಸವಾಂಕ	?	ಗ.	OUL., ಸಂ. 136
912	ಶಿವಸಿದ್ಧಾಂತ ಟೀಕೆ	?	18 ಶ.	ಟೀ.	III. 431
913	ಶಿವಸ್ತುತಿ	?	15 ಶ.	ಕಂ.	III. 431
914	ಶಿವಸೂತ್ರ	?	17 ಶ.	?	III. 431
915	ಶಿವಸೂತ್ರ ಟೀಕಾ	ಕಾಶಿ ಗುರುಲಿಂಗದೇವ	?	ಟೀ.	ಪ್ರಜೀ., ಪೀಠಿಕೆ xvi
916	ಶಿವಾಕ್ಷರಮಾಲೆ	?	1400	ಕಂ 44	I. 512
917	ಶಿವಾಗಮತತ್ವ	?	17 ಶ.	?	III. 431
918	ಶಿವಾರ್ಚನಮಾಲೆ	?	18 ಶ.	ಹಾ.	III. 431
919	ಶಿವಾದ್ವೈತಮಂಜರಿ	?	17 ಶ.	?	III. 431
920	ಶಿವಾಧಿಕ್ಯ ಪುರಾಣ	ಬಸವಲಿಂಗ	1611	ವಾ. ಷ-11.1400	II. 353-56

921	ಶಿವಾಧಿಕ್ಯ ಪುರಾಣ	ನಾಧವಶಿವಯ್ಯ	17 ಶ.	?	III. 431
922	ಶಿವಾಧಿಕ್ಯ ಪುರಾಣದ ಟೀಕೆ	?	18 ಶ.	ಟೀ.	III. 431
923	ಶಿವಾಧಿಕ್ಯ ರತ್ನಾವಳಿ	?	17 ಶ.	?	III. 431
924	ಶಿವಾಧಿಕ್ಯ ಶತಕ	?	?	ವೃ.	III. 431
925	ಶಿವಾಧಿಕ್ಯ ಶಿಖಾಮಣಿ ಟೀಕೆ	ಸಿದ್ಧನಂಜಯತಿ	1623	ಟೀ.	II. 367
926	ಶಿವಾಧಿಕ್ಯ ಶಿಖಾಮಣಿ ಟೀಕೆ	ಸೋಸಲೆ ರೇವಣಾಚಾರ್ಯ	1623	ಟೀ.	II. 365–66
927	ಶಿವಾನಂದ ಲಹರಿ	ಅಂ/ಸೋಲೂರ ಗುರುಮಹಾಂತೇಶ	?	ನಾ. ಷ. 105	ಶ್ರೀ ಎಲ್. ಬಿ. ಅವರ ಪ್ರತಿ
928	ಶಿವಾನುಭವ ಸಿದ್ಧನೀತಿ	ಪ್ರಸಿದ್ಧೋಪಾಧ್ಯಾಯ	?	ಭಾ. ಷ	KRI IV., ನಂ. 75
929	ಶಿವಾಮೃತಲೀಲೆ	ಮೋಡ್ಲೇರಿ ಶಿವಲಿಂಗ	1570	ಭಾ. ಷ. 25–1143	KA 321
930	ಶಿವಾಷ್ಟಕ	?	1700	ಕಂ.	III. 303
931	ಶಿವಾಷ್ಟಪದಿ	?	?	?	III. 431
932	ಶೀಲವಂತನ ತ್ರಿವಿಧಿ	ಶಾಂತಾರೂಢ	1600	ತ್ರಿ.	KB. 231
933	ಶೀಲಸಂಪಾದನೆ	ಪಾಲ್ಕುರಿಕೆ ಸೋಮನಾಥ	1195	ಗ.	I. 340
934	ಶ್ರೀಕಂಠ ಸೋಮೇಶ್ವರ ಶತಕ	ವೀರಭದ್ರರಾಜ	1530	ವೃ. 101	II. 217–18
935	ಶ್ರೀಗುರುಕರುಣಾಮೃತ ವಚನ	?	?	ವ. 33	ಶ್ರೀ ಎಲ್. ಬಿ. ಅವರ ಪ್ರತಿ
936	ಶ್ರೀ ನಿಜಗುಣಶಿವಯೋಗಿಗಳವರ ಆಖ್ಯಾನ	ಹೊನ್ನಕೇರಿ ಶಿವಾನಂದ	?	ನಾ.	ವಿವೇಕ ಚಿಂತಾಮಣಿ (1969)
937	ಶ್ರೀರುದ್ರ ಟೀಕೆ	ಚನ್ನವೀರ	1500	ಟೀ.	GOML IV., ನಂ. 779

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
938	ಶ್ರೀರುದ್ರ ಟೀಕೆ	ರಾಚೋಟಿಶಾಸ್ತ್ರಿ (ಹಾನಗಲ್ಲ)	?	ಟೀ. ಅನುವಾಕ 11	KRI VI., ಸಂ. 72
939	ಶ್ರೀರುದ್ರ ಟೀಕೆ	ಸೋಸಲೆ ರೇವಣಾರಾಧ್ಯ	1623	ಟೀ.	III. 431
940	ಶೂನ್ಯಮಂತ್ರಗೋಪ್ಯ	ಗುರುಸಿದ್ಧ	1720	ವ.	ಪ್ರ.ಅೀ., ಪೀಠಿಕೆ viii
941	ಶೂನ್ಯಸಂಪಾದನೆ	ಹಲಗೇದೇವ ಇ.	1500	ವ. 1599	KA. 105
942	ಶೃಂಗಾರಶಿವಸ್ತುತಿ	?	1500	ಹಾ.	III. 275–76
943	ಶ್ವೇತನ ಸಾಂಗತ್ಯ	ಮಲ್ಲಿಕಾರ್ಜುನ ಕವಿ	1485	ಸಾಂ. 3·334	II. 132; GOML. VI;
					ಸಂ. 1061
944	ಶ್ವೇತಾಂಗನ ಕಥೆ	?	18 ಶ.	?	III. 431
945	ಶೈಲಜಾಧವಸ್ತೋತ್ರ	ದೇ. ನಂಜುಂಡ	1841	ವೃ. 33	III 195–96
946	ಶೈವಪಟಲ	?	17 ಶ.	?	III. 431
947	ಶೈವ ಪುರಾಣ	?	?	?	ಕ.ತಾ.ಸೂ. 148
948	ಶೈವಸಂಜೀವಿನಿ	ತೋಂಟದ ಸಿದ್ಧಲಿಂಗ	1560	ಪಟಲ-10	KA. 324
949	ಶೈವಸಿದ್ಧಾಂತದ ಕಂದ	?	17 ಶ.	ಕಂ.	III. 431
950	ಶೈವಸಿದ್ಧಾಂತ ದೀಪಿಕೆ	ವೀರಣಾಚಾರ್ಯ	1650	ಟೀ.	III. 431
951	ಶೈವಾಚಾರದ ಪಂಚಾಂಗ	ಅಂ/ನಿಸ್ಸಂಗ ನಿರಾಳ ನಿಜಲಿಂಗ ಪ್ರಭುವೇ	?	ವ. 12	ಶ್ರೀ ಎಲ್. ಬಿ. ಅವರ ಪ್ರತಿ

952	ಶೈವಾದ್ವೈತ ಪ್ರಕಾಶಿಕೆಯ ಟೀಕೆ	?	17 ಶ.	ಟೀ.	III. 431
953	ಷಟ್ಸ್ಥಲ ಚಕ್ರವರ್ತಿಯ ಸಂಪಾದನೆ	?	16 ಶ.	ವ.	III. 431
954	ಷಟ್ಸ್ಥಲ ಚರಿತೆ	?	17 ಶ.	?	III. 431
955	ಷಟ್ಸ್ಥಲ ಜ್ಞಾನ ಚಾರಿತ್ರ	ಗುರುರಾಜ	15 ಶ.	?	III. 431
956	ಷಟ್ಸ್ಥಲ ತಿಲಕ	ಮುಖಬೋಳು ಸಿದ್ಧರಾಮ	1656	ವಾ.ಸ.-20-923	III. 450-51
957	ಷಟ್ಸ್ಥಲ ತಿಲಕ	?	17 ಶ.	?	III. 432
958	ಷಟ್ಸ್ಥಲ ನಿರ್ಣಯ	?	?	?	ಶಿಭ., 3.11 (ಪು. 107)
959	ಷಟ್ಸ್ಥಲ ನಿರ್ಣಯ ಟೀಕೆ	?	17 ಶ.	ಟೀ.	III. 432
960	ಷಟ್ಸ್ಥಲ ಪಲ್ಲವ	ಚನ್ನವೀರಜಂಗಮದೇವ	1500	ಚಂ.	K. 486
961	ಷಟ್ಸ್ಥಲ ವಿವರಣೆ	?	16 ಶ.	?	III. 432
962	ಷಟ್ಸ್ಥಲ ಸಾರಾಮೃತ	?	16 ಶ.	?	III. 432
963	ಷಟ್ಸ್ಥಲ ಸಾರಾಯುದಂಡ	?	17 ಶ.	?	III. 432
964	ಷಟ್ಸ್ಥಲ ಸೀಸಕ	?	16–7 ಶ.	?	ಶಿಭ., 17·11 (ಪು. 80)
965	ಷಟ್ಸ್ಥಲ ಸ್ತೋತ್ರದ ವಚನ	ಎ. ಗುರುಶಾಂತದೇವ	1565	ವ.	II. 298
966	ಷಟ್ಸ್ಥಲೋಪದೇಶ	ಕಂನಾರ ಬಂಕನಾಥ	1430	ವ.	II. 56
967	ಷಟ್ಕಾರ ಸಂಗ್ರಹ	ಶಾಂತದೇವ	?	ಶ್ಲೋ+ವ. 1096	K. 177/1
968	ಷಡಕ್ಷರ ಮಾಲಿಕೆ	ಅಂಬರಗುರುಶಾಂತಲಿಂಗ	?	ಭಾ.ಷ. 2·114?	K. 89/2; III. 432
969	ಷಡ್ವಕ್ತ್ರಸ್ತೋತ್ರ ಟೀಕೆ	?	18 ಶ.	ಟೀ.	III. 432

ಅ.ಸಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
970	ಷಡ್ಲಿಂಗಕ್ಕೆ ವಚನ	?	17 ಶ.	?	III. 432
971	ಷಡ್ಲಿಂಗ ವಿವರ	?	17 ಶ.	?	III. 432
972	ಷಡುಸ್ಥಲ ವಿವರಾ	?	?	ಗ.	ಶ್ರೀ ಎಲ್. ಬಿ. ಅವರ ಪ್ರತಿ
973	ಸಕಲಾಗಮಸಾರ	?	?	?	III. 432
974	ಸಕಲಾಗಮಸಾರ ಟೀಕೆ	?	B. 15 ಶ.	ಟೀ.	III. 432
975	ಸಕಳೇಶ ಮಾದರಸ ರಗಳೆ	ಶಂಕರದೇವ	1500	ರ.	ಹಕ್ಕಸಂ; 150
976	ಸಕೀಲುಗಳ ಟಿಪ್ಪಣಿ	ಓಲಿಶಾಂತ	1160	?	ಶ್ರೀ ಎಲ್. ಬಿ. ಅವರ ಪ್ರತಿ
977	ಸಗುಣಲೀಲೆ	ನಿಂಬಾಣದ ಗಣೇಶ್ವರ	1160	?	I. 202 [ಅಲಭ್ಯ]
978	ಸಟೀಕಾ ಷಟ್ಸ್ಥಲ ಬ್ರಹ್ಮದೀಪಿಕಾ	ಸೋ. ರೇವಣಾಚಾರ್ಯ	1623	ಟೀ.	ಶಿಭ; 8.3-4
979	ಸತ್ಯೇಂದ್ರಚೋಳನ ಕಥೆ	ಸಂ. ಪರ್ವತಶಿವಯೋಗಿ	1698	?	ಶಿಪ್ರ., 7-1 (ಪು. 58)
980	ಸತ್ಯೇಂದ್ರಚೋಳನ ಕಾವ್ಯ	ಶಾಂತಕವಿ	1600	ಸ. ಷ. 9.1690	K. 589
981	ಸದಾಶಿವ ರಗಳೆ	?	?	ರ.	OUL , ಸಂ. 227
982	ಸದಾಶಿವ ಶತಕ	?	1300	ವೃ.	ಶಂಶ., ಪೀಠಿಕೆ viii
983	ಸದ್ಗುರು ರಗಳೆ	ಪಾ. ಸೋಮನಾಥ	1195	ರ.	I. 343
984	ಸದ್ಗುರು ರಗಳೆ ಟೀಕೆ	ಸೋಸಲೆ ರೇವಣಾಚಾರ್ಯ	1623	ಟೀ.	II. 365-66
985	ಸಮಾಧಿಕ್ರಮ ಉದ್ಧರಣೆ	?	?	ಟೀ.	K. 352/1

986	ಸನಾಥಿಕ್ರಿಯಾ ವಚನ	?	?	ಹಾ.	GOML. IV., ಸಂ. 683
987	ಸಮುದ್ರಮಥನ ಕಥೆ	ದೇ. ನಂಜುಂಡ	1841	ಯು.	III. 194
988	ಸರ್ವಮಂಗಳೆ ಶತಕ	ವಿರಕ್ತ ತೋಂಟದಾರ್ಯ	1560	ವೃ. 108	K. 767/20
989	ಸರ್ವಾಗಮಸಾರ	ತೋಂಟದ ಸಿದ್ಧೇಶ್ವರ	?	?	ಷ. ಕಾ. ಪ್ರಸ್ತಾವನೆ
990	ಸಹಸ್ರಗಣನಾಮ	ಮಲ್ಲಿಕಾರ್ಜುನ	1600	ಗ.	II. 345
991	ಸಹಸ್ರಗಣನಾಮ ತಾರಾವಳಿ	?	1700	ಹಾ.	III. 309
992	ಸಂಗಮಲಿಂಗಾಷ್ಟಕ	?	17 ಶ.	?	III. 432
993	ಸಂಗಮೇಶ್ವರ ಪುರಾಣ	ಬಸವರಾಜ	1500	ಭಾ. ಷ. 25·2151	KA. 310
994	ಸಂಗೀತ ಬಸವೇಶ್ವರ ನಾಟಕ	ನಾಗನಬಸವ	?	ನಾ. ಅಂಕ 7	KB. 642
995	ಸಂಪ್ರದಾಯ ವಚನ	?	17 ಶ.	ವ.	III. 432
996	ಸ್ಕಂದ ಕಲ್ಯಾಣ	ಗುರುಸಿದ್ಧ	1720	?	ಪ್ರಲೀ., ಪೀಠಿಕೆ viii
997	ಸ್ಕಂದಪುರಾಣ	?	?	?	ಶಿಭ, 7-1 (ಪು. 61)
998	ಸ್ಥಲಯುಕ್ತವಾದ ಸ್ವರವಚನಗಳು	?	17 ಶ.	ವ.	III. 432
999	ಸಾದಾಖ್ಯ ಕಟ್ಟಳೆ	?	17 ಶ.	?	III, 432
1000	ಸಾನಂದ ಕೃತಿ	?	17 ಶ.	?	III. 432
1001	ಸಾನಂದಗಣೇಶ ಸಾಂಗತ್ಯ	ಒಡೆಯನ ಗಿರಿಯ	1525	ಸಾಂ. 6·440	II. 207
1002	ಸಾನಂದಗಣೇಶ ಸಾಂಗತ್ಯ	ಮಲ್ಲೇಶ	?	ಸಾಂ.	III. 432
1003	ಸಾನಂದಗಣೇಶ್ವರನ ರಗಳೆ	ಅಂ/ಸದಾಶಿವಲಿಂಗ	1350	ರ.	KA. 62; III. 432

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
1004	ಸಾನಂದಗಣೇಶ್ವರನ ಸಾಂಗತ್ಯ	ವಿರಕ್ತದೇವ	1803	ಸಾಂ. 11.1223	III. 391
1005	ಸಾನಂದ ಚರಿತ್ರ	ಕುಮಾರ ಪದ್ಮರಸ	1180	ಷ.	I. 307
1006	ಸಾನಂದ ಚರಿತೆ	?	?	ಸಾಂ.	III. 432
1007	ಸಾರಸ್ವತ ವ್ಯಾಕರಣ	ಚೆನ್ನವೀರ	1500	ಟೀ.	II. 169
1008	ಸಾರಂಗದೇವರ ಚಾರಿತ್ರ್ಯ	ಶಿವಸಂಗಪ್ಪ	?	ಮಿ. ಅ. 4	ಸಾರಂಗ ಮಠಾಧೀಶ್ವರರು, 34
1009	ಸಾರಂಗಧರನ ಕಥೆ	ನಂಜುಂಡ	?	ಯ ?	III. 432
1010	ಸಾಸಲ ಭೈರವೇಂದ್ರ ಚರಿತೆ	ಕುಮಾರ ಚೆನ್ನಬಸವ	1550	?	II. 254 [ಅಲಭ್ಯ]
1011	ಸಾಂಬವಜ್ಞಾನಸುಪ್ರಕಾಶಿಕಾ	ಮುದ್ವೀರಸ್ವಾಮಿ	?	ಹಾ. 340	KRI III., ಸಂ. 13
1012	ಸ್ಕಾಂದಪುರಾಣ	?	17 ಶ.	?	III. 432
1013	ಸಿದ್ಧ ಚರಿತ್ರೆ	?	B15 ಶ.	?	III. 432
1014	ಸಿದ್ಧಯೋಗನಾಳಿ	?	17 ಶ.	?	III. 432
1015	ಸಿದ್ಧರಾಮನ ಮಂತ್ರಗೋಪ್ಯದ ಕಥಾಗರ್ಭ	?	17 ಶ.	?	III. 432
1016	ಸಿದ್ಧಲಿಂಗ ಕಾವ್ಯ	ಬಸವಕವಿ	1887	ವಾ. ಷ. 15·438	III. 214-17
1017	ಸಿದ್ಧಲಿಂಗ ಚರಿತ್ರೆ	?	?	?	III. 432
1018	ಸಿದ್ಧಲಿಂಗ ಸೂತ್ರ	?	?	ಗ.	KB. 329
1019	ಸಿದ್ಧ ಸಾಂಗತ್ಯ	?	?	ಸಾಂ.	III. 432

1020	ಸಿದ್ಧೇಶ್ವರ ತ್ರಿವಿಧಿ	ಕೊ. ಸಿದ್ಧಲಿಂಗ	?	ತ್ರಿ. 37	GOML IV., ಸಂ. 690
1021	ಸಿದ್ಧೇಶ್ವರನ ವಾರ್ಧಿಕ	?	?	ಟೀ.	KRI VII. ಸಂ. 80
1022	ಸಿರಿಯಾಳ ಚರಿತ್ರೆ	ಎಂ. ಮುದ್ದವೀರಯ್ಯ	19 ಶ.	ಲಾವಣಿ	III. 230
1023	ಸಿರಿಯಾಳ ರಗಳೆ	ತ್ರಿಭುವನತಾತ	1165	ರ.	GOML IV., ಸಂ. 1018
1024	ಸಿರಿಯಾಳಶೆಟ್ಟಿಯ ಸಾಂಗತ್ಯ	ಮಹಾದೇವ ?	1650	ಸಾಂ. 2·354	II. 435
1025	ಸಿರಿಯಾಳಸೇವೆ	?	?	?	OUL., ಸಂ. 201 [Remarks]
1026	ಸಿರುಮನ ಕಥೆ	ಶಿವಕವಿ	17 ಶ.	?	III. 433
1027	ಸಿರುಮನ ಸಾಂಗತ್ಯ	ಸಿದ್ಧ	1700	ಸಾಂ. 5·626	II. 556
1028	ಸಿಂಹಕುಮಾರನ ತಾರಾವಳಿ	ಅಂ/ಬಸವಲಿಂಗದೇವ	?	ಹಾ. 9	K. 1139/34
1029	ಸಿಂಧುಬಲ್ಲಾಳನ ಜೋಗುಳ	ಚನ್ನಮಲ್ಲೇಶ	?	ಹಾ. 41	OUL., ಸಂ. 280
1030	ಸುಜ್ಞಾನ ಚಿಂತಾಮಣಿ	ಬಸವೇಶ	1600	ಭಾ. ಷ. 9·386	II. 244-45
1031	ಸುಜ್ಞಾನಿದೇವ ಕಾವ್ಯ	ಉದ್ದಂಡ	1700	ಸಾಂ. 7·1178	III. 388-89
1032	ಸುಭಾಷಿತ	ಸವದತ್ತಿ, ರುದ್ರಮೂರ್ತಿ	1828	?	ಸದೀ., 57 (ಪು. 19)
1033	ಸೂಕ್ಷ್ಮಾಗಮ ಟೀಕೆ	?	17 ಶ.	ಟೀ.	III 433
1034	ಸೂರಸಾನಮ್ಮನ ಚರಿತ್ರೆ	ಅಂ/ಶಿವಾರ್ಗಜೇಶ, ನಂದೀಶ	?	ಭಾ. ಷ. 127	ಸದೀ., 58, 59-60
1035	ಸೂರಾಸಾನಿಯ ಕಾವ್ಯ	?	17 ಶ.	?	III. 433
1036	ಸೂಳೆಕೆರೆ ಸಿದ್ಧೇಶ್ವರನ ಪೂರ್ವೋತ್ತರ	?	18 ಶ.	?	III. 433
1037	ಸೂಳೆಯುಕೆರೆಯ ಸಾಂಗತ್ಯ	?	?	ಸಾಂ. 3.350	III. 311

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
1038	ಸೊನ್ನಲಾಪುರದ ಸಿದ್ಧರಾಮನ ಚರಿತೆ	ಅಂ/ಗುರುಶಾಂತ	?	ಸಾಂ. + ವ. 4·735	III. K. 592
1039	ಸೊಪ್ಪಿಬಸವೇಶ್ವರ ಪುರಾಣ	?	?	ರ. ಲಲಿತ–946	ಕನು., 19·11 (ಪು. 310)
1040	ಸೊಪ್ಪೆಯಬಸವ ಸಾಂಗತ್ಯ	ಕೂಟನೂರ ಮಲ್ಲಕವಿ	?	ಸಾಂ.	
1041	ಸೋಬಾನಮೂರ್ತಿಯ ತ್ರಿವಿಧಿ	?	?	ತ್ರಿ.	ತಿಭ., 7.1 (ಪು. 60)
1042	ಸೋಮದೇವನ ಕಥೆ	?	?	?	ಜಕ., 7.3 (ಪು. 169)
1043	ಸೋಮನಾಥ ಭಾಷ್ಯ ಟೀಕೆ	?	?	?	III. 433
1044	ಸೋಮವಾರ ಶಿವಪೂಜಾವ್ರತ ಕತೆ	?	18 ಶ.	ಟೀ.	III. 433
1045	ಸೋಮವ್ವೆಯ ಕಥೆ	?	?	ವಾ. ಷ. 7	KA. 506
1046	ಸೋಮೇಶ್ವರ ಶತಕ (ಪುಲಿಗೆರೆ ಸೋಮ)	?	?	ಟೀ. 38	OUL., ಸಂ. 286
1047	ಸೋಮೇಶ್ವರಸ್ತುತಿ	?	?	ಕಂ. 8	KA 568
1048	ಸೌಮಿನೀ ಕಥೆ	ಕುಂ. ಬಸವಲಿಂಗ	1800	ಭಾ. ಷ 98	III. 162-63
1049	ಸೌಂದರಕಾವ್ಯ	ನೊರೊಂದ	1740	ಸಾಂ. 13.1395	III. 47–50
1050	ಸೌಂದರವಿಳಾಸ	ಅಣ್ಣಾಜಿ	1600	ವಾ. ಷ.	II. 334–37
1051	ಸೌಂದರ್ಯ ಕಥಾರತ್ನ	ರಾಮೇಂದ್ರ	1550	ತ್ರಿ. 34·1932	II. 268–69

1052	ಸೌಂದರೇಶ್ವರನ ಯಕ್ಷಗಾನ	ಶಾಂತವೀರ ದೇಶಿಕ	1650	ಯು. 13·1610	III. 381–82
1053	ಹರಗಣ ಮಾಲೆ	ಅಂ/ಶಾಂತವೀರೇಶಾ	?	ಹಾ.	K. 468/3
1054	ಹರ್ಯಕ್ಷರ ಮಾಲೆ	?	1400	ಕಂ. 39	I. 512
1055	ಹರ್ಯಷ್ಟಕ	?	18 ಶ.	?	III. 433
1056	ಹರಿಶ್ಚಂದ್ರ ಸಾಂಗತ್ಯ	ಹಲಗ	1650	ಸಾಂ. 7·1001	II 430–31
1057	ಹರಿಹರ ಮಹತ್ತ್ವ	ರಾಘವಾಂಕ	1200	?	ಜ. ಕ., 4.9
1058	ಹರಿಹರಾಂಕನ ಸ್ತೋತ್ರ	?	17 ಶ.	?	III. 433
1059	ಹಲಾಯುಧ ಸ್ತೋತ್ರ	ಗುರುದೇವ	1350	ಟೀ.	I. 467
1060	ಹಳಗನ್ನಡ ಶಬ್ದಕೋಶ	ನ್ಯಾ. ಪ್ರಭುವಪ್ಪ	1880–1922	ಗ.	III. 469
1061	ಹರ್ಷಚರಿತ	ಬಸವಪ್ಪಶಾಸ್ತ್ರಿ	1843–91	ಗ.	III. 468
1062	ಹಾಡು	ಅಂ/'ಗಿರೀಶ'	?	ವಾ. ಪ.	KRI. VI., ಸಂ. 85
1063	ಹಾಡುಗಳು	ವೀರಬಸವಯ್ಯ	?	ಹಾ.	ಶಿಭ., 6 (ಪು. 238–39)
1064	ಹಾಲಾಸ್ಯಪುರಾಣ	ಗುರುಸಿದ್ಧ	1720	ಚಂ. 66·3637	III. 251–53
1065	ಹೇರೂರು ಹೆಣ್ಣಿನ ಸಾಂಗತ್ಯ	ಮಹಾದೇವ	1650	ಸಾಂ. 3·456	II. 435
1066	ಹೊಸನ್ನಾವರದ ಹೊಸ್ಯೇಗೌಡ ವಂಶಾವಳಿ	ಇ. ರುದ್ರಕವಿ	19 ಶ.	ದ್ವಿ.	ಇರು., 20–1

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
1067	ಹೋಳಿನ ಹಂಪಯ್ಯನ ಸ್ಥಿತಿ	?	?	ಹಾ.	K. 225/6
1068	12,000 ವಚನ	ಸ್ವಯಂಭುರುದ್ರ	?	?	I. 369
1069	?	ಗಂಗಾಧರಾಚಾರ್ಯ	1470	?	II. 97
1070	?	ನೀಲಕಂಠಶಿವಾಚಾರ್ಯ	1400	?	I. 503
1071	?	ರಾಚನಟ್ಟಿಯಾರಾಧ್ಯ	1650	?	II. 389
1072	?	ಜೊಂಜೆಯಾಟದ ಸಿದ್ಧಯ್ಯ	1725	?	III. 36
1073	?	ವಾಳಿ	19 ಶ.	?	III. 469

★ ಎಸ್. ಶಿವಣ್ಣ

ಶಾಸನಪದಸೂಚಿ

(ದಕ್ಷಿಣ ಭಾರತದ ಶಾಸನಗಳು, ಸಂಪುಟ ೯, ಭಾಗ ೧)

(ಹಿಂದಿನ ಸಂಚಿಕೆಯಿಂದ)

ಪ

ಪಜಿಮೆಚ್ಚೆಗಂಡ ಬಿ. 389 : 3
ಪಟಮಹಾದೇವಿ ರಾ. 396 : 2
ಪಟ್ಟಮಹಾದೇವಿ ರಾ. 395 : 2
ಪಟ್ಟವರ್ದ್ಧನ ಕೇಶವ ಶ್ರೈಸ್ಸ ಪು. 251 : 57-58
ಪಡಂಗಿಲೆ ಗ್ರಾ. 158 : 41; 330 : 2
ಪಡಿಗನೊಂಬಾ ಪು. 61 : 20-21
ಪಡುಗಲ್ಲ ಗ್ರಾ. 57 : 8; 58 : 9
ಪತಿಕಾರ್ಯ್ಯಧುರಂಧರ ಬಿ. 233 : 35-36
ಪದ್ಮ ಪು. 267 : 47, 49
ಪದ್ಮಣ ಅಧಿ. 178 : 32
ಪದ್ಮಣ ಶ್ರೈಸ್ಸ ಪು. 251 : 59
ಪದ್ಮಣನ್ದಿ ಜೈ.ಗು. 221 : 84
ಪದ್ಮಣನ್ದಿ ಭಟ್ಟಾರಕ ಜೈ.ಗು. 288 : 6
ಪದ್ಮಣ್ಣ ಪು. 267 : 60
ಪದ್ಮನನ್ದಿಭಟಾರ ಪು. 62 : 10
ಪದ್ಮನಾಭ ಪು. 165 : 59; 213 : 28, 29-30; 267 : 48; 329 : 42, 48, 73
ಪದ್ಮನಾಭಭಟ್ಟ ಪು. 250 : 45
ಪದ್ಮಯ್ಯ ಪು. 329 : 43
ಪದ್ಮರಸ ಪು. 267 : 50
ಪದ್ಮಲ ರಾ. 330 : 22
ಪದ್ಮಲದೇವಿ ರಾ. 195 : 12, 22-23
ಪದ್ಮಲದೇವಿ ಸ್ತ್ರೀ 213 : 54, 57, 58
ಪದ್ಮಲೇಶ್ವರ ದೇ. 343 : 50
ಪದ್ಮಾಂಬಿಕೆ ಸ್ತ್ರೀ. 343 : 8
ಪದ್ಮಿಗೇವ ಅಧಿ. 277 : 21-22, 23
ಪದ್ಮಿದೇವರಸ ಅಧಿ. 277 : 27
ಪದ್ಮಪ್ರಭ ಜೈ. ಗು. 278 : 30, 33, 36
ಪದ್ಮಪ್ರಭಮಲಧಾರಿದೇವ ಜೈ.ಗು. 278 : 28-29
ಪದ್ಮಾವತಿಯಜ್ಜೆ ಸ್ತ್ರೀ. 130 : 24
ಪದುಮಯನಾಯಕ ಪು. 348 : 3-4
ಪದುಮಯ್ಯ ಪು. 329 : 64
ಪದುಮಲದೇವಿ ರಾ. 325 : 2-3; 330 : 18, 60; 340 : 8
ಪನ್ನಿವರ್ರಗಂಡ ಬಿ. 389 : 3
ಪರಚಕ್ರಧವಳ ಬಿ. 207 : 11
ಪರಂಜ್ಯೋತಿದೇವ ದೇ 296 : 62; 297 : 54, 63-64
ಪರನಾರೀಸಹೋದರ ಬಿ. 293 : 5-6
ಪರಪಕ್ಷಮಲ್ಲ ಬಿ. 109 : 15
ಪರಪುರತ್ರಿಪುರಮಹೇಶ್ವರ ಬಿ. 287 : 6
ಪರಬಳಪ್ರಳಯಕಾಲಭೈರವ ಬಿ. 287 : 7
ಪರಬಳರಾಮ ಬಿ. 83 : 20-21
ಪರಬಳಸಾಧಕ ಬಿ. 223 : 7; 233 : 39-40; 253 : 27-28; 262 : 12-13; 268 : 14-15; 276 : 15; 282 : 3; 317 : 12; 326 : 77-78; 338 : 11
ಪರಬಳಕೃತಾಂತ ಬಿ. 337 : 5
ಪರಬಳಕ್ರಿತಾಂತ ಬಿ. 378 : 9
ಪರಮಂಡಳಸೂಱೆಕಾಱ ಬಿ. 126 : 7
ಪರಮಣ್ಡಳಸೂರೆಕಾಱ ಬಿ. 127 : 1-2
ಪರಮಣ್ಡಳಸೂಱೆಕಾಱ ಬಿ. 229 : 4
ಪರಮಣ್ಡಳಸೂಱೆಕಾರ ಬಿ. 128 : 8
ಪರಮೇಶ್ವರ ದೇ. 163 : 24; 223 : 3
ಪರಸುರಾಮನ್ ಪು. 400 : 3

ಫ

ಬ

ಭ

(ಮುಂದುವರಿಯುವುದು)

★ ಎಸ್. ರಾಜಶೇಖರ

ಗ್ರಂಥಾವಲೋಕನ

ಹಸಿರ-ಹಾಡು (ಕವಿತಾಸಂಕಲನ): ಲೇಖಕರು: ಡಾ. ಆರ್. ಸಿ. ಮುದ್ದೇಬಿಹಾಳ, ಮಿತ್ರಭಾರತಿ ಪ್ರಕಾಶನ, ವಿಜಾಪುರ. ಬೆಲೆ: ೧-೨೫. ಮುದ್ರಕರು: ಶ್ರೀ ಶಕ್ತಿ ಮುದ್ರಣಾಲಯ, ವಿಜಾಪುರ, ೧೯೬೯.

ಹಸಿರ ಹಾಡು ಅಲ್ಲದೆ ಇನ್ನೂ ಹಲವು ವಿಷಯಗಳ ವೈವಿಧ್ಯತೆಗಳನ್ನೊಳಗೊಂಡ ಒಟ್ಟು ೨೦ ಪದ್ಯಗಳ ಕವಿತಾಸಂಕಲನವಿದು. ಹೊತ್ತಿಗೆಯ ಒಂದು ನಾಲ್ಕಾಂಶ ಭಾಗವನ್ನು ಹಸಿರ ಹಾಡೊಂದೇ ಒಳಗೊಂಡಿದೆಯೆಂಬ ಕಾರಣದ ಜೊತೆಗೆ ಕವಿಯ ಪ್ರತಿಭಾಶಕ್ತಿಯೇ ನಿಕಷವಾಗಬಲ್ಲ ಕಾವ್ಯವೂ ಇದೆಂಬ ಅರಿವೂ ಲೇಖಕರಿಗೆ ಉಂಟಾಗಿಯೋ ಅಂತೂ ಕೃತಿಯ ಹೆಸರು ಅದೇ ಆಗಿ ಉಳಿದುಬಂದುದರಲ್ಲಿ ತಥ್ಯವಡಗಿದೆಯೆಂಬುದನ್ನು ಒಪ್ಪಬೇಕಾಗುತ್ತದೆ.

ಕವಿಯ ವೈಯಕ್ತಿಕ ಬಾಳೂ ಕೂಡ ಹಳ್ಳಿಯ ಜೀವನದಲ್ಲಿ ಹಾಸುಹೊಕ್ಕಾಗಿ ಮಿಳಿತಗೊಂಡಿರಬೇಕು. ಆದುದರಿಂದಲೇ ಹಳ್ಳಿಯ ಜೀವನದ ಸರ್ವಮುಖಗಳ ಸತ್ವಪೂರ್ಣ ಹಾಗೂ ಅರ್ಥಗರ್ಭಿತವಾದ ಅಭಿವ್ಯಕ್ತಿ ಕಾವ್ಯದುದ್ದಕ್ಕೂ ಹೊನಲಾಗಿ ಹರಿದಿರುವುದನ್ನು ಕಾಣುತ್ತೇವೆ. ಹಳ್ಳಿಯ ಜೀವನದ ಚೆಲುವು-ಸೌಂದರ್ಯಗಳನ್ನು ನಾವು ಸೂರೆಗೊಂಡು ಆಸ್ವಾದಿಸಬೇಕಾದರೆ, ಹಳ್ಳಿಗರ ಮನೋವೃತ್ತಿಗೆ ಹೊಂದಿಕೊಳ್ಳುವ ಹಾಗೂ ಅವರ ರೀತಿ-ನೀತಿಗಳನ್ನು ಆಸ್ವಾದಿಸುವ ಪ್ರವೃತ್ತಿಯೂ ಕೂಡ ನಮ್ಮದಾಗಿರಬೇಕು. ಪ್ರಸ್ತುತ ಕವನದಲ್ಲಿ ಈ ರೀತಿಯ ಅನುಭವಿಕ ಹೃದಯದ ಸುಂದರವಾದ ಅಭಿವ್ಯಕ್ತಿಯನ್ನು ಕಂಡು ಉಂಡು ತಣಿಯುತ್ತೇವೆ.

ಹಳ್ಳಿಯ ಜೀವನವೆಂದರೆ ಮೂಗುಮುರಿಯುವ ಇಂದಿನ ಆಧುನಿಕ ಮೊನಚು ಪಾದರಕ್ಷೆಯ ಸುಶಿಕ್ಷಿತ ತರುಣ ಪೀಳಿಗೆಗೆ ಈ ಕವನ ಒಂದು ಮಾರ್ಗದರ್ಶನವಾಗಬಲ್ಲ ಹಾಗೂ ಅವರ ಬಾಳನ್ನು ಬಂಗಾರವಾಗಿಸಬಲ್ಲ ಮಂತ್ರಶಕ್ತಿಯನ್ನು ಪಡೆದಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

> "ಹಳ್ಳಿಯ ಜೀವನವು ಎಷ್ಟು ಮಧುರ ನೀ ಬಂದು ನೋಡು ಬೇಗ
> ಇಂದ್ರಲೋಕವಾ ಅಂದ ತುಂಬಿಹುದು............"

ಎಂದು ಕವಿಯು ಹಳ್ಳಿಯನ್ನು ಮಾನವಜನಾಂಗಗಳ ವಿಕಾಸಕ್ಕೆ, ಸಂಸ್ಕೃತಿಗಳ ಅಭ್ಯುದಯಕ್ಕೆ ಕಾರಣೀಭೂತವೆಂದು ಅರ್ಥಪೂರ್ಣವಾಗಿ ಧ್ವನಿಯಿಂದ ನಿನದಿಸುತ್ತ ಸಾಗಿದಾಗ ಕವಿಯೊಂದಿಗೆ ಓದುಗರೂ ತಲೆಬಾಗಿ ಮೌನವಾಗಿ ಒಪ್ಪಿಕೊಳ್ಳುತ್ತೇವೆ. ಈ ಅನುಭವದ ಸತ್ಯಸಾಕ್ಷಾತ್ಕಾರವಾದಾಗ ನಮ್ಮ ಬಿಸಿ

ರಕ್ತದ ತರುಣರ ಅಜ್ಞಾನ ನೀಗಿ, ಮೌಢ್ಯ ಕಳೆದು ಇಂದಿನ ಅವರ ಶೋಚನೀಯ ಪರಿಸ್ಥಿತಿ ಇಲ್ಲವಾಗಿ ಅವರ ಬರಡುಬಾಳು ಚಿಗಿತು ಹಸಿರುಹಸಿರಾಗಲು ಸಹಾಯವಾದೀತೆಂಬ ಆಸೆಯ ಕಿರಣವನ್ನು ನಾವು ಇಲ್ಲಿ ಆಶಿಸಬಹುದಾಗಿದೆ.

ಕವನದ ಭಾಷೆ ಸುಲಲಿತ ಹಾಗೂ ಸ್ಪಷ್ಟ. ಪದಗಳ ಜೋಡಣೆ ಸಹಜ ಸ್ವಾಭಾವಿಕವಾಗಿ ಹೊರಹೊಮ್ಮಿಬಂದುದರಿಂದ ಇಲ್ಲಿ ಪದಗಳಿಗಾಗಿ ಕವಿಯ ತಿಣುಕಾಟ–ಕಸರತ್ತುಗಳು ಕಂಡುಬರುವದಿಲ್ಲ. ಕಾವ್ಯದ ವಸ್ತುವಿಗೆ ತಕ್ಕ ಛಂದಸ್ಸೂ ಕೂಡಿರುವುದರಿಂದ ಪದ್ಯ ಹೃದ್ಯವಾಗಿ ಅಳವಟ್ಟು ಓದುಗರ ಹೃದಯಕ್ಕೆ ಹಸಿರಿನ ತಂಪನ್ನೆರೆದಿರುವುದು ಈ ಕಾವ್ಯದ ವೈಶಿಷ್ಟ್ಯವಾಗಿದೆ ಎಂದು ಮನತುಂಬಿ ಹೇಳಬಹುದಾಗಿದೆ.

‘ಹಸಿರ ಹಾದಿ’ನ ತರುವಾಯದಲ್ಲಿ ಮುಖ್ಯವಾಗಿ ನಮ್ಮ ಮನಸೆಳೆಯುವ ಪದ್ಯವೆಂದರೆ ‘ತಾಯಿ’. ಯಾವಳ ಯೋಗ್ಯತೆ—

“ತಾಯೆ, ನಿನ್ನ ಒಲುಮೆ, ಹಿರಿಮೆ,
ಬಾನಿಗಿಂತ ಎತ್ತರ
ತ್ಯಾಗ ಶಾಂತಿ ಸಹನೆ ಶೀಲ
ಕಡಲಿಗಿಂತ ಬಿತ್ತರ”

ವಾಗಿದೆಯೋ ಅಂತಹ ವ್ಯಕ್ತಿಯ ಋಣಪರಿಹಾರಕ್ಕೆ ಮಾರ್ಗಗಳೇನಾದರೂ ಇವೆಯೇ? ಇರಲಾರವು. ಅದು ವಿಚಾರಕ್ಕೂ ಎಟುಕದ ಮಾತು. ಆದುದರಿಂದ ಅವಳ ಋಣಭಾರವನ್ನು ನೀಗಿಸುವ ವಿಚಾರಕಲ್ಪನಾತೀತವೆನ್ನುವಾಗ ಪ್ರತಿಯೊಬ್ಬ ಓದುಗನಿಗೂ ತನ್ನ ಜನನಿಯ ಬಗೆಗೆ ಕವಿಯ ಹೃದಯದ ಆದರ ಗೌರವಕ್ಕಿಂತ ಇನ್ನೂ ನೂರ್ಪಾಲು ಹೆಚ್ಚಿನ ಗೌರವವನ್ನು ಅಧಿಕಗೊಳಿಸಹತ್ತುತ್ತದೆ.

ಸಂಕಲನದಲ್ಲಿ ಬರುವ ತಿರುಕ, ಹೊಲೆಯನಾರು, ಧನಭ್ರಮೆ, ಚಿಂತೆ–ಚಿತೆ, ಸಂತಾನ–ಸೈತಾನ, ಮುಗಿಲು, ತೇಲಿಬಂದ ಹೆಣದ ಕಥೆ, ಪಾಪ–ಪುಣ್ಯ ಈ ಮೊದಲಾದ ಪದ್ಯಗಳಲ್ಲಿ ಕವಿಯ ಸಾಮಾಜಿಕ ಪ್ರಜ್ಞೆ ಚನ್ನಾಗಿ ಜಾಗ್ರತಗೊಂಡಿರುವುದನ್ನು ಅರಿಯುತ್ತೇವೆ. ಸಮಾಜ ಹಾಗೂ ವ್ಯಕ್ತಿಯಲ್ಲಿರುವ ಅಸಹಾಯಕ ಹೀನಸ್ಥಿತಿ, ಡಂಭಾಚಾರ, ಆತ್ಮವಂಚನೆ ಮೊದಲಾದವುಗಳಿಗೆ ಕವಿಯು “ಕ್ಷ” ಕಿರಣಗಳನ್ನು ಬಿಟ್ಟು ಅವನ್ನು ವಿಡಂಬನಾತ್ಮಕವಾಗಿ ಕಂಡಿದ್ದಾನೆ. ಹೀಗಾಗಿ ವಸ್ತುವಿನಲ್ಲಿರುವ ಸಮಸ್ಯೆಗಳು ಕವಿಯ ಕಾವ್ಯವೆಂಬ ರಾವುಗನ್ನಡಿಯಲ್ಲಿ ಭೂತಾಕಾರವನ್ನು ತಳೆದುದನ್ನು ನೋಡಿದಾಗ ಓದುಗರು ಬೆಚ್ಚಿಬೀಳುವಂತಾಗುತ್ತದೆ. ಕವಿಯ ಗಮನವೆಲ್ಲ ಸತ್ಯದ ಕಡೆಗಿದೆ. ಸತ್ಯವನ್ನು ಜೀರ್ಣಿಸಿಕೊಳ್ಳುವುದು ಎಷ್ಟೋ ಕಠಿಣವೆನ್ನಿಸುತ್ತಿದ್ದರೂ ಅದನ್ನು ಬಚ್ಚಿಡುವುದು ಅಸಾಧ್ಯವೆಂಬ ತರ್ಕ ಕವಿಯದಾಗಿದ್ದಂತೆ ತೋರುತ್ತದೆ.

ಈ ಸಂಕಲನದ ಇನ್ನೊಂದು ಗುಂಪಿನಲ್ಲಿ–ನಾನೆಳೆಯನಲ್ಲ, ಜಾತಸ್ಯ ಮರಣಂ ಧ್ರುವಮ್ ಹಾಗೂ ನಡೆ ಯೋಧ ಮೊದಲಾದವುಗಳನ್ನು ಪರೀಕ್ಷಿಸಬಹುದು. 'ನಾನೆಳೆಯನಲ್ಲ' ಎಂಬ ಪದ್ಯದಲ್ಲಿ—

" ಈ ದೇಶ ಉಳಿಸಿದರೆ ನಮಗೆಲ್ಲ ಉಸಿರು
ಅದು ಹೋದ ಮರುದಿನಕೆ—ಎಲ್ಲಿಹುದು ಉಸಿರು ? "

ಎಂಬ ಪ್ರಶ್ನೆ ಪ್ರತಿಯೊಬ್ಬ ಭಾರತೀಯನಿಗೂ ಅನ್ವಯಿಸಿ ಕೇಳಿದುದಾಗಿದೆ. ಆದುದರಿಂದ ಪ್ರತಿಯೊಬ್ಬ ಪ್ರಜೆಯಲ್ಲಿಯೂ ರಾಷ್ಟ್ರದ ಮರ್ಯಾದೆಯೇ ತನ್ನ ಮರ್ಯಾದೆಯೆಂಬ ಜಾಜ್ವಲ್ಯಮಾನವಾದ ರಾಷ್ಟ್ರಾಭಿಮಾನ ತುಂಬಿ ಬರ-ಬೇಕೆಂಬುದೇ ಕವಿಯ ಆಶಯ. ಚೀಣೀಯರ ಹಾಗೂ ಪಾಕಿಸ್ತಾನಿಗಳ ಆಕ್ರಮಣ ಇಡೀ ಭಾರತದ ನಾಗರಿಕರ ಕಣ್ಣು ತೆರೆಯುವಂತೆ ಮಾಡಿದುದನ್ನು ಇಲ್ಲಿ ನೆನೆಯಬಹುದು.

ಈ ಮೇಲೆ ಉದಹರಿಸಿದ ಪದ್ಯಗಳಲ್ಲದೇ ಇನ್ನೂ ಕೆಲವು ಸಾಮಾನ್ಯ ಪದ್ಯಗಳೂ ಮಾಮೂಲಾಗಿ ಸೇರಿಕೊಂಡಿವೆ. ಕವನಸಂಕಲನದಲ್ಲಿ ಹಿರಿಯ ಗುಣಗಳಿದ್ದಂತೆ ಅಲ್ಲಲ್ಲಿ ಅಲ್ಪದೋಷಗಳು ಸೇರಿಕೊಂಡಿರುವುದನ್ನು ಉಪೇಕ್ಷೆಮಾಡಲು ಬರುವಂತಿಲ್ಲ. ವಸ್ತುಗಳ ವಿಷಯದಲ್ಲಿ ಸಾಕಷ್ಟು ವೈವಿಧ್ಯತೆ ಇದೆಯಾದರೂ ಕೆಲವೊಮ್ಮೆ ವಿಚಾರಧಾರೆಯಲ್ಲಿ ಹೊಸತನ ಕಾಣುವುದಿಲ್ಲ ಭಾವನೆಗಳ ಮಿಡಿತ ಎಲ್ಲದರಲ್ಲಿಯೂ ಒಂದೇ ತೆರನಾಗಿ ವೇಷ ಮರೆಯಿಸಿಕೊಂಡು ಬಂದು ಸುಳಿಯುತ್ತದೆ.

ಈ ರೀತಿಯ ಅಲ್ಪದೋಷಗಳನ್ನು ಹಿಂದಿರಿಸಿ, ಈ ಸಂಕಲನವನ್ನು ಪರಾಮರ್ಶಿಸಿದಾಗ ಕವಿ ಮುದ್ದೇಬಿಹಾಳರು ಒಬ್ಬ ಪ್ರಾಂಜಲಹೃದಯದ ಪ್ರತಿಭಾನ್ವಿತ ಕವಿಯಾಗಬಲ್ಲರೆಂಬುದನ್ನು ಅವರ 'ಹಸಿರು ಹಾಡು' ತೋರಿಸಿಕೊಟ್ಟಿದೆ.

ಅವರ ಸಹಜವಾದ ಕಾವ್ಯಾಭಿವ್ಯಕ್ತಿಯನ್ನೊಳಗೊಂಡ ಕಾವ್ಯಗಂಗೆಯಿಂದ ಬಂಜರುಪ್ರದೇಶದಂತಿದ್ದ ಓದುಗರ ಹೃದಯಗಳಲ್ಲಿಯೂ ಹಸಿರು ಕಂಗೊಳಿಸುವಂತಾಗಬಹುದೆಂದು ಈ ಸಂದರ್ಭದಲ್ಲಿ ಆಶಿಸಬಹುದಾಗಿದೆ.

ಬಾಳು ಬಂಗಾರ (ಲಲಿತ ಪ್ರಬಂಧ ಸಂಕಲನ): ಲೇಖಕರು : ಎಸ್. ವೇಣುಗೋಪಾಲರಾವ್. ಪ್ರಕಾಶನ: ಸುಜಾತ ಸಾಹಿತ್ಯ, ಶಿವಮೊಗ್ಗ. ಬೆಲೆ: ೧–೫೦. ೧೯೭೦.

'ಬಾಳು ಬಂಗಾರ' ಇದೊಂದು ಚಿಕ್ಕ ಹದಿನಾರು ಲಲಿತ ಪ್ರಬಂಧಗಳನ್ನೊಳಗೊಂಡ ಸಂಕಲನ ಗ್ರಂಥ. ಲೇಖಕರೇ ಹೇಳಿಕೊಳ್ಳುವಂತೆ ಈ ಲೇಖನಗಳು

ಸುಮಾರು ಹತ್ತು ವರ್ಷಗಳ ಗಡುವಿನಲ್ಲಿ ಬರೆದವುಗಳಾಗಿರುವುದರಿಂದ ಅವರ ಆಯುಷ್ಯದ ಬೆಳವಣಿಗೆಯ ಜೊತೆಗೆ, ಅವರ ಬುದ್ಧಿಮತ್ತೆಯ ಹಾಗೂ ಚಿಂತನದ ರೀತಿನೀತಿಗಳಲ್ಲಿಯೂ ವಿಕಾಸವಾಗುತ್ತ ಸಾಗಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ.

'ಸಾಗರ' ಪ್ರಬಂಧಸಂಕಲನದ ಮೊದಲನೆಯ ಲೇಖನ. ವಿಶಾಲವಾಗಿ ಪಸರಿಸಿರುವ ಸಮುದ್ರರಾಜನ ಭೋರ್ಗರೆಯುವ ಅಲೆಗಳ ಎದುರು ಹೋಗಿ ನಿಂತಾಗ, ಉಕ್ಕಿ ಅಪ್ಪಳಿಸುವ ತೆರೆಗಳು ಸಮುದ್ರರಾಜನ ಮಹಾವೈಭವವನ್ನು ಎತ್ತಿತೋರಿಸುವಂತೆ ಲೇಖಕರ ಅನುಭವದ ತೆರೆಗಳು ಹೇಗೆ ಉಕ್ಕಿ ಅಪ್ಪಳಿಸುತ್ತವೆಯೆಂಬುದನ್ನು ಓದುಗರು ಅರಿತುಕೊಳ್ಳಬಹುದು. ಸಮುದ್ರರಾಜನ ವೈಭವಯುಕ್ತ ತೆರೆಗಳು ಮಾನವರ ಬಾಳಿಗೆ ಏನಾದರೂ ಭವ್ಯವಾದ ಸಂದೇಶಗಳನ್ನು ಕೊಡುತ್ತವೆಯೇ? ಎಂಬುದೇ ಲೇಖಕರ ಮೊದಲ ತೆರೆಯ ಅಪ್ಪಳಿಸುವಿಕೆಯಾಗಿದೆ. ನಮ್ಮ ಭಾರತೀಯ ಸಂಸ್ಕೃತಿಯ ಶಿಷ್ಟಸಂಪ್ರದಾಯದಂತೆ ಲೇಖಕರ ವಯಸ್ಸು, ಹೃದಯಗಳೆರಡೂ ಆಧ್ಯಾತ್ಮದತ್ತ ತಿರುಗಿ ಮೇಲಿನ ಪ್ರಶ್ನೆ ಮಾಡುತ್ತ ಅದಕ್ಕೆ ಉತ್ತರವನ್ನು ಕಂಡುಕೊಳ್ಳಲಿಕ್ಕೆ ಹವಣಿಸುತ್ತವೆ.

"ಜೀವಾತ್ಮನ ದಾರಿ ಎಂದೂ ಪರಮಾತ್ಮನನ್ನು ಕುರಿತದ್ದೇ......ಬದುಕಿದರೆ ತುಂಗೆ(ತುಂಗಾ ನದಿ)ಯಂತೆ ಬದುಕಬೇಕು" ಎಂದು ಉತ್ತರವನ್ನು ಕಂಡುಕೊಳ್ಳುವಾಗ ತಮ್ಮ ಬಾಲ್ಯದಿಂದಲೂ ಜೀವನಸಂಗಾತಿ ಎನ್ನಿಸಿದ, ಹಾಗೂ ತಮ್ಮ ಮನಃಪಟಲದ ಮೇಲೆ ಅಚ್ಚೊತ್ತಿ ಪ್ರಭಾವ ಬೀರಿ ನಿಂತಿರುವ ತುಂಗೆಯ ಸಹಚರ್ಯೆಯನ್ನು ಬಯಸುತ್ತಾರೆ. ಅವ್ಯಕ್ತ ಮಧುರ ಗಾನವನ್ನು ಹಾಡುತ್ತ, ತಪ್ತ ಹೃದಯಗಳಿಗೆ ಶಾಂತಿಯನ್ನು ಕೊಡಬಲ್ಲ ತುಂಗೆಯ ಜೀವನವೇ ಸಮುದ್ರರಾಜನ ವೈಭವಯುತ ಜೀವನಕ್ಕಿಂತ ಮೇಲೆಂದು ಹೇಳುವಾಗ ಜೀವನಕ್ಕೊಂದು ಆದರ್ಶಯುತವಾದ ಉದ್ದೇಶ ಅವಶ್ಯವಾಗಿ ಬೇಕೆಂದು ಸೂಕ್ತವಾಗಿ ಸೂಚಿಸುತ್ತಾರೆ.

ಮಾನವನ ಓದುಬರೆಹಗಳು ವಿಸ್ತಾರಗೊಳ್ಳುತ್ತ ಹೋದಂತೆ ಆತನ ಅನುಭವವೂ ವಿಸ್ತಾರಗೊಳ್ಳುತ್ತ ಹೋಗುತ್ತದೆ. ಜೊತೆಗೆ ಆತನ ಸ್ವತಂತ್ರ ವಿಚಾರಶಕ್ತಿಯೂ ಬೆಳೆದು ನಿಂತಾಗ ಜೀವನವನ್ನು ಕಾಣುವ, ನೋಡುವ ರೀತಿಯೂ ಕೂಡ ಅರ್ಥಪೂರ್ಣವಾಗುತ್ತದೆ ಎಂಬುದನ್ನು ಅವರ ಇನ್ನೊಂದು ಲೇಖನವಾದ 'ಬಾಳು ಬಂಗಾರ'ದಲ್ಲಿ ಕಾಣುತ್ತೇವೆ. ಲೇಖಕರ ಜೀವನದ ಸಾರಸರ್ವಸ್ವವೇ ಇಲ್ಲಿ ಮೈಗೂಡಿ ಸೌಂದರ್ಯರೂಪವನ್ನು ತಾಳಿ ನಿಂತಿರಬೇಕೆಂದು ಅನ್ನಿಸುತ್ತದೆ. ಪ್ರಪಂಚವನ್ನು ಪ್ರೀತಿಸಲು ಕಲಿಯುವವರಿಗೆ ಬಾಳು 'ಸುಂದರ ಪ್ರಭಾತದಲ್ಲಿ ಅರಳಿ, ಕಿಲಕಿಲ ನಗುವ ಹೂವಾಗುತ್ತದೆ. ಯಾರು ಇದನ್ನು ಅನುಕಂಪ, ವಾತ್ಸಲ್ಯಗಳಿಂದ ಕಾಣುವುದಿಲ್ಲವೋ ಅನಂದಮಯನಾದ

ಸೃಷ್ಟಿಕರ್ತನು ಬಾಳಿನ ಬೀದಿಬೀದಿಯಲ್ಲಿಯೂ ಔದಾರ್ಯದಿಂದ ಎರಚಿರುವ ಸೌಂದರ್ಯಸುಖಗಳು ಎರವಾಗಿ ತಮ್ಮ ಜೀವನವನ್ನು ದುಃಖಮಯವಾಗಿಸಿ ಕೊಳ್ಳುತ್ತಾರೆ' ಎಂಬುದು ಲೇಖಕರ ಜೀವನದ ಸೌಂದರ್ಯಪ್ರಜ್ಞೆಯಾಗಿ ತೋರಿದೆ. ಅವರು ತಮ್ಮ ನಿರೂಪಣೆಯನ್ನು ಇನ್ನೂ ಸ್ಪಷ್ಟಗೊಳಿಸುವಾಗ —

"ಜೀವನವನ್ನು ನಮ್ಮ ಪೂರ್ವಿಕರು ಅಶಾಶ್ವತ, ನೀರ ಮೇಲಣ ಗುಳ್ಳೆಯೆಂದು ಹೇಳಿದ್ದರೂ ಕೂಡ ಅದನ್ನು ಸಂಪೂರ್ಣ ನಿರ್ಲಕ್ಷಿಸಿರಲಿಲ್ಲವೆಂಬುದಕ್ಕೆ ಕನ್ನಡದ ಮಹಾಕವಿ ಪಂಪನೇ ಸಾಕ್ಷಿ. ಪಂಪನು ವಿರಕ್ತಿಯನ್ನು ಮೆಚ್ಚಿಕೊಂಡು ಆದಿಪುರಾಣವನ್ನು (ಸೋದರರೊಳ್ ಸೋದರರಂ ಕಾದಿಸುವ ರಾಜ್ಯದಾಹದ ಬಗ್ಗೆ ವಿರಕ್ತಿಗೊಂಡಿದ್ದರೂ) ಬರೆದಿದ್ದರೂ ಕೂಡ ಜೀವನ ಸೌಂದರ್ಯಕ್ಕೆ ಅವನೆಂದೂ ಕುರುಡಾಗಿರಲಿಲ್ಲ. ಪಂಪನ ಹೃದಯ ಮುಖ್ಯವಾಗಿ ಕವಿ ಹೃದಯ. ಆದುದರಿಂದಲೇ ಅವನು ತನ್ನ ಇನ್ನೊಂದು ಕಾವ್ಯ 'ವಿಕ್ರಮಾರ್ಜುನವಿಜಯ'ದಲ್ಲಿ ಬರುವ "ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ಬನವಾಸಿದೇಶದೊಳ್" ಎಂಬ ಹೇಳಿಕೆ ಏನನ್ನು ಸೂಚಿಸುತ್ತದೆ? ಕೇವಲ ವಿರಕ್ತಿ ಮಾತ್ರವನ್ನೆಯೋ ಇಲ್ಲವೇ....? ಎಂಬುದು ಲೇಖಕರ ಪ್ರಶ್ನೆ.

ಇದಲ್ಲದೆ "ಜಗತ್ತು ಮಾಯೆ ಬ್ರಹ್ಮ ಒಂದೇ ಸತ್ಯ" ಎಂದು ಹೇಳಿದ, 'ನ ಭೂತೋ ನ ಭವಿಷ್ಯತಿ' ಎಂಬಂತೆ ಮಾಯೆಯನ್ನು ವರ್ಣಿಸಿದ ಶಂಕರಾಚಾರ್ಯರೂ ಕೂಡ ತಮ್ಮ "ಅನ್ನಪೂರ್ಣಾಸ್ತುತಿ"ಯಲ್ಲಿ ಅವರು ಹರಿಯಿಸಿದ ಸೌಂದರ್ಯಲಹರಿ ಹುಚ್ಚೆದ್ದು ಕುಣಿಯುತ್ತದೆ. ಏಕೆ ಹೀಗೆ ವರ್ಣಿಸಬೇಕಿತ್ತು? ಎಂಬುದು ಲೇಖಕರ ಮತ್ತೊಂದು ಪ್ರಶ್ನೆ. ಕಾರಣ ಶಂಕರರೂ ಕೂಡ ಜಗತ್ತಿನ ನಶ್ವರತೆ ಮಾಯೆಯನ್ನು ಹೇಳುವುದರ ಜೊತೆಗೆ ಲೋಕವನ್ನು ಅಪಾರ ಅನುಕಂಪದಿಂದ ವಾತ್ಸಲ್ಯ ಹಾಗೂ ಆಸಕ್ತಿಯಿಂದ ಕಂಡುಂಡ ಕವಿಯಾಗಿದ್ದರೆಂದೇ ಲೇಖಕರ ನಿರ್ಧಾರಪೂರ್ಣವಾದ ವಾದ.

ಇದೊಂದು ಸಂಕಲನದ ಅತ್ಯಂತ ಸುಂದರವಾದ ತರ್ಕಬದ್ಧವಾದ ಹಾಗೂ ಪ್ರಭಾವಿತವಾದ ಪ್ರಬಂಧವೆನ್ನಲೇಬೇಕು. ಇಲ್ಲಿ ಲೇಖಕರು ಜೀವನಸೌಂದರ್ಯವನ್ನು ಮೆಚ್ಚಿ ನಿರೂಪಿಸಿದ ವೈಖರಿ, ಅವರ ಶೈಲಿಗಳಿಗೆ ಗಂಭೀರವಾದ ಅರ್ಥಪೂರ್ಣತೆ ಒದಗಿದೆ.

ಸಾನುಕ್ರೋಶತೆ, ನುಡಿದರೆ ಮುತ್ತಿನ ಹಾರದಂತಿರಬೇಕು, ಸತ್ಯಂ ವದ, ಎರಡು ನೆನಪುಗಳು, ಈ ಮೊದಲಾದ ಪ್ರಬಂಧಗಳಲ್ಲಿ ಲೇಖಕರು ಸಮಾಜದ ಭಿನ್ನ ಭಿನ್ನ ವ್ಯಕ್ತಿಗಳ ಚಿತ್ತಪ್ರವೃತ್ತಿಗಳನ್ನು ಹಾಗೂ ಒಮ್ಮೊಮ್ಮೆ ಇಡೀ ಸಮಾಜದ ಪ್ರವೃತ್ತಿಗಳನ್ನು ವಿಡಂಬನೆಗೈದಿದ್ದಾರೆ. ಅವರ ವಿಡಂಬನೆಯಲ್ಲಿ ಕೇವಲ ಅಪಹಾಸ್ಯದ ನಗೆ ಮಾತ್ರ ಇಲ್ಲ, ಆದರೆ ಜೊತೆಗೆ ಅಂತಹ ದೋಷಗಳ ಬಗ್ಗೆ ಅವರ ಅನುಕಂಪ, ಮರುಕವೂ ಕೂಡ ಅಷ್ಟೇ ತೀವ್ರವಾಗಿ ವ್ಯಕ್ತಗೊಂಡಿ

ರುವುದರಿಂದ ಆ ವಿಷಯುಗಳ ಬಗೆಗೆ ಓದುಗರ ಹೃದಯುಗಳೂ ಅಂತೆಯೇ ಮಿಡಿಯುತ್ತವೆ.

ಈ ಪ್ರಬಂಧಗಳಲ್ಲದೆ ಇನ್ನೂ ಹಲವು ಪ್ರಬಂಧಗಳು ಲೇಖಕರ ಬಹುಮುಖವಾದ ವಿಚಾರಸರಣಿಯುನ್ನು ಎತ್ತಿ ತೋರಿಸಿವೆ. ವಸ್ತುವು ನಮಗೆ ಎಷ್ಟೇ ಚಿಕ್ಕದಾಗಿ ಕಾಣುತ್ತಿರಬಹುದು, ಅದನ್ನು ನಾವು ಔದಾಸೀನ್ಯದಿಂದ ಕಡೆಗಣಿಸಬಹುದೆಂದು ಎಣಿಸಲೂಬಹುದು. ಆದರೆ ಅದನ್ನೇ ಲೇಖಕರು ತಮ್ಮ ಜಿಜ್ಞಾಸೆಯಿಂದ ಕಂಡು ಕುತೂಹಲವನ್ನು ಓದುಗರಲ್ಲಿಯೂ ಕೆರಳಿಸಿ ಅವರನ್ನು ಓದಲಿಕ್ಕೆ ಹಚ್ಚುವ ಅವರ ಶೈಲಿಯ ಗುಣ ಇಲ್ಲಿಯ ಹಿರಿಯ ಗುಣ.

ಲಲಿತಪ್ರಬಂಧದ ವೈಶಿಷ್ಟ್ಯತೆ ಇರುವುದು ವಿಷಯನಿರೂಪಣೆಯಲ್ಲಿ ಹೊರತು ವಸ್ತುವಿನಲ್ಲಲ್ಲ. ಈ ಹಿನ್ನೆಲೆಯಲ್ಲಿ ನೋಡಿದಾಗಲೂ ಕೂಡ ಲೇಖಕರು ಪ್ರಬಂಧಗಳ ಗೌರವವನ್ನು ತಮ್ಮ ಸರಳ-ಪ್ರಾಮಾಣಿಕ ಹಾಗೂ ಸೈಜವಾದ ಅಭಿವ್ಯಕ್ತಿಯಿಂದ ಕಾಯ್ದುಕೊಂಡುಬಂದಿರುವುದರಿಂದ ಅಭಿನಂದನಾರ್ಹರಾಗಿದ್ದಾರೆ.

★ ಪಿ. ಎಸ್. ಯಾದವಾಡ

ಕನ್ನಡ ಲಿಪಿಯ ಉಗಮ ಮತ್ತು ವಿಕಾಸ : ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು. ಬೆಲೆ : ಸಾದಾ ಪ್ರತಿ ೫-೫೦, ಉತ್ತಮ ಪ್ರತಿ ೭-೫೦.

ಲಿಪಿಶಾಸ್ತ್ರದ ಮೇಲೆ ಕನ್ನಡದಲ್ಲಿ ಗ್ರಂಥಗಳಿಲ್ಲವೇ ಇಲ್ಲ ಎಂಬ ದೃಷ್ಟಿಯಿಂದ ಪ್ರಸ್ತುತ '**ಕನ್ನಡ ಲಿಪಿಯ ಉಗಮ ಮತ್ತು ವಿಕಾಸ**' ಸ್ವಾಗತಾರ್ಹವಾಗಿದೆ. ಈ ಚಿಕ್ಕ ಗ್ರಂಥದಲ್ಲಿ ಲೇಖಕರು ಪ್ರಾಚೀನ ಭಾರತೀಯ ಲಿಪಿ ಮತ್ತು ಮುಖ್ಯವಾಗಿ ಕನ್ನಡಲಿಪಿಯ ಬಗ್ಗೆ ಶ್ರಮವಹಿಸಿ ಮಾಹಿತಿಯನ್ನು ಸಂಗ್ರಹಿಸಿ ಹಲವಾರು ವಿಷಯಗಳನ್ನು ನಿರೂಪಿಸಿದ್ದಾರೆ. ಈ ಗ್ರಂಥದ ಮೊದಲ ೧೫ ಪುಟಗಳಲ್ಲಿ ಅಡಕವಾದ ಮೂರು ಅಧ್ಯಾಯಗಳು ಭಾರತದಲ್ಲಿ ಲೇಖನಕಲೆಯ ಪ್ರಾಚೀನತೆ, ಲಿಪಿಗಳ ಉತ್ಪತ್ತಿ ಮತ್ತು ಲೇಖನಕಲೆ, ಮತ್ತು ಸಾಮಗ್ರಿಗಳು ಎಂಬ ವಿಷಯಗಳಿಗೆ ಮೀಸಲಾಗಿವೆ. ನಾಲ್ಕನೆಯ ಅಧ್ಯಾಯವು ಲಿಪಿ ಬದಲಾವಣೆಯನ್ನು ಕುರಿತಾಗಿದೆ. ಐದನೆಯ ಅಧ್ಯಾಯದಲ್ಲಿ ವರ್ಣಮಾಲೆಯ ಒಂದೊಂದು ಅಕ್ಷರವೂ ವಿಕಾಸಗೊಂಡ ಬಗೆಯನ್ನು ವಿವರಣೆಗಳೊಂದಿಗೆ ಚಿತ್ರಿಸಲಾಗಿದೆ. ಆರನೆಯ ಅಧ್ಯಾಯದಲ್ಲಿಯೂ ಇದೇ ಬಗೆಯಾಗಿ ಕಾಗುಣಿತಗಳ ವಿಕಾಸವನ್ನು ತೋರಿಸಲಾಗಿದೆ. ಮುಂದಿನ ಮೂರು ಪುಟಗಳಲ್ಲಿ

ಕನ್ನಡ ಸಂಖ್ಯೆಗಳ ಬಗ್ಗೆ ಚರ್ಚಿಸಲಾಗಿದೆ. ಕೊನೆಯಲ್ಲಿ ಕ್ರಿ.ಪೂ. ಮೂರನೆಯ ಶತಮಾನದಿಂದ ಹದಿನೆಂಟನೆಯ ಶತಮಾನದವರೆಗಿನ ಬೇರೆ ಬೇರೆ ಕಾಲಗಳಲ್ಲಿ ಬರೆದ ಶಾಸನಗಳ ಪ್ರತಿಕೃತಿಗಳಿವೆ.

ಪಠ್ಯಪುಸ್ತಕವೆಂಬ ದೃಷ್ಟಿಯಿಂದ ಇಲ್ಲಿ ವಿಷಯವನ್ನು ಸಂಕ್ಷೇಪವಾಗಿ ಕೊಡಲು ಯತ್ನಿಸಿದೆಯಾದರೂ ವಿಷಯಪರಿಜ್ಞಾನದ ದೃಷ್ಟಿಯಿಂದ ಇದು ಬಹಳ ಅಪೂರ್ಣವೆನಿಸುತ್ತದೆ. ಪಠ್ಯಪುಸ್ತಕವೆಂದಮಾತ್ರಕ್ಕೆ ಇದರಲ್ಲಿ ವಿದ್ಯಾರ್ಥಿಯು ಪರೀಕ್ಷೆಗೋಸ್ಕರ ಮಾತ್ರ ನೆನಪಿಡಬೇಕಾದ ಕೆಲ ವಿಷಯಗಳಿದ್ದರೆ ಸಾಲದು. ಸ್ವಲ್ಪದರಲ್ಲಿಯೇ ವಿಷಯವನ್ನು ಚೆನ್ನಾಗಿ ತಿಳಿದುಕೊಳ್ಳಲು ಸಾಧ್ಯವಾಗುವಷ್ಟು ವಿವರಗಳಾದರೂ ಅಲ್ಲಿರಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಪುಸ್ತಕದಲ್ಲಿನ ಕೊರತೆ ಎದ್ದುಕಾಣುತ್ತದೆ. ಉದಾಹರಣೆಗೆ—ಲೇಖನಕಲೆಯ ಪ್ರಾಚೀನತೆ ಮತ್ತು ಲಿಪಿಗಳ ಉತ್ಪತ್ತಿಯಂತಹ ಮಹತ್ವದ ವಿಷಯಗಳು ಕೇವಲ ಹತ್ತು ಪುಟಗಳಲ್ಲಿ ಚರ್ಚಿತವಾಗಿವೆ. ಆದ್ದರಿಂದ ಇಲ್ಲಿ ಅಗತ್ಯವಿದ್ದ ಅನೇಕ ವಿವರಗಳು ಬಿಟ್ಟುಹೋಗಿವೆ. ಬ್ರಾಹ್ಮೀಲಿಪಿಯ ಉತ್ಪತ್ತಿಯ ಬಗ್ಗೆ ಇದ್ದ ವಿವಿಧ ಸಿದ್ಧಾಂತಗಳನ್ನು ಇಲ್ಲಿ ಸೂಚಿಸಿದ್ದಾರಾದರೂ ಈ ಬಗ್ಗೆ ವಿವರಗಳು ಅಗತ್ಯವಾಗಿದ್ದವು. ಬ್ರಾಹ್ಮೀಲಿಪಿಯ ಉತ್ಪತ್ತಿಗೆ ಸೆಮೆಟಿಕ್, ಫಿನಿಷಿಯನ್, ಅರಮೈಕ್ ಮುಂತಾದ ಲಿಪಿಗಳೇ ಕಾರಣವೆಂದು ಹಲವಾರು ವಿದ್ವಾಂಸರ ಅಭಿಪ್ರಾಯಗಳನ್ನು ಇಲ್ಲಿ ಸೂಚಿಸಿದ್ದಾರೆ. ಆದರೆ ಈ ವಿದ್ವಾಂಸರ ಇಂತಹ ಅಭಿಪ್ರಾಯಗಳಿಗೆ ಆಧಾರಗಳೇನೆಂಬುದನ್ನು ಸಂಕ್ಷಿಪ್ತವಾಗಿಯಾದರೂ ವಿವರಿಸಿದ್ದರೆ ವಿದ್ಯಾರ್ಥಿಗೆ ಆವಶ್ಯಕವಾದ ಮಾಹಿತಿಯನ್ನು ಒದಗಿಸಿಕೊಟ್ಟಂತಾಗುತ್ತಿತ್ತು. ಈ ದೃಷ್ಟಿಯಿಂದ ಅಕಾರಾದಿ ಕನ್ನಡಕ್ಷರಗಳ ಬೆಳವಣಿಗೆಯನ್ನು ಕುರಿತ ೬೮ ಪುಟಗಳ ಐದನೆಯ ಅಧ್ಯಾಯ ಅತಿ ವಿಸ್ತಾರವಾಯಿತೆನಿಸುವುದು. ಇಲ್ಲಿ ತೋರಿಸಿದಂತೆ ಪ್ರತಿಯೊಂದು ಅಕ್ಷರವೂ ಕಾಲಕಾಲಕ್ಕೆ ಬೆಳವಣಿಗೆ ಹೊಂದಿದ ಬಗೆಯನ್ನು ಶ್ರೀ ಸಿ. ಶಿವರಾಮಮೂರ್ತಿಯವರು ಚಿತ್ರಗಳ ಮೂಲಕ ತಮ್ಮ 'Indian Epigraphy and South Indian Scripts' ಎಂಬ ಗ್ರಂಥದಲ್ಲಿ ಈಗಾಗಲೇ ತೋರಿಸಿದ್ದಾರೆ. ಈ ಅಧ್ಯಾಯದಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಅಕ್ಷರಗಳ ಬೆಳವಣಿಗೆಯ ಹಂತಗಳನ್ನು ತೋರಿಸುವ ಕಾಲವಿಭಾಗ. ಅಕ್ಷರಗಳ ಬೆಳವಣಿಗೆಯನ್ನು ಶತಮಾನಗಳಿಗನುಗುಣವಾಗಿ ತೋರಿಸಿದ್ದಾರಾದರೂ ಆ ಹಂತಗಳಿಗೆ ಚಾಲುಕ್ಯ ಲಿಪಿ, ಕಲಚುರಿ ಲಿಪಿ, ಹೊಯ್ಸಳ ಲಿಪಿಯೆಂದು ಮುಂತಾಗಿ ಕರೆದುದು ಸಮಂಜಸವಲ್ಲ. ಯಾಕೆಂದರೆ ಒಂದೇ ಶತಮಾನದಲ್ಲಿಯೇ, ಉದಾಹರಣೆಗೆ ಹನ್ನೆರಡನೆಯ ಶತಮಾನದಲ್ಲಿಯೇ ಈ ಮೂರು ಮನೆತನಗಳ ಶಾಸನಗಳು ಇದ್ದುದಲ್ಲದೆ, ಆ ಶಾಸನಗಳ ಅಕ್ಷರಮಾಟಿಕೆಯಲ್ಲಿ ಬದಲಾವಣೆ ತೋರುವುದಿಲ್ಲ. ಅಲ್ಲದೆ, ಹೀಗೆ ಹೆಸರಿಸುವುದರಿಂದ ಕಲಚುರಿ, ಹೊಯ್ಸಳ

ಲಿಪಿಗಳು ಚಾಲುಕ್ಯರನಂತರವೇ ಬಂದವುಗಳೆಂಬ ತಪ್ಪು ಕಲ್ಪನೆ ಉಂಟಾಗುವ ಸಂಭವವಿದೆ. ಆದ್ದರಿಂದ ಲಿಪಿಗಳಿಗೆ ರಾಜಮನೆತನಗಳ ಹೆಸರುಗಳನ್ನು ಕೊಡುವುದರ ಬದಲು ಅವುಗಳನ್ನು ಶತಮಾನಗಳಿಗನುಗುಣವಾಗಿ ತೋರಿಸುವುದು ಹೆಚ್ಚು ಶಾಸ್ತ್ರೀಯವಾದುದು. ಸಂಖ್ಯೆಗಳಿಗೆ ಸಂಬಂಧಿಸಿದ ಬೆಳವಣಿಗೆಯ ಅಧ್ಯಾಯವಂತೂ ತೀರ ಸಂಕ್ಷಿಪ್ತವಾಗಿದೆ. ಸಂಖ್ಯೆಗಳಿಗಾಗಿ ಅಕ್ಷರಗಳ ಸಂಕೇತವನ್ನು ಬಳಸುವುದೂ ಅಥವಾ ವಿವಿಧ ಶಬ್ದಗಳಿಂದ ಅಂಕೆಗಳನ್ನು ಸೂಚಿಸುವುದೂ ಮುಂತಾದ ಬೇರೆ ಬೇರೆ ಪದ್ಧತಿಗಳ ಪರಿಚಯ ಇಲ್ಲದಿದ್ದರೆ ಚೆನ್ನಾಗಿರುತ್ತಿತ್ತು.

ಪೀಠಿಕೆಯಲ್ಲಿ ಕನ್ನಡ ಶಾಸನಗಳ ಅಧ್ಯಯನದ ಸಂಬಂಧದಲ್ಲಿ ಗ್ರಂಥಕರ್ತರು ಲೂಯಿ ರೈಸರನ್ನು ಕುರಿತು ಈ ರೀತಿ ಹೇಳಿದ್ದಾರೆ: "**ಈತನು ಕರ್ನಾಟಕದ ಮೂಲೆ ಮೂಲೆಗಳಲ್ಲಿ** ಅಡಗಿದ್ದ ಸುಮಾರು ೧೧,೦೦೦ ಶಾಸನಗಳನ್ನು ಓದಿ, ಅಭ್ಯಾಸ ಮಾಡಿ, 'ಎಪಿಗ್ರಾಫಿಯ ಕರ್ನಾಟಿಕ' ಎಂಬ ಹನ್ನೆರಡು ಹೊತ್ತಿಗೆಗಳನ್ನು ಪ್ರಕಟಿಸಿದನು." ರೈಸರ ಕಾರ್ಯವ್ಯಾಪ್ತಿ ಈಗಿನ ಕರ್ನಾಟಕದ ದಕ್ಷಿಣ ಭಾಗಕ್ಕೆ ಅಂದರೆ ಹಳೆಯ ಮೈಸೂರು ಸಂಸ್ಥಾನಕ್ಕೆ ಮಾತ್ರ ಸೀಮಿತವಾಗಿದ್ದಿತೆಂಬುದು ಮತ್ತು Epigraphia Carnaticaದ ಹನ್ನೆರಡು ಹೊತ್ತಿಗೆಗಳಲ್ಲಿ ಈ ಭಾಗದ ಶಾಸನಗಳು ಮಾತ್ರ ಅಡಕವಾಗಿವೆಯೆಂಬುದು ಎಲ್ಲರಿಗೂ ತಿಳಿದ ವಿಷಯ. ಈ ವಾಕ್ಯವನ್ನೂ, ಇದರ ಮುಂದಿನ ಇನ್ನೆರಡು ವಾಕ್ಯಗಳನ್ನೂ ಓದಿದರೆ, ಈ ಸಂಸ್ಥಾನವೇ ಕರ್ನಾಟಕವೆಂದು ಲೇಖಕರು ತಿಳಿದುಕೊಂಡಿದ್ದಂತೆ ತೋರುತ್ತದೆ. ಕರ್ನಾಟಕದಲ್ಲಿ ಇನ್ನೂ ಬೇರೆ ಬೇರೆ ಜಿಲ್ಲೆಗಳಿದ್ದುದೂ, ಅಲ್ಲಿ ಸಾವಿರಾರು ಶಾಸನಗಳಿದ್ದುದೂ, ಅಂತಹ ಅನೇಕ ಶಾಸನಗಳು South Indian Inscriptions, Karnatak Inscriptions ಮುಂತಾದ ಸಂಪುಟಗಳಲ್ಲಿ ಪ್ರಕಟವಾಗಿದ್ದುದೂ ಮತ್ತು ಲೇಖಕರು ಹೆಸರಿಸಿದವರಲ್ಲದೆ ಇನ್ನೂ ಇತರ ವಿದ್ವಾಂಸರೂ ಈ ದಿಸೆಯಲ್ಲಿ ಮಾಡಿದ ಸ್ತುತ್ಯ ಕಾರ್ಯವು ಈ ಗ್ರಂಥಕರ್ತರ ಗಮನಕ್ಕೆ ಬಾರದಿದ್ದುದು ಆಶ್ಚರ್ಯಕರವಲ್ಲದೆ ವಿಷಾದಕರವೂ ಹೌದು.

ಹೀಗೆಂದಮಾತ್ರಕ್ಕೆ ಪುಸ್ತಕದ ಬೆಲೆಯನ್ನು ಅಲ್ಲಗಳೆಯುತ್ತೇವೆಂದಲ್ಲ. ಹಲವಾರು ಇಂಗ್ಲೀಷ್ ಗ್ರಂಥಗಳಲ್ಲಿ ಇದ್ದ ವಿಪುಲವಾದ ವಿಷಯವನ್ನು ಸಂಗ್ರಹಿಸಿ ಸಂಕ್ಷೇಪವಾಗಿ ತಿಳಿಯಾದ ಭಾಷೆಯಲ್ಲಿ ನಿರೂಪಿಸಿದುದು ಅಭಿನಂದನೀಯವೇ ಸರಿ. ಇದೇ ಲೇಖಕರಿಂದ ಈ ವಿಷಯದ ಬಗ್ಗೆ ಇನ್ನೊಂದು ಅಭ್ಯಾಸಪೂರ್ಣವಾದ ಗ್ರಂಥವು ಹೊರಬಂದು ಈಗಿದ್ದ ಕೊರತೆಯನ್ನು ನಿವಾರಿಸಲೆಂದು ಹಾರೈಸುತ್ತೇವೆ.

★ ಶ್ರೀನಿವಾಸ ರಿತ್ತಿ

ಸಂಕ್ಷಿಪ್ತ ವಿಶ್ವ ಇತಿಹಾಸ : ಲೇಖಕರು : ಆರ್. ಜಿ. ಶಿವಣ್ಣ ಮತ್ತು ಎಚ್. ಆರ್. ರಾಮಲಿಂಗಪ್ಪ (೧೯೬೮). ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಪುಟಗಳು : ೨೩೨ + xii, ಬೆಲೆ : ಸಾದಾ ಪ್ರತಿ ರೂ. ೬, ಉತ್ತಮ ಪ್ರತಿ ರೂ. ೭–೫೦.

ದೇಶಭಾಷೆ ಶಿಕ್ಷಣಮಾಧ್ಯಮವಾಗಬೇಕೆಂಬ ತತ್ತ್ವವನ್ನು ನಮ್ಮ ನಾಡಿನ ಎಲ್ಲ ಶಿಕ್ಷಣತಜ್ಞರೂ ಒಪ್ಪಿಕೊಂಡಿದ್ದಾರೆ. ಆದರಂತೆ ನಮ್ಮ ರಾಜ್ಯದ ವಿಶ್ವವಿದ್ಯಾನಿಲಯಗಳೂ ಈಗ ಕನ್ನಡದಲ್ಲಿ ಶಿಕ್ಷಣ ಕೊಡಲು ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ. ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ಸಿದ್ಧಗೊಳಿಸಿ ಪ್ರಕಟಿಸುವುದೂ ಅವುಗಳಲ್ಲಿ ಒಂದು. ಮೈಸೂರು ವಿಶ್ವವಿದ್ಯಾನಿಲಯ ಒಂದು ದಶಕಕ್ಕೂ ಹಿಂದೆಯೇ ಈ ದಿಶೆಯಲ್ಲಿ ಹೆಜ್ಜೆಯಿಟ್ಟು ಅನೇಕ ಪಠ್ಯಪುಸ್ತಕಗಳನ್ನು ಪ್ರಕಟಿಸಿ ಬಹಳ ಸ್ತುತ್ಯವಾದ ಕಾರ್ಯವನ್ನು ಮಾಡಿದೆ. ಪ್ರಸ್ತುತ ಪುಸ್ತಕವೂ ಇಂತಹವುಗಳಲ್ಲಿ ಒಂದಾಗಿದೆ.

ಈ ಸಂದರ್ಭದಲ್ಲಿ ಮುಖ್ಯವಾಗಿ ಒಂದು ವಿಷಯವನ್ನು ಆಲೋಚಿಸಬೇಕಾಗಿದೆ. ಪಠ್ಯಪುಸ್ತಕಗಳನ್ನು ಸಿದ್ಧಗೊಳಿಸುವಾಗ ನಿಯಮಿತ ಪಾಠಕ್ರಮವನ್ನು ಚಾಚೂ ತಪ್ಪದೆ ಅನುಸರಿಸಿಕೊಂಡು ಹೋಗಬೇಕು. ಆದರೆ ಹಾಗೆ ಮಾಡುವಾಗ ವಿದ್ಯಾರ್ಥಿಗೆ ಪರೀಕ್ಷೆಯ ದೃಷ್ಟಿಯಿಂದ ಎಷ್ಟು ಬೇಕೋ ಅಷ್ಟನ್ನು ಮಾತ್ರವೇ ಪುಸ್ತಕ ಒಳಗೊಂಡಿರಬೇಕೆ? ಪಿ.ಯು.ಸಿ.ಯಂತಹ ಸಣ್ಣ ತರಗತಿಯಲ್ಲಿ ಅಧ್ಯಾಪಕರು ಹೆಚ್ಚಿನ ವಿವರಗಳನ್ನು ಹೇಳಲು ಸಾಧ್ಯವಾಗಲಾರದು, ಆದರೆ ಪುಸ್ತಕದಲ್ಲಿಯೂ ಅಷ್ಟೇ ವಿವರಗಳನ್ನು ಕೊಟ್ಟು ಅದನ್ನು ಮತ್ತೊಂದು ಕೈಪಿಡಿಯಾಗಿ ಮಾಡುವ ಬದಲು ಸ್ವಲ್ಪ ಹೆಚ್ಚಿನ ವಿವರಗಳನ್ನೊಳಗೊಂಡ. ವಿದ್ಯಾರ್ಥಿಗಳಿಗೇ ಅಲ್ಲದೆ ಸಾಮಾನ್ಯ ನಾಗರಿಕನಿಗೂ ಅಂತಹ ಪುಸ್ತಕಗಳನ್ನು ಓದುವುದರಿಂದ ಸ್ವಲ್ಪಮಟ್ಟಿನ ಜ್ಞಾನಾರ್ಜನೆಯನ್ನುಂಟುಮಾಡುವಂತಹ ಪುಸ್ತಕಗಳನ್ನು ಪಾಠಕ್ರಮದ ಚೌಕಟ್ಟಿನೊಳಗೇ ಆದರೂ ಸಿದ್ಧಪಡಿಸಬಹುದೆಂಬುದು ಈ ವಿಮರ್ಶಕನ ಅಭಿಪ್ರಾಯ. ಈ ದೃಷ್ಟಿಯಲ್ಲಿ ಶ್ರೀಯುತರಾದ ಶಿವಣ್ಣ ಮತ್ತು ರಾಮಲಿಂಗಪ್ಪನವರು ಬರೆದ ಈ ಪುಸ್ತಕ ಪಾಠಕ್ರಮಕ್ಕೆ ಅನುಗುಣವಾಗಿದ್ದರೂ ಕೇವಲ ಕೈಪಿಡಿಯಂತಿದೆ.

೨೩೨ ಪುಟಗಳುಳ್ಳ ಈ ಗ್ರಂಥದ ೫೫ ಪುಟಗಳು 'ಯುಗಾಂತರದಲ್ಲಿ ಭಾರತ' ಎಂಬ ವಿಭಾಗ (?)ವನ್ನೊಳಗೊಂಡಿದೆ. ಆದರೆ 'ಮಧ್ಯಯುಗ'ಕ್ಕೆ ೧೦ ಪುಟಗಳೂ 'ಪ್ರಗತಿಪರ ದರ್ಪಿಷ್ಟ ಪ್ರಭುಗಳು' ಮತ್ತು 'ಯುರೋಪಿನಲ್ಲಿ ರಾಷ್ಟ್ರೀಯತೆ' ಎಂಬ ವಿಭಾಗಗಳಿಗೆ ಕೇವಲ ಎಂಟೆಂಟು ಪುಟಗಳೂ ಮೀಸಲಾಗಿವೆ. ಗ್ರಂಥದ 'ವಿಷಯಸೂಚಿ'ಯಲ್ಲಿ ೨ನೆಯ ವಿಭಾಗದ ಉಲ್ಲೇಖವೇ ಇಲ್ಲ! 'ವಿಭಾಗ' ಎಂದು ವಿಮರ್ಶಕ ತಿಳಿದುಕೊಂಡಿದ್ದಾನೆ. ಆದರೆ ಗ್ರಂಥದಲ್ಲಿನ

ವಿಷಯಸೂಚಿಯಲ್ಲಿನ ವಿಭಾಗಗಳಿಗೂ ಅಧ್ಯಾಯಗಳಿಗೂ ಸಂಬಂಧವೇ ಇಲ್ಲದಾಗಿದೆ. ಉದಾಹರಣೆಗೆ 'ವಿಷಯಸೂಚಿ'ಯಲ್ಲಿನ 'ಯುಗಾಂತರಗಳಲ್ಲಿ ಭಾರತ' ೪೬ನೆಯ ಪುಟದಲ್ಲಿ ಅಧ್ಯಾಯ ೫ ಎಂದು ಆರಂಭವಾಗಿದೆ. ಆದರೆ ೧೦೧ನೆಯ ಪುಟದಲ್ಲಿ ಆರಂಭವಾಗಿರುವ 'ಕ್ರೈಸ್ತ ಧರ್ಮದ ಏಳಿಗೆ' ಎಂಬ ಅಧ್ಯಾಯವೂ ನಾಲ್ಕನೆಯದು ಆಗಿದೆ! ಬಹುಶಃ ಅವಸರದಲ್ಲಿ ಗ್ರಂಥವನ್ನು ಅಚ್ಚುಹಾಕಿಸಿದುದು ಇದಕ್ಕೆ ಒಂದು ಕಾರಣವಾಗಿರಬಹುದು.

ಆದರೆ ಗ್ರಂಥದಲ್ಲಿ ಹಲವಾರು ವಾಸ್ತವಿಕ ದೋಷಗಳೂ ಇವೆ. ೨೩ನೆಯ ಪುಟದಲ್ಲಿ ಚೀನಾದ ಚಕ್ರವರ್ತಿ ಷಿಹ್ವಾಂಗ್ ಟಿ ಕ್ರಿ.ಪೂ. ೨೪೬ ರಿಂದ ೨೪೯ರ ವರೆಗೆ ಆಳಿದನೆಂದಿದೆ! ವಾಸ್ತವಿಕವಾಗಿ ಅವನ ಆಳಿಕೆಯ ಕಾಲ ಕ್ರಿ.ಪೂ. ೨೪೬ ರಿಂದ ೨೧೦! 'ಒಳ್ಳೆಯ ಉಡುಪು, ಅರಮನೆ ಮತ್ತು ಹಲವಾರು ಅನುಯಾಯಿಗಳು—ಋಗ್ವೇದದ ಪ್ರಕಾರ ಇವೇ ರಾಜನ ಪ್ರಮುಖ ಲಕ್ಷಣಗಳಾಗಿದ್ದವು.........ಇದಲ್ಲದೆ ರಾಜನು ನ್ಯಾಯವಿಚಕ್ಷಣೆಯ ಜವಾಬ್ದಾರಿಯನ್ನೂ ಮತ್ತು ಸಾರ್ವಜನಿಕ ಹಬ್ಬಹರಿದಿನಗಳಲ್ಲಿ ನಾಯಕತ್ವದ ಹೊಣೆಯನ್ನೂ ಹೊರಬೇಕಾಗಿದ್ದಿತು' (ಪುಟ ೫೩) ಎಂಬ ಹೇಳಿಕೆಗಳು ಸತ್ಯದೂರವಾಗಿವೆ. 'ಕೃಷ್ಣದೇವರಾಯನ ಕಾಲದಲ್ಲಿ ಹಿಂದೂ ಮಹಾಸಾಗರದ ಅನೇಕ ದ್ವೀಪಗಳು ಅವನ ಸಾಮ್ರಾಜ್ಯದ ಭಾಗಗಳಾಗಿ ಮಾರ್ಪಟ್ಟವು' (ಪು. ೬೯) ಎಂಬುದು ನಿರ್ಲಕ್ಷ್ಯವಾದ ಅಂತಹುದೇ ಒಂದು ಹೇಳಿಕೆ.

ಗ್ರಂಥದ ೨೫ನೆಯ ಪುಟದಲ್ಲಿನ ಒಂದು ವಾಕ್ಯ ಹೀಗಿದೆ: "ಗ್ರೀಸಿನ ಯಾವ ಭಾಗವೂ ೪೦ ಮೈಲಿಗಿಂತ ದೂರವಾಗಿಲ್ಲ." ಬಹುಶಃ 'ಸಮುದ್ರಕ್ಕೆ' ಎಂಬ ಪದ ಅಲ್ಲಿ ಲುಪ್ತವಾಗಿರಬಹುದು. ಆದರೆ ೩೦ನೆಯ ಪುಟದಲ್ಲಿನ "ಜನಸಂಖ್ಯೆಯ ಹೆಚ್ಚಳಕ್ಕೆ ಭೂಮಿಯು ಫಲವತ್ತಾಗಿಲ್ಲದೆ ಹೋದುದು, ನಿರಂಕುಶಾಧಿಕಾರಿಗಳ ಕಿರುಕುಳ ಮತ್ತು ಸಂಪತ್ತಿನ ಅಸಮಾನ ವಿಭಜನೆ ಕಾರಣವಾಗಿದ್ದವು" ಎಂಬ ವಾಕ್ಯ ಅರ್ಥರಹಿತವಾಗಿದೆ. ಅದರಂತೆಯೇ "ವೈಜ್ಞಾನಿಕ ಮಹತ್ಸಾಧನೆಗಳ ಪ್ರಮತ್ತತೆಯಲ್ಲಿ ಪೂರ್ಣವಾಗಿ ಸಿಲುಕಿರುವ ಆಧುನಿಕ ವಿಶ್ವದಲ್ಲಿ ಇತಿಹಾಸದ ಅಧ್ಯಯನ ಮತ್ತು ಲೇಖನ ಅನಾವಶ್ಯಕ ಎಂಬುದು ಕೆಲವರ ಅಭಿಪ್ರಾಯ" (ಪು. ೪); "ವ್ಯವಸಾಯ, ಪಶುಪಾಲನೆ, ಸ್ಥಿರವಾದ ಜೀವನ ಮತ್ತು ಲೋಹಗಳ ಬಳಕೆ ಪ್ರಾಚೀನ ಕಾಲದಲ್ಲಿ ನಾಗರಿಕತೆಗಳು ಬೆಳೆಯುವುದಕ್ಕೆ ಅಸ್ತಿಭಾರವಾದವು. ಮಾನವನು ವಲಸೆಹೋಗುವುದನ್ನು ತ್ಯಜಿಸಿ ಒಂದೆಡೆ ನಿಂತು ಶಾಂತಿಯುತವಾದ ಜೀವನವನ್ನು ನಡೆಸಲು ಸಹಕಾರಿಯಾದವು" (ಪು. ೩೪) : "ತತ್ತ್ವಜ್ಞಾನದಲ್ಲಿ ಗ್ರೀಕರು ಪಾಶ್ಚಾತ್ಯ ತತ್ವಜ್ಞಾನದ ಪ್ರವರ್ತಕರಾಗಿದ್ದರು. ಪಾಶ್ಚಾತ್ಯ ತತ್ವಜ್ಞಾನಕ್ಕೆ ತಳಹದಿಯನ್ನು ಹಾಕಿ ಅದನ್ನು ಬೆಳೆಸಿದವರು ಗ್ರೀಕರು" (ಪು. ೩೫) ಎಂಬ ವಾಕ್ಯಗಳನ್ನೋದಿದಾಗ ಮಾತೃಭಾಷೆಯೇ ಅದ ಕನ್ನಡದಲ್ಲಿಯೇ

ಆದರೂ ಪುಸ್ತಕಗಳನ್ನು ಬರೆಯುವುದು ಸುಲಭವಲ್ಲವೇನೋ ಎನಿಸುತ್ತದೆ.

ಅಶುದ್ಧ ಪದಪ್ರಯೋಗಗಳು, ಪರಸ್ಪರ ವಿರೋಧವಾದ ಹೇಳಿಕೆಗಳು ಮೇಲಿಂದಮೇಲೆ ಈ ಗ್ರಂಥದಲ್ಲಿ ಕಂಡುಬರುತ್ತವೆ. ಊಳಿಗ ಮಾನ್ಯ ಪದ್ಧತಿಯನ್ನು ಕುರಿತು ಬರೆಯುತ್ತಾ ಯುರೋಪಿನ ಜೀತಗಾರ ಅಥವಾ ಗೇಣಿದಾರನ ಜೀವನವು ಆಧುನಿಕ ಕಾಲದ ಕೂಲಿಗಾರನ ಜೀವನಕ್ಕಿಂತ ಉತ್ತಮವಾಗಿದ್ದಿತೆಂದು ಅಭಿಪ್ರಾಯಪಡಬಹುದು (ಪು. ೧೦೩) ಎಂದು ಹೇಳಿ, ಮುಂದಿನ ಪುಟದಲ್ಲಿಯೇ ಗೇಣಿದಾರನ ಜೀವನವು ಪರತಂತ್ರ ಜೀವನವಾಗಿದ್ದು ಅನೇಕ ವೇಳೆ ಸಹಿಸಲಸಾಧ್ಯವಾಗುತ್ತಿತ್ತು ಎನ್ನುತ್ತಾರೆ ಲೇಖಕರು. ಆಧುನಿಕ ಕೂಲಿಗಾರನ ಜೀವನ ಇದಕ್ಕೂ ಹೀನಸ್ಥಿತಿಯಲ್ಲಿದೆ ಎಂದು ಇದರಿಂದ ಅರ್ಥವಾದೀತೇ?

ಈ ಗ್ರಂಥದಲ್ಲಿನ ಕೆಲವು ವಾಕ್ಯಗಳು ಲೇಖಕರ ಶೈಲಿಗೆ ನಿದರ್ಶನಗಳಾಗಿವೆ. ಉದಾಹರಣೆಗೆ: ''ಭೂಮಿಯ ಮೈಮೇಲೆ ವೈವಿಧ್ಯಮಯವಾದ ಮತ್ತು ವೈಪರೀತ್ಯಗಳಿಂದ ಕೂಡಿದ ಮೇಲ್ಮೈಲಕ್ಷಣಗಳನ್ನು ಕಾಣಬಹುದು. ನೈಲ್ ನದೀಕಣಿವೆಯಂತಹ ಕಣಿವೆಗಳನ್ನೂ....ಸಹರಾ ಮರುಭೂಮಿಯಂತಹ ಮರುಭೂಮಿಗಳನ್ನೂ, ಪೆಸಿಫಿಕ್ ಸಾಗರದಂತಹ ಮಹಾಸಾಗರಗಳನ್ನೂ, ಸ್ಟೆಪ್ಪಿ ಹುಲ್ಲುಗಾವಲುಗಳಂತಹ ಹುಲ್ಲುಗಾವಲುಗಳನ್ನೂ, ಬ್ರಿಟಿಷ್ ದ್ವೀಪಗಳಂತಹ ದ್ವೀಪಗಳನ್ನೂ........ಪಂಚಮಹಾಸರೋವರಗಳಂತಹ ಸರೋವರಗಳನ್ನೂ ಕಾಣಬಹುದು'' (ಪು. ೬); ''ವ್ಯಾಸ ಮಹರ್ಷಿಗಳ ಮಹಾಭಾರತವು ಪ್ರಪಂಚದ ವಿಶ್ವಕೋಶದಂತಿದೆ'' (ಪು. ೫೭).

ಮಾತೃಭಾಷೆಯಲ್ಲಿಯೇ ಆದರೂ ಪುಸ್ತಕ ಬರೆಯಬೇಕೆಂಬ ಉತ್ಸಾಹದ ಜೊತೆಗೆ ವಿಷಯದ ಮೇಲಿನ ಸಂಪೂರ್ಣ ಜ್ಞಾನ ಮತ್ತು ಭಾಷೆಯ ಮೇಲಿನ ಪ್ರಭುತ್ವ ಅಗತ್ಯವೆಂಬುದು ಈ ಪುಸ್ತಕವನ್ನು ಓದಿದಾಗ ಅನುಭವಕ್ಕೆ ಬರುತ್ತದೆ. ಮೈಸೂರು ವಿಶ್ವವಿದ್ಯಾನಿಲಯದವರೇ ಈ ಮೊದಲು ಪ್ರಕಟಿಸಿದ್ದ ಡಾ|| ಎಸ್. ಶ್ರೀಕಂಠಶಾಸ್ತ್ರಿಗಳ 'ಪ್ರಪಂಚ ಚರಿತ್ರೆಯ ರೂಪರೇಖೆಗಳು' ಎಂಬ ಗ್ರಂಥ ಇದಕ್ಕಿಂತಲೂ ಹೆಚ್ಚು ಪ್ರಯೋಜನಕಾರಿಯಾಗಿದೆ ಎನಿಸದಿರದು.

ಇಷ್ಟೆಲ್ಲಾ ನ್ಯೂನತೆಗಳಿದ್ದರೂ ಈ ಪುಸ್ತಕವನ್ನು ವಿದ್ಯಾರ್ಥಿಗಳು ಒಮ್ಮೆ, ಆದರೂ ಎಚ್ಚರಿಕೆಯಿಂದ ಓದಬಹುದಾಗಿದೆ. ಪುರಾತನ ಮತ್ತು ಮಧ್ಯಯುಗಗಳಿಗಿಂತ ಆಧುನಿಕ ಯುಗಕ್ಕೆ ಸಂಬಂಧಿಸಿದ ಅಧ್ಯಾಯಗಳು ಚೆನ್ನಾಗಿವೆ. ವಿಶ್ವದ ಇತಿಹಾಸವನ್ನು ಸಂಕ್ಷಿಪ್ತವಾಗಿ ಹೇಳುವುದು ಸುಲಭವಲ್ಲವೆಂಬುದನ್ನು ನೆನೆದಾಗ ಲೇಖಕರು ತಮ್ಮ ಕಾರ್ಯವನ್ನು ಪೂರೈಸಲು ಬಹಳವಾಗಿ ಶ್ರಮಿಸಿದ್ದಾರೆ ಎಂದೇ ಹೇಳಬೇಕು. ಗ್ರಂಥದಲ್ಲಿನ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವುದು ಕಷ್ಟವೇನಲ್ಲ; ಕಷ್ಟವಾಗಬಾರದು.

★ ಬಾ. ರಾ. ಗೋಪಾಲ್

ಸಾದರ ಸ್ವೀಕಾರ

೧. **ಕಾವ್ಯಶ್ರೀ (ಕವನ ಸಂಕಲನ)**

ಸಂಪಾದಕರು : ಪ್ರೊ. ವಸಂತ ಕುಷ್ಟಗಿ. ಪ್ರಕಾಶಕರು : ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ (ಸುರಪುರ). ಬೆಲೆ : ೧ ರೂಪಾಯಿ. ಪುಟ : ೫೨.

೨. **ಬಾ ಹತ್ತರ (ಆಯ್ದ ಕವನಗಳು)**

ಲೇಖಕರು: ದ. ರಾ. ಬೇಂದ್ರೆ. ಪ್ರಕಾಶಕರು: ಗೀತಾ ಬುಕ್ ಹೌಸ್, ಮೈಸೂರು. ಬೆಲೆ : ರೂ. ೫-೫೦. ಪುಟ: ೨೧೦.

೩. **ಮಧುರಂಜನೀ (ಮುಕ್ತಕಗಳು)**

ಲೇಖಕರು ಹಾಗು ಪ್ರಕಾಶಕರು : ತೆಕ್ಕುಂಜ ಗೋಪಾಲಕೃಷ್ಣಭಟ್ಟ. ಕರಂಗಲ-ಪಾಡಿ, ಮಂಗಳೂರು-೩. ಬೆಲೆ: ರೂ. ೩. ಪುಟ : ೭೬+೪.

೪. **ಹೊಲಮನಿಯ ಪದಗಳು (ಜಾನಪದ ಪದಸಂಗ್ರಹ)**

ಸಂಪಾದಕರು: ಕೆ. ವಿರೂಪಾಕ್ಷಗೌಡ, ಕಲ್ಲೇಶ ಇಟಿಗಿ ಮತ್ತು ಕರಿವೀರನಗೌಡ. ಪ್ರಕಾಶಕರು: ಶ್ರೀ ಕೊಟ್ಟೂರೇಶ ಪ್ರಕಾಶನ. ಹಗರಿಬೊಮ್ಮನಹಳ್ಳಿ. ಬೆಲೆ: ರೂ. ೨-೦೦. ಪುಟ: ೮೮.

೫. **ಹಳ್ಳಾಕೊಳ್ಳಾ ನೀರು (ಅಸಂಗತ ನಾಟಕ)**

ಲೇಖಕರು: ಚಂದ್ರಕಾಂತ ಕುಸನೂರ. ಪ್ರಕಾಶಕರು: ಸಹ್ಯಸ್ನೇಹ ಪ್ರಕಾಶನ, ರಾಯಚೂರು. ಬೆಲೆ: ರೂ. ೧-೫೦. ಪುಟ: ೩೦.

೬. **ಭೀಮಕವೀಶ್ವರ ರಗಳೆ**

ಸಂಪಾದಕರು: ಗು. ಅ. ಶಿವಲಿಂಗಯ್ಯ. ಪ್ರಕಾಶಕರು: ವಾತಾ ಮುದ್ರಣ ಮತ್ತು ಪ್ರಕಾಶನ ಮಂದಿರ, ಮೈಸೂರು. ಜೆಲೆ: ೩೦ ಪೈಸೆ. ಪುಟ: ೮.

೭. **ಶಾಂತಿ (ಸಾಂಕೇತಿಕ ನಾಟಕ)**

ಲೇಖಕರು: ಚಿದಂಬರಾನಂದ. ಪ್ರಕಾಶಕರು: ವಸುಮತೀ ಪ್ರಕಾಶನ, ಧಾರವಾಡ. ಬೆಲೆ: ರೂ. ೩. ಪುಟ: ೧೭೭.

೮. **ವೈರಾಗ್ಯ (ಮಹಾಯೋಗ)**

ಲೇಖಕರು: ಶ್ರೀ. ಜ. ಚ. ನಿ. ಬೆಲೆ: ರೂ. ೧, ಪುಟ: ೬೪.

೯. **ರಜಕರತ್ನ ಮಾಚಿತಂದೆ**

ಲೇಖಕರು : ಶ್ರೀ ಜ.ಚ.ನಿ. ಪ್ರಕಾಶಕರು : ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ಬಸವನಗುಡಿ, ಬೆಂಗಳೂರು-೪. ಬೆಲೆ: ರೂ. ೨. ಪುಟ : ೯೨.

೧೦. **ಬಹುರೂಪ (ಪ್ರಬಂಧ ಸಂಕಲನ)**

ಲೇಖಕರು : ಶಾಂತರಸ. ಪ್ರಕಾಶಕರು : ಸತ್ಯಸ್ನೇಹ ಪ್ರಕಾಶನ, ರಾಯಚೂರು. ಬೆಲೆ: ರೂ. ೪. ಪುಟ: ೧೫೬+viii.

೧೧. **ಶ್ರೀಬಸವೇಶ್ವರರು (ಅಷ್ಟಶತಮಾನೋತ್ಸವ ಸ್ಮಾರಕ ಸಂಪುಟ, ೧೯೬೯)**

ಸಂಪಾದಕರು : ಶ್ರೀ ಈಶ್ವರಗೌಡ ಮ. ಪಾಟೀಲ, ಶ್ರೀ ಬಸವರಾಜ ವೀ. ಮಡಿವಾಳರ. ಪ್ರಕಾಶಕರು : ಕನ್ನಡ ಬಾಲಕರ ಪ್ರೌಢ ಪ್ರಾಥಮಿಕ ಶಾಲೆ, ರೋಣ. ಬೆಲೆ: ರೂ. ೨. ಪುಟ: ೧೪೦+೨೦.

೧೨. **ರುದ್ರಭಟ್ಟ**

ಲೇಖಕರು: ಗುಂಡ್ಮಿ ಚಂದ್ರಶೇಖರ ಐತಾಳ. ಪ್ರಕಾಶಕರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಬೆಲೆ: ಸಾಧಾರಣ ಪ್ರತಿ ರೂ. ೨-೫೦; ಉತ್ತಮ ಪ್ರತಿ ರೂ. ೪. ಪುಟ: ೯೪.

೧೩. **ರಾಜಕೀಯ ಮಧ್ಯೆ ಬಿಡುವು**

ಲೇಖಕರು: ಡಾ. ಲೋಹಿಯ; ಅನುವಾದ: ಕೆ. ವಿ. ಸುಬ್ಬಣ್ಣ. ಪ್ರಕಾಶಕರು: ಅಕ್ಷರ ಪ್ರಕಾಶನ, ಸಾಗರ, ಮೈಸೂರು ರಾಜ್ಯ. ಬೆಲೆ: ಕ್ಯಾಲಿಕೋ ರೂ. ೧೪; ಸಾದಾ ರೂ. ೯. ಪುಟ : ೨೮೪.

೧೪. **ಚಿತ್ಕಳೆ ಚೂಡಾಲೆ**

ಲೇಖಕರು : ಶ್ರೀ ಜ. ಚ. ನಿ. ಪ್ರಕಾಶಕರು: ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ಸಮಾಜ ರಸ್ತೆ, ಬೆಂಗಳೂರು-೪. ಬೆಲೆ: ೨-೫೦. ಪುಟ: ೧೭೭.

೧೫. **ಪ್ರಸ್ತುತ (ವಿಚಾರ-ವಿಮರ್ಶೆ)**

ಲೇಖಕರು : ಪಿ. ಲಂಕೇಶ್. ಪ್ರಕಾಶಕರು : ಅಕ್ಷರ ಪ್ರಕಾಶನ, ಸಾಗರ, ಮೈಸೂರು ರಾಜ್ಯ. ಬೆಲೆ: ರೂ. ೫-೫೦. ಪುಟ : ೧೩೪.

೧೬. **ಕೈವಲ್ಯಪದ್ಧತಿ**

ಸಂಪಾದಕರು : ಪಂಡಿತ ನಾಗಭೂಷಣ ಶಾಸ್ತ್ರಿಗಳು ಶಾಸ್ತ್ರಿಮಠ, ಧಾರವಾಡ. ಪ್ರಕಾಶಕರು: ಶ್ರೀ ನಿ. ಪ್ರ. ರುದ್ರಸ್ವಾಮಿಗಳು, ರುದ್ರಾಕ್ಷಿಮಠ. ಹುಬ್ಬಳ್ಳಿ. ಬೆಲೆ : ರೂ. ೬. ಪುಟ : ೧೦೫.

ಸಂಪಾದಕೀಯ

ರಾಜ್ಯೋತ್ಸವ

ಕನ್ನಡ ರಾಜ್ಯೋದಯವಾಗಿ ಇಂದಿಗೆ ಹದಿನಾಲ್ಕು ವರ್ಷಗಳು ಸಂದುವು. ನಾಡಿನ ಮೂಲೆಮೂಲೆಗಳಲ್ಲಿಯೂ ಈ ಉತ್ಸವದ ದುಂದುಭಿ ಮೊಳಗಿದೆ. ಕನ್ನಡನಾಡು ಒಂದುಗೂಡಬೇಕು, ಕರ್ನಾಟಕ ಸಂಸ್ಕೃತಿಯ ಹಿರಿಮೆ–ಗರಿಮೆಗಳು ಜಗತ್ತಿಗೆಲ್ಲ ವೇದ್ಯವಾಗಬೇಕೆಂಬ ಬಹುದಿನಗಳ ಕನಸು ನನಸಾಗುವ ಕಾಲ ಸನ್ನಿಹಿತವಾಗಿದ್ದರೂ ಅದಕ್ಕೆ ಅಡ್ಡಿ-ಆತಂಕಗಳಿಲ್ಲದಿಲ್ಲ. ಕನ್ನಡನಾಡು ಉದಯವಾಗಿದ್ದರೂ ಇನ್ನೂ ಕರ್ನಾಟಕ ರಾಜ್ಯ ಉದಯವಾದಂತಿಲ್ಲ. ಕರ್ನಾಟಕವೆಂಬ ಹೆಸರು ನಮ್ಮ ಸಮಗ್ರ ಸಂಸ್ಕೃತಿಯ ಸಂಕೇತವೆಂಬುದನ್ನು ಬೇರೆ ಹೇಳಬೇಕಿಲ್ಲ. ಕನ್ನಡ ಜನ ಒಂದಾಗಿ ಅತ್ಯಂತ ಸೂಕ್ತವಾದ ಈ ಶುಭನಾಮವನ್ನು ನಾಡಿಗೆ ಇಡುವ ಕಾಲ ಬೇಗನೆ ಪ್ರಾಪ್ತವಾಗಲಿ. ಗಡಿಸಮಸ್ಯೆ, ನದಿನೀರಿನ ಸಮಸ್ಯೆ ಮುಂತಾದವುಗಳ ಇತ್ಯರ್ಥ ಬೇಗನೆ ಆಗಿ, ನಾಡಿನಲ್ಲಿ ಸಂಸ್ಕೃತಿಯ ಸಂವರ್ಧನೆಯ ಕಾರ್ಯ ಭರದಿಂದ ನಡೆಯಲೆಂದು ಹಾರೈಸುತ್ತೇವೆ

ಜಗದ್ಗುರುಗಳ ವಿದೇಶಯಾತ್ರೆ

ಹುಬ್ಬಳ್ಳಿಯ ಮೂರುಸಾವಿರಮಠದ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಈ ಸಲ ಜಪಾನಿನಲ್ಲಿ ನಡೆದ ಜಾಗತಿಕ ಧರ್ಮಸಮ್ಮೇಲನದ ಆಮಂತ್ರಣದ ಮೇರೆಗೆ ವಿದೇಶ ಯಾತ್ರೆಯನ್ನು ಕೈಕೊಂಡು ಧರ್ಮಸಮ್ಮೇಲನದಲ್ಲಿ ಭಾಗವಹಿಸಿದರು. ಅಲ್ಲಿ ಅವರು ಮಾಡಿದ ವಿಚಾರಪರಿಪ್ಲುತವಾದ ಭಾಷಣವು ಇಡೀ ಜಗತ್ತಿನ ತತ್ತ್ವವೇತ್ತರ ಚಿತ್ತವನ್ನು ಸೆಳೆದುದು ಅತ್ಯಂತ ಅಭಿಮಾನದ ಸಂಗತಿ. ಭಾರತೀಯ ಜಗದ್ಗುರುಗಳಲ್ಲಿ ಇಂತಹ ಮುನ್ನಡೆಯನ್ನಿಟ್ಟವರು ಪ್ರಾಯಶಃ ಮೂರುಸಾವಿರಮಠದ ಜಗದ್ಗುರುಗಳೇ ಪ್ರಥಮರೆಂದು ಹೇಳಬಹುದಾಗಿದೆ. ಜಗದ್ಗುರುಗಳ ವಿಶಾಲದೃಷ್ಟಿಗೆ ಇದೊಂದು ನಿದರ್ಶನ. ಅವರು ಕನ್ನಡ ನಾಡಿಗೂ ಭಾರತೀಯ ಸಂಸ್ಕೃತಿಗೂ ಭೂಷಣಪ್ರಾಯರು. ಅವರಿಂದ ನಮ್ಮ ನಾಡು, ನುಡಿ, ಸಂಸ್ಕೃತಿಗಳ ಏಳ್ಗೆಯಾಗಲೆಂದು ಪ್ರಾರ್ಥಿಸುತ್ತೇವೆ.

"ದೇ.ಜ.ಗೌ."

—ವಿದೇಶ ಸಂಚಾರ, ಲೆನಿನ್ ಪ್ರಶಸ್ತಿ

ಕುಲಪತಿ ದೇ.ಜ.ಗೌ. ಅವರು ಮೊನ್ನೆ ಮೊನ್ನೆ ಲೆನಿನ್ ಪ್ರಶಸ್ತಿಯನ್ನು ಪಡೆದಿರುವುದೂ ವಿದೇಶಯಾತ್ರೆಯನ್ನು ಕೈಕೊಂಡಿರುವುದೂ ಕನ್ನಡಿಗರೆಲ್ಲರಿಗೆ

ಅಭಿಮಾನಾಸ್ಪದವಾಗಿದೆ. ಅವರು ರಶ್ಯಾ, ಫ್ರಾನ್ಸ್, ಇಂಗ್ಲಂಡ್ ಮೊದಲಾದ ದೇಶಗಳಿಗೆ ಸಂದರ್ಶನವಿತ್ತಿರುವುದು, ಅಲ್ಲಿಯ ವಿಶ್ವವಿದ್ಯಾನಿಲಯಗಳಿಂದ ಮಾನಮನ್ನಣೆಗಳನ್ನು ಪಡೆದಿರುವುದು ಕನ್ನಡದ ಗೌರವವನ್ನು ಹೆಚ್ಚಿಸಿದೆ. ಸಿರಿಗನ್ನಡದ ಬಾಳು ವಿಸ್ತೃತವಾಗುತ್ತಿದೆ ಎಂಬುದಕ್ಕೆ ಇದೊಂದು ನಿದರ್ಶನ. ಕುಲಪತಿಗಳಾದ ದೇ.ಜ.ಗೌ. ಅವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

ಸನ್ಮಾನ

ವಿದ್ವಾಂಸರು, ಸಾಹಿತಿಗಳು, ಕಲಾವಿದರು, ಶಿಕ್ಷಣತಜ್ಞರು, ಸಮಾಜ ಸೇವಕರು ನಾಡಿನ ಪಂಚಪ್ರಾಣ. ಹಿಂದೆ ರಾಜಾಸ್ಥಾನಗಳಲ್ಲಿ ಅವರ ಸೇವೆಯನ್ನು ಮೆಚ್ಚಿ ಅವರಿಗೆ ಗೌರವವನ್ನರ್ಪಿಸಲಾಗುತ್ತಿದ್ದಿತು. ಇಂದು ಪ್ರಜಾರಾಜ್ಯದಲ್ಲಿ ಜನತೆ ಹಾಗೂ ಸರಕಾರಗಳು ಮುಂದೆ ಬಂದು ಇವರನ್ನು ಗೌರವಿಸುತ್ತಿರುವುದು ಶುಭಸಂಕೇತ. ಒಂದು ನಾಡಿನ ಔನ್ನತ್ಯದ ಶಿಖರಗಳೆಂದರೆ ಇಂಥವರ ಸಾಧನೆಗಳು. ಕರ್ನಾಟಕ ರಾಜ್ಯೋದಯ ಸಂದರ್ಭದಲ್ಲಿ ವಿದ್ವಾಂಸರು, ಸಾಹಿತಿಗಳು, ಕಲಾವಿದರೇ ಮುಂತಾದವರಿಗೆ ಪ್ರಶಸ್ತಿ ನೀಡಿ ನಮ್ಮ ರಾಜ್ಯಸರಕಾರ ಸತ್ಕರಿಸಿದುದು ಅತ್ಯಂತ ಸೂಕ್ತವಾದುದು. ಇವರಿಗೆಲ್ಲ ನಮ್ಮ ಅಭಿವಂದನೆಗಳು. ಈ ಸತ್-ಸಂಪ್ರದಾಯ ನಿರಂತರ ನಡೆಯಲೆಂದು ನಮ್ಮ ಪ್ರಾರ್ಥನೆ.

ಕಳೆದ ಅರ್ಧ ಶತಮಾನದಿಂದಲೂ ಕನ್ನಡಕ್ಕೆ ಸೇವೆ ಸಲ್ಲಿಸುತ್ತಿರುವ ಶ್ರೀ ಡಿ. ವಿ. ಗುಂಡಪ್ಪ ಮತ್ತು ವಿ. ಸೀತಾರಾಮಯ್ಯನವರನ್ನು ಹಿರಿಯರು, ಮಿತ್ರರು ಮತ್ತು ಅಭಿಮಾನಿಗಳು ಸತ್ಕರಿಸಿದರು.

ಶ್ರೀ ಡಿ.ವಿ.ಜಿ. ಅವರು ಕನ್ನಡ ಗದ್ಯಪದ್ಯ ಸೀಮೆಗಳನ್ನು ಶ್ರೀಮಂತಗೊಳಿಸಿದವರು. ಪತ್ರಿಕೋದ್ಯಮದ ಆದ್ಯಪ್ರವರ್ತಕರಲ್ಲಿ ಒಬ್ಬರು. ಮಂಕುತಿಮ್ಮನ ಕಗ್ಗ, ಉಮರನ ಒಸಗೆ, ಅಂತಃಪುರ ಗೀತೆಗಳು ಶ್ರೀಯುತರ ಕಾವ್ಯಸತ್ವ, ಕಾವ್ಯದೃಷ್ಟಿಗಳಿಗೆ ಹಿಡಿದ ಕನ್ನಡಿಯಾಗಿವೆ. 'ಮಂಕುತಿಮ್ಮನ ಕಗ್ಗ' ಭಾರತದ ಸಾಹಿತ್ಯದಲ್ಲಿಯೇ ಅಪರೂಪ. ಸಂಸ್ಕೃತಿ, ಜೀವನ ಸೌಂದರ್ಯ ಮತ್ತು ಸಾಹಿತ್ಯಗಳು ಡಿ.ವಿ.ಜಿ.ಯವರು ಕನ್ನಡ ಗದ್ಯಸಾಹಿತ್ಯಕ್ಕೆ ನೀಡಿದ ಶ್ರೇಷ್ಠ ಕೃತಿಗಳು. ಸಂಸ್ಕೃತಿ, ಸೌಂದರ್ಯ ಮೊದಲಾದ ಅಮೂರ್ತ ವಿಷಯಗಳನ್ನು ಅಭಿವ್ಯಕ್ತಗೊಳಿಸುವಲ್ಲಿ ಅವರು ತುಳಿದ ದಾರಿ, ಬಳಸಿದ ಭಾಷೆಗಳು ನಿಜಕ್ಕೂ ಶ್ಲಾಘನೀಯವಾಗಿವೆ.

ಅವರ ಹುಟ್ಟುಹಬ್ಬದ ಪ್ರಸಂಗದಲ್ಲಿ ಅವರನ್ನು ಹಿರಿ-ಕಿರಿಯರೆಲ್ಲ ಸಂತೋಷ-ಭಕ್ತಿಗಳಿಂದ ಸತ್ಕರಿಸಿದರು. 'ಭಾರತಿ' ಇವರಿಗೆ ತನ್ನ ಅಭಿವಂದನೆಗಳನ್ನು ಅರ್ಪಿಸುತ್ತದೆ.

ಶ್ರೀ ವಿ. ಸೀತಾರಾಮಯ್ಯನವರು ಸಾಹಿತ್ಯ ಮತ್ತು ಸಮಾಜ ವಿಜ್ಞಾನಗಳ ವಿಷಯಗಳಲ್ಲಿ ಸವ್ಯಸಾಚಿಗಳು. ವಿಮರ್ಶೆಯ ಕ್ಷೇತ್ರದಲ್ಲಿ, ಕಾವ್ಯದ ಸೀಮೆಯಲ್ಲಿ ಅವರು ಮೈಲುಗಲ್ಲನ್ನು ನೆಟ್ಟವರು. ರುಚಿ, ಶುಚಿ ಎರಡನ್ನೂ ಕಾಯ್ದುಕೊಂಡು ಬಂದ ಹಿರಿಯರಿವರು. ವಿ. ಸೀ. ಎಂಬೆರಡಕ್ಷರ ಕನ್ನಡದ ಮನೆಮಾತು. ಹಣಪ್ರಪಂಚದಿಂದ ಹಿಡಿದು ಸಾಹಿತ್ಯಸಂಶೋಧನ ಪ್ರಪಂಚಗಳ ವಿವಿಧ ಕ್ಷೇತ್ರಗಳಲ್ಲಿ ವಿ. ಸೀ.ಯವರು ಸಲ್ಲಿಸಿದ ಕಾಣಿಕೆ ಗಮನಾರ್ಹವಾಗಿದೆ. ಶಕ್ತಿಯುತವಾದ ಶೈಲಿಯನ್ನು ಪಳಗಿಸಿಕೊಂಡ ಶ್ರೀಯುತರು ಕನ್ನಡದ ಕಣ್ಮಣಿಗಳಾಗಿದ್ದಾರೆ. 'ಭಾರತಿ' ಅವರಿಗೆ ತನ್ನ ಅಭಿವಂದನೆಗಳನ್ನರ್ಪಿಸುತ್ತದೆ.

ಕನ್ನಡದ ಅಮೌಲ್ಯ ಪ್ರಕಟನೆಗಳು

ಕನ್ನಡ ಸಾಹಿತ್ಯ ಪರಿಷತ್ತು ಕೈಕೊಂಡಿರುವ 'ಕನ್ನಡ-ಕನ್ನಡ ನಿಘಂಟು', ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ರೂಪಿಸುತ್ತಿರುವ 'ಕನ್ನಡ ವಿಶ್ವಕೋಶ', ಬೆಂಗಳೂರಿನ ಸಹಕಾರಿ ಸಾಹಿತ್ಯ ಸಂಸ್ಥೆ ರಚಿಸುತ್ತಿರುವ 'ಜ್ಞಾನಗಂಗೋತ್ರಿ' ಇವು ಈ ತಲೆಮಾರಿನ ಕನ್ನಡದ ಮೇರುಕೃತಿಗಳು. ಪರಿಷತ್ತು ನಿಘಂಟಿನ ಸಂಚಿಕೆಗಳನ್ನು ಶೀಘ್ರವಾಗಿ ಪ್ರಕಟಿಸತೊಡಗಿದೆ. ಕನ್ನಡ ವಿಶ್ವಕೋಶದ ಎರಡು ಸಂಪುಟಗಳು ಅಲ್ಪಾವಧಿಯಲ್ಲಿ ಪ್ರಕಟವಾಗಿವೆ. ಜ್ಞಾನಗಂಗೋತ್ರಿಯ ಪ್ರಥಮ ಸಂಪುಟ ಕನ್ನಡಿಗರ ಕೈಸೇರಿದೆ. ಈ ಬ್ರಹತ್ ಪ್ರಕಟನೆಗಳನ್ನು ಒದಗಿಸಿಕೊಟ್ಟ ಸಂಸ್ಥೆಗಳಿಗೂ ಅಲ್ಲಿಯ ಕಾರ್ಯಕರ್ತರಿಗೂ ನೇತಾರರಿಗೂ ಕನ್ನಡನಾಡು ಋಣಿಯಾಗಿದೆ.

ಕನ್ನಡ ಪ್ರಜ್ಞೆ

ಮಾತೃಭೂಮಿ, ಮಾತೃಭಾಷೆಗಳ ಪ್ರಜ್ಞೆ ಈ ಯುಗದ ಜೀವನಮೌಲ್ಯಗಳಲ್ಲಿ ಮುಖ್ಯವಾದುದು. ನಮ್ಮ ದೇಶಾಭಿಮಾನ ಕನಿಷ್ಠಪಕ್ಷ ಪಂಪ, ಆಂಡಯ್ಯನಷ್ಟು ಪ್ರಾಚೀನವಾಗಿದ್ದರೂ ಈ ಕಾಲದಲ್ಲಿ ಅದಕ್ಕೆ ವಿಶಿಷ್ಟ ಸ್ವರೂಪ ಒದಗಿದೆ. ಇಂಗ್ಲೀಷ, ಮರಾಠಿ, ತೆಲುಗು, ತಮಿಳುಗಳ ಸೀಮಿತವಲ್ಲದ ಒತ್ತಡಕ್ಕೆ ಬಲಿಯಾಗಿ ಕನ್ನಡತನ ಕಡಿಮೆಯಾಗುತ್ತಿರುವ ಕಾಲದಲ್ಲಿ ನಾವೆಲ್ಲ ಎಚ್ಚರವಾಗಿದ್ದೇವೆ. ಈ ಜಾಗೃತಿಯ ಕಿಚ್ಚು ಇನ್ನೂ ಪ್ರಜ್ವಲಿಸಿ ಕನ್ನಡಿಗರ ಬದುಕಿನ ವಿವಿಧ ಸ್ತರಗಳಲ್ಲಿ ಅದು ಜೀವಂತವಾಗಿರಬೇಕಾಗಿದೆ. ಇದಕ್ಕೆ ರಚನಾತ್ಮಕ, ವ್ಯಾಪಕ ಆಂದೋಲನ ಅತ್ಯವಶ್ಯ. ಕನ್ನಡ ಪುಸ್ತಕ, ಪತ್ರಿಕೆಗಳನ್ನು ಓದಬೇಕು; ಕನ್ನಡ ನಾಟಕ, ಚಲಚ್ಚಿತ್ರಗಳನ್ನು ಪ್ರದರ್ಶಿಸಬೇಕು; ವ್ಯಾಪಾರ, ಉದ್ದಿಮೆ, ಆಡಳಿತ ಕಟ್ಟಡಗಳಿಗೆ ಕನ್ನಡ ಫಲಕಗಳನ್ನು ಹಚ್ಚಬೇಕು— ಇವೇ ಮೊದಲಾದ ಜಾಗೃತಿಗಳು ಪ್ರಜಾಸ್ತೋಮದಲ್ಲಿ; ಕನ್ನಡ ಬೋಧಭಾಷೆಯಾಗಬೇಕು,

ಆಡಳಿತ ಭಾಷೆಯಾಗಬೇಕು—ಇವೇ ಮೊದಲಾದ ಜಾಗೃತಿಗಳು ಶಿಕ್ಷಣ ಆಡಳಿತ ವಿಭಾಗಗಳಲ್ಲಿ ಇನ್ನೂ ತೀವ್ರಗೊಳ್ಳಬೇಕು. ಈ ಕಾರ್ಯಕ್ಕೆ ಮುಂದು ಬರಬೇಕಾದವರು ಪ್ರಜೆಗಳು. ಇದನ್ನು ಮನದಂದು ಇದೇ ನವಂಬರ ೧ರ ರಾಜ್ಯೋತ್ಸವ ಸಂದರ್ಭದಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರದ ವಿದ್ಯಾರ್ಥಿಗಳು "ಕನ್ನಡ ಪ್ರಜ್ಞೆ"ಗೆ ವಿಧಾಯಕ ರೀತಿಯಲ್ಲಿ ಕರೆ ನೀಡಿದುದು ಸ್ತುತ್ಯ ಸಂಗತಿ. ಇಂಥ ಜಾಗೃತ ಸಂದರ್ಭಗಳು ಮೇಲಿಂದಮೇಲೆ ಬೇರೆ ಬೇರೆ ಸ್ಥಳಗಳಲ್ಲಿ ನೇರವೇರಲ್ಪಟ್ಟು ಕನ್ನಡ ತನ್ನತನವನ್ನು ಉಳಿಸಿಕೊಳ್ಳಬೇಕಾಗಿದೆ, ಬೆಳೆಸಿಕೊಳ್ಳಬೇಕಾಗಿದೆ. ಸಾಹಿತ್ಯಮಟ್ಟದಲ್ಲಿ ಈ ಕಾರ್ಯವನ್ನು ಸಮರ್ಥವಾಗಿ ನೆರವೇರಿಸುತ್ತಿರುವ 'ಕರ್ನಾಟಕ ಭಾರತಿ' ಪ್ರಜಾಸ್ತೋಮದ ಇಂಥ ವಿಧಾಯಕ ವಿಚಾರಗಳನ್ನು ಸಮರ್ಥವಾಗಿ ಬೆಂಬಲಿಸುತ್ತದೆ.

ಪ್ರಾರ್ಥನೆ

ಕಳೆದ ಎರಡು ವರ್ಷಗಳಲ್ಲಿ 'ಭಾರತಿ' ಸಾಧಿಸಿದ ಪ್ರಗತಿ, ಗಳಿಸಿದ ಕೀರ್ತಿ ನಮಗೆ ತೃಪ್ತಿಯನ್ನುಂಟುಮಾಡಿದೆ. ವಿದ್ವಾಂಸರ ಲೇಖನಪೂರೈಕೆ, ವಾಚಕರ ಪತ್ರಿಕೆಯ ಬೇಡಿಕೆಗಳು ನಿತ್ಯ ನಿತ್ಯ ಹೆಚ್ಚುತ್ತಲಿವೆ. 'ಭಾರತಿ'ಯ ಬದುಕಿನಲ್ಲಿ ಬಹುದೊಡ್ಡ ಪಾತ್ರವಹಿಸುವ ಇವರಿಗೆ ಉಪಕೃತರಾಗಿದ್ದೇವೆ. ಮುಂದೆಯೂ ಸಹಕಾರ ನೀಡಲು ಕೇಳಿಕೊಳ್ಳುತ್ತೇವೆ.

ಲೇಖಕರ ಪರಿಚಯ

೧. ಡಾ. ಡಿ. ಎಸ್. ಕರ್ಕಿ

ಹೆಸರಾಂತ ಕವಿಗಳು. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಯು.ಜಿ.ಸಿ. ಪ್ರಾಧ್ಯಾಪಕರು.

೨. ಡಾ. ಬಿ. ಎಸ್. ಕುಲಕರ್ಣಿ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ರೀಡರರು.

೩. ಶ್ರೀ ಕೆ. ವೆಂಕಟರಾಯಾಚಾರ್ಯ

ಪ್ರಸಿದ್ಧ ಸಂಶೋಧಕರು, ಸುರತ್ಕಲ್ಲು (ದ. ಕ.).

೪. ಶ್ರೀ ಗುರುಮೂರ್ತಿ ಕೆ. ಗೌಡರ್

ಕರ್ನಾಟಕ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು.

೫. ಶ್ರೀ ದೇವೇಂದ್ರಕುಮಾರ ಹಕಾರಿ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರು.

೬. ಶ್ರೀ ಎಂ. ಬಿ. ಭೋಯಿ

ಸಂಶೋಧನೆಯಲ್ಲಿ ಆಸಕ್ತಿಯುಳ್ಳ ಶ್ರೀ ಭೋಯಿ ಅವರು ಹುಬ್ಬಳ್ಳಿಯ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು.

೭. ಶ್ರೀ ವ್ಹಿ. ಎಸ್. ಕಂಬಿ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹಾಯಕ ಸಂಶೋಧಕರು.

೮. ಶ್ರೀ 'ಮಗು' ಬಿರಾದಾರ

ಕನ್ನಡ ಅಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ.

೯. ಡಾ. ಆರ್. ಎನ್. ಗುರವ

ರೆವಿನ್ಯೂ ಆಡಳಿತಗಾರರಾಗಿ ನಿವೃತ್ತಿಹೊಂದಿದ ಇವರು ಶಾಸನ, ಇತಿಹಾಸ ಸಂಶೋಧನೆಯಲ್ಲಿ ಆಸಕ್ತಿ ಉಳ್ಳವರು.

೧೦. ಶ್ರೀ ಜ್ಯೋತಿ ಹೊಸೂರ

ಕನ್ನಡ ಅಧ್ಯಾಪಕರು, ವಾಣಿಜ್ಯ ಮಹಾವಿದ್ಯಾಲಯ, ಸೇಡಬಾಳ.

೧೧. ಡಾ. ಎಂ. ಎಂ. ಕಲಬುರ್ಗಿ

ಅಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೨. ಶ್ರೀ ಎಂ. ಬಿ. ದುರ್ಗದಮಠ

ಅಧ್ಯಾಪಕರು, ಭೂಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೩. ಶ್ರೀ ಬಿ. ಕೆ. ಒಡೆಯರ

ಸಂಶೋಧನ ಸಹಾಯಕರು, ಭೂಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೪. ಶ್ರೀ ಎಸ್. ಜಿ. ಬಿದರಕುಂದಿ

ಉದಯೋನ್ಮುಖ ಕವಿಗಳು. ಕನ್ನಡ ಅಧ್ಯಾಪಕರು, ನೆಹರು ಆರ್ಟ್ಸ್ ಮತ್ತು ಸಾಯನ್ಸ್ ಕಾಲೇಜ್, ಹುಬ್ಬಳ್ಳಿ.

೧೫. ಶ್ರೀ ರಾಜಶೇಖರ ಭೂಸನೂರಮಠ

ಅಧ್ಯಾಪಕರು, ಭೌತಶಾಸ್ತ್ರ ವಿಭಾಗ, ಕರ್ನಾಟಕ ಕಾಲೇಜ್, ಧಾರವಾಡ.

೧೬. ಶ್ರೀ ಎಸ್. ಎಸ್. ಕೋಟಿನ

ಕನ್ನಡ ಅಧ್ಯಾಪಕರು, ಭೌತಶಾಸ್ತ್ರ ವಿಭಾಗ, ಕರ್ನಾಟಕ ಕಾಲೇಜ್, ಧಾರವಾಡ.

೧೭. ಶ್ರೀ ಎಸ್. ಶಿವಣ್ಣ

ಸಂಶೋಧನೆಯಲ್ಲಿ ಅಭಿರುಚಿಯುಳ್ಳವರು. ಮಹಾರಾಜ ಕಾಲೇಜ್ ಹಾಸ್ಟೆಲ್, ಮೈಸೂರು.

೧೮. ಶ್ರೀ ಎಸ್. ರಾಜಶೇಖರ

ಅಧ್ಯಾಪಕರು, ಇತಿಹಾಸ ವಿಭಾಗ, ಕರ್ನಾಟಕ ಕಾಲೇಜ್, ಧಾರವಾಡ.

೧೯. ಶ್ರೀ ಸಿ. ಎಸ್. ಯಾದವಾಡ

ಕನ್ನಡ ಅಧ್ಯಾಪಕರು, ಶ್ರೀ ಪೂರ್ಣಪ್ರಜ್ಞ ಕಾಲೇಜ್, ಉಡುಪಿ.

೨೦. ಡಾ. ಶ್ರೀನಿವಾಸ ರಿತ್ತಿ

ರೀಡರರು, ಭಾರತೀಯ ಪ್ರಾಚೀನ ಇತಿಹಾಸ ಹಾಗೂ ಸಂಸ್ಕೃತಿ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೧. ಡಾ. ಬಾ. ರಾ. ಗೋಪಾಲ್

ರೀಡರರು, ಭಾರತೀಯ ಪ್ರಾಚೀನ ಇತಿಹಾಸ ಹಾಗೂ ಸಂಸ್ಕೃತಿ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

KARNATAK UNIVERSITY PUBLICATIONS

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆಗಳು

I. Text Books

(ಪಠ್ಯಪುಸ್ತಕಗಳು)

		PRICE Rs. Ps.
1	Selections from Mahābhārata & Rāmāyaṇa (Sanskrit)	3·00
2	Sanskrit Selections for P. U. C. (Arts & Science)	1·50
3	ಕಾವ್ಯಮಂಜರಿ : ಭಾಗ ೧, ಸಂಪುಟ ೧	1·00
4	ಕಾವ್ಯಮಂಜರಿ : ಭಾಗ ೧, ಸಂಪುಟ ೨	1·00
5	ಕಾವ್ಯಮಂಜರಿ : ಭಾಗ ೨, ಸಂಪುಟ ೧	1.00
6	ಕಾವ್ಯಮಂಜರಿ : ಭಾಗ ೨, ಸಂಪುಟ ೨	1·00
7	ಗದ್ಯಮಂಜರಿ	2·00
8	ಕಾವ್ಯವಿಲಾಸ	1·50
9	ಗದ್ಯವಿಲಾಸ	1·25
10	ಕಾವ್ಯಕುಂಜ	1·50
11	ಕಾವ್ಯಮಂಜರಿ ಭಾಗ ೧, ಸಂಪುಟ ೩	2·00

II. Research Publications Series

(ಸಂಶೋಧನ ಗ್ರಂಥಮಾಲೆ)

1	Pleistocene Studies in the Malaprabha Basin (Joint Publication of Karnatak University, Dharwar and Deccan College Research Institute, Poona) —*R. V. Joshi*		15·00
2	The Karnatak Theatre —*H. K. Ranganath*	Ord. binding Half Calico	3·00 5·00
3	Some Problems in Jaina Psychology —*T. G. Kalghatgi*	Full cal. Half calico	7·00 6·00
4	ಕನ್ನಡ ಜಾನಪದ ಗೀತಗಳು	—ಜಿ. ಎಸ್. ಗದ್ದಗಿಮಠ	10·00
5	The Concept of Comedy	—*G. S. Amur*	7·00 $ 2 or Sh. 13
6	Local Self-Government in Mediaeval Karnatak —*G. S. Dikshit*		7·00 $ 2 or Sh. 13
7	ಕನ್ನಡ ಸಾಹಿತ್ಯದಲ್ಲಿ ಹಾಸ್ಯ	—ಎಂ. ಎಸ್. ಸುಂಕಾಪುರ	8·00
8	Basic Syllabus in Practice	—*N. R. Hiremath*	10·00 $ 3 or £. 1

9 The Later Phase in the Development of W. B. Yeats — *S. R. Mokashi* 10·00
$ 3 or £. 1

10 Some Studies in Boolean Algebra — *E. Sampathkumarachar* 7·00
$ 2 or Sh. 14

11 ನೇಮಿಚಂದ್ರ —ಬಿ. ಎಸ್. ಕುಲಕರ್ಣಿ 12·00

12 A History of South Kanara — *K. V. Ramesh* 3.00

13 Havyaka Dialect of North Kanara — *K. G. Shastri* (IN PRESS)

14 A Critical Study of the Hindu Astronomy in the Light and Language of the Modern — *D. A. Somayaji* („)

III. Extension Lectures Publications Series

(ವಿಶೇಷ ಉಪನ್ಯಾಸ ಗ್ರಂಥಮಾಲೆ)

1 Introduction to Karnatak Mysticism — *R. D. Ranade* 1.00

2 Hindu Code Bill — *P. B. Gajendragadkar* 2·00

3 Karnataka's Trans-Oceanic Contacts — *B. A. Saletore* 3.00

4 Kālidāsa — *R. D. Karmarkar* 4.00

5 Bhavabhūti — *R. D. Karmarkar* 3.00
$ 1 or Sh. 7

6 Bāṇa — *R. D. Karmarkar* 3·00

7 Rockets, Satellites and Space Travel — *G. B. Pant* 2·00

8 Purandara and Haridāsa Movement — *M. V. Krishna Rao* 6.00
$ 2 or Sh. 13

9 ಮಹಾಕವಿ ಷಡಕ್ಷರದೇವ ಹಾಗು ಅವನ ಕೃತಿಗಳು —ಬಿ. ಶಿವಮೂರ್ತಿಶಾಸ್ತ್ರಿ 3·00

10 Śaṅkara's Advaita — *R. D. Karmarkar* 3·00

11 ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ — ವಿ. ಸೀತಾರಾಮಯ್ಯ 4·00

12 ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕರತ್ನಗಳು —ದ. ರಾ. ಬೇಂದ್ರೆ 3·00

13 ವಿಚಾರಸಾಹಿತ್ಯನಿರ್ಮಾಣ —ಕೆ. ಎಸ್. ಕಾರಂತ 2·00

14 ಕನ್ನಡ ರಂಗಭೂಮಿಯ ಪುರೋಭಿವೃದ್ಧಿ —ಆದ್ಯ ರಂಗಾಚಾರ್ಯ 2·50

15 ಸಾಹಿತ್ಯವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು —ರಂ. ಶ್ರೀ. ಮುಗಳಿ 3·00

IV. Economics Series

1 A Survey of Handicrafts in Eight Districts of the Mysore State —*S. S. Mensinkai* 5·00

2 Community Development and Employment —*D. M. Nanjundappa* 3·00

3 Research Reporting in Social Sciences —*M. H. Gopal* 2·00

4 Economy of Scarcity Areas —*T. K. Meti* 4·00
$ 1 or Sh. 7

5 Foreign Trade and Economic Development —*V. L. D'souza* 1·50

6 Food and Freedom —*V. M. Dandekar* 2·50

7 Local Taxation in Urban Areas —*D. M. Nanjundappa & M. V. Nadkarni* 3·00

8 Economic Development in India —*R. Balakrishna* 5·00

9 Economic Development of the under-developed regions in Italy —*T. K. Meti* 10·00
$ 5 or Sh. 30

10 Rural Industrialisation – An Integrated Approach —*V. S. Vyas* (IN PRESS)

V. ಕನ್ನಡ ಕಾವ್ಯಮಾಲೆ

Kannada Classical Series

1 ರಾಜಶೇಖರವಿಳಾಸ ಸಂಗ್ರಹ 2·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

2 ಸೋಮನಾಥಚಾರಿತ್ರ ·5·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

3 ರಾಜಶೇಖರವಿಳಾಸಂ 10·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

4 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೧ 6·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

5 ತ್ರಿಷಷ್ಟಿಪುರಾತನಚಾರಿತ್ರ ಸಂ. : ಆರ್. ಸಿ. ಹಿರೇಮಠ 12·00

6 ಬಸವರಾಜವಿಜಯಂ ಸಂ. : ಆರ್. ಸಿ. ಹಿರೇಮಠ 20·00

7 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೨ 8·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

8 ಹರಿಹರದೇವಕೃತ ಪುರಾತನರ ಆರು ರಗಳೆಗಳು 3·50
ಸಂ. : ಆರ್. ಸಿ. ಹಿರೇಮಠ

9	ನೇಮಿನಾಥಪುರಾಣಂ	ಸಂ. : ಬಿ. ಎಸ್. ಕುಲಕರ್ಣಿ	6·00
10	ಅಕ್ರೂರಚರಿತ್ರೆ	ಸಂ. : ಜಿಟಗೇರಿ ಕೃಷ್ಣಶರ್ಮಾ	4·00
11	ಜೀವಂಧರಚರಿತೆ		7·00
12	ಹರಿಹರದೇವಕೃತ ಪುರಾತನರ ರಗಳೆಗಳು		(ಅಚ್ಚಿನಲ್ಲಿ)
13	ಮಹಾಭಾರತ (ಪೌಲೋಮ-ಆಸ್ತೀಕಪರ್ವ)		(,,)

VI. ಉಪನ್ಯಾಸ ಗ್ರಂಥಮಾಲೆ

Kannada Extension Lectures Booklets Series

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

1. ಭವಭೂತಿ — ಕೆ. ಕೃಷ್ಣಮೂರ್ತಿ
2. ಮನೋರೋಗಗಳು — ಎನ್. ಆರ್. ಕುಲಕರ್ಣಿ
3. ಪ್ರಥಮ ಪಂಚವಾರ್ಷಿಕ ಯೋಜನೆ ಹಾಗೂ ಒಕ್ಕಲುತನ — ಎನ್. ಪಿ. ಪಾಟೀಲ
4. ಗಾದೆಗಳು — ಎ. ಕೆ. ರಾಮಾನುಜನ್
5. ಭಾರತದಲ್ಲಿ ಜಾತಿಪದ್ಧತಿ — ವ್ಹಿ. ಎಸ್. ಡಿ'ಸೋಜಾ
6. ಕೀಟಕ ಪಿಡುಗುಗಳ ಸಮೀಕ್ಷಣೆ — ಎಸ್. ಎಸ್. ಕಟಗಿಹಳ್ಳಿಮಠ
7. ರಾಜಕೀಯ ಪಕ್ಷಗಳು — ಎನ್. ರಾಜಗೋಪಾಲರಾವ್
8. ಸ್ವಾದಿ ಅರಸುಮನೆತನ — ಎಸ್. ಎಸ್. ಮಾಳವಾಡ
9. ಮಕ್ಕಳ ಶಿಕ್ಷಣ — ಡಿ. ಎಸ್. ಕರ್ಕಿ
10. ಮೂಢ ನಂಬಿಕೆಗಳು — ಎಲ್. ಆರ್. ಹೆಗಡೆ
11. ಸಂಸ್ಕೃತ ಕವಯಿತ್ರಿಯರು — ಕೆ. ಟಿ. ಪಾಂಡುರಂಗಿ
12. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ — ಬಿ. ವಿರೂಪಾಕ್ಷಪ್ಪ
13. ಸಾರ್ವಜನಿಕ ಆಡಳಿತ — ಜಿ. ಎಸ್. ಹಾಲಪ್ಪ
14. ವಿಚಾರವಾದ — ಗೌರೀಶ ಕಾಯ್ಕಿಣಿ
15. ಮಹಾಕವಿ ಮಿಲ್ಟನ್ — ಜಿ. ಎಸ್. ಆಮೂರ
16. ಭಾರತದಲ್ಲಿ ಗ್ರಂಥಾಲಯ ಪ್ರಸಾರ — ಕೆ. ಎಸ್. ದೇಶಪಾಂಡೆ
17. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ — ಬಿ. ಎಚ್. ಶ್ರೀಧರ
18. ಜನಸಂಖ್ಯೆ ಹಾಗೂ ಆಹಾರ ಸಮಸ್ಯೆ — ಪಿ. ಎಂ. ಉಮಾಕಾಂತಶಾಸ್ತ್ರಿ
19. ಸೌರವ್ಯೂಹ — ಸಿ. ಎನ್. ಶ್ರೀನಿವಾಸ ಅಯ್ಯಂಗಾರ
20. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ — ಸಿ. ವಿ. ರಂಗಸ್ವಾಮಿ
21. ಸಮಾಜ ಕಾರ್ಯ — ಎಚ್. ಎಂ. ಮರುಳಸಿದ್ಧಯ್ಯ
22. ಸಂಸತ್ತಿನ ಕಾರ್ಯಪದ್ಧತಿ — ಎ. ಎಂ. ರಾಜಶೇಖರಯ್ಯ

23. ಕನ್ನಡನಾಡಿನ ಶಾಸನಗಳು — ಪಿ. ಬಿ. ದೇಸಾಯಿ
24. ಕವೀಂದ್ರ ರವೀಂದ್ರರು — ಎಸ್. ಎಸ್. ಮಾಳವಾಡ
25. ನಾಗಾನಂದ — ಎಚ್. ಪಿ. ಮಲ್ಲೇದೇವರು
26. ಜೀವನದಲ್ಲಿ ನಗೆ — ಎಂ. ಎಸ್. ಸುಂಕಾಪುರ
27. ಬಸವಣ್ಣನವರ ಯೋಜನೆಗಳು — ಬಿ. ಸಿ. ಜವಳಿ
28. ಗಲಜಿಲರ ಕ್ರಾಂತಿ — ಸಿ. ವೀರಬಸಣ್ಣ
29. ಕನ್ನಡ ಕಥಾಸೃಷ್ಟಿ — ಬಿ. ಬಿ. ಮಹೀಶವಾಡಿ
30. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ — ಕೆ. ಕೃಷ್ಣಮೂರ್ತಿ
31. ನೀರಾವರಿ ಬೇಸಾಯ — ಎಸ್. ಎ. ಹೊಸಮನಿ
32. ಸಾರ್ವಜನಿಕ ಅಭಿಪ್ರಾಯ — ಎಸ್. ರಾಜಗೋಪಾಲರಾವ್
33. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನಪ್ರಸಂಗ — ದೇವೇಂದ್ರಕುಮಾರ ಹಕಾರಿ
34. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ — ಜಿ. ಡಿ. ನಾಡಕರ್ಣಿ
35. ಫ್ಯಾಶನ್ನುಗಳು — ಕೆ. ಡಿ. ತಂಗೋಡ
36. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ — ಬಿ. ವ್ಹಿ. ಮಲ್ಲಾಪುರ
37. ಅಭಿವೃದ್ಧಿಯೋಜನೆಗಳಲ್ಲಿ ಸಹಕಾರದ ಪಾತ್ರ — ಎಸ್. ಜಿ. ಕರಭಂಟನಾಳ
38. ಕನ್ನಡ ಜೈನಪುರಾಣಗಳು — ಎಸ್. ಎಸ್. ನಾಯಕ
39. ಕನ್ನಡ ನಾಟ್ಯಸೃಷ್ಟಿ — ಎಚ್. ಜಿ. ಲೋಕೂರ
40. ಹರಿಹರನು ಚಿತ್ರಿಸಿದ ಶಿವಶರಣೆಯರು — ಜಿ. ಬಿ. ಹಂಡಿ
41. ನೀವು ಬಯಸುವ ಮಗು ಗಂಡೋ? ಹೆಣ್ಣೋ? — ಕೆ. ಆರ್. ರಾಮಸ್ವಾಮಿ
42. ಆಂಡಯ್ಯ — ಬಿ. ಎಸ್. ಕುಲಕರ್ಣಿ
43. ಬೆಳವಲನಾಡಿನ ಬೆಳೆಗಳು — ಎಸ್. ಎ. ಹೊಸಮನಿ
44. ಜಾನಪದ ಕಥೆಗಳು — ಎಲ್. ಆರ್. ಹೆಗಡೆ
45. ಸುಧಾರಿಸಿದ ಬೇಸಾಯ — ಎ. ಸಿ. ಕಲ್ಯಾಣಿಮಠ
46. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು — ಜಿ. ಆರ್. ಗೋಪಾಲ್
47. ಗ್ರಂಥಾಲಯದ ಅಂತರಂಗ — ಎಸ್. ಆರ್. ಗುಂಜಾಳ
48. ಸ್ತ್ರೀ ಮತ್ತು ಶಿಕ್ಷಣ — ವನಮಾಲಾ ಆಚಾರ್
49. ಜಾಗತಿಕ ಸರಕಾರ — ಸಿ. ವೀರಬಸಣ್ಣ
50. ಸಮುದಾಯ ಸಂಘಟನೆ — ಎಚ್. ಎಂ. ಮರುಳಸಿದ್ದಯ್ಯ
51. ಅಶೋಕನ ಧರ್ಮಶಾಸನಗಳು — ಶ್ರೀನಿವಾಸ ರಿತ್ತಿ
52. ಪ್ರಾಚೀನ ಭಾರತದ ರಾಜ್ಯಪದ್ಧತಿ — ಪಿ. ವ್ಹಿ. ರಂಗಸ್ವಾಮಿ
53. ಅಕ್ಕಮಹಾದೇವಿ ಮತ್ತು ಮೀರಾಬಾಯಿ — ಎಸ್. ಎಸ್. ಕಬ್ಬಿನ
54. ಕನ್ನಡ ಕಾವ್ಯದಲ್ಲಿ ವೀರರಸನಿರೂಪಣೆ — ಬಿ. ಬಿ. ಮಹೀಶವಾಡಿ
55. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು
— ಬಿ. ಸಿ. ಜವಳಿ

56. ಭಾರತ ರಾಜ್ಯಘಟನೆ — ಎಂ. ಎಸ್. ಪಾಟೀಲ
57. ಪಂಚಾಯತಿ ರಾಜ್ಯ — ಎಸ್. ಜಿ. ಕರಭಂಟನಾಳ ಮತ್ತು ಕೆ. ಡಿ. ಬಸವ
58. ವಿಷಮಜ್ವರ — ಪಿ. ಎಸ್. ಶಂಕರ
59. ಪುಸ್ತಕ ಭಾಂಡಾರ ಕಾಯದೆ — ಜಿ. ಎಂ. ಪಾಟೀಲ
60. ಸರ್ ಐಸಾಕ್ ನ್ಯೂಟನ್ — ಆರ್. ವ್ಹಿ. ಅಬ್ಬಿಗೇರಿ
61. ಗ್ರಾಮಾಭ್ಯುದಯದ ಯೋಜನಾಂಗಗಳು — ಟಿ. ಕೆ. ಮೇಟಿ
62. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ — ಎನ್. ಕೆ. ಕಡೆತೋಟದ
63. ರಾಸಾಯನಿಕ ಕಿಣ್ವಗಳು — ಎಂ. ಎಸ್. ಎಸ್. ರಾವ್
64. ಪ್ರಜಾಪ್ರಭುತ್ವದ ಮೂಲತತ್ವಗಳು — ಕೆ. ಬಿ. ಬಕ್ಕಪ್ಪ
65. ಹೃದಯಾಘಾತ — ಪಿ. ಎಸ್. ಶಂಕರ್
66. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ — ಡಿ. ಎ. ಚಿಕ್ಕಿ
67. ಶ್ರೀರಾಮಾಯಣದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು — ಎಂ. ಜಿ. ಬಿರಾದಾರ
68. ಯೋಜನೆಗಳೇಕೆ ಬೇಕು? — ಎಸ್. ಎಸ್. ಯಮ್ಮಿ
69. ಸಗರನಾಡಿನ ಶಿವಶರಣರು — ವ್ಹಿ. ಶಿವಾನಂದ
70. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ — ಆರ್. ಎಸ್. ಭೂಸನೂರಮಠ
71. ವಿಜಯನಗರದ ನಿರ್ಣಾಯಕ ಯುದ್ಧ — ಎಸ್. ಬಿ. ಕೋಡದ
72. ಬಸವಣ್ಣನವರನ್ನು ಕುರಿತ ಶಾಸನಗಳು — ಎಂ. ಎಂ. ಕಲಬುರ್ಗಿ
73. ಆಧುನಿಕ ಭಾಷಾವಿಜ್ಞಾನ — ಜಿ. ಎಸ್. ಕುಳ್ಳಿ
74. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ
75. ಭಾರತದಲ್ಲಿ ಶೈಕ್ಷಣಿಕ ಪ್ರಯೋಗ — ವ್ಹಿ. ಎಸ್. ಕುಲಕರ್ಣಿ
76. ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು — ಎ. ಸಿ. ಕಲ್ಯಾಣಿಮಠ
77. ಕನ್ನಡ ನುಡಿಯ ಬೆಳವಣಿಗೆ — ಎಚ್. ಜಿ. ಲೋಕೂರ
78. ಹರಿಹರನ ಗಿರಿಜಾಕಲ್ಯಾಣ — ಬಿ. ವ್ಹಿ. ಶಿರೂರ
79. ಹೊಟ್ಟೆಯ ಹುಣ್ಣು — ಪಿ. ಎಸ್. ಶಂಕರ
80. ಸಂಯೋಜಕ ಶಕ್ತಿ — ಬಿ. ಜಿ. ಜ್ಯೋತಿ
81. ಸಂಸದೀಯ ಸರಕಾರವು ಭಾರತಕ್ಕೆ ಒಪ್ಪುವುದೇ? — ವಸಂತ ಪಾಟೀಲ
82. ನಮ್ಮ ರೈತರೇಕೆ ಹಿಂದುಳಿದಿದ್ದಾರೆ? — ಎಂ. ಸಿ. ಕೊಡ್ಲಿ
83. ನಗೆಗಾರ ನಯಸೇನ — ಎಂ. ಎಸ್. ಸುಂಕಾಪುರ
84. ಶೂನ್ಯಸಂಪಾದನೆ — ವ್ಹಿ. ಎಸ್. ಕಂಬಿ
85. ಮಹಮೂದ ಗವಾನ — ಎಲ್. ಆರ್. ಕುಲಕರ್ಣಿ
86. ಕೆಳದಿಯ ನಾಯಕರು — ಜಿ. ಎಸ್. ದೀಕ್ಷಿತ

87. ಮುಳುಗುಂದನಾಡು — ಎಸ್. ಎಚ್. ರಿತ್ತಿ
88. ಶ್ವಾಸಕೋಶ ಕ್ಷಯ — ಪಿ. ಎಸ್. ಶಂಕರ
89. ಕರ್ನಾಟಕದಲ್ಲಿ ಗ್ರಂಥಾಲಯಗಳು — ಎಸ್. ಆರ್. ಗುಂಜಾಳ
90. ಮಿರ್ಜಾ ಘಾಲಿಬ್ — ಅಬ್ದುಲ್ ಮಜೀದಖಾನ್
91. ಕಬೀರದಾಸ — ಬಿ. ಎಸ್. ಸಿರೋಳ
92. ಬ್ಯಾಂಕುಗಳ ರಾಷ್ಟ್ರೀಕರಣ — ಎಸ್. ಜಿ. ಕರಭಂಟನಾಳ
93. ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳು — ಎಸ್. ಜಿ. ಘಟಪಣದಿ
94. ಹಿಂದುಸ್ಥಾನಿ ಸಂಗೀತ ಪದ್ಧತಿಯ ರೂಪರೇಷೆಗಳು
— ಎ. ಯು. ಪಾಟೀಲ
95. ಶ್ರೀ ಅರವಿಂದ ಸ್ಮರಣೆ — ಸ. ಸ. ಮಾಳವಾಡ
96. ಮಾನವಜೀವನ ಹಾಗೂ ಭೌಗೋಲಿಕ ಪರಿಸರ
— ಡಿ. ಜಿ. ಕುಲಕರ್ಣಿ
97. ಲಕ್ಕಣದಂಡೇಶ — ವ್ಹಿ. ಶಿವಾನಂದ
98. ವ್ಯಾವಹಾರಿಕ ಮಾನವಶಾಸ್ತ್ರ — ಕೆ. ಜಿ. ಗುರುಮೂರ್ತಿ
99. ಪ್ರಾಚೀನ ಗ್ರೀಕರ ಅಮರ ಕೊಡುಗೆಗಳು — ಡಿ. ಟಿ. ಜೋಶಿ
100. ಭರ್ತೃಹರಿಯ ನೀತಿಶತಕ — ಡಿ. ಎಸ್. ಶಾನಭಾಗ
101. ಹರ್ಡೇಕರ ಮಂಜಪ್ಪನವರು ಹಾಗೂ ಅವರ ಕೃತಿಗಳು
— ಜಿ. ಎಸ್. ಹಾಲಪ್ಪ
102. ಪೃಥ್ವಿ ಹಾಗೂ ಜೀವಿಗಳ ರೂಪಾಂತರ — ಎಂ. ಎಸ್. ಎಸ್. ರಾವ್
103. ಪ್ರಜಾಪ್ರಭುತ್ವದಲ್ಲಿ ಕಾಯಿದೆಯ ಸ್ಥಾನ — ಸಿ. ಕೆ. ಎನ್. ರಾಜ
104. ಪೇಟಿ ಮತ್ತು ಜಾಹೀರಾತುಗಳು — ಟಿ. ಎಂ. ಪಂಡಿತ
105. ಆಯುರ್ವೇದಶಾಸ್ತ್ರ — ಧನ್ಯಕುಮಾರ ಇಜಾರಿ
106. ಮೈಲಾರದೇವರು — ಶ್ರೀನಿವಾಸ ರಿತ್ತಿ
107. ಭಗವದ್ಗೀತೆ — ಎಲ್. ಸಿ. ಪಾಟೀಲ
108. ಭೂಸಂರಕ್ಷಣೆ ಮತ್ತು ಒಣಬೇಸಾಯ — ಎಂ. ಎಂ. ಹೊಸಮನಿ
109. ಜನಪದ ಕಾವ್ಯದಲ್ಲಿ ಜೀವನಧರ್ಮ — ಪಿ. ವ್ಹಿ. ಸುಲ್ಲಾಪುರ

VII. ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆ

		PRICE
1	ನಿಜಗುಣ ಶಿವಯೋಗಿ ಹಾಗೂ ಅವರ ಕೃತಿಗಳು	0·50
2	ಮಹಾಕವಿ ರನ್ನ ಹಾಗೂ ಅವನ ಕೃತಿಗಳು	1·00
3	ಮಹಾಕವಿ ಪಂಪ ಹಾಗೂ ಅವನ ಕೃತಿಗಳು	1·00
4	ಸರ್ವಜ್ಞಕವಿ : ಜೀವನ ಹಾಗೂ ಕಾವ್ಯ	1·50
5	ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ	1·50
6	ಸಾಹಿತ್ಯವಿಮರ್ಶೆ	1·50
7	ಗಾಂಧೀತತ್ವವಿಶ್ಲೇಷಣೆ	1·50
8	ದಾಸಸಾಹಿತ್ಯ : ದ್ವಿತೀಯ ಘಟ್ಟದ ಸಾಧನೆ	2·50

VIII. Other Publications

(ಇತರ ಪ್ರಕಟನೆಗಳು)

1 Hubli City—A Study in Urban Economic Life 10·00
—*B. R. Dhekney* $ 3 or £ 1

2 Private International Law 10·00
— *N. K. Dixit & Negalur Ranganath*

3 The Structure of Kannada — *R. C. Hiremath* 5·00

4 विवेकचिंतामणि 6·75

(Marathi rendering of Nijaguna Shivayogi's Viveka Chintamani in Kannada)
(Joint publication of the Karnatak University, Dharwar & the Poona University, Poona)
—Ed. *D. N. Awalikar*

5 ಸಸ್ಯಶಾಸ್ತ್ರ — ಪಿ. ಎಸ್. ಚಿಕ್ಕಣ್ಣಯ್ಯ 1·50

6 ರಸಾಯನಶಾಸ್ತ್ರ — ಆರ್. ಎಸ್. ಹನುಸಾಗರ 4·00

7 ಪ್ರಾಯೋಗಿಕ ರಸಾಯನಶಾಸ್ತ್ರ — ಆರ್. ಬಿ. ಕಂಠಿ 3·00

8 ಕನ್ನಡ ಸಂತರ ಪರಮಾರ್ಥಪಥ — ಆರ್. ಡಿ. ರಾನಡೆ 5·00
—(ಅನು. : ಎಂ. ಎಸ್. ದೇಶಪಾಂಡೆ)

9 ಕನ್ನಡ ಪರಮಾರ್ಥಸೋಪಾನ —ಸಂ. ಎಂ. ಎಸ್. ದೇಶಪಾಂಡೆ 2·50

10 Studies in State Administration 15·00
—Ed. *G. S. Halappa*

11 Yashodhara Charita —Ed. *K. Krishnamoorthy* 5·00
$ 1·50 or Sh. 10

12 Essays in Sanskrit Criticism 5·00
—*K. Krishnamoorthy*

13 The First General Elections in Goa 3·00
—*G. S. Halappa, A. M. Rajashekharaiah & K. Raghavendra Rao*

14 Sunyasampadane—Vol. I (*English version of a Kannada work with Commentary & Notes*) 12·00
$ 4 or Sh· 20
—Ed. *S. C. Nandimath, L. M. A. Menezes and R. C. Hiremath*

15 Kavi Kaumudi —Ed. *K. Krishnamoorthy* 1·50

16 ಚನ್ನಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ 15·00

17 ಷಟ್‌ಸ್ಥಲಪ್ರಭೆ —ಆರ್. ಸಿ. ಹಿರೇಮಠ 7·00

18 ಶ್ರೀ ಸಿದ್ಧರಾಮೇಶ್ವರ ವಚನಗಳು —ಸಂ. ಆರ್. ಸಿ. ಹಿರೇಮಠ 20·00

19 ಶಿವಶರಣೆಯರ ವಚನಗಳು (ಸಮಗ್ರ ಸಂಪುಟ) 20·00
—ಸಂ. ಆರ್. ಸಿ. ಹಿರೇಮಠ

20 Sunyasampadane—Vol. II 20·00
—Ed. *S. S. Bhoosanurmath & Armando Menezes* $ 5 or Sh. 30

21 ಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ 20·00

22 ಮಹಾದೇವಿಯಕ್ಕನ ವಚನಗಳು —ಸಂ. ಆರ್. ಸಿ. ಹಿರೇಮಠ 7·00

23 ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

24 ಇಪ್ಪತ್ತೇಳು ಶಿವಶರಣೆಯರ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

25 ಆಮುಗೆ ರಾಯಮ್ಮನ ವಚನಗಳು ಮತ್ತು 5·00
ಅಕ್ಕಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ

26 Critical Essays on Indian Writing in English 20·00
—Ed. *M. K. Naik, S. K. Desai and G. S. Amur* $ 4 or Sh. 30

27 Sāyana's Subhāsita-Sudhānidhi 10·00
—Ed. *K. Krishnamoorthy*

28 ಶಾಸನಸಂಪದ —ಸಂ. ಆರ್. ಸಿ. ಹಿರೇಮಠ, 2·00
ಎಂ. ಎಂ. ಕಲಬುರ್ಗಿ

29 Urban Studies: An Aid to Research 30·00
—B. N. Sinha & T. N. Achut Rao $ 10

30 Sunyasampadane – Vol. III 20·00
—Ed. S. S. Bhoosnurmath & Armando Menezes $ 5 or Sh. 30

31 Old People of Makunti 10·00
—H. M. Marulasiddaiah

32 ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ (ಅಚ್ಚಿನಲ್ಲಿ)

33 ಗುಮ್ಮಳಾಪುರ ಸಿದ್ಧಲಿಂಗದೇವರ ಶೂನ್ಯಸಂಪಾದನೆ ,,

34 ಬ್ರಹ್ಮಾದ್ವೈತಸಿದ್ಧಾಂತ ಷಟ್‌ಸ್ಥಲಾಭರಣ ,,

35 ಮುಕ್ತಿಕಂಠಾಭರಣ (ಅಚ್ಚಿನಲ್ಲಿ)

36 ಲಿಂಗಚಿದಮೃತಬೋಧೆ ,,

37 ಸಕಲ ಪುರಾತನರ ವಚನಗಳು ,,

38 ವೀರಶೈವಚಿಂತಾಮಣಿ ,,

39 ವಿಶೇಷಾನುಭವಷಟ್ಸ್ಥಲ ,,

40 Analytical Survey of Īśāvāsyōpaniṣad (IN PRESS)
—V. V. Mudholkar

41 Essays in Criminal Law ,,
—V. R. Bhat

42 Sunyasampadane - Vol. IV. ,,
—Ed. S. S. Bhoosnurmath & Armando Menezes

43 Konkani, a Language ,,
—Jose Pereira

44 The Image of India in the Western ,,
Creative Writing *—Ed. M. K. Naik and Others*

IX. UNIVERSITY JOURNALS

Annuals

1 Journal of the Karnatak University — Science

2 Journal of the Karnatak University — Humanities

3 Journal of the Karnatak University — Social Sciences

Rate of Annual Subscription for Each Journal:

Rs. 5-00 (In India)

2 Dollars }
14 Shillings } (Foreign)

ಕರ್ನಾಟಕ ಭಾರತಿ (ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮/- (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. ೨.೫೦ (ಅಂಚೆವೆಚ್ಚ ಪ್ರತ್ಯೇಕ)

KARNATAK UNIVERSITY BULLETIN (MONTHLY)

Subscription:

Monthly : 50 paise
Annual : Rs. 6/-

X. ಕನ್ನಡ ಪಠ್ಯಪುಸ್ತಕ ಮಾಲೆ

ಪಿ.ಯು.ಸಿ. ಪಠ್ಯಪುಸ್ತಕಗಳು

		ರೂ. ಪೈಸೆ
೧.	ರಾಜ್ಯಶಾಸ್ತ್ರ ಪರಿಚಯ	೩ – ೦೦
೨.	ಸಂಸ್ಕೃತ ಗದ್ಯಪದ್ಯ ಪರಿಚಯ	೩ – ೦೦
೩.	ಉದ್ಯಾನಶಾಸ್ತ್ರ ಪರಿಚಯ	೩ – ೭೫
೪.	ಅರ್ಥಶಾಸ್ತ್ರ ಪರಿಚಯ	೪ – ೦೦
೫.	ವಾಣಿಜ್ಯಶಾಸ್ತ್ರ ಪರಿಚಯ	೫ – ೦೦
೬.	ತರ್ಕಶಾಸ್ತ್ರ ಪರಿಚಯ	೩ – ೦೦
೭.	ಜಗತ್ತಿನ ಇತಿಹಾಸ	೪ – ೫೦
೮.	ಬೀಜಗಣಿತ – ಕಲನಶಾಸ್ತ್ರ ಪರಿಚಯ	೪ – ೫೦
೯.	ಸಮಾಜಶಾಸ್ತ್ರ ಪರಿಚಯ	೩ – ೦೦
೧೦.	ಮಾನವಶಾಸ್ತ್ರ ಪರಿಚಯ	೩ – ೦೦
೧೧.	ಸಸ್ಯಶಾಸ್ತ್ರ ಪರಿಚಯ	೫ – ೫೦
೧೨.	ಪ್ರಾಯೋಗಿಕ ರಸಾಯನಶಾಸ್ತ್ರ ...	೩ – ೫೦
೧೩.	ಗಣನಶಾಸ್ತ್ರ ಪರಿಚಯ	೫ – ೦೦
೧೪.	ಸಂಸ್ಕೃತ ಗದ್ಯ–ಪದ್ಯ ಪ್ರವೇಶ	೨ – ೫೦
೧೫.	ಭೂಮಿತಿ ಹಾಗೂ ತ್ರಿಕೋನಮಿತಿ ಪರಿಚಯ	(ಅಚ್ಚಿನಲ್ಲಿ)
೧೬.	ಪ್ರಾಯೋಗಿಕ ಭೌತಶಾಸ್ತ್ರ	,,
೧೭.	ಸಂಖ್ಯಾಶಾಸ್ತ್ರ ಪರಿಚಯ	,,
೧೮.	ಭೂಮಂಡಲ ಪರಿಚಯ	,,
೧೯.	ಭೌತಶಾಸ್ತ್ರ ಪರಿಚಯ	,,
೨೦.	ಸಂಗೀತಶಾಸ್ತ್ರ ಪರಿಚಯ	,,
೨೧.	ರಸಾಯನಶಾಸ್ತ್ರ ಪರಿಚಯ ...	,,